8ನೇ ವರ್ಷಕ್ಕೆ

ಸಂವಾದ

ನವೆಂಬರ್ 2009
ರೂ. 20



ನೆನಪು:
ಬಾಲಗೋಪಾಲ್

ಸಂಸ್ಕೃತ ವಿ ವಿ:
ಹೆಣದ ಶೃಂಗಾರ

ಪ್ರಭುತ್ವದ ಕೊಲೆಗಳು!

ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೧

ನವೆಂಬರ್ ೨೦೦೯

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 080-23480278, 9945264687
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೦೩
- ಹೊಸ ಪುಸ್ತಕ ೦೪
- ಅಂತರಂಗ ೦೫
- ಸಂಪಾದಕರೊಂದಿಗೆ ಸಂವಾದ:
  - ಜಿ. ರಾಜಶೇಖರ್ ೦೬
  - ಸರಸ್ವತಿ. ಕೆ.ಬಿ ೦೭
- ಪ್ರವಾಹ ಎಂಬ ದುರಂತ– ಪರಿಹಾರ ಎಂಬ ಆಪತ್ತು?
  - ಶಿವಸುಂದರ್ ೦೮
- ಎನ್‌ಕೌಂಟರ್ ಎಂಬ ಪ್ರಭುತ್ವದ ಕೊಲೆಗಳು
  - ನಾ ದಿವಾಕರ ೧೦
- ಡಾ. ಬಾಲಗೋಪಾಲ್: ಅಪ್ರತಿಮ ಬುದ್ಧಿ ಜೀವಿ, ದಮನಿತ ಜನರ ಗಟ್ಟಿದನಿ!
  - ಶಿವಸುಂದರ್ ೧೪



- ಲೋಹಿಯಾ ಲೋಕ ಗ್ರಹಿಕೆಯ ನೆಲೆಗಳು
  - ಡಿ.ಎಸ್. ನಾಗಭೂಷಣ ೧೮
- ಭಾರತ ಮತ್ತು ಭಾರತೀಯರು
  - ಪ್ರೊ. ಸಂಗನಾಳ ಮಠ. ಯು.ಎಸ್ ೨೨
- ಸಂಸ್ಕೃತ ವಿಶ್ವವಿದ್ಯಾಲಯವೆಂಬ ಹೆಣದ ಶೃಂಗಾರ
  - ಕೆ.ಎಲ್.ಚಂದ್ರಶೇಖರ್ ಐಜೂರ್ ೨೬
- ಕಥೆ : ಧರ್ಮೋ ರಕ್ಷತಿ ರಕ್ಷಿತಃ
  - ಡಾ. ಜಿ. ಬಾಲಕೃಷ್ಣ ೩೦
- ಪುಸ್ತಕ ಅವಲೋಕನ : ಗತವನ್ನು ಬೆಸೆಯುವ ಕಥನ ವಿಧಾನ
  - ಸಂತೋಷ್ ೩೪
- ಬೀದಿಗೆ ಬಿದ್ದ ಹಬ್ಬಗಳು (ಭಾಗ ೨)
  - ಜಯಪ್ರಕಾಶ್ ಶೆಟ್ಟಿ ಹೆಚ್ ೩೮
- ಧರೆ ಹತ್ತಿ ಉರಿದರೆ... ೧೬ ರಾಯಚೂರು ಜಿಲ್ಲೆಯ ಅಭಿವೃದ್ಧಿ ಇದು ಕತೆಯಲ್ಲ, ಬರೀ ವ್ಯಥೆ.
  - ಡಾ. ಟಿ. ಆರ್ ಚಂದ್ರಶೇಖರ್ ೪೨
- ದಲಿತ್ ಡೈರಿ
  - ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
- ಬುದ್ಧಾಯಣ ೫೦
  - ಸಿ. ಎಚ್. ರಾಜಶೇಖರ್







ಕವನಗಳು : ☐ ಮಗು–ತಾಯಿ ಮತ್ತು ಬಂದೂಕು ೨೫
☐ ಸೋಲುತ್ತಿವೆ ಎದೆಯ ಹಾಡುಗಳು ೨೯ ☐ ಸಾಮಾಜಿಕ ನ್ಯಾಯ ೩೭

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಮಹತ್ವ ಕುಗ್ಗಿಸಿದ ಜಾತಿ ಪ್ರಸ್ತಾಪ

ಪ್ರಿಯ ಇಂದೂಧರ್,

'ಸಂವಾದ'ದ ಕಳೆದ ಸಂಚಿಕೆಯಲ್ಲಿ ನ್ಯಾಯಾಂಗದಲ್ಲಿನ ಭ್ರಷ್ಟಾಚಾರ ಕುರಿತ ನಿಮ್ಮ ಸಂಪಾದಕೀಯ ಓದಿದೆ. ನಿಮ್ಮ ಒಟ್ಟಾರೆ ಆತಂಕ ಎಲ್ಲರದೂ. ಆದರೆ ಈ ಕುರಿತ ಚರ್ಚೆಯ ಮಹತ್ವವನ್ನು ಅನಗತ್ಯವೆಂಬಂತೆ ತೋರುವ ಜಾತಿಯ ಪ್ರಶ್ನೆಯನ್ನು ಎತ್ತುವ ಮೂಲಕ ದುರ್ಬಲಗೊಳಿಸಿದ್ದೀರಿ ಎಂದು ನನಗನ್ನಿಸಿದ್ದರಿಂದ ಈ ಪತ್ರ. ಏಕೆಂದರೆ, ನ್ಯಾ॥ ದಿನಕರನ್ ಮೇಲಿನ ಭ್ರಷ್ಟಾಚಾರ ಆರೋಪದ ಬಗ್ಗೆ ನ್ಯಾ॥ ರಾಮಾಜೋಯಿಸರೋ ಮತ್ತೊಬ್ಬರೋ ಮಾತನಾಡುತ್ತಿದ್ದಾರೆ ಎಂದಾಕ್ಷಣ ಭ್ರಷ್ಟಾಚಾರ ಕುರಿತ ನಮ್ಮ ಆತಂಕವನ್ನು ಕಡಿಮೆ ಮಾಡಿಕೊಳ್ಳಲಾದೀತೆ?

ಕೊಲ್ಕತ್ತಾ ಮತ್ತು ಚಂಡೀಗಢಗಳ ಶ್ರೇಷ್ಠ ನ್ಯಾಯಾಲಯಗಳಲ್ಲಿ ಹಣ ದುರುಪಯೋಗ ಮತ್ತು ಲಂಚ ಸ್ವೀಕಾರ ಹಾಗೂ ಸುಪ್ರೀಂ ಕೋರ್ಟಿನಲ್ಲಿ ಕುಪ್ರಸಿದ್ಧ ಪ್ರಾವಿಡೆಂಟ್ ಫಂಡ್ ಹಣದ ದುರುಪಯೋಗ ಪ್ರಕರಣದಲ್ಲಿ ಆರೋಪಿಗಳಾಗಿರುವ ನ್ಯಾಯಾಧೀಶರುಗಳೇನೂ ಕೆಳಜಾತಿಗೆ ಸೇರಿದವರಲ್ಲ. ಹಾಗಾಗಿ ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಆಯಾ ಜಾತಿಯವರು ನಿಮ್ಮಂತೆಯೇ ಸಂದೇಹ ವ್ಯಕ್ತಪಡಿಸ ತೊಡಗಿದರೆ, ನಾವು ಎಲ್ಲ ಮುಟ್ಟಿಯೇವು?

ದಿನಕರನ್ ಪ್ರಕರಣವೂ ಸೇರಿದಂತೆ, ಉನ್ನತ ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ಪ್ರಕರಣಗಳನ್ನು ಬಯಲಿಗೆಳದು, ಆ ಸಂಬಂಧ ಮೊಕದ್ದಮೆಗಳನ್ನು ಹೂಡಿ ಹೊರಾಡುತ್ತಿರುವವರು, ಇಂದಿರಾ ಗಾಂಧಿ ಆಳ್ವಿಕೆಯ ಭ್ರಷ್ಟಾಚಾರದ ವಿರುದ್ಧ ಸತತವಾಗಿ ಹೋರಾಡುತ್ತಾ ಬಂದಿರುವ ಹಿರಿಯ ವಕೀಲ ಶಾಂತಿಭೂಷಣ್ ಮತ್ತು ಅವರ ಮಗ ಪ್ರಶಾಂತ್‌ಭೂಷಣ್ ಎಂಬುದನ್ನು ನಾವು ಮರೆಯಬಾರದು.

ಯಾರೇ ಆಗಲಿ, ಜಾತಿ ಆಧಾರದ ಮೇಲೆ ಆರೋಪ ಮಾಡಿ ಜೈಸಿಕೊಳ್ಳುವ ಕಾಲ ಮುಗಿಯುತ್ತಾ ಬಂದಿದೆ. ಹಾಗೇ ಎಲ್ಲವನ್ನೂ ಜಾತಿ ಕಣ್ಣಿನಿಂದಲೇ ನೋಡಿ ಅನುಮಾನ ಪಡುವ ಕಾಲವೂ ಮುಗಿಯುತ್ತಾ ಬಂದಿದೆ ಎನ್ನಿಸುತ್ತದೆ. ಆದುದರಿಂದ ಅನುಮಾನ ವ್ಯಕ್ತಪಡಿಸುವವರು, ಪೂರಕ ಮಾಹಿತಿಯೊಂದಿಗೆ ಮಾತಾಡುವುದು ಒಳಿತು. ಇಲ್ಲದೇ ಹೋದರೆ, ಇಂತಹ ಅನುಮಾನಗಳ ಮಧ್ಯೆ ಯಾವುದೇ ಒಳ್ಳೆಯ ಕೆಲಸ ಮಾಡಲು ಮತ್ತು ಅವನತಿಯ ನಿರ್ಣಾಯಕ ಹಂತವನ್ನು ತಲುಪಿರುವಂತೆ ತೋರುವ ಇಂದಿನ ವ್ಯವಸ್ಥೆಯನ್ನು ರಿಪೇರಿ ಮಾಡುವ ಯಾವುದೇ ಭರವಸೆಯನ್ನು ಇಟ್ಟುಕೊಳ್ಳಲೂ ಸಾಧ್ಯವಾಗುವುದಿಲ್ಲ.

ಅಂದ ಹಾಗೆ ಸಾಮಾಜಿಕ ನ್ಯಾಯ ಚಳುವಳಿಯ ಉದ್ದೇಶ, ಜಾತಿಪದ್ಧತಿ ಸೃಷ್ಟಿಸಿರುವ ಅಸಮಾನ 'ವ್ಯವಸ್ಥೆ'ಯನ್ನು ಅದರ ತಾತ್ವಿಕತೆಯೊಂದಿಗೇ ಬುಡಸಮೇತ ನಾಶ ಮಾಡುವುದೋ ಅಥವಾ ಮೇಲ್ಜಾತಿಗಳ ಜಾಗದಲ್ಲಿ ಕೆಳಜಾತಿಗಳನ್ನು ತಂದುಕೂರಿಸಿ ಜಾತಿ ವ್ಯವಸ್ಥೆಯ ಪಿರಮಿಡ್ಡನ್ನು ತಲೆಕೆಳಗು ಮಾಡುವುದಷ್ಟೇ ಆಗಿದೆಯೋ? ಅಲ್ಲಾ ಇಂದೂಧರ್, ದಲಿತ ಮತ್ತು ಹಿಂದುಳಿದವರಲ್ಲೇ ಹೆಚ್ಚು ಭ್ರಷ್ಟಾಚಾರಿಗಳು ಇರಲು ಸಾಧ್ಯವೇ ಇಲ್ಲ ಎಂದು ನಂಬುತ್ತೀರಾ? ನಮ್ಮ ಸೇವಾ ಸಿಬ್ಬಂದಿಯಲ್ಲಿ ಈ ವರ್ಗಗಳ ಪ್ರಮಾಣ ಕ್ರಮೇಣ ಹೆಚ್ಚುತ್ತಿದೆ ಎಂಬ ವಾಸ್ತವದ ನಡುವೆಯೂ ಅಂತಹ ಸಾಧ್ಯತೆಯನ್ನು ಒಪ್ಪಿಕೊಳ್ಳದಿರುವುದು ದೊಡ್ಡ ರೀತಿಯಲ್ಲಿ ಜಾತೀಯತೆಯೇ ಆಗುವುದಿಲ್ಲವೇ?

ನ್ಯಾ॥ ದಿನಕರನ್ ಮೇಲಿನ ಆರೋಪ ಸಾಮಾನ್ಯದ್ದಲ್ಲ. ಈಗ ನ್ಯಾಯಕ್ಕಾಗಿ ಉಳಿದಿರುವ ಏಕೈಕ ಆಸರೆ ಎಂದು ಜನ ನಂಬಿರುವ ಉನ್ನತ ನ್ಯಾಯಾಂಗವೂ ದಲಿತರ ಮೂಲಕವೋ ಮತ್ತೊಬ್ಬರ ಮೂಲಕವೋ ಭ್ರಷ್ಟವಾದರೆ, ವಿಶ್ವಾಸಾರ್ಹತೆ ಕಳೆದುಕೊಂಡರೆ ಜನ ಎಲ್ಲಿಗೆ ಹೋಗಬೇಕು? ಅದು ಪ್ರಜಾಪ್ರಭುತ್ವದ ಅಂತ್ಯದ ಆರಂಭವೇ ಸರಿ. ಇಂತಹ ಕ್ಷಣಕ್ಕಾಗಿ ಲಾರಿಗಟ್ಟಲೆ ಕಳ್ಳ ಹಣ ಶೇಖರಿಸಿಟ್ಟುಕೊಂಡವರು ಒಂದು ಕಡೆ, ಲಾರಿಗಟ್ಟಲೆ ಕಳ್ಳ ಬಾಂಬುಗಳನ್ನು ಶೇಖರಿಸಿಟ್ಟುಕೊಂಡವರು ಮತ್ತೊಂದು ಕಡೆ ತಮ್ಮದೇ ಸಮರ್ಥನೆಗಳೊಂದಿಗೆ ಸಾಮ್ರಾಜ್ಯಗಳನ್ನು ಸ್ಥಾಪಿಸಿಕೊಳ್ಳಲು ಕಾದು ಕೂತಿದ್ದಾರಲ್ಲವೆ?

ದಿನಕರನ್ ಅವರ ಊರಿನಲ್ಲಿ ದಲಿತರೇ ಅವರ ಭಾರಿ ಪ್ರಮಾಣದ ಭೂ–ಒತ್ತುವರಿ ವಿರುದ್ಧ ತಿರುಗಿ ಬಿದ್ದಿದ್ದಾರೆಂದು, ಬಹಳ ಕಾಲದಿಂದ ಆಂದೋಲನ ನಡೆಸುತ್ತಿದ್ದಾರೆಂದು ಅನೇಕ ಪತ್ರಿಕಾ ವರದಿಗಳು ಹೇಳುತ್ತಿವೆ. ಅಲ್ಲದೆ, ಇಷ್ಟೆಲ್ಲ ಹಗರಣದ ನಂತರವೂ ದಿನಕರನ್ ತಮ್ಮ ಆಸ್ತಿಯ ವಿವರಗಳನ್ನೇಕೆ ಘೋಷಿಸಿಕೊಳ್ಳಲು ಹಿಂಜರಿಯುತ್ತಿದ್ದಾರೆ? ಮೊದಲಾಗಿ, ಅನ್ಯ ರಾಜ್ಯಗಳ ನ್ಯಾಯಾಧೀಶರುಗಳ ಹಾವಳಿ ಎಲ್ಲ ರಾಜ್ಯಗಳಲ್ಲಿ ನಿಲ್ಲಬೇಕು. ಆಗ ನ್ಯಾಯಾಧೀಶರುಗಳ ವ್ಯಕ್ತಿತ್ವದ ಪ್ರಾಮಾಣಿಕತೆ, ಪಾರದರ್ಶಕತೆ ಸ್ವಲ್ಪ ಸ್ಪಷ್ಟವಾಗಿ ಎದ್ದು ಕಾಣುವಂತಿರುತ್ತದೆ. ಈಚಿನ ಶಿಕ್ಷಣ ಮಾಧ್ಯಮ ಪ್ರಕರಣ ಸಂಬಂಧದಲ್ಲೂ ಭ್ರಷ್ಟಾಚಾರ ನಡೆದಿದೆ ಎಂಬ ಗುಸು ಗುಸು ಹಲವೆಡೆ ಕೇಳಿ ಬರುತ್ತಿದೆ. ಪೀಠದಲ್ಲಿದ್ದ ನ್ಯಾಯಾಧೀಶರೊಬ್ಬರು ಭಿನ್ನಮತೀಯ ತೀರ್ಪು ಬರೆಯಲೂ ಅವಕಾಶವಾಗಲಿಲ್ಲ ಎಂದು ಹೇಳಲಾಗುತ್ತಿದೆ. ಇದು ಎಷ್ಟು ನಿಜವೋ ಸುಳ್ಳೋ ತಿಳಿಯದು. ಇದು ನಿಜವೇ ಆಗಿದ್ದರೆ, ನಾವೆತ್ತ ಸಾಗಿದ್ದೇವೆ? ಯೋಚಿಸಿ.

ಡಿ.ಎಸ್.ನಾಗಭೂಷಣ,
ಶಿವಮೊಗ್ಗ

ಪತ್ರಾಗಾರ

ಅದ್ಭುತ 'ದಲಿತ್ ಡೈರಿ'

ಮಾನ್ಯ ಸಂಪಾದಕರಿಗೆ,

ಶ್ರೀ ಎಂ.ಆರ್. ಸತ್ಯಪ್ರಕಾಶ್ ಅನುವಾದಿಸಿದ 'ವಿಜ್ಞಾನದೆಡೆಗೆ ಬನ್ನಿ ದಲಿತರೆ' ಲೇಖನ ಓದಿದೆ. ಆಳವಾದ ವಾಸ್ತವಿಕ ನೆಲೆಗಟ್ಟಿನ ಚಿಂತನೆಗಳು ಈ ಲೇಖನದ ಮೂಲಕ ಹೊರಬಂದಿವೆ. ಅದ್ಭುತ ಆಲೋಚನೆಗಳು ಎನ್ನುವುದಕ್ಕಿಂತಲೂ ಪ್ರಚಲಿತ ಜೀವನಾನುಭವದ ವಾಸ್ತವಿಕ ವಿಚಾರಗಳು ತುಂಬ ಮನನೀಯವಾಗಿವೆ. ಸರ್ವತೋಮುಖಿ ಆಲೋಚನೆಗಳು ಪೂರ್ಣಸತ್ಯದ ಪ್ರತಿಪಾದನೆಗಳಾಗಿವೆ. ಇಂದು ಪ್ರತಿಯೊಬ್ಬ ಸುಶಿಕ್ಷಿತ ನಿರುದ್ಯೋಗಿಯನ್ನೊಳಗೊಂಡು ಉನ್ನತ ಹುದ್ದೆಯಲ್ಲಿದ್ದುಕೊಂಡು ಸಾರ್ವಜನಿಕ ಸೇವಕರಾಗಿರುವ ಅಧಿಕಾರಿಗಳು ಕೂಡ ಚಿಂತನೆಗೊಳಗಾಗಿ ಅಭಿವೃದ್ಧಿಯತ್ತ ಸಾಗಬೇಕಾದ ಪಥಕ್ಕೆ ದಾರಿದೀಪವಾಗಿವೆ. ರೋಮಾಂಚನವಾಗುವ ಸಂಗತಿಗಳು ಈ ಲೇಖನದಲ್ಲಿದೆ.

ಇಂಥ ಲೇಖನಗಳು ಪ್ರತಿಯೊಬ್ಬರ ಕಣ್ಣು ಕುಕ್ಕಬೇಕಾದರೆ ಬೇರೆ–ಬೇರೆ ಪತ್ರಿಕೆಗಳಲ್ಲಿಯೂ ಇಂಥ ಲೇಖನಗಳು ಪ್ರಕಟವಾಗಬೇಕು. ಉದ್ದೇಶವೆಂದರೆ ಯಾವುದೇ ವ್ಯಕ್ತಿ ಯಾವುದೇ ಪತ್ರಿಕೆಯನ್ನು ಕೈಯಲ್ಲಿ ಹಿಡಿದರೆ ಸಾಕು ಇಂಥ ಲೇಖನಗಳು ಓದುಗನ ಕಣ್ಣು ಕುಕ್ಕಬೇಕು. ಓದಿದಾಗಲೇ ಪರಿವರ್ತನೆ ಆಗಲು ಸಾಧ್ಯ: ಅಭಿವೃದ್ಧಿ ರೂಪ ಪಡೆಯಲು ಸಾಧ್ಯ. ಜ್ಞಾನಿಕ ಸಾಹಿತ್ಯದ ಅಗತ್ಯತೆ ಈಗ ಪ್ರಸ್ತುತವಾಗಿದೆ. ಧಾರ್ಮಿಕತೆ–ಮೂಢನಂಬಿಕೆಗೆ ಕಡಿವಾಣ ಹಾಕಲು ಇಂಥ ಸಾಹಿತ್ಯ ಬೇಕೇ ಬೇಕು.

ಒಂದು ಲೇಖನ ಒಂದೇ ಪತ್ರಿಕೆಯಲ್ಲಿ ಮಾತ್ರ ಪ್ರಕಟವಾಗಬೇಕೆಂಬ ನಿಯಮವಿದ್ದರೆ ಅದನ್ನು ಮುಕ್ತಗೊಳಿಸಬೇಕು. ಪ್ರಕಟಿತ ಪತ್ರಿಕೆಯ 'ಸೌಜನ್ಯ'ವನ್ನು ಮನ್ನಿಸಿ –ಬೇರೆ–ಬೇರೆ ಪತ್ರಿಕೆಗಳಿಗೂ ಇಂತ ವಿಚಾರಗಳು–ಬೇರೆಬೇರೆ ಪತ್ರಿಕೆಗಳ ಬರಹಗಳು ಪ್ರಕಟನೆಗೆ ಮುಕ್ತವಾಗಬೇಕು. ಎಲ್ಲ ಪತ್ರಿಕೆಗಳನ್ನು ಎಲ್ಲರೂ ಓದಲು ಸಾಧ್ಯವಿಲ್ಲ. ಹೀಗಾಗಿ ಓದುಗನಿಗೆ ಯಾವುದೇ ಪತ್ರಿಕೆ ಸಿಗಲಿ–ಒಳ್ಳೆಯ ವಿಚಾರದ ಲೇಖನಗಳು ಎಲ್ಲ ಕಡೆಗೂ ಪ್ರಕಟವಾಗಬೇಕು. ಈ ದಲಿತ ಡೈರಿಯಂತು ಅದ್ಭುತವಾಗಿದೆ. ತುಂಬ ಅದ್ಭುತವಾದ ಲೇಖನ ಪ್ರಕಟಿಸಿದ ಸಂಪಾದಕರಿಗೆ ಕೃತಜ್ಞತೆಗಳು. ಅನುವಾದಕರಿಗೂ ಮೂಲ ಲೇಖಕರಿಗೂ ಧನ್ಯವಾದಗಳು ಸಲ್ಲಲೇಬೇಕು.

ಅರ್ಜುನ ಕೋರಟಕರ,
ಜಮಖಂಡಿ



ಚಂದಾ ವಿವರ

ಬಿಡಿ ಪ್ರತಿ ರೂ.೨೦/–

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/–	ರೂ.೫೦೦/–	ರೂ.೮೦೦/–
ಸಂಘ–ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೫೦/–	ರೂ.೬೦೦/–	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/–	ರೂ.೧೫೦೦/–	ರೂ.೨೫೦೦/–

ಆಜೀವ ಚಂದಾ ರೂ.೫,೦೦೦/–
ಪೋಷಕ ಚಂದಾ ರೂ.೧೦,೦೦೦/–

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಹೊಸ ಪುಸ್ತಕ



ಜಾನಪದ ಪ್ರತಿಕ್ರಿಯೆ– ಅನ್ವಯಿಕತೆ– ಅನುಸಂಧಾನ ಮತ್ತು ಜಾನಪದ ದೇಶಿ: ಸಿದ್ಧಾಂತ ಮತ್ತು ಪ್ರಯೋಗ
ಲೇ: ಡಾ. ಹಿ. ಶಿ. ರಾಮಚಂದ್ರೇಗೌಡ
ಬೆಲೆ: ರೂ.210/– ಮತ್ತು 290/–

ಜಾನಪದವನ್ನು ಹಾಸಿ–ಹೊದ್ದು–ಉಸಿರಾಡುವ ಹಿ.ಶಿ.ರಾ ಅವರ ಮೇಲಿನ ಎರಡೂ ಕೃತಿಗಳು ಆಧುನಿಕ ಕೊಳ್ಳುಬಾಕ ಸಂಸ್ಕೃತಿಯ ವಿರುದ್ಧ ಸೆಡ್ಡು ಹೊಡೆದು ನಿಂತ ಜಾನಪದ ಬದುಕಿನ ಜೀವಂತ ಉದಾಹರಣೆಗಳಾಗಿವೆ. ಬದುಕಿನಲ್ಲಿ ಪ್ರದರ್ಶಿತವಾಗುತ್ತಿರುವ ರಚನಾ ವಿನ್ಯಾಸದ ಹಲವು ವಿಧಗಳನ್ನು ತುಲನಾತ್ಮಕವಾಗಿ ತಂದು ಸಂವಾದವನ್ನು ಮಾಡುವ ಗುಣವು ಇಲ್ಲಿನ ಲೇಖನಗಳಿಗೆ ಒಂದು ಹೊಸ ಗಟ್ಟಿತನವನ್ನೂ, ಹಾಗೂ ಹೆಚ್ಚು ಫಲಪ್ರದವಾದ ಒಳನೋಟಗಳನ್ನೂ ಕೊಡುತ್ತವೆ.

ಕೃಷಿವಲಯದ ಸಾಂಸ್ಕೃತಿಕ ಉತ್ಪತ್ತಿಯಾದ ಜಾನಪದವನ್ನು, ಈವತ್ತಿನ ಆರ್ಥಿಕ, ಸಾಮಾಜಿಕ, ರಾಜಕೀಯ ಚಿಂತನೆಗಳ ಮುಖಾಂತರವೇ ಪ್ರಸ್ತುತಗೊಳಿಸಲು ಯತ್ನಿಸುವ ಲೇಖಕರ ಈ ಎರಡೂ ಸಂಕಲನದ ಲೇಖನಗಳಲ್ಲಿ ಆಳವಾದ ವಿದ್ವತ್ತಿನ ಜೊತೆಗೆ ಅಸಾಧಾರಣವಾದ ಗ್ರಹಿಕೆಯೂ ಇದೆ. ಬದಲಾಗುತ್ತಿರುವ ಅಧ್ಯಯನ ವಿಧಾನಗಳಿಗೆ ಕನ್ನಡ ಜಾನಪದವು ತನ್ನನ್ನು ಒಡ್ಡಿಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಲೇಖಕರ ಪ್ರಸ್ತುತ ಕೃತಿಗಳು ಜಾನಪದ ಕ್ಷೇತ್ರಕ್ಕೆ ಮೌಲಿಕ ಕೊಡುಗೆಯಾಗಿವೆ.

ಪ್ರಕಾಶಕರು: ವಿಜಯಲಕ್ಮಿ ಪ್ರಕಾಶನ #657, ಕೂಗುಬಂಡೆ ರಸ್ತೆ, ಇ ಮತ್ತು ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು–23



ಅನಾವರಣ
ಲೇ: ಟಿ.ಎನ್.ಷಣ್ಮುಖ
ಬೆಲೆ: ರೂ.80/–

ಈ ಕೃತಿಯು ಲೇಖಕರ ಮೊದಲ ಕಾದಂಬರಿಯಾಗಿದ್ದು, ಸಮಾನತೆಯ ದೀಪ ಹಚ್ಚಲು ಹೊರಟಿರುವ ಅನೇಕ ಕಥೆ ಮತ್ತು ವ್ಯಥೆಗಳ ಅನಾವರಣವಾಗಿದೆ. ಮನುಷ್ಯ ಮನುಷ್ಯರ ನಡುವಿನ ಅಸಮಾನತೆಗಳು, ಮತ್ತು ಸ್ವಾತಂತ್ರ್ಯಾನಂತರದ ದುರ್ಭರ ಬದುಕು ಇಲ್ಲಿನ ಕಥಾ ವಸ್ತುವಾಗಿದೆ. ಸಮಾನತೆಗಾಗಿ ತುಡಿಯುವ ಮಾನವ ಸಹಜ ಬದುಕನ್ನು ಅನಾವರಣಗೊಳಿಸುವ ಕೆಲಸವನ್ನು ಲೇಖಕರು ಮಾಡಿದ್ದಾರೆ. ಇದು ಮೊದಲ ಕಾದಂಬರಿಯಾದರೂ ಪಾತ್ರ ಪೋಷಣೆ, ತಂತ್ರಗಾರಿಕೆಯಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ನಕ್ಸಲ್ ಚಳವಳಿ ವ್ಯಾಪಕವಾಗುತ್ತಿರುವ ಸಂದರ್ಭದಲ್ಲಿ ಈ ಕೃತಿ ಬಂದಿರುವುದು ವಿಶೇಷ.

ಪ್ರಕಾಶನ: ಚಾರ್ವಾಕ ಪ್ರಕಾಶನ ವಿಶ್ವನಾಥನ ಹಳ್ಳಿ, ಕಾಳಘಟ್ಟ ಅಂಚೆ, ಹೊಳಲ್ಕೆರೆ ತಾ॥, ಚಿತ್ರದುರ್ಗ ಜಿಲ್ಲೆ



ಅಂತರಂಗದ ಧ್ವನಿ
ಲೇ: ಮಂಜುಳಾ ಸದಾಶಿವ
ಬೆಲೆ: ರೂ. 80/–

ಸಮಾನತೆಗಾಗಿ ತುಡಿಯುವ ಆಶಯಗಳನ್ನು ಹೊತ್ತ ಲೇಖನಗಳ ಸಂಗ್ರಹ ಈ ಕೃತಿ. ಭಾರತದಲ್ಲಿ ದಲಿತರ ಹಾಗೂ ಮಹಿಳೆಯರ ಗತಿ–ಸ್ಥಿತಿಗಳು ಒಂದೇ ರೀತಿಯಾಗಿವೆ. ಇವರ ಕಲ್ಯಾಣಕ್ಕಾಗಿ ಕೈ ಗೊಂಡ ಕ್ರಮಗಳು ರಾಜಕೀಕರಣ ಹೊಂದಿರುವುದು ವಿಷಾದ ಹಾಗೂ ಆತಂಕಕಾರಿ ಸ್ಥಿತಿಯಾಗಿದೆ. ಮಹಿಳೆಯನ್ನು ಒಂದು ಕಡೆ 'ಹೊನ್ನಶೂಲ'ಕ್ಕೇರಿಸಿ ಮತ್ತೊಂದು ಕಡೆ ಅವಳು 'ಜೀವಿ'ಯೆ ಅಲ್ಲ ಎಂಬ ನಡವಳಿಕೆ ಈ ದೇಶದ ಪುರುಷರಲ್ಲಿ ಅಂತರ್ಗತವಾಗಿದೆ. ಭಾರತದ ಎಲ್ಲ ಮಹಿಳೆಯರನ್ನು ಏಕರೂಪದಲ್ಲಿ ಅರ್ಥೈಸುವುದು ಕಠಿಣ. ಜಾತಿ, ವರ್ಣ, ವರ್ಗ, ಶಿಕ್ಷಣ, ವಾಸದಪ್ರದೇಶ ಮುಂತಾದ ಪರಿಣಾಮವನ್ನು ಇಲ್ಲಿ ಕಾಣಬಹುದು.

ಪ್ರಕಾಶಕರು: ಸುನೀತ ಪ್ರಕಾಶನ ಹುನಗುಂದ–587119



ಮಾಯಾಪೆಟ್ಟಿಗೆ
ಲೇ: ಜ್ಯೋತಿ ಗುರುಪ್ರಸಾದ್
ಬೆಲೆ: ರೂ. 90/–

ಅಪರೂಪದ ಕಾವ್ಯ ಪ್ರತಿಭೆ ಜ್ಯೋತಿ ಅವರಿಗೆ, ಇತರರಿಗೆ ಕಾಣದೆ ಇರುವುದನ್ನು ಕಾಣಿಸುವುದರಲ್ಲೇ ಹೆಮ್ಮೆ. ಇಲ್ಲಿನ ಬಹುತೇಕ ಎಲ್ಲ ಕವನಗಳಲ್ಲೂ ಈ ಕಾಣ್ಕೆ ಪದೇ ಪದೇ ಪ್ರತ್ಯಕ್ಷವಾಗುತ್ತದೆ. ನಮ್ಮ ನಿತ್ಯದ ದೈನಿಕಗಳೇ ಇವರಲ್ಲಿ ಕಾವ್ಯವಾಗುತ್ತದೆ. ಇಲ್ಲೊಂದು ಕುಶಲವಾದ, ತೋರಿಕೆಯಿಲ್ಲದ ಕಲೆಗಾರಿಕೆ ಇದೆ. ಗೊತ್ತಿರುವ ಮಾತೇ ಅಪರೂಪದ ಅರ್ಥವನ್ನು ಕಣ್ಣು ಮಿಟುಕಿಸಿದಂತೆ ಮಿಟುಕಿ ಹೊಳೆಯಿಸುತ್ತದೆ. ಗರಿಕೆಯ ಮೇಲಿನ ಇಬ್ಬನಿಯ ಶುಭ್ರತೆ ಇವರ ಉತ್ತಮ ಪದ್ಯಗಳ ಮಾತಿನಲ್ಲಿ ಕಾಣುತ್ತದೆ.

ಪ್ರಕಾಶಕರು: ಅಧ್ಯಯನ ಮಂಡಲ. ಬೆಂಗಳೂರು–560 004

ಧರ್ಮದ ಹೆಸರಿನಲ್ಲಿ...
ಮೂಲ: ಆರ್.ಬಿ.ಶ್ರೀಕುಮಾರ್
ಅನು: ಡಾ। ಸಾರಾ ಅಬೂಬಕ್ಕರ್
ಬೆಲೆ: ರೂ. 70/–

ಗುಜರಾತಿನ ಬೇಹುಗಾರಿಕಾ ಇಲಾಖೆಯ ಅಧಿಕಾರಿಯಾಗಿದ್ದ ಲೇಖಕ ಕಣ್ಣಾರೆ ಕಂಡ ಜನಾಂಗದ್ವೇಷ, ಹಿಂಸೆ, ನೋವು, ಯಾತನೆ ಹಾಗೂ ಇದರ ವಿರುದ್ಧ ಏನೂ ಮಾಡಲಾಗದ ತನ್ನ ಅಸಹಾಯಕತೆ, ಮನುಷ್ಯರ ಮಾರಣಹೋಮದಿಂದಾಗಿ ನಿದ್ರೆಯಿಲ್ಲದೆ ಕಳೆದ ರಾತ್ರಿಗಳು, ಎಲ್ಲವನ್ನೂ ಈ ಗ್ರಂಥದ ಮೂಲಕ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಅಪರೂಪದ ಹಾಗೂ ಓದಲೇಬೇಕಾದ ಪುಸ್ತಕ ಇದು.

ಪ್ರಕಾಶಕರು: ಚಂದ್ರಗಿರಿ ಪ್ರಕಾಶನ 2–21–1631/2, ಮೈಕ್ರೋವೇವ್ ಸ್ಟೇಶನ್ ರಸ್ತೆ, ಮಂಗಳೂರು–6

ಸಂಪಾದಕೀಯ

ಅಂತರಂಗ



ಬಾಯಲ್ಲಿ ಬೆಲ್ಲ, ಬಗಲಲ್ಲಿ ದೊಣ್ಣೆ!

ಬಾಯಲ್ಲಿ ಬೆಲ್ಲ, ಬಗಲಲ್ಲಿ ದೊಣ್ಣೆ! ಇದು ಜಾನಪದ ಗೀತೆಯೊಂದರ ಸಾಲು. ಈ ಸಾಲುಗಳನ್ನು ಅಕ್ಷರಷಃ ನಿಜವಾಗಿಸಲು ಕೇಂದ್ರ ಸರ್ಕಾರ ಸಿದ್ಧವಾಗಿ ನಿಂತಿದೆ. ಬಡವರು, ನೊಂದವರು, ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ಸರ್ಕಾರ ಬಿ.ಟಿ ಬದನೆಗೆ ಕೆಂಪುಹಾಸು ಹಾಸಲು ಹೊರಟಿರುವುದನ್ನು ನೋಡಿದರೆ ಇದು ಅರ್ಥವಾಗುತ್ತದೆ.

ಕೈಗಾರಿಕೀಕರಣ, ಆಧುನಿಕರಣದ ಭರಾಟೆ ನಡುವೆಯೂ ಭಾರತ ಇನ್ನೂ ಕೃಷಿ ಆಧಾರಿತ ದೇಶವಾಗಿಯೇ ಉಳಿದಿದೆ. ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ರಾಸಾಯನಿಕ ಗೊಬ್ಬರ ಹಾಗೂ ಯಾಂತ್ರೀಕೃತ ಕೃಷಿ ಪದ್ಧತಿ ಆಕ್ರಮಿಸಿಕೊಂಡಾಗ ಅದ್ಭುತವೇ ನಡೆದು ಹೋಗುತ್ತದೆಂಬ ಭಾವನೆಯನ್ನು ಬಿತ್ತಲಾಗಿತ್ತು. 'ಹಸಿರು ಕ್ರಾಂತಿ'ಯಿಂದ ಭಾರತದ ಹಸಿವೆ ಕಡಿಮೆ ಆಯಿತಾದರೂ ಅದನ್ನೂ ಮೀರಿದ ಸಮಸ್ಯೆಗಳು ಹೆಚ್ಚ ತೊಡಗಿದವು. ಆಹಾರ ವಿಷಪೂರಿತವಾಗತೊಡಗಿತು. ಭೂಮಿ ಸತ್ವ ಕಳೆದುಕೊಂಡು ಬಂಜರಾಗತೊಡಗಿತು. ನಾಲ್ಕು ಚೀಲ ರಾಸಾಯನಿಕ ಗೊಬ್ಬರ ಹಾಕುತ್ತಿದ್ದ ಕಡೆ ಹತ್ತು ಚೀಲ ರಾಸಾಯನಿಕ ಗೊಬ್ಬರ ಹಾಕಿದರೂ ಬೆಳೆ ಕಡಿಮೆಯಾಗುತ್ತಲೇ ಹೋಯಿತು. ಹಸಿರುಕ್ರಾಂತಿಯ ಹರಿಕಾರರು ಇದಕ್ಕೆ ಉತ್ತರವನ್ನಾಗಲಿ ಪರಿಹಾರವನ್ನಾಗಲಿ ನೀಡಲಿಲ್ಲ. ಬದಲಾಗಿ ಕುಲಾಂತರಿ ತಳಿಯ ಸಂಶೋಧನೆಯಲ್ಲಿ ತೊಡಗಿಕೊಂಡರು. ಅದರ ಪರಿಣಾಮವೇ ಬಿ.ಟಿ ಬದನೆ!

ವಿಜ್ಞಾನಿಗಳು ಹೇಳುವುದನ್ನೇನೋ ಕೇಳಲು ಚೆನ್ನಾಗಿದೆ. ಕುಲಾಂತರಿ ತಳಿಗೆ ಕೀಟನಾಶಕ ಕಡಿಮೆ ಬಳಸಬಹುದು, ಕಡಿಮೆ ಪ್ರದೇಶದಲ್ಲಿ ಹೆಚ್ಚು ಬೆಳೆ ಬೆಳೆಯಬಹುದು ಇವೇ ಮೊದಲಾದ ಆಕರ್ಶಕ ಸಂಗತಿಗಳನ್ನು ಅವರು ಹೇಳುತ್ತಿದ್ದಾರೆ. ಬಹುಷಃ ರಾಸಾಯನಿಕ ಗೊಬ್ಬರ ಬಳಸಿ ಹೈರಾಣಾಗಿರುವ ರೈತರಿಗೆ ಇದು ಆಕರ್ಶಕವಾಗಿ ಕಾಣಿಸಬಹುದು. ಆದರೆ ನಂತರ ಏನು? ಈಗಾಗಲೇ ವಿಷವಾಗಿರುವ ಆಹಾರ ಮುಂದೆ ಸಂಪೂರ್ಣ ವಿಷ ಪೂರಿತವಾಗಲಾರದೆ? ಈ ಕುಲಾಂತರಿ ತಳಿಯನ್ನು ಹಲವಾರು ಐರೋಪ್ಯ ದೇಶಗಳು ಈಗಾಗಲೇ ನಿಷೇಧಿಸಿದ್ದು, ವಿಜ್ಞಾನಿಗಳು ಈ ತಳಿಗಳಲ್ಲಿ ಕ್ಯಾನ್ಸರ್ ಕಾರಕ ವಿಷಾಣುಗಳು ಇರುವುದನ್ನು ಕಂಡು ಹಿಡಿದಿದ್ದಾರೆ.

ಆಸ್ಟ್ರೇಲಿಯಾ ಸರ್ಕಾರ ಈ ಕುಲಾಂತರಿ ಆಹಾರ ಸೇವನೆಯಿಂದ ಸಂತಾನೋತ್ಪತ್ತಿಯ ಸಾಮರ್ಥ್ಯ ಕ್ಷೀಣಿಸುತ್ತದೆ ಎಂಬ ಸಂಶೋಧನಾತ್ಮಕ ವರದಿಯನ್ನು ಬಿಡುಗಡೆ ಮಾಡಿ ಜಗತ್ತಿಗೇ ಎಚ್ಚರಿಕೆ ನೀಡಿದೆ. ಕುಲಾಂತರಿ ಆಹಾರ ಸೇವನೆಯಿಂದಾಗಿ ಮಾನವನ ಕರುಳಿನಲ್ಲಿರುವ ಬ್ಯಾಕ್ಟೀರಿಯಾಗಳಿಗೆ ಬಿ.ಟಿ ಜೀನ್‌ಗಳು ವರ್ಗಾವಣೆಯಾಗಿ, ಮಾನವ ಜೀವ ಕೋಶಗಳು ಅಸಹಜವಾಗಿ ಬೆಳೆದು ಮಾರಕ ಕ್ಯಾನ್ಸರ್‌ಗೆ ತುತ್ತಾಗುವ ಅಪಾಯವಿದೆ! ಅಷ್ಟೇ ಏಕೆ ಬಿ.ಟಿ ಬದನೆ ಕಾಯಿಗಳನ್ನು ತಿಂದರೆ ಹುಳುಗಳೇ ಸತ್ತು ಹೋಗುತ್ತವೆ ಎಂದು ಅದರ ರೂವಾರಿ ವಿಜ್ಞಾನಿಗಳೇ ಹೇಳುತ್ತಿದ್ದಾರೆ. ಕಾಯಿ ತಿಂದ ಹುಳುಗಳೇ ಸಾಯುವಾಗ ಮನುಷ್ಯರ ಪಾಡೇನು?

ಇಷ್ಟು ಸಾಲದೆಂಬಂತೆ ಈ ಹಿಂದೆ ಪರಿಚಯಿಸಲ್ಪಟ್ಟ ಹತ್ತಿಯ ಕುಲಂತರಿ ತಳಿ ಈಗಾಗಲೇ ತನ್ನ ವೈಫಲ್ಯವನ್ನು ಸಾಬೀತು ಮಾಡಿದೆ. ಬಿ.ಟಿ ಹತ್ತಿ ಬೆಳೆದ ರೈತರೆಲ್ಲ ಕಣ್ಣೀರಲ್ಲಿ ಕೈತೊಳೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಎರಡು ಮೂರರಷ್ಟು ಹೆಚ್ಚುವರಿ ಫಸಲು ಬರುವುದೆಂದು ಬೊಬ್ಬೆ ಹೊಡೆದಿದ್ದ ಬೀಜ ಕಂಪೆನಿಗಳು ಉಸಿರೆತ್ತದಂತೆ ಕುಳಿತಿವೆ. ರಾಸಾಯನಿಕ ಗೊಬ್ಬರವನ್ನಂತೂ ಎಷ್ಟು ಸುರಿದರೂ ಬೆಳೆ ಪ್ರಮಾಣ ಹೆಚ್ಚುತ್ತಲೇ ಇಲ್ಲ. ಕೀಟ ಬಾಧೆ ಬರುವುದೇ ಇಲ್ಲ ಎಂದು ನಂಬಿದ್ದ ರೈತ, ಎಷ್ಟು ಕೀಟನಾಶಕ ಸಿಂಪಡಿಸಿದರೂ, ಕೀಟ ಬಾಧೆ ನಿಯಂತ್ರಿಸಲಾರದೆ ತಾನೇ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ.

ಇಷ್ಟೆಲ್ಲಾ ಅಪಾಯಗಳು ಇದ್ದರೂ, ಹಲವಾರು ದೇಶಗಳು ನಿಷೇಧಿಸಿದ್ದರೂ, ಭಾರತಕ್ಕೇಕೆ ಈ ಕುಲಾಂತರಿ ಬದನೆ ತಳಿ ಆಪ್ಯಾಯಮಾನವೆನಿಸುತ್ತಿದೆ? ಇದರಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಪಿತೂರಿ ಎಷ್ಟಿರಬಹುದು? ಅಥವಾ ಭಾರತ ಸರ್ಕಾರವೇ ಇಂಥ ಬಹುರಾಷ್ಟ್ರೀಯ ಕಂಪೆನಿಗಳ ಮುಂದೆ ಮಂಡಿಯೂರಿ ಕುಳಿತಿರಬಹುದೆ? ಸಾಂಪ್ರದಾಯಿಕ ದೇಶೀ ತಳಿ ವೈವಿಧ್ಯಕ್ಕೆ ಹೆಸರಾದ ಭಾರತ ಇಂಥ ಆಮಿಷಕ್ಕೇಕೆ ಬಲಿಯಾಗುತ್ತಿದೆ? ಇಂಥ ಕುಲಾಂತರಿ ತಳಿಗಳನ್ನು ಪರಿಚಯಿಸುವ ಮೂಲಕ ಇಡೀ ದೇಶದ ರೈತ ಸಮುದಾಯವನ್ನು ಬಹುರಾಷ್ಟ್ರೀಯ ಕಂಪನಿಗಳ ದಾಸ್ಯಕ್ಕೆ ಸಿಕ್ಕಿಸುವುದು ಸರ್ಕಾರದ ಉದ್ದೇಶವೆ?

ರೈತನನ್ನು ಆತ್ಮಹತ್ಯೆಯಿಂದ ಪಾರುಮಾಡುವ ಬಗ್ಗೆ ಆಲೋಚನೆ ಮಾಡಬೇಕಾದ ಕೇಂದ್ರ ಸರ್ಕಾರ ಇಡೀ ರೈತ ಕುಲವನ್ನೇ ಸರ್ವನಾಶ ಮಾಡುವ ಪ್ರಯತ್ನಗಳತ್ತಲೇ ಗಮನ ಹರಿಸುತ್ತಿದೆ. ಹಾಗೆ ನೋಡಿದರೆ, ಸಾವಯವ ಕೃಷಿಗೆ ಉತ್ತೇಜನ ನೀಡುವ ಮೂಲಕ ಕರ್ನಾಟಕ ಸರ್ಕಾರ ಒಳ್ಳೆಯ ಕೆಲಸವನ್ನೇ ಮಾಡಿದೆ. ಸಾವಯವ ಕೃಷಿಯನ್ನೂ ಮೀರಿಸಿದ ಸುಭಾಷ್ ಪಾಳೇಕರರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿಗೆ ಉತ್ತೇಜನ ನೀಡುವ ಪ್ರಯತ್ನವನ್ನು ಸರ್ಕಾರ ಮಾಡಿದ್ದರೆ ಇಡೀ ರೈತ ಸಮುದಾಯವೇ ಸರ್ಕಾರಕ್ಕೆ ಚಿರಋಣಿಯಾಗಿರುತ್ತಿತ್ತು.

ಯಾಕೆಂದರೆ ಸಾವಯವ ಕೃಷಿಯಲ್ಲಿ ರಾಸಾಯನಿಕಗಳ ವಿಷಯುಕ್ತ ಆಹಾರ ಉತ್ಪಾದನೆಯಾಗುವುದಿಲ್ಲವಾದರೂ, ಅದು ರಾಸಾಯನಿಕ ಗೊಬ್ಬರ ಬಳಸುವಷ್ಟೇ ಖರ್ಚಿನ ವ್ಯವಸಾಯ ಕ್ರಮ. ಅಲ್ಲಿ ಬಂಡವಾಳಗಾರರ, ವ್ಯಾಪಾರಿಗಳ, ಮಧ್ಯವರ್ತಿಗಳ ಹಾವಳಿಗೆ ಅವಕಾಶವಿದೆ. ಆದರೆ ಪಾಳೆಕರರ ನೈಸರ್ಗಿಕ ಕೃಷಿ ಸಂಪೂರ್ಣ ಸ್ವಾವಲಂಬಿ ಹಾಗೂ ಶೂನ್ಯ ಬಂಡವಾಳದ ವಿಧಾನವಾಗಿದ್ದು, ರೈತನಿಗೆ ವರದಾನವಾಗಿದೆ. ಒಂದೆರಡು ಹಸುಗಳಿಂದ ನಾಲ್ಕಾರು ಎಕರೆ ಭೂಮಿಯಲ್ಲಿ ವ್ಯವಸಾಯ ಮಾಡುವ ಸುಲಭ ಸಂಜೀವಿನಿ ಅದು. ಸರ್ಕಾರಕ್ಕೆ ನಿಜವಾಗಿಯೂ ರೈತರ ಬಗೆಗೆ ಕಾಳಜಿ ಇದ್ದರೆ ಪಾಳೆಕರರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿಗೆ ಆದ್ಯತೆ ಮೇಲೆ ಉತ್ತೇಜನ ನೀಡಬೇಕು. ಆಗ ರೈತನೂ ಉಳಿಯುತ್ತಾನೆ. ದೇಶವೂ ಉಳಿಯುತ್ತದೆ.

ಇಡೀ ಜಗತ್ತು ವಿಷಾಹಾರ ಮುಕ್ತವಾಗಬೇಕು ಎಂದು ಬಯಸುತ್ತಿರುವಾಗ ಭಾರತ ಮಾತ್ರ ವಿಷಯುಕ್ತ ಆಹಾರ ಬೆಳೆಯಲು ಉತ್ಸುಕವಾಗಿರುವುದನ್ನು ನೋಡಿದರೆ, ಸರ್ಕಾರಕ್ಕೆ ಜನರ ಆರೋಗ್ಯಕ್ಕಿಂತ ಬಹುರಾಷ್ಟ್ರೀಯ ಕಂಪೆನಿಗಳ ಆರೋಗ್ಯವೇ ಮುಖ್ಯವಿರಬೇಕು ಎನ್ನಿಸುತ್ತಿದೆ. ಜನ ವಿರೋಧಿಯಾದ ಸರ್ಕಾರದ ಇಂಥ ಮೂರ್ಖ ತೀರ್ಮಾನಗಳನ್ನು ಜನತೆ ತಡೆಯದಿದ್ದರೆ ದೇಶ ಮತ್ತೊಮ್ಮೆ ಗುಲಾಮಗಿರಿಗೆ ಬೀಳುವ ದಿನಗಳು ದೂರವೇನೂ ಇಲ್ಲ. ಕುಲಾಂತರಿ ತಳಿ ಸಂಶೋಧನೆಗಳು ಆರಂಭವಾದಾಗಲೇ ಅದರ ವಿರುದ್ಧದ ಪ್ರತಿಭಟನೆಗಳೂ ಆರಂಭವಾದವು. ಆದರೆ ಸರ್ಕಾರ ಅದನ್ನು ನಿರ್ಲಕ್ಷಿಯೇ ಮುನ್ನಡೆದಿದೆ. ಈಗಲಾದರೂ ಅದಕ್ಕೆ ಹಗ್ಗ ಮೂಗುದಾರ ಹಾಕದಿದ್ದರೆ ಉಳಿಗಾಲವಿಲ್ಲ.

○ ಇಂದೂಧರ ಹೊನ್ನಾಪುರ

'ಅಭಿಪ್ರಾಯವನ್ನು ದೃಢ ಪಡಿಸುವ ದೃಷ್ಟಾಂತಗಳು'

ಸಂಪಾದಕರೊಡನೆ ಸಂವಾದ

ಜಿ. ರಾಜಶೇಖರ್

ಮಾನ್ಯರೆ,

ಕೋಮುವಾದ ಕುರಿತು ಕನ್ನಡದಲ್ಲಿ ಪ್ರಕಟವಾಗುವ ಬರಹಗಳಿಗೆ ವಿವರ, ಸಾಕ್ಷ್ಯಾಧಾರ, ಅಂಕಿಅಂಶ ಇತ್ಯಾದಿಗಳ ನೆಲೆಗಟ್ಟು ಸಾಮಾನ್ಯವಾಗಿ ಇರುವುದಿಲ್ಲ ಎಂಬ ನನ್ನ ಅಭಿಪ್ರಾಯವನ್ನು ಆಕ್ಷೇಪಿಸಿ, ಕಳೆದ ಸಂಚಿಕೆಯಲ್ಲಿ ನಾ. ದಿವಾಕರ ಮತ್ತು ಡಿ.ಎಸ್.ನಾಗಭೂಷಣ್ ಬರೆದಿದ್ದಾರೆ. ಅವರ ಪತ್ರಗಳೇ ನನ್ನ ಅಭಿಪ್ರಾಯವನ್ನು ಇನ್ನಷ್ಟು ದೃಢಪಡಿಸುವ ದೃಷ್ಟಾಂತಗಳಾಗಿವೆ. ಇದಕ್ಕೆ ಸಮರ್ಥನೆಯಾಗಿ ಈ ಕೆಳಗಿನ ಅಂಶಗಳನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ.

1) ನಾ ದಿವಾಕರ ತಮ್ಮ ಪತ್ರದಲ್ಲಿ ಮತೀಯವಾದ ಮೂಲಭೂತವಾದ ಮತ್ತು ಜೆಹಾದಿ ಪರಿಕಲ್ಪನೆಗಳು ಭಾರತದ ಮುಸ್ಲಿಮರಲ್ಲಿ "ಇಲ್ಲವೇ ಇಲ್ಲ ಎಂದು ಹೇಳಲಾದೀತೆ?" "ಅವುಗಳ ಇರುವಿಕೆಯನ್ನು ಅಲ್ಲಗಳೆಯಲಾಗುವುದಿಲ್ಲ ಅಲ್ಲವೆ?" ಎಂದು ಮುಂತಾಗಿ ಸಂದೇಹ ವ್ಯಕ್ತಪಡಿಸುವ ವರಸೆಯಲ್ಲಿ ತಮ್ಮ ಅಭಿಪ್ರಾಯ ತೂರಿಬಿಟ್ಟಿದ್ದಾರೆ. ಈ ಚಾಲಾಕಿಯೆಲ್ಲ ನಡೆಯುವುದಿಲ್ಲ. ದಿವಾಕರ ಹಾಗೆ ಸಂದೇಹಿಸಲಾದರೂ ಇರುವ ಪ್ರಮಾಣಗಳೇನು? ಸಾಂದರ್ಭಿಕ ಸಾಕ್ಷ್ಯಗಳು ಎಲ್ಲಿವೆ? ನಾವು ಅತೀಂದ್ರಿಯ, ಆಧ್ಯಾತ್ಮಿಕ ಅನುಭವಗಳ ಬಗ್ಗೆ ಚರ್ಚೆಮಾಡುತ್ತಿಲ್ಲ. ಸಾಮಾಜಿಕ ರಾಜಕೀಯ ವಿದ್ಯಮಾನಗಳ ಬಗ್ಗೆ ನಾವು ವ್ಯಕ್ತಪಡಿಸುವ ಅನ್ನಿಸಿಕೆಗಳಿಗೆ ವಿವರ, ಸಾಕ್ಷ್ಯಾಧಾರ ಹಾಗೂ ಉದಾಹರಣೆಗಳ ನೆಲೆಗಟ್ಟು ಇಲ್ಲದೆ ಹೋದರೆ ಅವು ನಮ್ಮ ಪೂರ್ವಗ್ರಹ ಅಥವಾ ಜನಜನಿತ ಕಟ್ಟುಕತೆಗಳ ಗ್ಯಾಸ್ ಅಲ್ಲದೆ ಮತ್ತಿನ್ನೇನು?

2) ಭಾರತದ ಮುಸ್ಲಿಮರು ಸಾರಾಸಗಟಾಗಿ ಜೆಹಾದಿ ಮನೋಧರ್ಮದವರು ಎಂಬುದಕ್ಕೆ ಏನೂ ಆಧಾರವಿಲ್ಲ. ದೇಶದಲ್ಲಿ ಸಂಭವಿಸಿದ ಭಯೋತ್ಪಾದಕ ಘಟನೆಗಳಿಗೆ ಮುಸ್ಲಿಮ್ ಪ್ರಜೆಗಳ ಬೆಂಬಲವಿದೆ ಎಂದು ಭಾವಿಸುವುದಕ್ಕೆ ಸಹ ಆಧಾರಗಳಿಲ್ಲ. ಹಿಂದುತ್ವವಾದಿಗಳು ಹಾಡೇ ಹಗಲು ನಡೆಸುವ ಹಿಂಸಾಚಾರಕ್ಕೆ ಜನ ಸಾಮಾನ್ಯರ ಬೆಂಬಲ, ಸಮ್ಮತಿಗಳು ಇದೆ ಎಂಬುದಕ್ಕೆ ನಾವು ಬಾಬರಿ ಮಸೀದಿ ಧ್ವಂಸ, ಮುಂಬಯಿ ಗಲಭೆ ಮತ್ತು ಗುಜರಾತ್‌ಗಳನ್ನು ಉದಾಹರಿಸಬಹುದು. ಹಿಂದುತ್ವದ ಹಿಂಸೆಗೆ ಜನರ ಸಮ್ಮತಿ ಮಾತ್ರವಲ್ಲ ಮಾಧ್ಯಮಗಳು ಪೊಲೀಸರು ಮತ್ತು ನ್ಯಾಯಾಲಯಗಳ ಕುಮ್ಮಕ್ಕು ಸಹ ಇದೆ ಎನ್ನುವುದಕ್ಕೂ ಸಾಕಷ್ಟು ಪುರಾವೆಗಳಿವೆ.

3) ಪಶ್ಚಿಮ ಏಷ್ಯದ ತೈಲ ಸಂಪತ್ತಿನ ಒಡೆತನಕ್ಕಾಗಿ 19ನೆಯ ಶತಮಾನದ ಯುರೋಪ್ ವಸಾಹತುಶಾಹಿ ಮತ್ತು ಆನಂತರ ಅಮೇರಿಕದ ಸಾಮ್ರಾಜ್ಯಶಾಹಿ ನಡೆಸಿದ ಕ್ರೂರ ಶಕ್ತಿ ರಾಜಕಾರಣವನ್ನು ಮನಗಾಣದೆ ನಾವು ಜೆಹಾದಿ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲಾರೆವು. ಈ ಸಮಕಾಲೀನ ಸಂದರ್ಭವನ್ನು ಮರೆತರೆ ಮಾತ್ರ ಜೆಹಾಲ್ ಇಸ್ಲಾಂನಲ್ಲೇ ಅಂತರ್ಗತವಾಗಿರುವ ಸಮಸ್ಯೆ ಎಂದು ವಾದಿಸಬಹುದು. ತಾವು ಲಿಬರಲ್ ಮಾನವತಾವಾದಿಗಳು ಎಂದು ಭಾವಿಸಿರುವ ಅನೇಕರು ಈಗ ಇಸ್ಲಾಂನಲ್ಲೇ ಸಮಸ್ಯೆ ಇದೆ ಎಂದು ನಂಬಿದ್ದಾರೆ. ಹಾಗೆ ನೋಡಿದರೆ, ಯಾವ ಧರ್ಮದಲ್ಲಿ ಸಮಸ್ಯೆ ಇಲ್ಲ? ಜೆಹಾದ್‌ನ ಪರಿಕಲ್ಪನೆ, ಕ್ರಿಶ್ಚಿಯನ್ನರ ಕ್ರುಸೇಡ್ಸ್ ಮತ್ತು ಮಹಾಭಾರತದಲ್ಲಿ ಕೃಷ್ಣ, ಅರ್ಜುನನಿಗೆ ಬೋಧಿಸಿದ ಧರ್ಮ ಯುದ್ಧಕ್ಕಿಂತ ಬೇರೆಯಲ್ಲ. ಅದು ಇಸ್ಲಾಂಗೆ ವಿಶಿಷ್ಟವಾದ ಸಮಸ್ಯೆಯೂ ಅಲ್ಲ. ವಾಸ್ತವವಾಗಿ ಈ ಲಿಬರಲ್ ಮಾನವತವಾದಿಗಳಿಗೆ ಸಮಸ್ಯೆಯಾಗಿರುವುದು ಮುಸ್ಲಿಮ್ ಸಮುದಾಯ; ನಾಝಿ ಜರ್ಮನಿಯಲ್ಲಿ ಯಹೂದಿಗಳು "ಸಮಸ್ಯೆ" ಆದ ಹಾಗೆ; ಅಥವಾ ಶ್ರೀಲಂಕಾದಲ್ಲಿ ಭಾರತೀಯ ಮೂಲದ ತಮಿಳರು "ಸಮಸ್ಯೆ" ಆದ ಹಾಗೆ.

ಪಶ್ಚಿಮ ಏಷ್ಯದ ತೈಲ ಸಂಪತ್ತಿನ ಒಡೆತನಕ್ಕಾಗಿ ೧೯ನೆಯ ಶತಮಾನದ ಯುರೋಪ್ ವಸಾಹತುಶಾಹಿ–ಆನಂತರ ಅಮೇರಿಕದ ಸಾಮ್ರಾಜ್ಯಶಾಹಿ ನಡೆಸಿದ ಕ್ರೂರ ಶಕ್ತಿ ರಾಜಕಾರಣವನ್ನು ಮನಗಾಣದೆ ನಾವು ಜೆಹಾದಿ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲಾರೆವು. ಈ ಸಮಕಾಲೀನ ಸಂದರ್ಭವನ್ನು ಮರೆತರೆ ಮಾತ್ರ ಜೆಹಾಲ್ ಇಸ್ಲಾಂನಲ್ಲೇ ಅಂತರ್ಗತವಾಗಿರುವ ಸಮಸ್ಯೆ ಎಂದು ವಾದಿಸಬಹುದು. ತಾವು ಲಿಬರಲ್ ಮಾನವತಾವಾದಿಗಳು ಎಂದು ಭಾವಿಸಿರುವ ಅನೇಕರು ಈಗ ಇಸ್ಲಾಂನಲ್ಲೇ ಸಮಸ್ಯೆ ಇದೆ ಎಂದು ನಂಬಿದ್ದಾರೆ. ಹಾಗೆ ನೋಡಿದರೆ, ಯಾವ ಧರ್ಮದಲ್ಲಿ ಸಮಸ್ಯೆ ಇಲ್ಲ? ಜೆಹಾದ್‌ನ ಪರಿಕಲ್ಪನೆ, ಕ್ರಿಶ್ಚಿಯನ್ನರ ಕ್ರುಸೇಡ್ಸ್ ಮತ್ತು ಮಹಾಭಾರತದಲ್ಲಿ ಕೃಷ್ಣ, ಅರ್ಜುನನಿಗೆ ಬೋಧಿಸಿದ ಧರ್ಮಯುದ್ಧಕ್ಕಿಂತ ಬೇರೆಯಲ್ಲ. ಅದು ಇಸ್ಲಾಂಗೆ ವಿಶಿಷ್ಟವಾದ ಸಮಸ್ಯೆಯೂ ಅಲ್ಲ. ವಾಸ್ತವವಾಗಿ ಈ ಲಿಬರಲ್ ಮಾನವತವಾದಿಗಳಿಗೆ ಸಮಸ್ಯೆಯಾಗಿರುವುದು ಮುಸ್ಲಿಮ್ ಸಮುದಾಯ.

4) ಕನ್ನಡದ ಸ್ವಘೋಷಿತ ಮಾರ್ಕ್ಸ್‌ವಾದಿ, ಗಾಂಧಿವಾದಿ ಮತ್ತು ಲೋಹಿಯಾವಾದಿಗಳ ಬಗ್ಗೆ ನಾನು ಆಡಿದ ಮಾತುಗಳನ್ನು ಡಿ.ಎಸ್. ನಾಗಭೂಷಣ ತಮ್ಮ ಮೈಮೇಲೆ ಎಳೆದುಕೊಂಡು ನನ್ನ ಮೇಲೆ ಹರಿಹಾಯ್ದಿದ್ದಾರೆ. ಅವರು ಪ್ರತಿವಾದಿ ಭಯಂಕರರಾಗಿರುವುದರ ಬಗ್ಗೆ ನನ್ನದೇನೂ ತಕರಾರಿಲ್ಲ; ನಾನು ಅವರ ಪ್ರತಿದ್ವಂದ್ವಿಯೂ ಅಲ್ಲ. ಆದರೆ ವಾದದಲ್ಲಿ ಎದುರಾಳಿಯ ಮಾತಿನ ತಾತ್ಪರ್ಯ, ಪೂರ್ವಪಕ್ಷಗಳನ್ನು ತಿರುಚುವುದು ತರವಲ್ಲ. ನಾಗಭೂಷಣ ಬಹಳ ಹಿಂದೆ ನಾನು ಪ್ರಕಟಿಸಿದ ಒಂದು ಲೇಖನದ ತಾತ್ಪರ್ಯವನ್ನು ತಪ್ಪಾಗಿ ನಿರೂಪಿಸಿ ನನ್ನನ್ನು ಹಂಗಿಸಿದ್ದಾರೆ. ನನ್ನ ಆ ಲೇಖನದಲ್ಲಿ ಅಂತರ್ ಮತೀಯ ವಿವಾಹವಾಗುವ ಧೈರ್ಯ ತೋರಿದ ಮುಸ್ಲಿಮ್ ಹುಡಿಗಿಯೊಬ್ಬಳನ್ನು ಆಕೆಯ ತಂದೆ ಮತ್ತು ಅಣ್ಣನೇ ಕೊಂದು ಹಾಕಿದ್ದರ ಬಗ್ಗೆ ನಾನು ಬರೆದಿದ್ದೆ.

ಆ ಘಟನೆಯಿಂದ ಮುಸ್ಲಿಮರು ಹೆಚ್ಚು ಮತೀಯವಾದಿಗಳಾಗುತ್ತಿದ್ದಾರೆ ಅಥವಾ ಕ್ರೂರಿಗಳಾಗುತ್ತಿದ್ದಾರೆ ಎಂಬ ಅವಸರದ ತೀರ್ಮಾನ ಸರಿಯಲ್ಲ ಎಂಬುದು ನನ್ನ ವಾದವಾಗಿತ್ತು. ಅಂತರ್ ಮತೀಯ ವಿವಾಹಗಳೇ ಯಾಕೆ, ಹಿಂದುಗಳಲ್ಲೇ ಅಂತರ್‌ಜಾತೀಯ ವಿವಾಹಗಳು ನಡೆದಾಗಲೂ ಇಂತಹದ್ದೆಲ್ಲ ಸಂಭವಿಸಿದೆ ಎಂದು ನನ್ನ ವಾದವನ್ನು ನಾನು ಸಮರ್ಥಿಸಿಕೊಂಡಿದ್ದೆ. ಅಗುಳು ಪರೀಕ್ಷಿಸಿ ಅನ್ನ ಬೆಂದಿದೆಯೋ ಇಲ್ಲವೋ ಎಂದು ತೀರ್ಮಾನಿಸುವ ಹಾಗೆ ಒಂದೊಂದು ಬಿಡಿ ಘಟನೆಯಿಂದ ಯಾವ ಸಮುದಾಯದ ಬಗ್ಗೆಯೂ ಸಾರಾಸಗಟಾದ ತೀರ್ಮಾನಕ್ಕೆ ಬರಕೂಡದು ಎಂಬುದು ಆಗಲೂ, ಈಗಲೂ ನನ್ನ ನಿಲುವು.

5) ಹಿಂದೂ ಕೋಮುವಾದಕ್ಕೆ ಪ್ರಬಲವಾದ ರಾಜಕೀಯ ಸಂಘಟನೆ ಇದೆ–ಬಿ.ಜೆ.ಪಿ ಮತ್ತು ಸಂಘಪರಿವಾರ. ಬಾಬರಿಮಸೀದಿ ಧ್ವಂಸ 1992–93ರ ಮುಂಬಯಿ ಹಿಂಸಾಕಾಂಡ ಮತ್ತು ಗುಜರಾತ್–2002ರ ನಂತರ ಬಿ.ಜೆ.ಪಿಯನ್ನು ದೇಶದ ಹಲವು ರಾಜಕೀಯ ಪಕ್ಷಗಳಲ್ಲಿ ಒಂದು ಎಂದು ಪರಿಗಣಿಸುವ ಹಾಗಿಲ್ಲ. ಬಿ.ಜೆ.ಪಿ, ದೇಶದ 15 ಕೋಟಿ ಮುಸ್ಲಿಮರನ್ನು ಕಟಕಟೆಯಲ್ಲಿ ನಿಲ್ಲಿಸಿ ಅವರಿಂದ ಆಲ್‌ಖೈದಾ, ತಾಲಿಬಾನ್, ಲಷ್ಕರ್–ಇ–ತೋಯ್ಬಾ ಮುಂಬೈ, ಬೆಂಗಳೂರು ಬಾಂಬ್ ಸ್ಫೋಟ ಇತ್ಯಾದಿಗಳೆಲ್ಲದರ ಬಗ್ಗೆ ವಿವರಣೆ ಕೇಳುತ್ತಿದೆ. ಜನ ಸಾಮಾನ್ಯರನ್ನು, ಅವರು ಮಾಡಿರದ ಅಪರಾಧಗಳಿಗೆ ಉತ್ತರ ದಾಯಿಯನ್ನಾಗಿ ಮಾಡುವುದು ಫ್ಯಾಸಿಸಂ. ನಾ ದಿವಾಕರ ಮತ್ತು ನಾಗಭೂಷಣರಿಗೆ ಈ ಅಪಾಯದ ಅರಿವು ಇದ್ದಂತಿಲ್ಲ. □

ಸಂಪಾದಕರೊಡನೆ ಸಂವಾದ

ಸರಸ್ವತಿ. ಕೆ. ಬಿ

> **ಮೌಢ್ಯತೆಯ ಕೂಪಕ್ಕೆ ದೂಡುತ್ತಲೇ, ಓದುಗರನ್ನು ಬುದ್ಧಿವಂತರೆಂದೂ, ತೀಕ್ಷ್ಣ ಕಾರ್ಯಕ್ಷಮತೆ ಹೊಂದಿದವರೆಂದೂ ಬಣ್ಣಿಸುವುದು ಮಿಥ್ಯ ವಿವೇಚನೆ ಹಾಗು ಮಿಥ್ಯ ವ್ಯಕ್ತಿತ್ವ ಆರೋಪಣೆಯ ಪ್ರಾಥಮಿಕ ಲಕ್ಷಣಗಳಾಗಿವೆ.**

ಮಾನ್ಯರೇ,

ಪ್ರಜಾಪ್ರಭುತ್ವದ ನಿಜದ ಅರ್ಥ ಇರುವುದು Context ಗಳನ್ನು ಎಲ್ಲರ ಒಳಿತಿಗಾಗಿ ನಿರ್ಮಾಣಗೊಳ್ಳುವಂತೆ ಸಮಾಜವನ್ನು ರಚಿಸಿಕೊಳ್ಳುವ ವಿಧಾನ ಇದನ್ನು ಸಡಿಲಗೊಳಿಸುವ ತಂತ್ರಗಳು ಎಲ್ಲೆಲ್ಲೂ ಅಡಗಿವೆ; ನಾವು ಸಾಮಾನ್ಯವಾಗಿ ನಗಣ್ಯವೆಂದು ಭಾವಿಸುವ ದಿನಭವಿಷ್ಯಗಳಲ್ಲಿ ಖುಷಿಯಿಂದ ಕಾಯ್ದು ನೋಡುವ ಸರಣ ದಿನಾವಾಹಿ ಧಾರವಾಹಿಗಳಲ್ಲಿ ಕೂಡ.

ಆಧುನಿಕ ಸಂಸ್ಕೃತಿ ಕೈಗಾರಿಕೆಯಂತೆ ಒಂದು ಉದ್ದಿಮೆಯಾಗಿ ಬೆಳೆಯುತ್ತಿರುವುದು ನಾವು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಿರುವ ವಾಸ್ತವ. ನಮ್ಮನ್ನು ಧೃತಿಗೆಡಿಸಬೇಕಾಗಿರುವುದು ವೈಯಕ್ತಿಕ ವಿವೇಚನೆ ಮತ್ತು ಕಲ್ಪನೆಯನ್ನು ಹೊಸಕಿ ಹಾಕುತ್ತಿರುವ ಹಾಗು ಬಂಡವಾಳಶಹಿ ಸಮಾಜವನ್ನು ಪುನರ್ಸೃಷ್ಟಿಸುತ್ತಿರುವ ವಾಣಿಜ್ಯೀಕರಣಗೊಂಡ ಸಂಸ್ಕೃತಿಯ ಪ್ರಾಬಲ್ಯತೆ.

ಸಂಸ್ಕೃತಿ ಅಧ್ಯಯನದಲ್ಲಿ Theodor Adorno–Max Horkheimerರದು ಪ್ರಮುಖ ಹೆಸರು. ಅಮೇರಿಕಾದ ಜನಪ್ರಿಯ ಸಂಸ್ಕೃತಿಯ ಅಧ್ಯಯನದಲ್ಲಿ ಅವರು ತೊಡಗಿಕೊಂಡ ರೀತಿ ಕುತೂಹಲಕರ. "The Los Angeles Times" ಪತ್ರಿಕೆಯ ಜನಪ್ರಿಯ ದಿನಭವಿಷ್ಯ ಕಾಲಂಗಳನ್ನು ವಿಶೇಷವಾಗಿ ಅಭ್ಯಾಸ ಮಾಡಿ ಇಂತಹ ಸಮೂಹ ಸನ್ನಿಯ ಹಿಂದೆ ಇರುವ ಮನಸ್ಸುಗಳ ವ್ಯಾಪರವನ್ನು ಮಾರ್ಕ್ಸ್‌ವಾದೀಯ ದೃಷ್ಟಿಕೋನದಿಂದ ನಿರೂಪಿಸುತ್ತಾರೆ.

ಅವರ ತರ್ಕ ಎರಡು ಅಂಶಗಳನ್ನು ಆಧರಿಸಿದೆ. [illegible] ಅಥವಾ ವಿವೇಚನೆಯ ಪುನರುತ್ಥಾನ ಹಾಗು ವೈಜ್ಞಾನಿಕ ಚಿಂತನೆಗಳಿಂದ ಅಸಮಂಜಸ ಶಕ್ತಿಯಾಗಿ ರೂಪಾಂತರಗೊಂಡಿದೆ. ಈ ಹೊಸದಾದ ಮತ್ತು ಭೀತಿಗೊಳಿಸುವ ಅತಾರ್ಕಿಕತೆಯು ಆಧುನಿಕ ಕಾಲದ ಸಮೂಹ ಸಂಸ್ಕೃತಿಯಲ್ಲಿ ಗಮನಾರ್ಹವಾಗಿ ಪ್ರರ್ವದ ಮಾನವಾಗುತ್ತಿದೆ. ಎರಡನೆಯದು, ಮಾನವ ಸಮಾಜದ ತರ್ಕಬದ್ಧವಾದ ವಿಚಾರಗಳು ಅಂತಿಮವಾಗಿ ಸರ್ವಾಧಿಕಾರಿ ಹಾಗು ಸಾರ್ವಭೌಮತ್ವ ಆಳ್ವಿಕೆಗಳೆಡೆಗೆ ಮನುಕುಲವನ್ನು ಕೊಂಡ್ಯೊಯ್ದಿವೆ. ಈ ಆಳ್ವಿಕೆಗಳು ಸ್ವಾತಂತ್ರ್ಯದ ಗುರಿ ಹೊಂದಿದ್ದರೂ ಅದಕ್ಕೆ ವ್ಯತಿರಿಕ್ತವಾದದನ್ನೇ ಸಾಧಿಸಿವೆ.

ವಿವೇಚನೆಯಿಂದ ವರ್ತಿಸುತ್ತಿದ್ದೇವೆ ಎನ್ನುತ್ತಲೇ ಅತಾರ್ಕಿಕವಾಗಿ ಯೋಚಿಸುವುದನ್ನೂ, ಸ್ವಾತಂತ್ರ್ಯವಾಗಿದ್ದೇವೆ ಎನ್ನುತ್ತಲೇ ದಾಸ್ಯವನ್ನು ಪ್ರೇರೇಪಿಸುವುದನ್ನು ಉತ್ತಮ ವಿವೇಚನೆಯೆಂಬಂತೆ ಕಟ್ಟಿಕೊಡುವುದೇ ದಿನ ಭವಿಷ್ಯಗಳ–ಸರಣಿ ಧಾರವಾಹಿಗಳ ಏಕವೇವ ಧ್ಯೇಯವಾಗಿರುತ್ತದೆ. ಇವುಗಳು ತಮ್ಮ ಶಕ್ತಿ ಕೇಂದ್ರಗಳನ್ನು ಕ್ರಮವಾಗಿ ಗ್ರಹಗಳಲ್ಲಿಯೂ, ಅವಸ್ತಾವ ನಾಯಕ/ನಾಯಕಿಯರಲ್ಲಿ ಕಂಡುಕೊಳ್ಳುವುದರ ಮೂಲಕ ಆರ್ಥಿಕ ಮತ್ತು ಸಾಮಾಜಿಕ ವಾಸ್ತವಗಳನ್ನು ಮರೆಯಲಿ ಎಂದು ಬಯಸುತ್ತವೆ.

ಇಂತಹ ನಡವಳಿಕೆಗಳಿಂದ ಪ್ರೇರಿತನಾದ ಮನುಷ್ಯ ತನ್ನ ಸಹಜ ಆಸಕ್ತಿಗಳಾದ ಸ್ವಹಿತಾಸಕ್ತಿ ಹಾಗು ಆನಂದವನ್ನು ಹೊಂದುವ ತನ್ನ ಸಹಜ ಅಭಿಲಾಷೆಯ ವಿರುದ್ಧವಾಗಿ ವಿವೇಚನಾರಹಿತವಾಗಿ ಕಾರ್ಯನಿರ್ವಹಿಸ ತೊಡಗುತ್ತಾನೆ.

ಹಾಗಂತ ಇಂತಹ ಜನಪ್ರಿಯ ಮಾಧ್ಯಮ ಸೃಷ್ಟಿಗಳು ವ್ಯಕ್ತಿಯ ಸ್ವಹಿತಾಸಕ್ತಿಯನ್ನು ನಗಣ್ಯಗೊಳಿಸು ವುದೂ ಇಲ್ಲ ಅಥವಾ ಸಮುದಾಯದ ಅಹಂಮಿಕೆಯ ಉದ್ದೇಶಗಳಿಂದ ದೂರ ಸರಿಯುವುದೂ ಇಲ್ಲ. ವ್ಯಕ್ತಿಗತ/ಸಮುದಾಯದ ಅಹಂಮಿಕೆಯ ಗುರಿಗಳನ್ನು ಉತ್ಪ್ರೇಕ್ಷಿಸಿ/ ತಿರುಚಿ ಪ್ರಸ್ತುತ ಪಡಿಸುವುದೇ ಇವುಗಳ ಅಸ್ತಿತ್ವದ ಆಧಾರವಾಗಿರುತ್ತದೆ. ಆದರೆ ಅತಿಯಾದ ಸ್ವಹಿತಾಸಕ್ತಿಯ ಆಶಯಗಳು ಸಮುದಾಯದ ಬಹುಮುಖ ಆಶಯಗಳ ಬಗ್ಗೆ ಇರಬೇಕಾದ ಸಹಜ ಜವಾಬ್ದಾರಿಗಳನ್ನು ಕುಂಠಿತಗೊಳಿಸುತ್ತವೆ.

ನಿಗೂಢ ಅನುಭವಗಳಾಗಲಿ, ವೈಯುಕ್ತಿಕ ಮೂಢ ನಂಬಿಕೆಗಳಾಗಲೀ ಸುಪ್ತಪ್ರಜ್ಞೆಯ ಅಭಿವ್ಯಕ್ತಿಗಳಲ್ಲಿ ವ್ಯಕ್ತಿಯ ನಿಗೂಢ ಅನುಭವಗಳು ಯಾವುದೇ ಕಾರಣದಿಂದಲೂ ಸಾಮಾಜಿಕವಾಗಿ ತೋರ್ಪಡಿಸಲಾಗುವುದಿಲ್ಲ. ಇಂತಹ ನಿಗೂಢತೆಗಳು ಸಾಂಸ್ಥೀಕರಣಗೊಂಡು, ವಸ್ತುನಿಷ್ಠವಾಗಿಯೂ, ಸಾಮಾಜೀಕರಣಗೊಂಡಂತಾಗಿ ಸಮಾಜದಲ್ಲಿ ಸ್ಥಾಪಿಸಲ್ಪಡುವವು. ಆಧುನಿಕ ಸಮುದಾಯಗಳಲ್ಲಿ ವ್ಯಕ್ತಿಗಳು ಹೆಚ್ಚಾಗಿ ಅಪರಿಚಿತರಾಗಿಯೂ, ಬೇರೆ ಬೇರೆ ಬಾಳುವೆಯವರಾಗಿಯೂ ಇರುತ್ತಾರೆ. ಆದ್ದರಿಂದ ಯಾವ ಅನುಭವಗಳನ್ನು ಆಧರಿಸಿ ಅವರು ತಮ್ಮ ನಿರ್ಧಾರಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೋ ಅಂಥಹ ಅನುಭವಗಳಿಂದ ಅವರು ಯಾವತ್ತೂ ಹೊರಗಿನವರಾಗಿಯೇ ಉಳಿದಿರುತ್ತಾರೆ.

ಓದುಗರು ಯಾವತ್ತೂ ಜ್ಯೋತಿಷ್ಯದ ನಿರ್ಣಯ ಪ್ರಕ್ರೀಯೆಯಲ್ಲಿ ಭಾಗವಹಿಸುವುದಿಲ್ಲ, ಕೇವಲ ಅದರ ಪರಿಣಾಮವನ್ನು ಮಾತ್ರವೇ ಅನುಭೋಗಿಸುತ್ತಾರೆ. ವಾಣಿಜ್ಯೀಕೃತ ನಿಗೂಢತೆಗೆ ಒಳಗಾಗುವ ಈ ಅನುಭವ ಪರಕೀಯತೆ ಮತ್ತು ಅಮೂರ್ತತೆ ಆಳದಲ್ಲಿ ಆಧುನಿಕ ಅಸಮಂಜಸತೆಯ ಲಕ್ಷಣಗಳಾದ ಅಪನಂಬಿಕೆ ಮತ್ತು ಅವಿಶ್ವಾಸವನ್ನು ಒಳಗೊಳ್ಳುತ್ತವೆ.

ಮೌಢ್ಯತೆಯ ಕೂಪಕ್ಕೆ ದೂಡುತ್ತಲೇ, ಓದುಗರನ್ನು ಬುದ್ಧಿವಂತರೆಂದೂ, ತೀಕ್ಷ್ಣ ಕಾರ್ಯಕ್ಷಮತೆ ಹೊಂದಿದವರೆಂದೂ ಬಣ್ಣಿಸುವುದು ಮಿಥ್ಯವಿವೇಚನೆ ಹಾಗು ಮಿಥ್ಯ ವ್ಯಕ್ತಿತ್ವ ಆರೋಪಣೆಯ ಪ್ರಾಥಮಿಕ ಲಕ್ಷಣಗಳಾಗಿವೆ. ಈ 'ಅಪ್ರಧಾನ ಮೌಢ್ಯತೆಯ" ಲಕ್ಷಣವು Totalitarian ಸಮಾಜದ ಮೊದಲ ಹಂತದ ಲಕ್ಷಣಗಳು ಎಂದು Theodor Adorno ಗುರುತಿಸುತ್ತಾರೆ.

ಜ್ಯೋತಿಷ್ಯವು ಧರ್ಮವಲ್ಲ. ಅದರ ಮೂಲದ ಅಸಮಂಜಸವು ನಿಗೂಢವಷ್ಟೇ ಅಲ್ಲ, ವ್ಯಕ್ತಿ ಸ್ವರೂಪವಿಲ್ಲದ್ದೂ, ಅಮೂರ್ತವೂ, ಅನಾಮಿಕ, ಅಸ್ಪಷ್ಟ ಹಾಗು ನಿಗೂಢವೂ ಸಹ. ವಾಸ್ತವ ಸನ್ನಿವೇಶದಲ್ಲಿ ಉಳಿಯಲು ಇಚ್ಛಿಸುವ ಯಾರನ್ನೂ ಕೂಡ ಗ್ರಹಗಳು ಹೇಳುವ ಅಸಂಬದ್ಧತೆಗಳನ್ನು ಒಪ್ಪಿ ಅದರಂತೆ ನಡೆಯಲು ಪ್ರೇರೆಪಿಸಲಾಗುತ್ತದೆಯೇ ವಿನಃ ವಿಚಾರ ಮಾಡಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರವೃತ್ತಿಯನ್ನು ಹತ್ತಿಕ್ಕಲಾಗುವುದು. ಸಮಾಜ ವ್ಯವಸ್ಥೆಯೆಂಬುದು ಗ್ರಹದ ಆಚಾರ ಅಥವಾ ವಿಧಿಯ ನಿಯಮದ 'ರಚಿತ'ವಾಗಿ ವ್ಯಕ್ತಿಗತ ಇಚ್ಛಾಶಕ್ತಿ ಅಥವಾ ಆಸಕ್ತಿಗಳು ನಗಣ್ಯವೆನಿಸುವಂತೆ ಸ್ಥಾಪಿಸಲ್ಪಡುವುವು.

ಗ್ರಹಗತಿಗೆ ಅನುಗಣವಾಗಿ ವ್ಯಕ್ತಿಯ/ಸಮಾಜದ ಭವ್ಯತೆ/ ಘನತೆಗಳು ರೂಪಿತವಾಗುವುವು. ಈ ಅಮೂರ್ತ ಮೂಲದ ಶಕ್ತಿ ಮತ್ತು ಅಧಿಕಾರದೊಂದಿಗಿನ ಸಂಬಂಧವು ಅಥವಾ ಗುರಿತಿಸಿಕೊಳ್ಳುವಿಕೆಯೂ ಯಾವುದೇ ಮುಜುಗರಕ್ಕೆ ಒಳಗಾಗುವುದಿಲ್ಲ ಬದಲಿಗೆ ಗ್ರಹದೊಂದಿಗಿನ ಒಡನಾಟವು ಯಾವುದೇ ಆತಂಕವಿಲ್ಲದ ಲೈಂಗಿಕ ಕ್ರಿಯೆಗೆ ಸಮೀಕರಿಸಲ್ಪಡುವುದು. ವ್ಯಕ್ತಿ ಸ್ವಾತಂತ್ರ್ಯ ಹೊಂದಿದ ಸಹಜ ಮನುಷ್ಯನಾಗಿ ಕಾರ್ಯ ಪ್ರವೃತ್ತನಾಗುವ ಬದಲು ವಿಧಿ ಕೈವಾಡದ ಮೇಲೆ ತನ್ನ ನಿರ್ಧಾರಗಳನ್ನು ಅವಲಂಬಿಸುವುದರಿಂದ ಜವಾಬ್ದಾರಿಗಳು ಉಪಶಮನಗೊಂಡು Pseudo-freedom ಅನ್ನು ಅನುಭವಿಸುವಂತಾಗುತ್ತದೆ.

ಈ ಸಾಂಸ್ಥಿಕ ಲಕ್ಷಣಗಳನ್ನು ವ್ಯವಸ್ಥಿತವಾಗಿ ಓದುಗರಲ್ಲಿ/ಸಮಾಜಕ್ಕೆ ಮನಗಾಣಿಸುವುದರ ಮೂಲಕ ಅವಲಂಬನೆಯನ್ನು ವಿಸ್ತರಿಸುವುದು ಮತ್ತು ಅಮೂರ್ತ ನಾಯಕತ್ವವನ್ನು ಅನುಸರಿಸಿ ಹೆಚ್ಚಿನ ಚಿಂತೆಗೆ ಅವಕಾಶವೀಯದಂತೆ ಜೀವಿಸುತ್ತಾ ಹೋಗುವಂತಹ ವಾತವರಣದ ನಿರ್ಮಾಣವು ಪ್ರಜಾಪ್ರಭುತ್ವದ "ಸ್ವಾತಂತ್ರ್ಯ"ದ ವಿಡಂಬನೆಯಾಗಿರುವುದು ಸತ್ಯ ಮತ್ತು ಸ್ಪಷ್ಟ. □

ದಿನ ಭವಿಷ್ಯಗಳು, ಟಿ.ವಿ. ಧಾರವಾಹಿಗಳು ಎಂಬ ಸಮೂಹ ಸನ್ನಿಯಲ್ಲಿ ನಾವು

ಪ್ರವಾಹ ಎಂಬ ದುರಂತ– ಪರಿಹಾರ ಎಂಬ ಆಪತ್ತು?

ಶಿವಸುಂದರ್

ಅದು ಭೀಕರ ಸುನಾಮಿ ಅಪ್ಪಳಿಸಿ ಇಡೀ ತಮಿಳನಾಡಿನ ಜನ ಅದರಲ್ಲೂ ಸಮುದ್ರವನ್ನೇ ನಂಬಿ ಬದುಕುವ ಮೀನುಗಾರರೂ, ದಲಿತರು ಮತ್ತು ಪಳಂಕುಡಿ ಮಕ್ಕಳ್ ಎಂಬ ಶೆಡ್ಯೂಲ್ಡ್ ಟ್ರೈಬ್‌ಗೆ ಸೇರಿದ ಜನ ತೀವ್ರವಾದ ಸಂಕಷ್ಟಗಳನ್ನು ಅನುಭವಿಸುತ್ತಿದ್ದ ದಿನಗಳು. ಆಗ ಪ್ರಾರಂಭದಲ್ಲಿ ತಡವಾದರೂ ನಂತರದಲ್ಲಿ ಎಲ್ಲೆಡೆಯಿಂದ ಪರಿಹಾರವೇ ಪ್ರವಾಹದೋಪಾದಿಯಲ್ಲಿ ತಮಿಳುನಾಡಿಗೆ ಹರಿದುಬರಲು ಪ್ರಾರಂಭಿಸಿತ್ತು. ಹಾಗಿದ್ದಲ್ಲಿ ಪರಿಹಾರ ಸುನಾಮಿ ಬಾಧಿತರೆಲ್ಲರಿಗೂ ಸಿಕ್ಕಿಬಿಟ್ಟಿತೇ? ಈ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಹಲವು ಸತ್ಯಶೋಧನಾ ವರದಿಗಳು ಈಗ ಹೊರಬಂದಿವೆ. ಸುನಾಮಿ ಸಂಭವಿಸಿದ್ದು 2004ರ ಡಿಸೆಂಬರ್ 25ರಂದು. ಪರಿಹಾರ ಕೆಲಸ ಹೇಗೆ ನಡೆಯುತ್ತಿದೆ ಎಂಬ ಬಗ್ಗೆ ಅನ್ನೀನಮಲ ಎನ್ನುವವರು 2005ರ ಜನವರಿ 1 ರಂದು ತಮ್ಮ ಸತ್ಯ ಶೋಧನಾ ವರದಿಯಲ್ಲಿ ನೀಡಿರುವ ಚಿತ್ರಣವಿದು:

"ನಮ್ಮ ಕಣ್ಣೆದುರಿಗೇ ಹಲವಾರು ಲಾರಿ ಲೋಡುಗಳಷ್ಟು ಆಹಾರ ಮತ್ತು ಬಟ್ಟೆಬರೆಗಳು ಹಳ್ಳಿಗೆ ಬರಲಾರಂಭಿಸಿತು. ಅವೆಲ್ಲವನ್ನು ಮೀನುಗಾರ ಸಮುದಾಯದ ನಡುವೆ ಹಂಚಲಾಯಿತು. ಲಾರಿಗಳ ಹಿಂದೆ ಓಡಿ ಹೋದ ದಲಿತರು ಬರಿಗೈಯಲ್ಲಿ ಹಿಂದಿರುಗಿದರು. ಬೆಳಗಿನಿಂದ ಪರಿಹಾರ ಸಾಮಗ್ರಿಗಳನ್ನು ಹೊತ್ತ ಹಲವಾರು ಲಾರಿಗಳು ಬಂದವಾದರೂ ಆ ಸಾಮಗ್ರಿಗಳಲ್ಲಿ ಯಾವುದನ್ನೂ ದಲಿತರಿಗೆ ಕೊಡಲು ಮೀನುಗಾರ ಸಮುದಾಯದವರು ಬಿಡಲಿಲ್ಲ ಎಂದು ದಲಿತರು ದೂರಿದರು. ಹಲವರು ಇಡ್ಲಿ–ಪೊಂಗಲ್‌ಗಳನ್ನು ತಂದಿದ್ದರಾದರೂ ಬೆಳಿಗ್ಗೆ 11ಗಂಟೆಯಾಗಿದ್ದರೂ ದಲಿತ ಕಾಲೋನಿಗಳಲ್ಲಿ ಮಕ್ಕಳಾದಿಯಾಗಿ ಎಲ್ಲರೂ ಹಸಿದುಕೊಂಡೆ ಇದ್ದದ್ದನ್ನು ನಾವು ಗಮನಿಸಿದೆವು. ದಲಿತರನ್ನು ಪರಿಹಾರ ವಿತರಕರು ಕೇಳುತ್ತಿದ್ದ ಪ್ರಶ್ನೆಯೊಂದೇ. ಅಲ್ಲವಾ ಎಂದರೆ ನಿಮ್ಮಲ್ಲಿ ಎಷ್ಟು ಸಾವುಗಳಾಗಿರಬಹುದು?..ಇದೆಲ್ಲಾ ನೋಡಿದ ಮೇಲೆ ನಮ್ಮನ್ನು ಬಾಧಿಸುತ್ತಿದ್ದ ಪ್ರಶ್ನೆಯೊಂದೇ ಮೀನುಗಾರ ಸಮುದಾಯದಲ್ಲಿ ಆದ ಸಾವು ದಲಿತರ ಸಾವಿಗಿಂತ ಹೆಚ್ಚಿನ ಮೌಲ್ಯ ಉಳ್ಳದ್ದು ಎಂದು ಭಾವಿಸಲಾಗುತ್ತದೆಯೇ... ಸಾವುಗಳಲ್ಲೂ ನಾವು ಶ್ರೇಣೀಕರಣ ಮಾಡುವುದು ಸರಿಯೇ? "

ಇಂದು ಭೀಕರ ಪ್ರವಾಹಕ್ಕೆ ಸಿಕ್ಕಿ ಜನ ಪರಿಹಾರಕ್ಕೆ ಹಾತೊರೆಯುತ್ತಿರುವಾಗ ಈ ವರದಿಯ ಚಿತ್ರಣವೇ ಮತ್ತೆಮತ್ತೆ ಕಣ್ಣಮುಂದೆ ಬರುತ್ತಿದೆ. ಸುನಾಮಿ ದುರಂತ ಸಂಭವಿಸಿ ಈಗ ಐದು ವರ್ಷಗಳಾಗಿವೆ. ಸುನಾಮಿಮಾದರಿ ಪರಿಹಾರ ಈ ಸಮಾಜದ ಅತ್ಯಂತ ಕೆಳಗಿನ ಸಮುದಾಯಗಳಿಗೆ ನಿಜಕ್ಕೂ ತಲುಪಿದೆಯೇ ಇಲ್ಲವೇ ಎಂಬ ಬಗ್ಗೆ ಈಗ ಹಲವಾರು ವರದಿಗಳು ಬಂದಿವೆ. ಅದೇ ರೀತಿ 2001ರಲ್ಲಿ ಗುಜರಾತ್ ಭೂಕಂಪ ನಡೆದ ನಂತರ ಸೇವಾ ಭಾರತಿ ಇನ್ನಿತ್ಯಾದಿ ಸಂಘ ಪರಿವಾರದ ಅಂಗ ಸಂಸ್ಥೆಗಳ ಮೂಲಕ ನಡೆದ ಪರಿಹಾರ ಕಾರ್ಯಕ್ರಮಗಳು ಹೇಗೆ ದಲಿತ ಹಾಗೂ ಅಲ್ಪಸಂಖ್ಯಾತ ವಿರೋಧಿಯಾಗಿದ್ದವು ಎಂಬ ಬಗ್ಗೆಯೂ ಹಲವು ವರದಿಗಳು ಬಂದಿವೆ.

ಈಗ ಕರ್ನಾಟಕದ ಜನತೆ ಹಿಂದೆಂದೂ ಕಾಣದ ಪ್ರವಾಹದ ಅಬ್ಬರಕ್ಕೆ ತತ್ತರಿಸಿ ಹೋಗಿ ಪರಿಹಾರಕ್ಕಾಗಿ ಕಾತರಿಸುತಿರುವಾಗ ಅಧಿಕಾರ ರೂಢ ಬಿಜೆಪಿ ಸರ್ಕಾರ ತಮಿಳುನಾಡಿನ ಸುನಾಮಿ ಮಾದರಿಯ ಪರಿಹಾರ ಪದ್ಧತಿಯನ್ನೂ, ಮತ್ತು ಆರೆಸ್ಸೆಸ್ಸಿನ ಸಹಾಯವನ್ನೂ ತೆಗೆದುಕೊಳ್ಳುತ್ತೇವೆ ಎಂದು ಘೋಷಿಸಿದೆ. ಹೀಗಾಗಿ ಸುನಾಮಿ ಮತ್ತು ಗುಜರಾತ್ ಭೂಕಂಪದ ಸಂದರ್ಭದಲ್ಲಿ ಒದಗಿಸಿದ ಪರಿಹಾರ ಹೇಗೆ ಮತ್ತೊಂದು ಸಾಮಾಜಿಕ ಸುನಾಮಿಯನ್ನು ಸೃಷ್ಟಿಸಿತು ಎಂದು ಅರ್ಥ



ಕರ್ನಾಟಕದ ಜನತೆ ಹಿಂದೆಂದೂ ಕಾಣದ ಪ್ರವಾಹದ ಅಬ್ಬರಕ್ಕೆ ತತ್ತರಿಸಿ ಹೋಗಿ ಪರಿಹಾರಕ್ಕಾಗಿ ಕಾತರಿಸುತಿರುವಾಗ ಅಧಿ ಕಾರ ರೂಢ ಬಿಜೆಪಿ ಸರ್ಕಾರ ತಮಿಳುನಾಡಿನ ಸುನಾಮಿ ಮಾದರಿಯ ಪರಿಹಾರ ಪದ್ಧತಿಯನ್ನೂ ಮತ್ತು ಆರೆಸ್ಸೆಸ್ಸಿನ ಸಹಾಯವನ್ನೂ ತೆಗೆದುಕೊಳ್ಳುತ್ತೇವೆ ಎಂದು ಘೋಷಿಸಿದೆ. ಹೀಗಾಗಿ ಸುನಾಮಿ ಮತ್ತು ಗುಜರಾತ್ ಭೂಕಂಪದ ಸಂದರ್ಭದಲ್ಲಿ ಒದಗಿಸಿದ ಪರಿಹಾರ ಹೇಗೆ ಮತ್ತೊಂದು ಸಾಮಾಜಿಕ ಸುನಾಮಿಯನ್ನು ಸೃಷ್ಟಿಸಿತು ಎಂದು ಅರ್ಥ ಮಾಡಿಕೊಳ್ಳುವುದು ತುಂಬಾ ಅಗತ್ಯವಾಗಿದೆ. ಸಾಮಾನ್ಯವಾಗಿ ನೈಸರ್ಗಿಕ ವಿಪತ್ತುಗಳ ಸಂದರ್ಭದಲ್ಲಿ ಸಂಭವಿಸುವ ಸಾವು ನೋವುಗಳಿಗಿಂತ ಆ ನಂತರದಲ್ಲಿ ನಡೆಯುವ ಸಾವು ನೋವುಗಳು ಇನ್ನೂ ಹೆಚ್ಚಿರುತ್ತವೆ ಎಂದು ವರದಿಗಳು ಹೇಳುತ್ತವೆ.

ಮಾಡಿಕೊಳ್ಳುವುದು ತುಂಬಾ ಅಗತ್ಯ ವಾಗಿದೆ.

ಸಾಮಾನ್ಯವಾಗಿ ನೈಸರ್ಗಿಕ ವಿಪತ್ತುಗಳ ಸಂದರ್ಭದಲ್ಲಿ ಸಂಭವಿಸುವ ಸಾವು ನೋವುಗಳಿಗಿಂತ ಆ ನಂತರದಲ್ಲಿ ನಡೆಯುವ ಸಾವು ನೋವುಗಳು ಇನ್ನೂ ಹೆಚ್ಚಿರುತ್ತವೆ ಎಂದು ವರದಿಗಳು ಹೇಳುತ್ತವೆ. ಇದಕ್ಕೆ ಕಾರಣ ವಿಕೋಪದ ನಂತರದ ಪರಿಹಾರ ಮತ್ತು ಪುನರ್‌ವಸತಿಗಳ ವಿತರಣೆಯಲ್ಲಿ ನಡೆಯುವ ತಾರತಮ್ಯ. ನೆರೆ, ಪ್ರವಾಹ, ಭೂಕಂಪ, ಸುನಾಮಿಯಂತ ದುರಂತಗಳು ಜನರ ಎಲ್ಲಾ ಭೌತಿಕ ಜೀವನಾಧಾರಗಳನ್ನೂ ನಾಶ ಮಾಡಿರುತ್ತವೆ.

ಮನೆ, ಬೆಳೆ, ಪಾತ್ರೆ, ಪಗಡ, ಎಲ್ಲವನ್ನೂ ಕಳೆದುಕೊಳ್ಳುವ ಜನತೆ ಮತ್ತೆ ಮೊದಲಿನ ರೀತಿಯ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಆದರೂ ಸಮಾಜದಲ್ಲಿ ಪ್ರಬಲ ಸಮುದಾಯಕ್ಕೆ ಸೇರಿದವರು ಭೌತಿಕ ಬಂಡವಾಳವನ್ನೆಲ್ಲಾ ಕಳೆದುಕೊಂಡರೂ ವರ್ಗ, ಜಾತಿ ಇನ್ನಿತ್ಯಾದಿಗಳ ಕಾರಣದಿಂದ ಅವರ ಸಮಾಜಿಕ ಪ್ರಭಾವದ ಬಂಡವಾಳ ಇದ್ದೇ ಇರುತ್ತದೆ. ಹೀಗಾಗಿ ಬಹುಬೇಗ ಅವರು ಮೊದಲಿನ ತರಹದ್ದಲ್ಲವಾದರೂ ಮತ್ತೆ ಸಾಮಾನ್ಯ ಜೀವನಕ್ಕೆ ಮರಳುತ್ತಾರೆ. ಆದರೆ ಆ ಬಗೆಯ ಯಾವುದೇ ಇತರ ಸಾಂಸ್ಕೃತಿಕ ಅಥವಾ ಸಾಮಾಜಿಕ ಬಂಡವಾಳವಿಲ್ಲದ ಸಮಾಜದ ಕೆಳಸ್ತರದ ಜನಗಳ ಬದುಕನ್ನು ಇಂಥಾ ನೈಸರ್ಗಿಕ ದುರಂತಗಳು ಸಂಪೂರ್ಣವಾಗಿ ಸರ್ವನಾಶ ಮಾಡಿ ಬಿಡುತ್ತದೆ. ಹೀಗಾಗಿ ದುರಂತದ ಸಮಯದಲ್ಲಿ ಪರಿಹಾರ ವಿತರಣೆಯ ನೀತಿಗಳು ನಮ್ಮ ಸಮಾಜದ ಈ ಜಾತಿ ಮತ್ತು ವರ್ಗದ ಶ್ರೇಣೀಕರಣದ ಪರಿಣಾಮವನ್ನು ಗಮನದಲ್ಲಿಟ್ಟುಕೊಳ್ಳದಿದ್ದರೆ ಪರಿಹಾರವೇ ಮತ್ತೊಂದು ಸುನಾಮಿ ಪ್ರವಾಹವಾಗಿ ಬಿಡುವ ಸಾಧ್ಯತೆ ಇದೆ.

ಆದರೆ ಪ್ರಖ್ಯಾತ ಸಮಾಜ ಶಾಸ್ತ್ರಜ್ಞರಾದ ರಾಬರ್ಟ್ ಓಪನ್‌ಹೈಮರ್ ಮತ್ತು ಸುಮಂತ ಬ್ಯಾನರ್ಜಿಯವರ ಪ್ರಕಾರ "ಪರಿಹಾರ ಮತ್ತು ಪುನರ್‌ವಸತಿಯ ವಿತರಣೆಗಳು ನಾವು ಆಯಾ ಸಮಾಜದ ಆರ್ಥಿಕ ಸಂಘಟನೆ ಮತ್ತು ರಾಜಕೀಯ ವ್ಯವಸ್ಥೆಗಳನ್ನೇ ಆಧರಿಸಿರುತ್ತದೆ." ನಮ್ಮ ಸಮಾಜದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆ ಮತ್ತು ಬಡಜನ ವಿರೋಧಿ ಆರ್ಥಿಕ ವ್ಯವಸ್ಥೆ ಪ್ರವಾಹ, ಭೂಕಂಪದಂಥ ಪ್ರಕೃತಿ ವೈಕೋಪದ ಸಂದರ್ಭಗಳಲ್ಲೂ ಸಹ ಸಮಾಜದ ಪ್ರಬಲರ ಪರವಾಗಿ ವರ್ತಿಸುತ್ತಾ ಈಗಾಗಲೇ ದುರ್ಬಲವಾಗಿರುವ ವರ್ಗಗಳನ್ನು ಹೇಗೆ ಮತ್ತಷ್ಟು ದುರ್ಬಲಗೊಳಿಸಿದೆ ಎಂಬುದನ್ನು ಹಲವು ಅಧ್ಯಯನಗಳು ತೋರಿಸಿಕೊಟ್ಟಿವೆ.

ವಾಸ್ತವವಾಗಿ 2002ರ ತನಕ ಭಾರತ ಸರ್ಕಾರದ ಮಟ್ಟದಲ್ಲಾಗಲೀ ಅಥವಾ ರಾಜ್ಯ ಸರ್ಕಾರಗಳಲ್ಲಾಗಲೀ ಒಂದು "ಪ್ರಕೃತಿ ವಿಕೋಪ ನಿರ್ವಹಣಾ ನೀತಿ" (Disaster Management Policy)ಎಂಬುದೇ ಇರಲಿಲ್ಲ. ಇದ್ದದ್ದೆಲ್ಲಾ ಪುನರ್‌ವಸತಿ ಮತ್ತು ಪರಿಹಾರ (Relief and Rehabilitation) ನೀತಿ ಮತ್ತು ಇಲಾಖೆಗಳು ಮಾತ್ರ. 2004ರ ಜೂನ್ ನಂತರದಲ್ಲಿ ಇದಕ್ಕೆ ಸ್ಪಷ್ಟ ರೂಪವನ್ನು ಕೊಟ್ಟು ನೈಸರ್ಗಿಕ ವಿಪತ್ತುಗಳ ನಿರ್ವಹಣೆಗೆ ಇದ್ದ ಇಲಾಖೆಗಳ ಪುನರ್ ರಚನೆ ಮತ್ತು ಹೊಸ ಪ್ರಾಧಿಕಾರ ಮತ್ತು ಪ್ರತ್ಯೇಕ ನಿಧಿಗಳನ್ನು ಸೃಷ್ಟಿಸಲಾಯಿತು.

ನೈಸರ್ಗಿಕ ವಿಪತ್ತುಗಳ ಬಾಬತ್ತನ್ನು ಕೃಷಿ ಇಲಾಖೆಯಿಂದ ಗೃಹ ಇಲಾಖೆಯ ಸುಪರ್ದಿಗೆ ನೀಡಲಾಯಿತು. ಅದರ ಉಸ್ತುವಾರಿಯಲ್ಲಿ ಈವರೆಗೆ ಕೇವಲ ಪರಿಹಾರ ಮತ್ತು ಪುನರ್‌ವಸತಿಗಳನ್ನು ಮಾತ್ರ ನಿರ್ವಹಿಸುತ್ತಿದ್ದ ಇಲಾ

ಖೆಗಳಿಗೆ ವಿಕೋಪದ ನಿವಾರಣೆ ಮತ್ತು ಅಪಾಯವನ್ನು ಎದುರಿಸಲು ಸಿದ್ಧತೆಯಂತ ಕಾರ್ಯಗಳನ್ನು ಸೇರಿಸಿ ವಿಪತ್ತು ನಿರ್ವಹಣಾ ಇಲಾಖೆಯೆಂದು ಪುನರ್ ರಚಿಸಬೇಕೆಂದು ಸಲಹೆ ನೀಡಲಾಗಿತ್ತು. ನೈಸರ್ಗಿಕ ವಿಪತ್ತು ಸಂಭವಿಸಿದಾಗ ತುರ್ತು ಪರಿಹಾರಕ್ಕೆಂದು ವಿಕೋಪ ಪರಿಹಾರ ನಿಧಿ(Calamity Relief Fund)ಅನ್ನು-ನಂತರದ ತುರ್ತುಗಳಿಗಾಗಿ ರಾಷ್ಟ್ರೀಯ ನೈಸರ್ಗಿಕ ಪ್ರಕೋಪ ತುರ್ತು ನಿಧಿ (National Calamity Contingency Fund) ಸ್ಥಾಪಿಸಲಾಯಿತು. ಆಯಾ ರಾಜ್ಯಗಳು ಈವರೆಗೆ ಪ್ರಕೃತಿವಿಕೋಪಕ್ಕೆಂದು ಎಷ್ಟು ವೆಚ್ಚ ಮಾಡುತ್ತಿವೆ ಎಂಬುದರ ಹಿನ್ನೆಲೆಯಲ್ಲಿ ಆಯಾ ರಾಜ್ಯಗಳ ಪಾಲನ್ನು ನಿಗದಿ ಮಾಡಲಾಯಿತು.

ಆದರೆ ಇಡಿ ದೇಶಕ್ಕೆ ಈ ಬಾಬತ್ತಿನಲ್ಲಿ 2000–2005ರವರೆಗೆ ಎತ್ತಿಟ್ಟದ್ದುದು ಕೇವಲ 11,000 ಕೋಟಿ ರೂಪಾಯಿಗಳನ್ನು ಮಾತ್ರ. ನೈಸರ್ಗಿಕ ವಿಪತ್ತುಗಳಿಂದ ಸಂಭವಿಸುವ ಆಸ್ತಿ, ಮನೆ, ಜಾನುವಾರು, ಮೂಲಭೂತ ಸೌಕರ್ಯ ಮತ್ತು ಆದಾಯಮೂಲಗಳ ಮೇಲೆ ಆಗುವ ಹಾನಿಗಳನ್ನು ಭರಿಸಲು ಈ ನಿಧಿಯನ್ನು ಬಳಸುವಂತಿಲ್ಲ. ಅದನ್ನು ಸರ್ಕಾರದ ಬಜೆಟ್ಟುಗಳು ಮತ್ತು ಯೋಜನಾ ವೆಚ್ಚಗಳೇ ಭರಿಸಬೇಕು. ಈ ನೀತಿಯನ್ನು ಎಲ್ಲಾ ಪಕ್ಷಗಳೂ ಒಪ್ಪಿಕೊಂಡಿವೆ. ಹೀಗಾಗಿ ಕೇಂದ್ರದಿಂದ 10,000 ಕೋಟಿ ರೂಪಾಯಿಗಳ ಸಹಾಯವನ್ನು ರಾಜ್ಯ ಸರ್ಕಾರ ಕೇಳಿದರೂ, ಅಖಿಲ ಪಕ್ಷ ನಿಯೋಗವನ್ನು ದೆಹಲಿಗೆ ಕರೆದುಕೊಂಡು ಹೋದರೂ ಈ ಬಾಬತ್ತಿನಲ್ಲಿ ಹಣದೊರೆಯುವುದಿಲ್ಲ.

ಅದೆಲ್ಲಾ ಒಂದು ಕಡೆಯಾದರೆ ಇಡೀ ರಾಜ್ಯದಲ್ಲಿ ಮಹಾರಾಷ್ಟ್ರ ಮಾತ್ರ ರಾಜ್ಯಮಟ್ಟದ ನೈಸರ್ಗಿಕ ವಿಪತ್ತು ನಿರ್ವಹಣಾ ನೀತಿಯೊಂದನ್ನು ರೂಪಿಸಿಕೊಂಡಿದೆ. ರಾಜಸ್ತಾನ ಮತ್ತು ಒರಿಸ್ಸಾಗಳು ಕನಿಷ್ಟ ಪರಿಹಾರ ವಿತರಣಾ ಸೂತ್ರವೊಂದನ್ನಾದರೂ ಮಾಡಿಕೊಂಡಿವೆ. ಆದರೆ ಕರ್ನಾಟಕವನ್ನೂ ಒಳಗೊಂಡಂತೆ ಉಳಿದ ಯಾವ ರಾಜ್ಯದಲ್ಲೂ ಅಂಥ ನೀತಿಯನ್ನೇ ರೂಪಿಸಿಲ್ಲ. ಭಾರತದ 14 ರಾಜ್ಯಗಳಲ್ಲಿ ವಿಪತ್ತು ನಿರ್ವಹಣಾ ಪ್ರಾಧಿಕಾರವೊಂದನ್ನು ಸ್ಥಾಪಿಸಲಾಗಿದೆ. 2004ರಲ್ಲಿ ಎಲ್ಲಾ ರಾಜ್ಯಗಳು ಇಂಥಾ ಪ್ರಾಧಿಕಾರವನ್ನು ರೂಪಿಸಬೇಕಿತ್ತು. ಕರ್ನಾಟಕ ರಾಜ್ಯ ಕಳೆದ ಜನವರಿಯಲ್ಲಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಪ್ರಾಧಿಕಾರದ ರಚನೆಯಾಗಿದೆಯಾದರೂ ಅದು ಈವರೆಗೆ ಒಮ್ಮೆಯೂ ಸಭೆ ಸೇರಿಲ್ಲ.

ಹೀಗೆ ಯಾವುದೇ ಸಿದ್ಧತೆಯಿಲ್ಲದೆ ರಾಜ್ಯ ಸರ್ಕಾರ ತಮಿಳುನಾಡಿನ ಸುನಾಮಿ ಮಾದರಿ ಪರಿಹಾರಕ್ಕೆ ಆರೆಸ್ಸೆಸ್‌ನಂಥ ಸಂಘಟನೆಗಳನ್ನು ಕಟ್ಟಿಕೊಂಡು ಹೊರಟಿದೆ. ತಮಿಳುನಾಡಿನಲ್ಲಿ ಸುನಾಮಿ ಬಂದನಂತರ ತಮಿಳುನಾಡು ಸರ್ಕಾರಕ್ಕೆ ಸಹಾಯ ಮತ್ತು ಸಹಕಾರಗಳ, ಹಣ ಮತ್ತು ವಸ್ತುಗಳ ಪ್ರವಾಹವೇ ಹರಿದು ಬಂತು. ಇದನ್ನು ಅನುಸರಿಸಲು ತಮಿಳುನಾಡು ಸರ್ಕಾರ ಅನುಸರಿಸಿದ ನೀತಿಯು ಇದ್ದದ್ದನ್ನು ಕಳೆದುಕೊಂಡವರನ್ನು ಗುರಿಯಾಗಿರಿಸಿಕೊಂಡಿತ್ತೇ ವಿನಃ ಈ ಮೊದಲೇ ಎಲ್ಲವನ್ನೂ ಕಳೆದುಕೊಂಡವರನ್ನು ಪರಿಗಣಿಸಿಯೇ ಇರಲಿಲ್ಲ. ಅಂದರೆ ಭೂಮಿ ಕಳೆದುಕೊಂಡವರು, ದೋಣಿ, ಬಲೆ ಕಳೆದುಕೊಂಡವರು.. ಈ ರೀತಿ ಈಗಾಗಲೇ ಇದ್ದ ಆಸ್ತಿಯನ್ನು ಕಳೆದುಕೊಂಡವರನ್ನು ಪರಿಹಾರಕ್ಕೆ ಅರ್ಹರನ್ನಾಗಿ ಮಾಡಿತೇ ವಿನಃ ತಮ್ಮ ಶ್ರಮಶಕ್ತಿಯನ್ನು ಬಿಟ್ಟು ಕಳೆದುಕೊಳ್ಳಲು ಬೇರೇನೂ ಆಸ್ತಿಯಿಲ್ಲದ ರೈತ ಕೂಲಿಗಳನ್ನು, ಮೀನುಗಾರರೊಟ್ಟಿಗೆ ಶ್ರಮದ ಕೆಲಸ ಮಾಡುವ ದಲಿತ ಕಾರ್ಮಿಕರನ್ನು ಅಧಿಕೃತ ಪರಿಹಾರದ ಪಟ್ಟಿಗೆ ಸೇರಿಸಲೇ ಇಲ್ಲ.

ತುರ್ತು ಪರಿಹಾರ ನೀಡುವಾಗಲೂ ಅದನ್ನು ಹಳ್ಳಿಗಳ ಜಾತಿ ಪಂಚಾಯತಿಗಳ ಮೂಲಕ ಪರಿಹರಿಸುವ ನೀತಿ ಅನುಸರಿಸಿದ್ದರಿಂದ ಬಹುಪಾಲು ದಲಿತ ಕುಟುಂಬಗಳಿಗೆ ತತ್‌ಕ್ಷಣದ ಪರಿಹಾರವೂ ಸಿಗಲಿಲ್ಲ ಎಂದು ಹಲವು ಅಧ್ಯಯನಗಳು ರುಜುವಾತು ಪಡಿಸಿವೆ. ಲೇಖನದ ಪ್ರಾರಂಭದಲ್ಲಿ ಉಲ್ಲೇಖವಾಗಿರುವುದು ಇಂಥಾ ಒಂದು ಸಂದರ್ಭವೇ! ಸುನಾಮಿ ಅಪ್ಪಳಿಸಿದ ಪ್ರಾರಂಭದ ದಿನಗಳಲ್ಲಿ ಆಹಾರದ ಪೊಟ್ಟಣಗಳ ಹಂಚಿಕೆಯ ಜವಾಬ್ದಾರಿ ಹೊತ್ತಿದ್ದ ಸ್ಥಳೀಯ ಪ್ರಭಾವಶಾಲಿಗಳು ದಲಿತ ಸಮುದಾಯಗಳಿಗೆ ತಾವು ಬಳಸಿ ಉಳಿದದ್ದನ್ನು ಮಾತ್ರ ನೀಡಿದರು

(28 ನೇ ಪುಟಕ್ಕೆ)

ಎನ್ ಕೌಂಟರ್ ಎಂಬ 'ಪ್ರಭುತ್ವದ ಕೊಲೆಗಳು'

ನಾ ದಿವಾಕರ

ಪ್ರಭುತ್ವದ ಭಯೋತ್ಪಾದನಾ ವಿರೋಧಿ ಭದ್ರತಾ ವ್ಯವಸ್ಥೆಗಳು ಮತ್ತು ನಾಗರಿಕ ಸ್ವಾತಂತ್ರ್ಯ ಸದಾ ಸಂಘರ್ಷದಲ್ಲೇ ತೊಡಗಿರುವುದು ಸಾರ್ವತ್ರಿಕ ವಿದ್ಯಮಾನ. ವಿಶೇಷವಾಗಿ ಯಾವುದೇ ದೇಶ ಅಂತರಿಕ ಸಂಘರ್ಷದಿಂದ, ಭಯೋತ್ಪಾದನೆಯಿಂದ ಮತ್ತು ಮತೀಯ ಸಂಘರ್ಷಗಳಿಂದ ಬಾಧಿತವಾಗಿದ್ದಾಗ ಈ ಸಂಘರ್ಷ ಇನ್ನೂ ತೀವ್ರವಾಗುವ ಸಂಭವವೇ ಹೆಚ್ಚು. ಇಂತಹ ಸನ್ನಿವೇಶಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ರಕ್ಷಣಾ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಂವಿಧಾನದ ಮೂಲ ನೀತಿಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದನ್ನೂ ಅಲ್ಲಗಳೆಯಲಾಗುವುದಿಲ್ಲ. ಈ ಪ್ರವೃತ್ತಿಯನ್ನು ಭಾರತವನ್ನೂ ಸೇರಿದಂತೆ ವಿಶ್ವದ ಎಲ್ಲಾ ರಾಷ್ಟ್ರಗಳಲ್ಲೂ ಕಾಣಬಹುದು. ಭಾರತದ ಸಂದರ್ಭದಲ್ಲಿ ಹೇಳುವುದಾದರೆ 1990ರ ನಂತರದ ರಾಜಕೀಯ ಬೆಳವಣಿಗೆಗಳು ಮತ್ತು ಸಾಮಾಜಿಕ ಕ್ಷೋಭೆಗಳು ದೇಶದ ಆಂತರಿಕ ರಕ್ಷಣಾ ನೀತಿಯನ್ನೇ ವಿಭಿನ್ನ ಮಾರ್ಗದಲ್ಲಿ ಕೊಂಡೊಯ್ದಿದ್ದು ನಾಗರಿಕ ಸಮಾಜದ ಸುರಕ್ಷತೆಗಾಗಿ ದೇಶದ ಸಾಮಾನ್ಯ ಜನತೆಯೇ ಬಲಿಯಾಗುತ್ತಿರುವ ಸನ್ನಿವೇಶ ಸೃಷ್ಟಿಯಾಗಿರುವುದು ಸ್ವತಂತ್ರ ಭಾರತದ ವಿಪರ್ಯಾಸ.

ಕಳೆದ ಎರಡು ದಶಕಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉಲ್ಬಣವಾಗುತ್ತಿರುವ ಭಯೋತ್ಪಾದನೆ ಜಾಗತಿಕ ನಾಗರಿಕತೆಯನ್ನೇ ಬುಡಮೇಲು ಮಾಡಲು ಹೊರಟಿದೆ. 1980ರ ದಶಕದಲ್ಲಿ ಭಾರತದಲ್ಲಿ ಉದ್ಭವಿಸಿದ ಅಥವಾ ಸೃಷ್ಟಿಸಲಾದ ಕೋಮುವಾದಿ ರಾಜಕಾರಣಕ್ಕೆ ಪ್ರತಿಕ್ರಿಯೆಯ ರೂಪದಲ್ಲಿ ವ್ಯಕ್ತವಾದ ಭಯೋತ್ಪಾದನಾ ಚಟುವಟಿಕೆಗಳು ಸರ್ವವ್ಯಾಪಿಯಾಗಿದ್ದು ರಾಷ್ಟ್ರದ ಐಕ್ಯತೆಗೆ ಭಂಗ ತರುವ ನಿಟ್ಟಿನಲ್ಲಿ ಸಾಗಿದೆ. ನೆರೆ ರಾಷ್ಟ್ರಗಳ ನೈತಿಕ ಮತ್ತು ಸೇನಾ ಬೆಂಬಲದಿಂದ ದೇಶದ ಮೂಲೆಮೂಲೆಗಳನ್ನೂ ತಲುಪಿರುವ ವಿಧ್ವಂಸಕ ಚಟುವಟಿಕೆಗಳು ಯುವಜನತೆಯನ್ನು ಹೆಚ್ಚಾಗಿ ಆಕರ್ಷಿಸುತ್ತಿದ್ದು, ಸಾಮಾಜಿಕ ಮತ್ತು ಆರ್ಥಿಕ ಅಸಮತೋಲನದ ಪರಿಣಾಮವಾಗಿ ಪ್ರಭುತ್ವದ ವಿರುದ್ಧ ಪ್ರತಿರೋಧ ವ್ಯಕ್ತಪಡಿಸುತ್ತಿರುವ ಜನತೆಯೂ ಹಿಂಸಾತ್ಮಕ ಮಾರ್ಗ ಅನುಸರಿಸುತ್ತಿದ್ದಾರೆ.

ಮಾವೋವಾದಿಗಳು, ಅಸ್ಸಾಂ ಉಗ್ರರು, ಬೋಡೋ ಹೋರಾಟಗಾರರು, ಮಣಿಪುರದ ಉಗ್ರವಾದಿಗಳು, ಇಸ್ಲಾಂ ಜಿಹಾದಿಗಳು, ಹಿಂದೂ ಮೂಲಭೂತವಾದಿಗಳು ಹೀಗೆ ಹಿಂಸಾತ್ಮಕ ಹೋರಾಟಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತಿರುವುದು ದೇಶದ ರಕ್ಷಣಾ ವ್ಯವಸ್ಥೆಯನ್ನು ಕಂಗೆಡಿಸಿರುವುದು ಸ್ಪಷ್ಟ. ಈ ಹಿನ್ನೆಲೆಯಲ್ಲೇ ಸೃಷ್ಟಿಯಾಗಿರುವ ಪ್ರವೃತ್ತಿಯೆಂದರೆ, ಮಾಧ್ಯಮಗಳ ಮೂಲಕ ತನ್ನದೇ ಆದ ರೋಚಕತೆಯನ್ನು ಗಳಿಸಿರುವ ಎನ್‌ಕೌಂಟರ್ ಸಂಸ್ಕೃತಿ. 2002ರ ಗುಜರಾತ್ ಗಲಭೆಗಳ ನಂತರ ಒಂದು ವ್ಯವಸ್ಥಿತ ರೂಪ ಪಡೆದ ಎನ್‌ಕೌಂಟರ್ ಸಂಸ್ಕೃತಿ ಆಳ್ವಿಕರ ದೃಷ್ಟಿಯಲ್ಲಿ ಪ್ರಬಲ ಅಸ್ತ್ರವಾದರೆ, ಅಮಾಯಕ ಪ್ರಜೆಗಳ ದೃಷ್ಟಿಯಲ್ಲಿ ಮನುಕುಲ ವಿರೋಧಿ ಕೃತ್ಯವಾಗಿ ಪರಿಣಮಿಸಿದೆ. ಗುಜರಾತಿನಲ್ಲಿ 2004ರಲ್ಲಿ ನಡೆದ ಇಶ್ರತ್ ಜಹಾನ್ ಎನ್‌ಕೌಂಟರ್ ಪ್ರಕರಣವನ್ನು ನಕಲಿ ಎನ್‌ಕೌಂಟರ್ ಎಂದು ಅಹಮದಾಬಾದಿನ ನಗರ ನ್ಯಾಯಾಧಿಪತಿ ತಮಂಗ್ ವರದಿಯಲ್ಲಿ ಹೇಳಿರುವುದು ಭಾರಿ ವಿವಾದಕ್ಕೆ ಎಡೆ ಮಾಡಿಕೊಟ್ಟಿದೆ.

ಇಶ್ರತ್ ಜಹಾನ್ ಪ್ರಕರಣ

2002ರ ಗುಜರಾತ್ ಗಲಭೆಗಳು ದೇಶದ ರಾಜಕೀಯ ದಿಕ್ಕನ್ನೇ ಬದಲಾಯಿಸಿದ ಘಟನೆ ಎಂದರೆ ಅತಿಶಯೋಕ್ತಿಯಲ್ಲ. ಕೋಮು ದ್ವೇಷದ ದಳ್ಳುರಿ ಪರಾಕಾಷ್ಠೆ ತಲುಪಿದ್ದ ಈ ಪ್ರಕರಣದಲ್ಲಿ ಒಂದು ಚುನಾಯಿತ ಸರ್ಕಾರದ ಸಂವಿಧಾನಿಕ ಔಚಿತ್ಯವೇ ಪ್ರಶ್ನಾರ್ಹವಾಗಿದ್ದುದು ಐತಿಹಾಸಿಕ ಬೆಳವಣಿಗೆ. ದೇಶದೆಲ್ಲೆಡೆ ವ್ಯಾಪಿಸಿದ್ದ ಕೋಮುವಾದಿ ರಾಜಕಾರಣ ಮತ್ತು ತತ್ಪರಿಣಾಮವಾಗಿ ಉದ್ಭವಿಸಿದ್ದ ಹಿಂಸಾತ್ಮಕ ಚಟುವಟಿಕೆಗಳ ಹಿನ್ನೆಲೆಯಲ್ಲಿ ಒಂದು ಇಡೀ ಜನ ಸಮುದಾಯವನ್ನೇ ದೇಶದ್ರೋಹಿಗಳನ್ನಾಗಿ ಬಿಂಬಿಸುವ ಪ್ರಯತ್ನವನ್ನು ಆಳುವ ಪಕ್ಷ ಮಾಡಿದ್ದು ಗುಜರಾತ್ ಘಟನೆಗಳಲ್ಲಿ ಸ್ಪಷ್ಟವಾಗಿತ್ತು. ರಾಜಕೀಯ ನಾಯಕರುಗಳ ರಕ್ಷಣೆಯ ನೆಪದಲ್ಲಿ ಅಮಾಯಕರನ್ನೂ ಭಯೋತ್ಪಾದಕರೆಂದು ಶಂಕಿಸಿ ಬೇಟೆಯಾಡುವ ಪ್ರಕ್ರಿಯೆಗೆ ಗುಜರಾತ್ ಘಟನೆಗಳು ನಾಂದಿ ಹಾಡಿದ್ದವು. ಈ ಸಂದರ್ಭದಲ್ಲೇ ಪೊಲೀಸ್ ಎನ್‌ಕೌಂಟರ್‌ಗೆ ಬಲಿಯಾದ ಇಶ್ರತ್ ಜಹಾನ್ ಮತ್ತು ಜಾವೇದ್‌ರಂತಹ ಅಮಾಯಕ ಜೀವಗಳಿಗೆ ಮರಣೋತ್ತರ ನ್ಯಾಯ ದೊರೆಯುವ ಸಾಧ್ಯತೆಗಳು ಸ್ಪಷ್ಟವಾಗುತ್ತಿವೆ.

ಇಶ್ರತ್ ಜಹಾನ್ ಮತ್ತು ಜಾವೇದ್ ಅವರ ಕುಟುಂಬಗಳು ಕಳೆದ ಐದು ವರ್ಷಗಳಿಂದಲೂ ನ್ಯಾಯದ ಬಾಗಿಲನ್ನು ತಟ್ಟುತ್ತಲೇ ಇದ್ದಾರೆ. 2004ರ ಜೂನ್ 15ರಂದು ನಡೆದ ಎನ್‌ಕೌಂಟರ್ ಒಂದರಲ್ಲಿ ಬಲಿಯಾದ ಇಶ್ರತ್ ಮತ್ತು ಜಾವೇದ್ ಲಷ್ಕರ್ ಆಗಲೀ ಯಾವುದೇ ಭಯೋತ್ಪಾದಕ ಸಂಘಟನೆಯೊಂದಿಗಾಗಲೀ ಸಂಬಂಧ ಹೊಂದಿರಲಿಲ್ಲವೆಂಬ ಕೂಗಿಗೆ ನ್ಯಾಯಾಧಿಪತಿ ತಮಂಗ್ ವರದಿ ಪುಷ್ಟಿ ನೀಡಿದ್ದು ಸದರಿ ಪ್ರಕರಣವನ್ನು ನಕಲಿ ಎನ್‌ಕೌಂಟರ್ ಎಂದು ತೀರ್ಪು ನೀಡಿದೆ. ಎನ್‌ಕೌಂಟರ್ ಕುರಿತು ಸುದೀರ್ಘ ತನಿಖೆ ನಡೆಸಿರುವ ನ್ಯಾ.ತಮಂಗ್ ತಮ್ಮ ವರದಿಯಲ್ಲಿ ಇಶ್ರತ್ ಮತ್ತು ಸಂಗಾತಿಗಳ ಹತ್ಯೆಯನ್ನು ವ್ಯವಸ್ಥಿತವಾಗಿ ಮಾಡಲಾದ ಬರ್ಬರ ಹತ್ಯೆ ಎಂದೇ ಬಣ್ಣಿಸಿದ್ದಾರೆ. ಮುಖ್ಯ ಮಂತ್ರಿಗಳನ್ನು ರಕ್ಷಿಸುವ ನೆಪದಲ್ಲಿ ಅಮಾಯಕರನ್ನು ಹತ್ಯೆಗೈಯ್ಯಲಾಗಿದೆ ಎಂದು ಹೇಳಿರುವ ತಮಂಗ್, ಗುಜರಾತಿನ ಪೊಲೀಸ್ ಅಧಿಕಾರಿಗಳು ಬಡ್ತಿಯ ಆಸೆಗಾಗಿ ವ್ಯವಸ್ಥಿತವಾಗಿ ಸಂಚು ರೂಪಿಸಿ ಇಶ್ರತ್ ಮತ್ತು ಸಂಗಾತಿಗಳನ್ನು ನಕಲಿ

ನಕಲಿ ಎನ್‌ಕೌಂಟರ್‌ನಲ್ಲಿ ಹತ್ಯೆಗೀಡಾದ ಇಶ್ರತ್ ಜಹಾನ್

ಇಶ್ರತ್ ಜಹಾನ್ ಮತ್ತು ಜಾವೇದ್ ಅವರ ಕುಟುಂಬಗಳು ಕಳೆದ ಐದು ವರ್ಷಗಳಿಂದಲೂ ನ್ಯಾಯದ ಬಾಗಿಲನ್ನು ತಟ್ಟುತ್ತಲೇ ಇದ್ದಾರೆ. ೨೦೦೪ರ ಜೂನ್ ೧೫ರಂದು ನಡೆದ ಎನ್‌ಕೌಂಟರ್ ಒಂದರಲ್ಲಿ ಬಲಿಯಾದ ಇಶ್ರತ್ ಮತ್ತು ಜಾವೇದ್ ಲಷ್ಕರ್ ಆಗಲೀ ಯಾವುದೇ ಭಯೋತ್ಪಾದಕ ಸಂಘಟನೆಯೊಂದಿಗಾಗಲೀ ಸಂಬಂಧ ಹೊಂದಿರ ಅಲ್ಲವೆಂಬ ಕೂಗಿಗೆ ನ್ಯಾಯಾಧಿಪತಿ ತಮಂಗ್ ವರದಿ ಪುಷ್ಟಿ ನೀಡಿದ್ದು ಸದರಿ ಪ್ರಕರಣವನ್ನು ನಕಲಿ ಎನ್‌ಕೌಂಟರ್ ಎಂದು ತೀರ್ಪು ನೀಡಿದೆ. ಎನ್‌ಕೌಂಟರ್ ಕುರಿತು ಸುದೀರ್ಘ ತನಿಖೆ ನಡೆಸಿರುವ ನ್ಯಾ. ತಮಂಗ್ ತಮ್ಮ ವರದಿಯಲ್ಲಿ ಇಶ್ರತ್ ಮತ್ತು ಸಂಗಾತಿಗಳ ಹತ್ಯೆಯನ್ನು ವ್ಯವಸ್ಥಿತವಾಗಿ ಮಾಡಲಾದ ಬರ್ಬರ ಹತ್ಯೆ ಎಂದೇ ಬಣ್ಣಿಸಿದ್ದಾರೆ.

ಎನ್‌ಕೌಂಟರ್‌ನಲ್ಲಿ ಹತ್ಯೆಗೈದಿದ್ದಾರೆ ಎಂದು ಆರೋಪಿಸಿದ್ದಾರೆ.

ಇಶ್ರತ್ ಜಹಾನ್, ಜಾವೇದ್ ಮತ್ತಿಬ್ಬರು ಸಹಚರರು ಲಷ್ಕರ್ ಸಂಘಟನೆಗೆ ಸೇರಿದವರೆಂದೂ, ಗುಜರಾತ್‌ನ ಮುಖ್ಯಮಂತ್ರಿ ನರೇಂದ್ರ ಮೋದಿಯವರ ಹತ್ಯೆಗೆ ಸಂಚು ರೂಪಿಸಿ ಗುಜರಾತಿಗೆ ಬಂದಿದ್ದು ನರೇಂದ್ರ ಮೋದಿ ಆಯೋಜಿಸಿದ್ದ ರಥ ಯಾತ್ರೆಯ ಸಂದರ್ಭದಲ್ಲಿ ಆತ್ಮಹತ್ಯಾ ದಾಳಿ ನಡೆಸಲು ಆಯೋಜಿಸಿದ್ದರೆಂದೂ ಗುಜರಾತ್ ಪೊಲೀಸರು ಪ್ರತಿಪಾದಿಸಿದ್ದರು. ಇನ್ನಿಬ್ಬರು ಸಹಚರರು ಪಾಕಿಸ್ತಾನದ ನಾಗರಿಕರಾಗಿದ್ದು ಗುಂಡಿನ ಕಾಳಗದಲ್ಲಿ ನಾಲ್ವರೂ ಹತ್ಯೆಯಾದರೆಂದು ಪೊಲೀಸ್ ದಾಖಲೆಗಳು ತಿಳಿಸುತ್ತವೆ. ಆದರೆ ಇಸ್ಲಾಂಗೆ ಮತಾಂತರ ಹೊಂದಿದ್ದ ಜಾವೇದ್‌ನ ತಂದೆ ಗೋಪಿನಾಥ ಪಿಳ್ಳೈ ಪೊಲೀಸರ ಈ ವಾದವನ್ನು ಸ್ಪಷ್ಟವಾಗಿ ಅಲ್ಲಗಳೆಯಲಾಗುತ್ತಾರೆ. ಪುಣೆಯಿಂದ ಕೇರಳಕ್ಕೆ ಬರುವ ವೇಳೆಯಲ್ಲಿ ತಮ್ಮ ಪುತ್ರ ಹಾಗೂ ಸೊಸೆ ಸಾಜಿದಾ ಜೂನ್ 10ರಂದು ಅಹಮದಾಬಾದಿನಲ್ಲಿ ತಂಗಿದ್ದರೆಂದೂ, ಮರುದಿನ ಸಾಜಿದಾಳನ್ನು ಅಲ್ಲಿಯೇ ಬಿಟ್ಟು ಜಾವೇದ್ ಮುಂಬೈಗೆ ಹೊರಟದ್ದನೆಂದೂ, ನಂತರ ಹಿಂದಿರುಗಿ ಬರಲಿಲ್ಲವೆಂದೂ ಪಿಳ್ಳೈ ಹೇಳುತ್ತಾರೆ.

ಇಶ್ರತ್ ಜಹಾನಳ ತಾಯಿ ಶಮೀಮಾ ತಮ್ಮ ಮಗಳಿಗೂ ಲಷ್ಕರ್ ಸಂಘಟನೆಗೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಮುಂಬೈನಲ್ಲಿದ್ದ ಇಶ್ರತ್ ಇಡೀ ಕುಟುಂಬಕ್ಕೆ ಆಧಾರವಾಗಿದ್ದು ಜಾವೇದ್‌ನೊಡನೆ ಕೆಲಸ ಮಾಡುತ್ತಿದ್ದಳೆಂದೂ, ಕಾರ್ಯ ನಿಮಿತ್ತ ಆಗಾಗ್ಗೆ ಪ್ರಯಾಣ ಮಾಡುತ್ತಿದ್ದಳೆಂದೂ ಹೇಳುತ್ತಾರೆ. ಜೂನ್ 11ರಂದು ಜಾವೇದ್‌ನನ್ನು ಭೇಟಿ ಮಾಡಲು ಹೊರಟ ಇಶ್ರತ್ ಹಿಂದಿರುಗಿ ಬರಲೇ ಇಲ್ಲ. ಜೂನ್ 15ರಂದು ಇಶ್ರತ್ ಮತ್ತು ಸಹಚರರ ಎನ್‌ಕೌಂಟರ್ ಬಹಿರಂಗವಾದ ನಂತರದಲ್ಲಿ ಇಡೀ ಪ್ರಕರಣ ಮಾಧ್ಯಮಗಳಲ್ಲಿ ಸಂಚಲನ ಮೂಡಿಸಿತ್ತು. ಸಾಕ್ಷ್ಯಚಿತ್ರ ನಿರ್ದೇಶಕ ಶುಭ್ರದೀಪ್ ಚಕ್ರವರ್ತಿಯವರು ಸಂಗ್ರಹಿಸಿದ ದಾಖಲೆಗಳ ಅನ್ವಯ ಜೂನ್ 11ರಂದೇ ಗುಜರಾತ್ ಪೊಲೀಸರು ಇಶ್ರತ್ ಮತ್ತು ಜಾವೇದರನ್ನು ಅಪಹರಿಸಿ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಸೊಹ್ರಾಬುದ್ದಿನ್ ಮತ್ತು ಕೌಸರ್ ಬಿ ಪ್ರಕರಣದಂತೆಯೇ ಇಶ್ರತ್ ಪ್ರಕರಣವೂ ಸಹ ನಕಲಿ ಎನ್‌ಕೌಂಟರ್ ಎಂದು ಅನೇಕ ಪ್ರಗತಿಪರ ಸಂಘಟನೆಗಳು ಮತ್ತು ಮಾನವ ಹಕ್ಕು ಸಂಘಟನೆಗಳು ಹುಯಿಲೆಬ್ಬಿಸಿದ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ಟಮಂಗ್ ಅವರ ನೇತೃತ್ವದಲ್ಲಿ ನ್ಯಾಯಾಧಿಪತಿಗಳ ತನಿಖೆಯನ್ನು ನಡೆಸಲಾಗಿತ್ತು. ಇಶ್ರತ್ ಜಹಾತ್ ಮತ್ತಿತರರು ಗುಜರಾತ್‌ನ ಮುಖ್ಯಮಂತ್ರಿ ನರೇಂದ್ರ ಮೋದಿಯವರನ್ನು ಹತ್ಯೆಗೈಯ್ಯಲು ಲಷ್ಕರ್ ಸಂಘಟನೆಯಿಂದ ನಿಯೋಜಿಸಿದ್ದ ಭಯೋತ್ಪಾದಕರು ಎಂಬ ಪೊಲೀಸ್ ವರದಿಯನ್ನು ನ್ಯಾ. ಟಮಂಗ್ ವರದಿಯಲ್ಲಿ ಸ್ಪಷ್ಟವಾಗಿ ನಿರಾಕರಿಸಲಾಗಿದ್ದು, ಈ ಪ್ರಕರಣವನ್ನು ನಕಲಿ ಎನ್‌ಕೌಂಟರ್ ಎಂದೂ, ಒಂದು ದಾರುಣ ಕೊಲೆಯಂತೆ ಪರಿಗಣಿಸಬೇಕೆಂದೂ ಶಿಫಾರಸು ಮಾಡಿದೆ. ಕಾನೂನಿನ ಚೌಕಟ್ಟಿನಲ್ಲಿ ಈ ಅಂಶ ಗಂಭೀರವಾದ್ದೇನಲ್ಲವಾದರೂ, ಹಾಡುಹಗಲೇ ಹತ್ಯೆಗೀಡಾದ ಈ ಮೂವರನ್ನು ಈ ರೀತಿ ಬಿಂಬಿಸುವುದು ಸರ್ಕಾರಕ್ಕೆ ಅಗತ್ಯವಾಗಿತ್ತು.

ಇಶ್ರತ್ ಜಹಾನ್, ಜಾವೇದ್ ಮತ್ತಿಬ್ಬರು ಸಹಚರರು ಲಷ್ಕರ್ ಸಂಘಟನೆಗೆ ಸೇರಿದವರೆಂದೂ, ಗುಜರಾತ್‌ನ ಮುಖ್ಯಮಂತ್ರಿ ನರೇಂದ್ರ ಮೋದಿಯವರ ಹತ್ಯೆಗೆ ಸಂಚು ರೂಪಿಸಿ ಗುಜರಾತಿಗೆ ಬಂದಿದ್ದು ನರೇಂದ್ರ ಮೋದಿ ಆಯೋಜಿಸಿದ್ದ ರಥ ಯಾತ್ರೆಯ ಸಂದರ್ಭದಲ್ಲಿ ಆತ್ಮಹತ್ಯಾ ದಾಳಿ ನಡೆಸಲು ಆಯೋಜಿಸಿದ್ದರೆಂದೂ ಗುಜರಾತ್ ಪೊಲೀಸರು ಪ್ರತಿಪಾದಿಸಿದ್ದರು. ಇನ್ನಿಬ್ಬರು ಸಹಚರರು ಪಾಕಿಸ್ತಾನದ ನಾಗರಿಕರಾಗಿದ್ದು ಗುಂಡಿನ ಕಾಳಗದಲ್ಲಿ ನಾಲ್ವರೂ ಹತ್ಯೆಯಾದರೆಂದು ಪೊಲೀಸ್ ದಾಖಲೆಗಳು ತಿಳಿಸುತ್ತವೆ. ಆದರೆ ಇಸ್ಲಾಂಗೆ ಮತಾಂತರ ಹೊಂದಿದ್ದ ಜಾವೇದ್‌ನ ತಂದೆ ಗೋಪಿನಾಥ ಪಿಳ್ಳೈ ಪೊಲೀಸರ ಈ ವಾದವನ್ನು ಸ್ಪಷ್ಟವಾಗಿ ಅಲ್ಲಗಳೆಯಲಾಗುತ್ತಾರೆ.

ಇಶ್ರತ್ ಜೆಹಾನ್ ಮತ್ತು ಲಷ್ಕರ್ ಸಂಘಟನೆಯ ನಂಟು ಸಾಬೀತು ಮಾಡಲು ಇರುವ ಏಕೈಕ ಪುರಾವೆ ಎಂದರೆ 2004ರಲ್ಲಿ ಲಷ್ಕರ್‌ನ ಹೊತ್ತಿಗೆಯೊಂದರಲ್ಲಿ ಆಕೆಯನ್ನು ಸದಸ್ಯೆ ಎಂದು ನಮೂದಿಸಿದ್ದು. ಆದರೆ ಇದರಲ್ಲಿ ಲಷ್ಕರ್ ಸಂಘಟನೆಯ ಕುತಂತ್ರವನ್ನೂ ಅಲ್ಲಗಳೆಯಲಾಗುವುದಿಲ್ಲ ಎಂದು ಬಲ್ಲ ಮೂಲಗಳು ತಿಳಿಸುತ್ತವೆ. ಜಾವೆದ್ ಶೇಖ್‌ನೊಡನೆ ಇಶ್ರತ್ ಸ್ನೇಹ ಹೊಂದಿದ್ದಳೆಂಬ ಆರೋಪವೂ ಬಾಲಿಶವಾಗಿ ತೋರುತ್ತದೆ. ಜಾವೆದ್ ಶೇಖ್ ಪಾತಕಿ ಎಂದು ಗುರುತಿಸಲ್ಪಟ್ಟಿದ್ದರೂ ಪೊಲೀಸ್ ಇಲಾಖೆಯಲ್ಲಿ ದಾಖಲಾಗಿರಲಿಲ್ಲ, ಅಥವಾ ಭಯೋತ್ಪಾದನೆಂದೂ ಗುರುತಿಸಲ್ಪಟ್ಟಿರಲಿಲ್ಲ.

ಇಶ್ರತ್‌ಳ ತಾಯಿ ತನ್ನ ಮಗಳ ಹತ್ಯೆಯನ್ನು ಕೊಲೆ ಎಂದೇ ಪರಿಗಣಿಸುವಂತೆ ಉಚ್ಚನ್ಯಾಯಾಲಕ್ಕೆ ಮನವಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ನಾಲ್ಕು ವರ್ಷಗಳ ನಂತರ 2009ರಲ್ಲಿ ನ್ಯಾಯಾಲಯವು ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ದಳಕ್ಕೆ ವಹಿಸಲು ನಿರ್ದೇಶಿಸಿತ್ತು. ಏತನ್ಮಧ್ಯೆ ಘಟನೆ ನಡೆದ ಮೂರು ದಿನಗಳ ಒಳಗೇ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಗುಜರಾತ್ ಸರ್ಕಾರಕ್ಕೆ, ಆಯೋಗದ ನಿಯಮಾನುಸಾರ ಪೊಲೀಸ್ ತನಿಖೆಯೊಂದಿಗೆ ನ್ಯಾಯಾಧಿಕಾರಿಗಳ ಮೂಲಕ ತನಿಖೆ ಕೈಗೊಳ್ಳಲು ಆದೇಶಿಸಿತ್ತು. ಈ ನ್ಯಾಯಾಧಿಕಾರಿಯ ತನಿಖೆಯ ಪರಿಣಾಮವಾಗಿ ಗುಜರಾತ್ ಸರ್ಕಾರ ಇಕ್ಕಟ್ಟಿಗೆ ಸಿಲುಕಿದ್ದು ಟಮಂಗ್ ವರದಿಯನ್ನು ನಿರ್ಲಕ್ಷಿಸುತ್ತಲೇ ಇಡೀ ಪ್ರಕರಣವನ್ನು ಅಸಲಿ ಎನ್‌ಕೌಂಟರ್ ಎಂದು ನಿರೂಪಿಸಲು ಹರಸಾಹಸ ಮಾಡುತ್ತಿದೆ.

ಆದರೆ ತಮಂಗ್ ವರದಿಯಲ್ಲಿ ಸರ್ಕಾರದ ವಾದಗಳನ್ನು ಸ್ಪಷ್ಟವಾಗಿ ಅಲ್ಲಗಳೆಯಲಾಗಿದ್ದು ಇಡೀ ಪ್ರಕರಣವನ್ನು ವ್ಯವಸ್ಥಿಯ ಹತ್ಯೆಯ ಸಂಚು ಎಂದು ನಿರೂಪಿಸುವ ನಿಟ್ಟಿನಲ್ಲಿ ಹಲವಾರು ಪೂರಕ ಅಂಶಗಳನ್ನು ಒದಗಿಸಿದೆ. ಪೊಲೀಸ್ ವರದಿಯಲ್ಲಿ ಇಶ್ರತ್ ಮತ್ತು ಸಹಚರರ ಎನ್‌ಕೌಂಟರ್ ಜೂನ್ 15ರ ಮುಂಜಾನೆ 4 ಗಂಟೆಗೆ ನಡೆಯಿತೆಂದು ಹೇಳಲಾಗಿದೆ. ಆದರೆ ಜೂನ್ 15ರ ಮಧ್ಯಾಹ್ನ 3.40ಕ್ಕೆ ನಡೆದ ಮರಣೋತ್ತರ ಪರೀಕ್ಷೆಗಳ ಪ್ರಕಾರ ಹತ್ಯೆ ಇನ್ನೂ ಮುಂಚಿತವಾಗಿಯೇ ನಡೆದಿರುವುದು ತಿಳಿದುಬರುತ್ತದೆ. ಹತ್ಯೆಗೀಡಾದವರು ಪೊಲೀಸರೊಡನೆ ಯಾವುದೇ ರೀತಿಯ ಕಾಳಗದಲ್ಲಿ ತೊಡಗಿರಲಿಲ್ಲ ಎಂದು ಹೇಳುವ ತಮಂಗ್ ಒಂದು ವೇಳೆ ಕಾಳಗ ನಡೆದಿದ್ದೇ ಆದಲ್ಲಿ ಪೊಲೀಸ್ ಸಿಬ್ಬಂದಿಗೂ ಗಾಯಗಳಾಬೇಕಿತ್ತು, ಆದರೆ ಆ ರೀತಿಯ ಯಾವುದೇ ಗಾಯಗಳು ಕಂಡುಬರುವುದಿಲ್ಲ ಹಾಗಾಗಿ ಇಶ್ರತ್ ಮತ್ತಿತರರನ್ನು ಹತ್ತಿರದಿಂದಲೇ ಹತ್ಯೆ ಮಾಡಲಾಗಿದೆ ಎಂದು ಸ್ಪಷ್ಟವಾಗಿ ಹೇಳುತ್ತಾರೆ.

ಗುಜರಾತ್ ಗಲಭೆಗಳ ನಂತರದಲ್ಲಿ ಐದು ಎನ್‌ಕೌಂಟರ್ ಹತ್ಯೆಗಳಾಗಿದ್ದು ಪ್ರತಿಯೊಂದು ಪ್ರಕರಣದಲ್ಲೂ ಹತ್ಯೆಗೀಡಾದವರನ್ನು ಉಗ್ರವಾದಿಗಳೆಂದು ನಿರೂಪಿಸಲು ಪೊಲೀಸ್ ಅಧಿಕಾರಿಗಳು ಸರ್ವ ಪ್ರಯತ್ನವನ್ನೂ ಮಾಡಿರುವುದನ್ನು ತಮಂಗ್ ವರದಿ ಉಲ್ಲೇಖಿಸುತ್ತದೆ. ಗುಜರಾತ್‌ನ ಮಾಜಿ ಪೊಲೀಸ್ ಮಹಾ ನಿರ್ದೇಶಕ ಶ್ರೀಕುಮಾರ್ ಅವರೂ ತಮ್ಮ ಇತ್ತೀಚಿನ ಕೃತಿಯೊಂದರಲ್ಲಿ ಈ ಬಗ್ಗೆ ಬೆಳಕು ಚೆಲ್ಲುತ್ತಾರೆ. "ಗುಜರಾತ್‌ನಲ್ಲಿ ಎನ್‌ಕೌಂಟರ್ ಹತ್ಯೆಗಳು ಮತ್ತು ಅಲ್ಪಸಂಖ್ಯಾತರ ಹತ್ಯಾಕಾಂಡ 2002ರಲ್ಲೇ ಪ್ರಾರಂಭವಾಯಿತು. ಹಿಂದೂಗಳ ಕೋಮುವಾದೀಕರಣ ರಾಜಕೀಯ ಕ್ರೋಢೀಕರಣಕ್ಕಾಗಿ ಈ ಕೃತ್ಯಗಳನ್ನು ಬಳಸಿಕೊಳ್ಳಲಾಯಿತು. ಗೋದ್ರಾ ದುರಂತದ ನಂತರ ಶವಗಳನ್ನು ಅತ್ಯಂತ ಸೂಕ್ಷ್ಮ ಪ್ರದೇಶವಾದ ಅಹಮದಾಬಾದ್‌ನಲ್ಲಿ ಮೆರವಣಿಗೆ ನಡೆಸಿ ಮುಂದಿನ ಘಟನೆಗಳಿಗೆ ಪೀಠಿಕೆ ಹಾಕಲಾಯಿತು. ಕಾನೂನಿನನ್ವಯ ಶವಗಳನ್ನು ಸಂಬಂಧಿಕರಿಗೇ ಒಪ್ಪಿಸಬೇಕಾಗಿದ್ದರೂ, ವಿಶ್ವ ಹಿಂದೂ ಪರಿಷತ್‌ಗೆ ಒಪ್ಪಿಸಲಾಯಿತು. ನಂತರದ ಗಲಭೆಗಳಿಗೆ ಇದೇ ನಾಂದಿಯಾಯಿತು" ಎನ್ನುತ್ತಾರೆ ಶ್ರೀಕುಮಾರ್.

"ನಮ್ಮ ಕಾನೂನು ವ್ಯವಸ್ಥೆ ಉತ್ತಮವಾಗಿದ್ದು ಕೆಲವೇ ಕೆಲವು ಸ್ವಾರ್ಥಪರ ಅಧಿಕಾರಿಗಳ ವರ್ತನೆಯಿಂದ ಕೆಟ್ಟ ಹೆಸರು ಗಳಿಸುತ್ತಿದೆ. ಪ್ರತಿಯೊಂದು ಎನ್‌ಕೌಂಟರ್ ಮತ್ತು ಲಾಕಪ್ ಸಾವಿನ ಬಗ್ಗೆಯೂ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು ಪೊಲೀಸ್ ನಿರ್ದೇಶಕರ ಕರ್ತವ್ಯವಾಗಿರುತ್ತದೆ. ಆದರೆ ಅನೇಕ ಅಧಿಕಾರಿಗಳು ಬಡ್ತಿ ಮತ್ತು ಪ್ರಸಿದ್ಧಿಗೆ ಮನಸೋತು ಕಾನೂನು ಉಲ್ಲಂಘಿಸುತ್ತಾರೆ" ಎಂದು ಹೇಳುವ ಶ್ರೀಕುಮಾರ್ "2002ರ ಗುಜರಾತ್ ಗಲಭೆಗಳ ನಂತರ ಅಕ್ಟೋಬರ್ 2002ರಲ್ಲಿ ಅವರನ್ನು ವರ್ಗಾವಣೆ ಮಾಡಲಾಯಿತೆಂದೂ ನಂತರ 2007ರ ಏಪ್ರಿಲ್‌ನಲ್ಲಿ ಪೊಲೀಸ್ ಅಧಿಕಾರಿ ವಜಾರ ಅವರನ್ನು ವಜಾ ಮಾಡುವವರೆಗೆ ಮಾತ್ರ ಮುಖ್ಯಮಂತ್ರಿಗಳಿಗೆ ಅಪಾಯವಿದೆ ಎಂಬ ನೆಪದಲ್ಲಿ ಎನ್‌ಕೌಂಟರ್‌ಗಳು ನಡೆಯಿತೆಂದೂ" ಹೇಳುತ್ತಾ ಈ ಅವಧಿಯಲ್ಲಿ 20ಕ್ಕೂ ಹೆಚ್ಚು ಎನ್‌ಕೌಂಟರ್‌ಗಳು ನಡೆದುದನ್ನು ನೆನೆಯುತ್ತಾ, 2007ರ ನಂತರ ಮೋದಿಯವರಿಗೆ ಪ್ರಾಣಭಯ ಇರಲಿಲ್ಲವೇ ಎಂದು ಪ್ರಶ್ನಿಸುತ್ತಾರೆ. ಶ್ರೀಕುಮಾರ್ ಅವರ ಇತ್ತೀಚಿನ ಅನುಭವದ ಕೃತಿ ಎನ್‌ಕೌಂಟರ್ ಸಂಸ್ಕೃತಿಯ ಬಗ್ಗೆ ಉತ್ತಮ ಬೆಳಕು ಚೆಲ್ಲುತ್ತದೆ.

ಕಾನೂನಿನ ಕಟಕಟೆಯಲ್ಲಿ ಎನ್‌ಕೌಂಟರ್

ಎನ್‌ಕೌಂಟರ್‌ಗಳ ಬಗ್ಗೆ ಸರ್ವೋಚ್ಚ ನ್ಯಾಯಾಲ

[illegible] ಎಂದು [illegible] ಇತ್ತೀಚೆಗೆ ಆಂಧ್ರ ಪ್ರದೇಶದ ಉಚ್ಚ ನ್ಯಾಯಾಲಯವು ಎನ್‌ಕೌಂಟರ್‌ನಲ್ಲಿ ಭಾಗಿಯಾಗಿರುವ ಯಾವುದೇ ಪೊಲೀಸ್ ಅಧಿಕಾರಿಯ ಮೇಲೆ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸುವುದನ್ನು ಕಡ್ಡಾಯ ಮಾಡಿ ತೀರ್ಪು ನೀಡಿತ್ತು. ಶಂಕಿತ ಉಗ್ರರನ್ನು ಅಥವಾ ಪಾತಕಿಗಳನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡುವ ಪೊಲೀಸ್ ಅಧಿಕಾರಿಗಳು ತಾವು ನಿರಪರಾಧಿಗಳೆಂದು ನಿರೂಪಿಸಲು ಸಾಕ್ಷ್ಯಾಧಾರಗಳನ್ನು ಒದಗಿಸಿ ದಂಡನೀಯ ಹತ್ಯೆಯ (Culpable Homicide) ಆರೋಪದಿಂದ ಮುಕ್ತರಾಗಬಹುದೆಂದು ಉಚ್ಚ ನ್ಯಾಯಾಲಯ ತೀರ್ಪು ನೀಡಿತ್ತು. ಈ ತೀರ್ಪಿನಿಂದ ಪೊಲೀಸ್ ಅಧಿಕಾರಿಗಳ ಸಾಮರ್ಥ್ಯವನ್ನು ಕುಗ್ಗಿಸುತ್ತದೆ ಎಂದು ಆರೋಪಿಸಿ ಪೊಲೀಸ್ ಅಧಿಕಾರಿಗಳು ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಿರುವುದರಿಂದ ಮೊಕದ್ದಮೆ ವಿಚಾರಣೆಯ ಹಂತದಲ್ಲಿದೆ.

ಎರಡನೆಯ ಪ್ರಕರಣದಲ್ಲಿ, 1997ರಲ್ಲಿ ಮುಂಬೈನಲ್ಲಿ ನಡೆದ ಎನ್‌ಕೌಂಟರ್‌ನ್ನು ಅಸಲಿ ಎನ್‌ಕೌಂಟರ್ ಎಂದು ತೀರ್ಪು ನೀಡಿದ ಮುಂಬೈ ಉಚ್ಚ ನ್ಯಾಯಾಲಯದ ತೀರ್ಪನ್ನು ಪರಿಶೀಲಿಸಿದ ಸರ್ವೋಚ್ಚ ನ್ಯಾಯಾಲಯವು, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಶಿಫಾರಸ್ಸುಗಳ ಅನ್ವಯ ಮಹಾರಾಷ್ಟ್ರ ಸರ್ಕಾರ ಕಾನೂನು ಪಾಲನೆ ಮಾಡಿದೆಯೇ ಎಂದು ಪ್ರಶ್ನಿಸಿದೆ. ಆಯೋಗದ ಶಿಫಾರಸ್ಸಿನ ಪ್ರಕಾರ ಪ್ರತಿಯೊಂದು ಎನ್‌ಕೌಂಟರ್ ಹತ್ಯೆಯನ್ನೂ ನ್ಯಾಯಾಧಿಪತಿಯ ತನಿಖೆಗೆ ಒಳಪಡಿಸಿ, ಪ್ರಕರಣ ನಕಲಿ ಎಂದು ಸಾಬೀತಾದಲ್ಲಿ ಸಂಬಂಧ ಪಟ್ಟ ಪೊಲೀಸ್ ಅಧಿಕಾರಿಗಳನ್ನು ಶಿಕ್ಷೆಗೊಳಪಡಿಸಬೇಕೆಂದು ಹೇಳಲಾಗಿದೆ. ಆದರೆ ಈ ಕಾನೂನನ್ನು ಪಾಲಿಸುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದ್ದರೆ, ಜಾರಿಗೊಳಿಸುವಲ್ಲಿ ಆಯೋಗವೂ ವಿಫಲವಾಗಿರುವುದನ್ನು ಸರ್ವೋಚ್ಚ ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿದೆ.

1993ರಲ್ಲಿ ಸ್ಥಾಪನೆಯಾದಂದಿನಿಂದಲೂ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ವರದಿಯಾಗಿರುವ 1502 ಎನ್‌ಕೌಂಟರ್ ಪ್ರಕರಣಗಳ ಪೈಕಿ 12 ಪ್ರಕರಣಗಳಲ್ಲಿ ಮಾತ್ರ ಪೊಲೀಸ್ ಇಲಾಖೆಯನ್ನು ತಪ್ಪಿತಸ್ಥರಾಗಿ ತೀರ್ಮಾನಿಸಲಾಗಿದೆ. ಇವುಗಳಲ್ಲಿ ಉತ್ತರ ಪ್ರದೇಶ 6, ತಮಿಳುನಾಡು, ದೆಹಲಿ, ಉತ್ತರಖಂಡ ಮತ್ತು ಬಿಹಾರ ತಲಾ ಒಂದು ಹಾಗೂ ಆಂಧ್ರಪ್ರದೇಶ 2 ಪ್ರಕರಣಗಳನ್ನು ಹಂಚಿಕೊಂಡಿವೆ. ಇದೇ ಅವಧಿಯಲ್ಲಿ ಆಯೋಗಕ್ಕೆ ವರದಿಯಾಗಿರುವ 1262 ನಕಲಿ ಎನ್‌ಕೌಂಟರ್‌ಗಳ ಪೈಕಿ 11 ಪ್ರಕರಣಗಳಲ್ಲಿ ಮಾತ್ರ ಪೊಲೀಸರನ್ನು ತಪ್ಪಿತಸ್ಥರನ್ನಾಗಿ ಪರಿಗಣಿಸಲಾಗಿ, ಬಾಧಿತರಿಗೆ ಪರಿಹಾರ ನೀಡಲಾಗಿದೆ. ಆಯೋಗದ ದಾಖಲೆಗಳ ಪ್ರಕಾರ 16 ವರ್ಷಗಳ ಅವಧಿಯಲ್ಲಿ ಕೇವಲ 23 ನಕಲಿ ಎನ್‌ಕೌಂಟರ್‌ಗಳಾಗಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ದಾಖಲಾಗಿರುವ ನಕಲಿಎನ್‌ಕೌಂಟರ್‌ಗಳ ಸಂಖ್ಯೆಯನ್ನು ನೋಡಿದರೆ ಮೇಲಿನ ಅಂಕಿಅಂಶಗಳು ಅನುಮಾನಾಸ್ಪದವೆನಿಸುತ್ತವೆ. 2006–07ರಲ್ಲಿ 122, 2007–08ರಲ್ಲಿ 95, 2008–09ರಲ್ಲಿ 103, 2009ರ ಜುಲೈವರೆಗೆ 28 ಪ್ರಕರಣಗಳು ವರದಿಯಾಗಿವೆ. ಇವುಗಳಲ್ಲಿ ಉತ್ತರ ಪ್ರದೇಶ ಅತಿಹೆಚ್ಚಿನ ಪ್ರಕರಗಳಿಗೆ ಮೂಲವಾಗಿದೆ.

ಆದರೆ ಈ ಯಾವುದೇ ಪ್ರಕರಣಗಳಲ್ಲಿ ಹತ್ಯೆಗೀಡಾದ ಅಮಾಯಕ ಜನತೆಗೆ ಸೂಕ್ತ ನ್ಯಾಯ ದೊರೆಯದಿರುವುದು ಆಯೋಗದ ನ್ಯೂನತೆಯನ್ನು ತೋರುತ್ತದೆ. ಮತ್ತೊಂದೆಡೆ ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ ಎನ್‌ಕೌಂಟರ್ ಪ್ರಕರಣಗಳು ಒಂದೇ ರೀತಿಯಲ್ಲಿ ನಡೆಯುತ್ತವೆ. ಕಾಂಗ್ರೆಸ್ ಪಕ್ಷವು 1960–70ರ ದಶಕದಲ್ಲೇ ನಕ್ಸಲೀಯರ ವಿರುದ್ಧ ಹೋರಾಟದಲ್ಲಿ ಎನ್‌ಕೌಂಟರ್ ನೀತಿಯನ್ನು ಅಧಿಕೃತವಾಗಿ ಬಳಸಿತ್ತು. ನಂತರ 1980ರ ಸಿಖ್ ಗಲಭೆಗಳಲ್ಲೂ ಇದೇ ನೀತಿಯನ್ನು ಬಳಸಲಾಗಿತ್ತು. 1990ರ ನಂತರ ಅಧಿಕಾರದ ರುಚಿ ಕಂಡ ಭಾಜಪ ತನ್ನ ಅಲ್ಪಸಂಖ್ಯಾತ ವಿರೋಧಿ ನೀತಿಗನುಗುಣವಾಗಿ ಎನ್‌ಕೌಂಟರ್ ನೀತಿಯನ್ನು ಪಾಲಿಸಿರುವುದು ಸ್ಪಷ್ಟವಾಗಿದೆ. ಸಿಪಿಎಂ ಆಳ್ವಿಕೆಯ ರಾಜ್ಯಗಳಲ್ಲಿ ಎನ್‌ಕೌಂಟರ್ ಪ್ರಕರಣಗಳು ಅಷ್ಟಾಗಿ ವರದಿಯಾಗಿಲ್ಲವಾದರೂ, ಇತ್ತೀಚಿನ ದಿನಗಳಲ್ಲಿ ಪಶ್ಚಿಮ ಬಂಗಾಲದಲ್ಲಿ ಹೆಚ್ಚಾಗುತ್ತಿರುವುದು ಕಂಡು ಬರುತ್ತಿದೆ. ಬಹುಜನ ಸಮಾಜ ಪಕ್ಷ, ಸಮಾಜವಾದಿ ಪಕ್ಷಗಳ ಆಳ್ವಿಕೆಯಲ್ಲೂ ಎನ್‌ಕೌಂಟರ್ ಪ್ರಕರಣಗಳಿಗೇನೂ ಕಡಿಮೆಯಿಲ್ಲ. ಕಾಶ್ಮೀರಲದಲ್ಲಿ ಎನ್‌ಕೌಂಟರ್ ಹತ್ಯೆಗಳು ಸರ್ವೇ ಸಾಮಾನ್ಯವಾಗಿದ್ದು 8 ವರ್ಷದ ಬಾಲಕನನ್ನೂ ಎನ್‌ಕೌಂಟರ್‌ನಲ್ಲಿ ಹತ್ಯೆಮಾಡಲಾಗಿದೆ.

ಪೊಲೀಸ್ ಕಾರ್ಯಾಚರಣೆಯಲ್ಲಿ ಎನ್‌ಕೌಂಟರ್ ಸಂಸ್ಕೃತಿಗೆ ನಾಂದಿ ಹಾಡಿದ ರಾಜ್ಯವೆಂದರೆ ಮಹಾರಾಷ್ಟ್ರ ಸರ್ಕಾರ. ಮುಂಬೈನ ಭೂಗತ ಪಾತಕಿಗಳನ್ನು ಮಟ್ಟ ಹಾಕುವ ದಿಕ್ಕಿನಲ್ಲಿ ಮುಂಬೈ ಪೊಲೀಸರು ಶಂಕಿತರನ್ನು ನೇರವಾಗಿ ಗುಂಡಿಟ್ಟು ಕೊಲ್ಲುವ ಪ್ರಕ್ರಿಯೆ ಕ್ರಮೇಣ ಎನ್‌ಕೌಂಟರ್ ಸಂಸ್ಕೃತಿಯಾಗಿ ಅಧಿಕೃತ ನಿಯಮವಾಗಿದ್ದು ಮಹಾರಾಷ್ಟ್ರದ ರಾಜಕಾರಣದಲ್ಲಿ ಕಾಣಬಹುದು. ನಂತರ ಇದೇ ನೀತಿಯನ್ನು ವಿವಿಧ ಜಿಲ್ಲೆಗಳಲ್ಲಿ ನಕ್ಸಲೀಯರನ್ನು ದಮನಿಸಲೂ ಅನುಸರಿಸಲಾಯಿತು. 1980ರ ದಶಕದಲ್ಲೇ ಈ ಪ್ರವೃತ್ತಿಯನ್ನು ಪ್ರಾರಂಭಿಸಿದ ಮುಂಬೈ ಪೊಲೀಸರು ಅನೇಕ ಭೂಗತ ದೊರೆಗಳನ್ನು ಕೊನೆಗಾಣಿಸುವಲ್ಲಿ ಸಫಲರಾಗಿದ್ದರು. ಆದರೂ 1992–93ರ ಗಲಭೆಗಳನ್ನು ನಿಯಂತ್ರಿಸುವಲ್ಲಿ ವಿಫಲರಾದ ಪೊಲೀಸ್ ಇಲಾಖೆ 257 ಜನರನ್ನು ಬಲಿ ತೆಗೆದುಕೊಂಡ 1993ರ ಬಾಂಬ್ ಸ್ಫೋಟಕ್ಕೆ ಸೂಕ್ತ ಮುನ್ನೆಚ್ಚರಿಕೆ ವಹಿಸುವಲ್ಲಿಯೂ ವಿಫಲವಾಗಿತ್ತು.

ಮಾನವ ಹಕ್ಕುಗಳನ್ನು ಉಲ್ಲಂಘಿಸದೆ, ಸಮಾಜಘಾತುಕ ಶಕ್ತಿಗಳನ್ನು ಶಿಕ್ಷಿಸುವ ಪ್ರಕ್ರಿಯೆಯಲ್ಲಿ ಸರ್ಕಾರಗಳ ಹೊಣೆಗಾರಿಕೆಯೇ ಹೆಚ್ಚಾಗಿದ್ದು, ಸಾಮಾನ್ಯ ಜನತೆ ಮತ್ತು ಪೊಲೀಸ್ ಅಧಿಕಾರಿಗಳ ನಡುವೆ ಸೌಹಾರ್ದಯುತ ಸಂಬಂಧಗಳನ್ನು ನಿರ್ಮಿಸುವಲ್ಲೂ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ.

ತದನಂತರದಲ್ಲಿ ಗೃಹಮಂತ್ರಿಗಳ ಆದೇಶದ ಮೇರೆಗೆ ಒಂದು ವಿಶೇಷ ಪಡೆಯನ್ನು ನೇಮಿಸಿ ಮಾಜಿ ಜಂಟಿ ಕಮಿಷನರ್ (ಪಾತಕ ಕೃತ್ಯಗಳ ವಿಭಾಗ) ಅವರನ್ನು ಮುಖ್ಯಸ್ಥರನ್ನಾಗಿ ನೇಮಿಸಲಾಗಿತ್ತು. ಈತನ ಅವಧಿಯಲ್ಲಿ 200ಕ್ಕೂ ಹೆಚ್ಚು ಎನ್‌ಕೌಂಟರ್‌ಗಳು ನಡೆದಿದ್ದವು. ಕ್ರಮೇಣ ಈ ಪಡೆಯನ್ನು ಎನ್‌ಕೌಂಟರ್ ತಜ್ಞ ಪಡೆ ಎಂದು ಗುರುತಿಸಲಾಯಿತು. ಮುದ್ರಣ ಮಾಧ್ಯಮಗಳು ಹಾಗು ಚಲನಚಿತ್ರಗಳಲ್ಲಿ ಎನ್‌ಕೌಂಟರ್ ನಡೆಸುವ ಪೊಲೀಸ್ ಅಧಿಕಾರಿಗಳನ್ನು ವೈಭವೀಕರಿಸಿ, ಅವರಿಗೆ ನಾಗರಿಕ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನಮಾನ ನೀಡಲಾಗಿತ್ತು. ಪೊಲೀಸ್ ಅಧಿಕಾರಿಗಳೇ ಹೇಳುವಂತೆ ಕಳೆದ ಆರು ವರ್ಷಗಳಲ್ಲಿ ಮಹಾರಾಷ್ಟ್ರದಲ್ಲಿ 600 ಎನ್‌ಕೌಂಟರ್‌ಗಳು ನಡೆದಿವೆ.

ಜಮ್ಮು ಕಾಶ್ಮೀರದಲ್ಲಿ ಕಳೆದ ಎರಡು ದಶಕಗಳಲ್ಲಿ ನಕಲಿ ಎನ್‌ಕೌಂಟರ್‌ಗಳು ದಿನನಿತ್ಯದ ಸುದ್ದಿಗಳಾಗಿವೆ. ಇಲ್ಲಿ ನಡೆಯುವ ಅನೇಕ ಎನ್‌ಕೌಂಟರ್‌ಗಳು ವ್ಯವಸ್ಥಿತ ಹತ್ಯೆಗಳೆಂದು ಅನೇಕ ತನಿಖೆಗಳಲ್ಲಿ ದೃಢಪಟ್ಟಿವೆ. ಕಾಶ್ಮೀರದ ಬಾರ್ ಅಸೋಷಿಯೇಷನ್‌ನ ಅಧ್ಯಕ್ಷ ಮಿಯಾ ಅಬ್ದುಲ್ ಖಯೂಮ್ ಅವರು ಹೇಳುವಂತೆ ಕಾಶ್ಮೀರದಲ್ಲಿ ನಡೆಯುವ ಬಹುತೇಕ ಎನ್‌ಕೌಂಟರ್‌ಗಳು ವರದಿಯಾಗುವುದೇ ಇಲ್ಲ. ಕಳೆದ ಇಪ್ಪತ್ತು ವರ್ಷಗಳಲ್ಲಿ 10 ಸಾವಿರ ಜನ ಕಾಣೆಯಾಗಿರುವುದನ್ನು ಖಯೂಮ್ ಆತಂಕದಿಂದ ಉಲ್ಲೇಖಿಸುತ್ತಾರೆ. ಇವರಲ್ಲಿ ಅನೇಕರು ಕೊಲೆಯಾಗಿರುವ

ಸಂಭವವೇ ಹೆಚ್ಚು ಎನ್ನುತ್ತಾರೆ ಖಿಯೂಮ್. ಮಣಿಪುರ, ದೆಹಲಿ, ಉತ್ತರಪ್ರದೇಶ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಹೀಗೆ ಹಲವಾರು ರಾಜ್ಯಗಳಲ್ಲಿ ಎನ್‌ಕೌಂಟರ್ ಪಡೆಗಳು ಸೃಷ್ಟಿಯಾಗಿದ್ದು ಎನ್‌ಕೌಂಟರ್ ಮೂಲಕ ಪಾತಕಿಗಳ, ಶಂಕಿತ ಅಪರಾಧಿಗಳ ಹತ್ಯೆಮಾಡುವುದನ್ನು ನಾಗರಿಕ ಸಮಾಜವೂ ಸಮ್ಮತಿಸತೊಡಗಿದ್ದು ಭಾರತೀಯ ಪ್ರಜಾತಂತ್ರದ ವಿಪರ್ಯಾಸ. ಹಾಗಾಗಿಯೇ ನ್ಯಾಯಾಲಯದ ಕಟಕಟೆಗಳಲ್ಲಿ ಇರುವ ಸಾವಿರಾರು ಎನ್‌ಕೌಂಟರ್ ಪ್ರಕರಣಗಳು ಇತ್ಯರ್ಥವಾಗದೆ ಉಳಿದಿವೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹೆಚ್ಚು ಸಕ್ರಿಯವಾಗಬೇಕಾದ ಅವಶ್ಯಕತೆಯೂ ಹೆಚ್ಚಾಗಿದೆ.

ಎನ್‌ಕೌಂಟರ್ ಮತ್ತು ಸಾಮುದಾಯಿಕ ಪ್ರಜ್ಞೆ

2001ರ ಸೆಪ್ಟೆಂಬರ್ 11 ಜಾಗತಿಕ ಇತಿಹಾಸದಲ್ಲಿ ಒಂದು ಮಹತ್ತರ ಘಟ್ಟ. ಇಡೀ ನಾಗರಿಕ ಸಮಾಜವನ್ನೇ ಬಾಧಿಸುತ್ತಿರುವ ಭಯೋತ್ಪಾದನೆಯ ಕೃತ್ಯಗಳು ತನ್ನ ಉತ್ಕೃಷ್ಟ ಹಂತ ತಲುಪಿದ್ದು ಈ ದಿನದಂದು ಅಮೆರಿಕದಲ್ಲಿ ನಡೆದ ಭಯೋತ್ಪಾದಕ ದಾಳಿಯಿಂದಲೇ. ಅಲ್ಲಿಯವರೆಗೂ ಭಯೋತ್ಪಾದನೆಯನ್ನು ತನ್ನ ಸಾಮ್ರಾಜ್ಯ ವಿಸ್ತರಣೆಗಾಗಿ, ಆರ್ಥಿಕ ಲಾಭಕ್ಕಾಗಿ ಹಾಗೂ ಕಮ್ಯುನಿಸಂನ ಅಂತ್ಯಕ್ಕಾಗಿ ಬಳಸುತ್ತಿದ್ದ ಅಮೆರಿಕ ತನ್ನ ಮೇಲೆ ಆಕ್ರಮಣ ನಡೆದಾಗ ಎಚ್ಚೆತ್ತುಕೊಂಡಿತ್ತು. 9/11 ಎಂಬ ಸಾಂಕೇತಿಕ ಪದಪುಂಜ ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ವಿಶಿಷ್ಟ ಸ್ಥಾನ ಪಡೆಯಿತು. ಎರಡು ಮಹಾಯುದ್ಧಗಳ ಸಂದರ್ಭಗಳಲ್ಲಿ ವ್ಯಕ್ತವಾಗದ ಮಾನವಪರ ಕಾಳಜಿ ಮಾಧ್ಯಮಗಳಲ್ಲಿ ವ್ಯಕ್ತವಾಗತೊಡಗಿತ್ತು. ಅಮೆರಿಕದಂತರ ಭದ್ರಕೋಟೆಯನ್ನೇ ಬೇಧಿಸಿದ ಉಗ್ರವಾದಿಗಳು ವಿಶ್ವದ ಯಾವುದೇ ಮೂಲೆಯಲ್ಲಾದರೂ ತಮ್ಮ ಭಯೋತ್ಪಾದಕ ಕೃತ್ಯ ನಡೆಸಬಲ್ಲರು ಎಂಬ ಭೀತಿ ಜಾಗತಿಕ ಸಮುದಾಯವನ್ನು, ವಿಶೇಷವಾಗಿ ಆಳ್ವಿಕರನ್ನು ಕಾಡತೊಡಗಿತು.

ಆಫ್ಘಾನಿಸ್ತಾನದಲ್ಲಿ ಮತ್ತು ವಿಶ್ವದ ಇತರ ದೇಶಗಳಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಹತ್ತಿಕ್ಕಲು ತಾನೇ ಸೃಷ್ಟಿಸಿದ ಅಲ್‌ಖೈದಾ, ತಾಲಿಬಾನ್ ನಂತಹ ಉಗ್ರವಾದಿ ಸಂಘಟನೆಗಳು ಪೆಡಂಭೂತದಂತೆ ಬೆಳೆದು ತನ್ನನ್ನೇ ನುಂಗಲು ಹೊರಟ ನಂತರ ಸಾಮ್ರಾಜ್ಯಶಾಹಿ ಅಮೆರಿಕಾಗೆ ಪ್ರಮಾದದ ಅರಿವಾದದ್ದು 9/11ರ ನಂತರವೇ. ಆದರೆ ಆ ವೇಳೆಗಾಗಲೇ ಭಯೋತ್ಪಾದನೆಯ ಜಾಲ ವಿಶ್ವಾದ್ಯಂತ ಹರಡಿತ್ತು. "ಶತ್ರುವಿನ ಶತ್ರು ನನ್ನ ಮಿತ್ರ" ಎಂಬ ನೀತಿಯನ್ನನುಸರಿಸಿ, ತನ್ನ ವಿರೋಧಿ ರಾಷ್ಟ್ರಗಳನ್ನು ಮುಗಿಸಲು ಹೊಂಚು ಹಾಕಿದ ಅಮೆರಿಕಾ ಮತ್ತು ಮಿತ್ರ ರಾಷ್ಟ್ರಗಳಿಗೆ 9/11ರ ನಂತರ ಜ್ಞಾನೋದಯವಾಗಿ ಈಗ "ನನ್ನ ಮಿತ್ರರಲ್ಲದವರೆಲ್ಲರೂ ಶತ್ರುಗಳೇ" ಎಂಬ ಮಂತ್ರ ಆವರಿಸಿಕೊಂಡಿದೆ. ಈ ಸನ್ನಿವೇಶವನ್ನೇ ಉಪಯೋಗಿಸಿಕೊಂಡು ಭಯೋತ್ಪಾದನೆಯ ವಿರುದ್ಧ ಜಾಗತಿಕ ಯುದ್ಧ ಪ್ರಾರಂಭಿಸಿದ ಅಮೆರಿಕಾದ ದಮನಕಾರಿ ನೀತಿಯನ್ನೇ ಜಾಗತಿಕ ರಕ್ಷಣಾ ನೀತಿಯನ್ನಾಗಿ ಪರಿಗಣಿಸಿದ್ದು, ಭಾರತ ಸರ್ಕಾರವೂ ಇದೇ ನೀತಿಯನ್ನು ಅನುಸರಿಸುತ್ತಿದೆ.

ಹಾಗಾಗಿ ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಪ್ರಭಾವ ಮತ್ತು ಜಾಲವನ್ನು ಹೊಂದಿರುವ ಭಯೋತ್ಪಾದಕರನ್ನು ಮಟ್ಟ ಹಾಕಲು ಸೇನಾ ಹಾಗು ಪೊಲೀಸ್ ಕಾರ್ಯಾಚರಣೆಗಳನ್ನು ತೀವ್ರಗೊಳಿಸುವುದೂ ಅನಿವಾರ್ಯವಾಯಿತು. ಅಮೆರಿಕಾ ಮತ್ತು ಮಿತ್ರ ರಾಷ್ಟ್ರಗಳು ಪೂರೈಸಿದ್ದ ಮಾರಣಾಂತಿಕ ಶಸ್ತ್ರಾಸ್ತ್ರಗಳನ್ನೇ ತಮ್ಮ ದಾಳಿ

> **2001ರ ಸೆಪ್ಟೆಂಬರ್ 11 ಜಾಗತಿಕ ಇತಿಹಾಸದಲ್ಲಿ ಒಂದು ಮಹತ್ತರ ಘಟ್ಟ. ಇಡೀ ನಾಗರಿಕ ಸಮಾಜವನ್ನೇ ಬಾಧಿಸುತ್ತಿರುವ ಭಯೋತ್ಪಾದನೆಯ ಕೃತ್ಯಗಳು ತನ್ನ ಉತ್ಕೃಷ್ಟ ಹಂತ ತಲುಪಿದ್ದು ಈ ದಿನದಂದು ಅಮೆರಿಕದಲ್ಲಿ ನಡೆದ ಭಯೋತ್ಪಾದಕ ದಾಳಿಯಿಂದಲೇ. ಅಲ್ಲಿಯವರೆಗೂ ಭಯೋತ್ಪಾದನೆಯನ್ನು ತನ್ನ ಸಾಮ್ರಾಜ್ಯ ವಿಸ್ತರಣೆಗಾಗಿ, ಆರ್ಥಿಕ ಲಾಭಕ್ಕಾಗಿ ಹಾಗೂ ಕಮ್ಯುನಿಸಂನ ಅಂತ್ಯಕ್ಕಾಗಿ ಬಳಸುತ್ತಿದ್ದ ಅಮೆರಿಕ ತನ್ನ ಮೇಲೆ ಆಕ್ರಮಣ ನಡೆದಾಗ ಎಚ್ಚೆತ್ತುಕೊಂಡಿತ್ತು. 9/11 ಎಂಬ ಸಾಂಕೇತಿಕ ಪದಪುಂಜ ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ವಿಶಿಷ್ಟ ಸ್ಥಾನ ಪಡೆಯಿತು. ಎರಡು ಮಹಾ ಯುದ್ಧಗಳ ಸಂದರ್ಭಗಳಲ್ಲಿ ವ್ಯಕ್ತವಾಗದ ಮಾನವ ಪರ ಕಾಳಜಿ ಮಾಧ್ಯಮಗಳಲ್ಲಿ ವ್ಯಕ್ತವಾಗತೊಡಗಿತ್ತು.**

ಗಳಲ್ಲಿ ಉಪಯೋಗಿಸುತ್ತಿರುವ ಭಯೋತ್ಪಾದಕರ ಹಾವಳಿಯನ್ನು ತಡೆಗಟ್ಟಲು ಸಾಂಪ್ರದಾಯಿಕ ಪೊಲೀಸ್ ನೀತಿಯಿಂದ ಸಾಧ್ಯವಿಲ್ಲ ಎಂಬ ನಂಬಿಕೆ ಸಾರ್ವಜನಿಕರಲ್ಲಿ, ಆಳ್ವಿಕರಲ್ಲಿ ಬಲವಾಗಿ ಬೇರೂರಿತ್ತು. ಸಾರ್ವಜನಿಕರಲ್ಲೂ ಸಹ ಭಯೋತ್ಪಾದಕರನ್ನು ಮಟ್ಟ ಹಾಕಲು, ಶಂಕಿತ ಉಗ್ರವಾದಿಗಳನ್ನು ಕೊನೆಗೊಳಿಸಲು ತೀವ್ರತರನಾದ ರಕ್ಷಣಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸಮ್ಮತಿ ಮೂಡಲಾರಂಭಿಸಿತು. ತತ್‌ಕ್ಷಣದ ಪರಿಣಾಮಗಳನ್ನೇ ಬಯಸುವ ಆಧುನಿಕ ಸಮಾಜದಲ್ಲಿ ಸಮಾಜಘಾತುಕ ಶಕ್ತಿಗಳನ್ನು ಮೂಲದಲ್ಲೇ ಉತ್ಪಾಟಿಸುವ ಬಗ್ಗೆ ಒಲವು ಹೆಚ್ಚಾಗತೊಡಗಿತ್ತು. ಈ ಸಂದರ್ಭದಲ್ಲಿ ಪೊಲೀಸ್ ವ್ಯವಸ್ಥೆ ಕಂಡುಕೊಂಡ ವಿಧಾನವೇ ಎನ್‌ಕೌಂಟರ್ ಹತ್ಯೆಗಳು.

ಆದರೂ ಯಾವುದೇ ನಾಗರಿಕನ ಹತ್ಯೆ ಮಾಡುವ ಅಧಿಕಾರ ಕಾನೂನಿಗಾಗಲೀ, ಸರ್ಕಾರಗಳಿಗಾಗಲೀ ಇರುವುದಿಲ್ಲ. ಅಂತಾರಾಷ್ಟ್ರೀಯ ಸಂಹಿತೆಗಳ ಪ್ರಕಾರ ಮರಣ ದಂಡನೆ ವಿಧಿಸುವುದೂ ಅಪರಾಧವೇ ಆಗುತ್ತದೆ. ಆದರೆ ಭಾರತದಲ್ಲಿ ಮರಣದಂಡನೆಯನ್ನು ಇನ್ನೂ ಒಂದು ಶಿಕ್ಷೆ ಎಂದೇ ಪರಿಗಣಿಸಲಾಗುತ್ತದೆ. ಎಂತಹ ಪಾತಕಿಯೇ ಆದರೂ ಕಾನೂನಿನನ್ವಯ ವಿಚಾರಣೆ ನಡೆಸಿ, ಶಿಕ್ಷೆ ವಿಧಿಸಬೇಕೆಂದೇ ಅಂತಾರಾಷ್ಟ್ರೀಯ ನ್ಯಾಯಸಂಹಿತೆ ಸೂಚಿಸುತ್ತದೆ. ಆದರೆ ವಾಸ್ತವವಾಗಿ ಅದು ಅಸಾಧ್ಯವೆಂದೇ ನಿರೂಪಿತವಾಗಿದೆ. ಇರಾಕ್, ಆಫ್ಘಾನಿಸ್ತಾನ, ಲೆಬನಾನ್ ಮುಂತಾದ ದೇಶಗಳಲ್ಲಿ ಅಮೆರಿಕದ ಸೈನ್ಯ ನಡೆಸುತ್ತಿರುವ ಮಾರಣ ಹೋಮ ಈ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗಿದ್ದರೂ, ವಿಶ್ವಸಂಸ್ಥೆ ಮೌನ ವಹಿಸಿರುವುದು ಇದಕ್ಕೆ ನಿದರ್ಶನ.

ಎಲ್ಲ ಸಂದರ್ಭಗಳಲ್ಲೂ ಪೊಲೀಸ್ ಅಧಿಕಾರಿಗಳು ಸಂಯಮದಿಂದ ವರ್ತಿಸಿ, ಅಪರಾಧಿಗಳ ಪ್ರಾಣಹಾನಿ ಮಾಡದೆ, ಬಂಧಿಸಬೇಕೆಂದು ಬಯಸುವುದೂ ಅವಾಸ್ತವಿಕವಾಗುತ್ತದೆ. ಎನ್‌ಕೌಂಟರ್ ಕೊಲೆಗಳು ಮಾನವ ಹಕ್ಕುಗಳ ಉಲ್ಲಂಘನೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಆದರೆ ಅಕ್ಷರ ಧಾಮ ಮೇಲೆ, ಸಂಸತ್ತಿನ ಮೇಲೆ, ಮುಂಬೈನಲ್ಲಿ ನಡೆದ ಭಯೋತ್ಪಾದಕ ದಾಳಿಗಳಲ್ಲಿ ಪೊಲೀಸರಿಂದಾಗಲೀ, ಸೇನೆಯಿಂದಾಗಲೀ ಸಂಯಮ ಅಪೇಕ್ಷಿಸಲಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ದೇಶವನ್ನು ರಕ್ಷಿಸುವ ಸಲುವಾಗಿ ಮತ್ತು ಆತ್ಮರಕ್ಷಣೆಯ ಸಲುವಾಗಿ ಪೊಲೀಸರು ತಮ್ಮ ಶಕ್ತಿಪ್ರಯೋಗ ಮಾಡುವುದು ಅನಿವಾರ್ಯವಾಗುತ್ತದೆ. ಆದರೆ ಮಾಧ್ಯಮಗಳು ವಸ್ತುನಿಷ್ಠ ವರದಿಯನ್ನು ಬಿತ್ತರಿಸದೆ ಎನ್‌ಕೌಂಟರ್ ಪ್ರಕರಣಗಳನ್ನೇ ರಂಜನೀಯಗೊಳಿಸಿ, ವೈಭವೀಕರಿಸಿ, ಬಿತ್ತರಿಸುವುದು ಸಾರ್ವಜನಿಕ ವಲಯದಲ್ಲಿ ತಪ್ಪು ಅಭಿಪ್ರಾಯಗಳನ್ನು ಸೃಷ್ಟಿಸುತ್ತದೆ.

ಆದರೆ ಗೋದ್ರಾ ನಂತರದ ಗುಜರಾತ್ ಗಲಭೆಗಳಲ್ಲಿ ಮತ್ತು ಕಾಶ್ಮೀರದ ಕಣಿವೆಗಳಲ್ಲಿ ಸಂಭವಿಸಿದ ಅನೇಕ ಎನ್‌ಕೌಂಟರ್‌ಗಳು ನಕಲಿ ಎಂದು ಮೇಲ್ನೋಟಕ್ಕೇ ಸಾಬೀತಾಗುವಂತಿವೆ. ಇಶ್ರತ್ ಜಹಾನ್ ಎನ್‌ಕೌಂಟರ್ ಪ್ರಕರಣ ಇಡೀ ಪೊಲೀಸ್ ಇಲಾಖೆ ಮತ್ತು ನ್ಯಾಯಾಂಗವನ್ನು ಬಡಿದೆಬ್ಬಿಸಿದೆ. ಪೊಲೀಸ್ ಕಾರ್ಯಾಚರಣೆಯಲ್ಲಿ ಆಳುವ ಪಕ್ಷಗಳು, ಸರ್ಕಾರಗಳು ನೇರ ಹಸ್ತಕ್ಷೇಪ ಮಾಡುವುದೇ ಈ ಪ್ರವೃತ್ತಿಗೆ ಪ್ರಮುಖ ಕಾರಣವೆಂದು ಹೇಳಬಹುದು. ಗುಜರಾತ್ ಹತ್ಯಾಕಾಂಡದಲ್ಲಿ ಸರ್ಕಾರದ, ಮಂತ್ರಿಗಳ ನೇರ ಹಸ್ತಕ್ಷೇಪದ ಬಗ್ಗೆ ಅನೇಕ ದಾಖಲೆಗಳು ಲಭ್ಯವಾಗಿವೆ.

ತೀವ್ರವಾದ ಒತ್ತಡದಲ್ಲಿ ಕಾರ್ಯನಿರ್ವಹಿಸುವ ಪೊಲೀಸ್ ಅಧಿಕಾರಿಗಳಿಂದ ಸಂಯಮ, ತಾಳ್ಮೆಯನ್ನು ಅಪೇಕ್ಷಿಸಲಾಗುವುದಿಲ್ಲವಾದರೂ, ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾದ ಸನ್ನಿವೇಶಗಳಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಎಲ್ಲ ರೀತಿಯ ಪ್ರಯೋಗಗಳನ್ನು ಪೊಲೀಸರು ಅನುಸರಿಸಬೇಕಾಗುತ್ತದೆ. ವಿವಿಧ ರೀತಿಯ ಒತ್ತಡಗಳಿಗೆ ಬಲಿಯಾಗುವ ಪೊಲೀಸ್ ಅಧಿಕಾರಿಗಳು ತಮ್ಮ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳಬೇಕಾಗುತ್ತದೆ. ಒಂದು ರೀತಿಯಲ್ಲಿ ಪೊಲೀಸ್ ಅಧಿಕಾರಿಗಳು ತ್ರಿಶಂಕು ಸ್ಥಿತಿಯನ್ನೇ ಅನುಭವಿಸುತ್ತಾರೆಂದು ಹೇಳಬಹುದು. ಎನ್‌ಕೌಂಟರ್ ಪ್ರಕರಣಗಳಲ್ಲೂ ಇದೇ ಪ್ರವೃತ್ತಿಯನ್ನು ಕಾಣಬಹುದು. ಸಮಾಜದ ಸ್ವಾಸ್ಥ್ಯವನ್ನು ರಕ್ಷಿಸಲು ತಮ್ಮ ಜೀವವನ್ನೇ ಪಣಕ್ಕಿಡುವ ಆರಕ್ಷಕ ಪಡೆಗಳನ್ನು ರಕ್ಷಿಸುವವರಾರು ಎಂಬ ಸೂಕ್ಷ್ಮ ಪ್ರಶ್ನೆಗೆ ಉತ್ತರ ಹೇಳುವುದು ಸುಲಭ ಸಾಧ್ಯವಲ್ಲ.

ಮಾನವ ಹಕ್ಕುಗಳನ್ನು ಉಲ್ಲಂಘಿಸದೆ, ಸಮಾಜಘಾತುಕ ಶಕ್ತಿಗಳನ್ನು ಶಿಕ್ಷಿಸುವ ಪ್ರಕ್ರಿಯೆಯಲ್ಲಿ ಸರ್ಕಾರಗಳ ಹೊಣೆಗಾರಿಕೆಯೇ ಹೆಚ್ಚಾಗಿದ್ದು, ಸಾಮಾನ್ಯ ಜನತೆ ಮತ್ತು ಪೊಲೀಸ್ ಅಧಿಕಾರಿಗಳ ನಡುವೆ ಸೌಹಾರ್ದಯುತ ಸಂಬಂಧಗಳನ್ನು ನಿರ್ಮಿಸುವಲ್ಲೂ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ಎನ್‌ಕೌಂಟರ್ ಸಂಸ್ಕೃತಿಯಿಂದ ಮುಕ್ತವಾದ ಸದೃಢ, ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ಬುನಾದಿ ಹಾಕುವ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಪರಿಪೂರ್ಣಗೊಳಿಸಲು ನಾಗರಿಕ ಸಮಾಜವೂ ತನ್ನದೇ ಆದ ಕೊಡುಗೆ ನೀಡಬೇಕಾಗಿದೆ. ಆಗಲೇ ಇಶ್ರತ್ ಜಹಾನ್, ಸೊಹ್ರಾಬುದ್ದಿನ್, ಕೌಸರ್‌ಬಿ ಮುಂತಾದ ಅಮಾಯಕರ ಹತ್ಯೆಯನ್ನು ತಪ್ಪಿಸಬಹುದು. □

ಡಾ. ಬಾಲಗೋಪಾಲ್: ಅಪ್ರತಿಮ ಬುದ್ಧಿಜೀವಿ, ಅವಿಶ್ರಾಂತ ಹೋರಾಟಗಾರ, ದಮನಿತ ಜನರ ಗಟ್ಟಿದನಿ!

ಶಿವಸುಂದರ್

ಡಾ. ಕೆ. ಬಾಲಗೋಪಲ್ ಒಬ್ಬ ಪ್ರಸಿದ್ಧ ರಾಜಕಾರಣಿಯೂ ಅಲ್ಲ. ಪ್ರಸಿದ್ಧ ಚಿತ್ರ ನಟರೂ ಅಲ್ಲ. ಆದರೂ ಕಳೆದ ಅಕ್ಟೊಬರ್ 8ರ ರಾತ್ರಿ ಅವರು ಹೃದಯಾಘಾತದಿಂದ ಅವರು ನಿಧನರಾದಾಗಿನಿಂದ ಇಡಿ ಆಂಧ್ರಪ್ರದೇಶ ಕಣ್ಣೀರಿಡುತ್ತಿದೆ. ಭಾರತದ ಬಹುಪಾಲು ಪ್ರಗತಿಪರ ಬುದ್ಧಿಜೀವಿಗಳು, ಎಲ್ಲಾ ಮಾನ ಹಕ್ಕು ಹೋರಾಟಗಾರರು ಅನಿರೀಕ್ಷಿತ ಆಘಾತಕ್ಕೆ ಒಳಗಾಗಿ ತತ್ತರಿಸಿದ್ದಾರೆ. ಒಂದು ಬಗೆಯ ತಬ್ಬಲಿತನವನ್ನು ಅನುಭವಿಸುತ್ತಿದ್ದಾರೆ.

ಡಾ. ಬಾಲಗೋಪಲದ ನಿಧನದ ಬಗ್ಗೆ ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ, ಮಣಿಪುರದಿಂದ ಹಿಡಿದು ಗುಜರಾತಿನ ತನಕ ದೇಶದೆಲ್ಲೆಡೆಯ ಮಾನವ ಹಕ್ಕು ಹೋರಾಟಗಾರರು ಮತ್ತು ಪ್ರಭುತ್ವದಿಂದಲೋ, ಸಮಾಜದ ಪ್ರಭಾವಿಗಳಿಂದಲೋ ದಮನಕ್ಕೊಳಗಾದವರು ತಮ್ಮ ಸಂತಾಪವನ್ನು ಸೂಚಿಸುತ್ತಾ ಸಭೆಗಳನ್ನು ನಡೆಸುತ್ತಿ ದ್ದಾರೆ. ಕಾಶ್ಮೀರದಲ್ಲಿ "ಫ್ರೆಂಡ್ ಆಫ್ ಕಾಶ್ಮೀರ್ ಡೆಡ್" (ಕಾಶ್ಮೀರದ ಸ್ನೇಹಿತನೊಬ್ಬನ ಸಾವು) ಎಂಬ ಶೀರ್ಷಿಕೆಯಡಿ ಲೇಖನಗಳು ಪ್ರಕಟವಾಗುತ್ತಿದ್ದರೆ, ಕರ್ನಾಟಕದಲ್ಲಿ "ಪ್ರೆಂಡ್ಸ್ ಆಫ್ ಬಾಲಗೋಪಲ್" ಹೆಸರಿನಲ್ಲಿ ನಾಡಿನ ಎಲ್ಲಾ ಮಾನವ ಹಕ್ಕು ಸಂಘಟನೆಗಳು ಅವರಿಗೆ ಅಂತಿಮ ನಮನ ಸಲ್ಲಿಸುವ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ.

ಆಂಧ್ರದಲ್ಲಂತೂ ಅವರ ಅಂತಿಮ ಪಯಣದ ದಿನ ದಲಿತರು, ಅದಿವಾಸಿಗಳು, ಬೀಡಿ ಕಾರ್ಮಿಕರು, ಎಸ್.ಇ.ಜೆಡ್ ನಂಥ ತಥಾಕಥಿತ "ಅಭಿವೃದ್ಧಿ"ಯೋಜನೆಗಳಿಂದ ಸಂತ್ರಸ್ತ್ರರಾದವರು, ದೇಶದ ಪ್ರಖ್ಯಾತ ಬುದ್ಧಿಜೀವಿಗಳು ಮತ್ತು ಸಾಮಾಜಿಕ ಕಾರ್ಯಕರ್ತರು, ಹಾಗೂ ಹಲವು ರಾಜಕಾರಣಿಗಳು ಅಲ್ಲಿನ ಮಾನವ ಹಕ್ಕು ಹೋರಾಟಗಾರರೊಂದಿಗೆ ಬೆರೆತು ಡಾ. ಕೆ. ಬಾಲಗೋಪಾಲ್ ಅವರಿಗೆ ಅಂತಿಮ ನಮನ ಸಲ್ಲಿಸಿದರು. ಆಂಧ್ರದ ಎಲ್ಲಾ ಪತ್ರಿಕೆಗಳು ಬಾಲಗೋಪಲರ ಬಗ್ಗೆ ಏನಿಲ್ಲವೆಂದರೂ ಒಂದೆರಡು ಪೂರ್ತಿ ಪುಟದ ವರದಿಯನ್ನು ಲೇಖನಗಳನ್ನು ಪ್ರಕಟಿಸಿ ತಮ್ಮ ಶ್ರದ್ಧಾಂಜಲಿಯನ್ನು ವ್ಯಕ್ತಪಡಿಸಿದವು. "ಆಂಧ್ರಪ್ರಭ" ಪತ್ರಿಕೆಯಂತೂ ಅವರು ಬರೆದ ಅಂಕಣ ಬರಹಗಳ ಒಂದು ವೆಬ್‌ಸೈಟನ್ನೇ ಪ್ರಾರಂಭಿಸಿದೆ. ದೇಶದ ಗಣ್ಯಾತಿಗಣ್ಯ ಬುದ್ಧಿಜೀವಿಗಳು ಒಟ್ಟು ಸೇರಿ ಬಾಲಗೋಪಲರ ಸೆನಪಿಗೆ http//balagopal.org ಎಂಬ ಬಾಲಗೋಪಲ್ ಸ್ಮರಣ ವೆಬ್‌ಸೈಟೊಂದನ್ನೂ ಪ್ರಾರಂಭಿಸಿದ್ದಾರೆ.

ಅಧಿಕಾರಸ್ಥರನ್ನು ಹೊರತು ಪಡಿಸಿ ಎಲ್ಲಾ ಬಗೆಯ ಜನರಿಂದ ಇಂಥಾ ಅಭೂತಪೂರ್ವ ಮನ್ನಣೆ ಪಡೆದ ಡಾ. ಕೆ. ಬಾಲ ಗೋಪಾಲರಂಥ ಅಪರೂಪದ ಮತ್ತು ಅದ್ಭುತ ಮಾನವ ಹಕ್ಕು ಹೋರಾಟಗಾರನ ನಿಧನದ ವಾರ್ತೆ ಕನ್ನಡದ ಪತ್ರಿಕೆಗಳಲ್ಲಿ ಸಣ್ಣ ಸುದ್ದಿಯೂ ಆಗಲಿಲ್ಲ! ಇದು ವಿಷಾದಕರ ಮಾತ್ರವಲ್ಲ..ಕರ್ನಾಟಕದಲ್ಲಿ ಮಾನವ ಹಕ್ಕುಗಳ ಕುರಿತು ಸಾರ್ವಜನಿಕ ಪ್ರಜ್ಞೆ ಎಷ್ಟಿದೆ ಎಂಬುದಕ್ಕೆ ಸಂಕೇತವಾಗಿದೆ.

ಏಕೆಂದರೆ ಡಾ. ಕೆ. ಬಾಲಗೋಪಲರು ಬಾಳಿಬದುಕಿದ 57 ವರ್ಷಗಳಲ್ಲಿ ಹೆಚ್ಚೂ ಕಡಿಮೆ 30 ವರ್ಷಗಳಷ್ಟು ಕಾಲ ಈ ದೇಶದಲ್ಲಿ ಶೋಷಿತ ಮತ್ತು ದಮನಿತ ಜನತೆಯ ಮಾನವ ಹಕ್ಕುಗಳಿಗಾಗಿ, ಅವರ ಹೋರಾಟದ ಹಕ್ಕುಗಳಿಗಾಗಿ ಶ್ರಮಿಸಿದವರು. ಮತ್ತು ಅದಕ್ಕಾಗಿ ತಮ್ಮ ಜೀವವನ್ನು ಮತ್ತು ಜೀವನವನ್ನು ಅಕ್ಷರಶಃ ಪಣವಾಗಿಟ್ಟವರು. ಮಾನವ ಹಕ್ಕುಗಳೆಂಬ ಪರಿಕಲ್ಪನೆಯನ್ನು ಅಂತರರಾಷ್ಟ್ರೀಯ ಸೆಮಿನಾರುಗಳಿಂದ ಮತ್ತು ಎನ್.ಜಿ.ಒಗಳ ಕಂಫರ್ಟ್ ಜೋನುಗಳಿಂದ ಬಿಡುಗಡೆ ಮಾಡಿ ಶೋಷಿತ ಜನತೆಯ ನಿತ್ಯ ಬದುಕಿನ ಅಗತ್ಯಗಳಿಗೆ ಅನ್ವಯಿಸಿದವರು. ಮಾನವ ಹಕ್ಕುಗಳ ಅತ್ಯಗತ್ಯವಿರುವುದು ದೊಡ್ಡ ದೊಡ್ಡ ಭೂಮಾಲೀಕರ ಶೋಷಣೆಗೆ ಗುರಿಯಾಗಿರುವ ಜೀತದಾಳುಗಳಿಗೆ, ಸ್ಲಂ ಎತ್ತಂಗಡಿ

ಡಾ. ಬಾಲಗೋಪಲದ ನಿಧನದ ಬಗ್ಗೆ ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ, ಮಣಿಪುರದಿಂದ ಹಿಡಿದು ಗುಜರಾತಿನ ತನಕ ದೇಶದೆಲ್ಲೆಡೆಯ ಮಾನವ ಹಕ್ಕು ಹೋರಾಟಗಾರರು ಮತ್ತು ಪ್ರಭುತ್ವದಿಂದಲೋ, ಸಮಾಜದ ಪ್ರಭಾವಿಗಳಿಂದಲೋ ದಮನಕ್ಕೊಳಗಾದವರು ತಮ್ಮ ಸಂತಾಪವನ್ನು ಸೂಚಿಸುತ್ತಾ ಸಭೆಗಳನ್ನು ನಡೆಸುತ್ತಿದ್ದಾರೆ. ಕಾಶ್ಮೀರದಲ್ಲಿ "ಫ್ರೆಂಡ್ ಆಫ್ ಕಾಶ್ಮೀರ್ ಡೆಡ್" ಎಂಬ ಶೀರ್ಷಿಕೆಯಡಿ ಲೇಖನಗಳು ಪ್ರಕಟವಾಗುತ್ತಿದ್ದರೆ, ಕರ್ನಾಟಕದಲ್ಲಿ "ಪ್ರೆಂಡ್ಸ್ ಆಫ್ ಬಾಲಗೋಪಲ್" ಹೆಸರಿನಲ್ಲಿ ನಾಡಿನ ಎಲ್ಲಾ ಮಾನವ ಹಕ್ಕು ಸಂಘಟನೆಗಳು ಅವರಿಗೆ ಅಂತಿಮ ನಮನ ಸಲ್ಲಿಸುವ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ.

ಯಿಂದ ಬದುಕಿನ ಭದ್ರತೆಯನ್ನೇ ಕಳೆದುಕೊಳ್ಳುತ್ತಿರುವ ನಗರದ ಬಡವರಿಗೆ, "ಅಭಿವೃದ್ಧಿ ಯೋಜನೆ"ಗಳಿಂದ ನೆಲೆ ಕಳೆದುಕೊಳ್ಳುತ್ತಿರುವ ಆದಿವಾಸಿಗಳಿಗೆ, ಅನಾಗರೀಕ ಜಾತಿ ಶೋಷಣೆಗೆ ಬಲಿಯಾಗಿರುವ ದಲಿತರಿಗೆ, ಪುರುಷಾಧಿಪತ್ಯ ದಿಂದ ನಲುಗುತ್ತಿರುವ ಮಹಿಳೆಯರಿಗೆ, ಹಿಂದೂತ್ವ ಆಕ್ರಮಣಕ್ಕೆ ಸಿಲುಕಿ ಬದುಕುವ ಹಕ್ಕನ್ನೇ ಕಳೆದುಕೊಳ್ಳುತ್ತಿರುವ ಅಲ್ಪಸಂಖ್ಯಾತರಿಗೆ, ಭಾರತ ಪ್ರಭುತ್ವದಿಂದ ವಂಚನೆಗೆ ಗುರಿಯಾಗಿ ಸ್ವ ನಿರ್ಣಯಾಧಿಕಾರಕ್ಕೆ ಹೋರಾಡುತ್ತಿರುವ ಕಾಶ್ಮೀರಿ ಮತ್ತು ಈಶಾನ್ಯ ಭಾರತದ ರಾಷ್ಟ್ರೀಯತೆಗಳಿಗೆ ಎಂಬುದೇ ಬಾಲಗೋಪಲರ ಪ್ರತಿಪಾದನೆಯಾಗಿತ್ತು. ಸ್ವಾತಂತ್ರ್ಯ, ಸ್ವಾಭಿಮಾನ ಮತ್ತು ಸಮಾನತೆಗಾಗಿ ಹೋರಾಡುತ್ತಿರುವ ಈ ಎಲ್ಲಾ ಜನವರ್ಗಗಳ ಹೋರಾಡುವ ಹಕ್ಕನ್ನು ಕಾಪಾಡುವುದು ಮಾನವ ಹಕ್ಕುಗಳ ಕಾರ್ಯಕರ್ತರ ಅತಿದೊಡ್ಡ ಕರ್ತವ್ಯವೆಂದು ಅವರು ಭಾವಿಸಿದ್ದರು.

ಹೀಗೆ ಮಾನವ ಹಕ್ಕುಗಳ ಪರಿಕಲ್ಪನೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ದವರು ಡಾ. ಬಾಲಗೋಪಾಲ್. ಅಪಾರ ಮೇಧಾವಿಯಾಗಿದ್ದ ಬಾಲಗೋಪಾಲರು ಮಾನವ ಹಕ್ಕುಗಳ ಕಾರ್ಯಕ್ಷೇತ್ರಕ್ಕೆ ಧುಮುಕುವ ಮೊದಲು ಆಂಧ್ರ ಪ್ರದೇಶದ ವಾರಂಗಲ್‌ನಲ್ಲಿ ಗಣಿತದ ಪ್ರೊಫೆಸರ್ ಆಗಿದ್ದರು. ಅದಕ್ಕೂ ಮುನ್ನ ಗಣಿತ ಕ್ಷೇತ್ರದಲ್ಲಿ ಪೋಸ್ಟ್ ಡಾಕ್ಟೋರಲ್ ಪದವಿ ಪಡೆದಿದ್ದ ಬಾಲಗೋಪಾಲರು ಇಂಡಿಯನ್ ಸ್ಟಾಟಿಸ್ಟಿಕಲ್ ಇನ್ಸಿಟ್ಯೂಟ್ ಅನ್ನು ಸೇರಿದ್ದರು. ಆದರೆ ಅಲ್ಲಿ ತಮ್ಮ ಪ್ರಬಂಧವನ್ನು ಉಪನ್ಯಾಸಕರೊಬ್ಬರು ತಮ್ಮ ಹೆಸರಲ್ಲಿ ಪ್ರಕಟಿಸಿಕೊಂಡಿದ್ದನ್ನು ಕಂಡು ಬೇಸತ್ತು ಸದ್ದಿಲ್ಲದೆ ರಾಜೀನಾಮೆ ನೀಡಿ ವಾರಂಗಲ್‌ಗೆ ಹಿಂತಿರುಗಿದ್ದರು.

ಸಾಮಾನ್ಯವಾಗಿ ಗಣಿತದಂಥ ಅಮೂರ್ತ ವಿಜ್ಞಾನಕ್ಕೂ ಮಾನವ ಹಕ್ಕುಗಳಂಥ ಜನತೆಯ ಮೂರ್ತ ಬದುಕಿನ ವಾಸ್ತವತೆಗಳಿಗೂ ಯಾವುದೇ ನೇರ ಸಂಬಂಧವಿಲ್ಲ. ಆದರೆ ಆಂಧ್ರದ ವಾರಂಗಲ್ ಆಗ ಹೋರಾಟದ ಕುಲುಮೆಯಲ್ಲಿ ಕುದಿಯುತ್ತಿತ್ತು. ವಿದ್ಯಾರ್ಥಿಗಳು, ರೈತಾಪಿಗಳು ತಮ್ಮ ಬದುಕುವ ಹಕ್ಕಿಗಾಗಿ ಹೋರಾಡುತ್ತಿದ್ದರು. ಪೊಲೀಸರು ಅವರನ್ನು ಹಾಡು ಹಗಲಲ್ಲೇ ಕೊಂದು ಹಾಕುತ್ತಿದ್ದರು. ಇಂಥಾ ವಿದ್ಯಮಾನಗಳು ಕಣ್ಣೆದುರಿಗೇ ನಡೆಯುತ್ತಿರುವಾಗ ಬಾಲಗೋಪಾಲರಂಥ ಸಂವೇದನಾಶೀಲ ಬುದ್ಧಿಜೀವಿ ಗಣಿತದ ಪ್ರಾಧ್ಯಾಪಕರೇ ಆಗಿದ್ದರೂ ಸುಮ್ಮನಿರಲು ಸಾಧ್ಯವೇ ಇರಲಿಲ್ಲ. ಹೀಗಾಗಿ ಈಗಾಗಲೇ ಪೊಲೀಸರ ಕುಕೃತ್ಯಗಳನ್ನು ಬಯಲುಗೆಳೆಯಲು ಶ್ರಮಿಸುತ್ತಿದ್ದ "ಆಂಧ್ರಪ್ರದೇಶ ನಾಗರಿಕ ಹಕ್ಕುಗಳ ಸಮಿತಿ"ಯ (ಎಪಿಸಿಎಲ್‌ಸಿ) ಗೆ 1983ರಲ್ಲಿ ಕಾರ್ಯದರ್ಶಿಯಾದರು.

ಅಂದಿನಿಂದ ಅವರು ನಿಧನರಾಗುವ ತನಕ ಹೋರಾಟಗಾರರನ್ನು ಸುಳ್ಳು ಎನ್ಕೌಂಟರ್‌ನಲ್ಲಿ ಕೊಲ್ಲುವ ಅಮಾನುಷ ಪೊಲೀಸ್ ಕೃತ್ಯಗಳನ್ನು ಬಯಲುಗೊಳಿಸುವ ಅವರ ಹೋರಾಟ ನಿರಂತರವಾಗಿ ಮುಂದುವರೆಯಿತು. ಆಂಧ್ರದಲ್ಲಿರಲಿ, ಕರ್ನಾಟಕದಲ್ಲಿರಲಿ, ಕಾಶ್ಮೀರ-ಈಶಾನ್ಯ ಭಾರತದಲ್ಲಿರಲಿ, ಛತ್ತೀಸ್‌ಘಡ್‌ನಲ್ಲಿರಲಿ ಎಲ್ಲೇ ಭದ್ರತಾ ಪಡೆಗಳ ದಮನ ನಡೆದರೂ, ಪೊಲೀಸರು ಎಷ್ಟೇ ಭಯಾನಕ ವಾತಾವರಣ ಸೃಷ್ಟಿಸಿದ್ದರೂ ಬಾಲಗೋಪಾಲ್ ನೇತೃತ್ವದ ತಂಡ ಅಲ್ಲಿಗೆ ಭೇಟಿ ಕೊಟ್ಟು ಸಂದರ್ಭದ ಅಧ್ಯಯನ ನಡೆಸಿ ಸತ್ಯಶೋಧನಾ ವರದಿಗಳನ್ನು ಹೊರತರುತ್ತಿದ್ದರು. ಇದರಿಂದಾಗಿ ಕ್ರಮೇಣ ವಾತಾವರಣ ತಿಳಿಗೊಳ್ಳುತ್ತಿತ್ತು. ಒಂದು ಭೇಟಿಗೆ ಅವರ ಪ್ರಯತ್ನ ನಿಲ್ಲುತ್ತಲೂ ಇರಲಿಲ್ಲ. ಪ್ರತಿಬಾರಿಯೂ ಸಂದರ್ಭ ಸುಧಾರಿಸಿದೆಯೋ ಇಲ್ಲವೋ



ಬಾಲಗೋಪಾಲರು ಪೂರ್ಣಾವಧಿಯಾಗಿ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ದನಿ ಎತ್ತಲು ಪ್ರಾರಂಭಿಸಿದ ಸಂದರ್ಭ ಮಾನವ ಹಕ್ಕುಗಳ ಹೋರಾಟಗಾರರಿಗೆ ಅತ್ಯಂತ ಅಪಾಯಕಾರಿಯಾದ ಸಂದರ್ಭವಾಗಿತ್ತು. ಆಂಧ್ರದಲ್ಲಿ ನಕ್ಸಲ್ ದಮನದ ಹೆಸರಲ್ಲಿ ಮಾನವ ಹಕ್ಕು ಕಾರ್ಯಕರ್ತರ, ಇತರ ಹೋರಾಟಗಾರರ ಕಗ್ಗೊಲೆಗಳು ನಡೆಯುತ್ತಿದ್ದವು. ಗ್ರೀನ್ ಟೈಗರ್, ಪ್ರಜಾ ಬಂಧು ಇನ್ನಿತರ ಹೆಸರಲ್ಲಿ ಪೊಲೀಸರೇ ಮಾರುವೇಷದಲ್ಲಿ ಇಂಥಾ ಕಗ್ಗೊಲೆಗಳನ್ನು ಮಾಡುತ್ತಿದ್ದರು. ಇಂಥಾ ಒಂದು ಗುಂಪೇ 1993 ರಲ್ಲಿ ಬಾಲ ಗೋಪಾಲರನ್ನು ಖಮ್ಮಂನಲ್ಲಿ ಕಿಡ್ನಾಪ್ ಮಾಡಿ ಅವರ ಮೇಲೆ ಮಾರಣಾಂತಿಕ ಹಲ್ಲೆಯನ್ನೂ ನಡೆಸಿದ್ದರು. ಆದರೆ ಇವು ಯಾವುವೂ ಬಾಲಗೋಪಾಲರನ್ನು ತಮ್ಮ ಬದ್ಧತೆಯಿಂದ ಹಿಮ್ಮೆಟ್ಟಿಸಲಿಲ್ಲ.

ಎಂಬ ಫಾಲೋ ಅಪ್ ಕೂಡಾ ನಡೆಸುತ್ತಿದ್ದರು.

ಈ ಕಾರಣದಿಂದಲೇ ಕಳೆದ ಒಂದು ದಶಕದಲ್ಲಿ ಏನಿಲ್ಲವೆಂದರೂ ಏಳು ಬಾರಿ ಕಾಶ್ಮೀರಕ್ಕೂ, ಐದಾರು ಬಾರಿ ಛತ್ತೀಸ್‌ಗಡ್‌ಗೂ ಮಾನವ ಹಕ್ಕುಗಳ ತಂಡ ಭೇಟಿ ಕೊಟ್ಟಿದೆ. ಈ ತಂಡದ ಸದಸ್ಯರು ಬೇರೆಬೇರೆಯಾಗಿರುತ್ತಿದ ರಾದರೂ ಅದರ ನಾಯಕ ಮಾತ್ರ ಯಾವಾಗಲೂ ಡಾ. ಬಾಲಗೋಪಾಲ್ ಅವರೇ ಆಗಿರುತ್ತಿದ್ದರು. ಪ್ರಾಯಶಃ ಭಾರತದಲ್ಲಿ ಕಳೆದ ಎರಡು-ಮೂರು ದಶಕಗಳಲ್ಲಿ ನಡೆದಿರುವ ಪೊಲೀಸ್ ಎನ್‌ಕೌಂಟರ್‌ಗಳ ಬಗ್ಗೆ ಬಾಲಗೋಪಾಲ್ ನೇತೃತ್ವದ ಮಾನವ ಹಕ್ಕು ತಂಡಗಳು ಹೊರತಂದಷ್ಟು ಸತ್ಯಶೋಧನಾ ವರದಿಗಳನ್ನು ಬೇರೆ ಯಾರೂ ತಂದಿರಲಿಕ್ಕಿಲ್ಲ. ಆದರಿಂದಲೇ ಇಂದು ಆಂಧ್ರದಲ್ಲಿ ಮಾತ್ರವಲ್ಲ ಇಡಿ ಭಾರತದಲ್ಲಿ ಪೊಲೀಸರ ಎನ್‌ಕೌಂಟರ್‌ಗಳ ಕಟ್ಟುಕಥೆಗಳನ್ನು ಯಾರೂ ನಂಬದಂತಾಗಿದೆ. ನಾಗರಿಕ ಸಮಾಜದಲ್ಲಿ ಇಂಥಾ ಮಾನವ ಹಕ್ಕು ಮತ್ತು ನ್ಯಾಯಪ್ರಜ್ಞೆ ಬೆಳೆಸುವಲ್ಲಿ ಬಾಲಗೋಪಾಲರ ಪಾತ್ರ ಅತ್ಯಂತ ಹಿರಿದಾದದ್ದು.

ಇದರಿಂದಾಗಿಯೇ ಪೊಲೀಸರಿಗೆ ಮತ್ತು ಪ್ರಭುತ್ವಕ್ಕೆ ಅವರು ದೊಡ್ಡ ಸವಾಲಾಗಿಬಿಟ್ಟರು. ಅವರು ಹಾಕುತ್ತಿದ್ದ ಎಫ್‌ಐಆರ್‌ಗಳನ್ನು ಬಾಲಗೋಪಾಲರ ಸತ್ಯಶೋಧನಾ ವರದಿಗಳೇ ಬಯಲುಗೊಳಿಸಿ ಸೋಲಿಸುತ್ತಿದ್ದವು. ಆದ್ದರಿಂದಲೇ ಬಾಲಗೋಪಾಲರನ್ನು ಆಂಧ್ರ ಪೊಲೀಸರು ಹಲವು ಬಾರಿ ದೈಹಿಕವಾಗಿ ಮುಗಿಸಲೂ ಪ್ರಯತ್ನಿಸಿದ್ದುಂಟು. 1985ರಲ್ಲಿ ಒಮ್ಮೆ ವಿನಾಕಾರಣ ಬಂಧಿಸಿದ್ದು ಮಾತ್ರವಲ್ಲದೆ 1985ರ ನವೆಂಬರ್‌ನಲ್ಲಿ "ಭಯೋತ್ಪಾದನಾ ವಿರೋಧಿ ಕಾಯ್ದೆ-ಟಾಡಾ" ಅಡಿಯಲ್ಲೂ ಬಂಧಿಸಿ ಅವರನ್ನು ವರ್ಷಗಳ ಕಾಲ ಜೈಲಿಗೆ ದೂಡಿದ್ದರು. ಸಾಮಾನ್ಯವಾಗಿ ಇಂಥಾ ದಮನಕ್ಕೆ ಗುರಿಯಾದ ಮೇಲೆ ಬಹು ಮಧ್ಯಮ ವರ್ಗದ ಬುದ್ಧಿಜೀವಿ ಇನ್ನೆಂದೂ ಜನಹೋರಾಟಗಳ ಕಡೆ ತಿರುಗಿಯೂ ನೋಡುವುದಿಲ್ಲ. ಬದಲಿಗೆ ಹಳೆಯ ಗಾಯಗಳನ್ನು ನೆಕ್ಕಿಕೊಳ್ಳುತ್ತಾ ತಮ್ಮ ಉಳಿದ ಜೀವನವನ್ನು ಕಳೆದುಬಿಡುತ್ತಾರೆ ಅಥವಾ ಸಮಯ ಬಂದರೆ ಅದನ್ನೇ ಬಂಡವಾಳವನ್ನಾಗಿಯೂ ಮಾಡಿಕೊಳ್ಳುತ್ತಾರೆ. ಅಂಥ ಹಲವು ಜೀವಂತ ನಿದರ್ಶನಗಳು ಕರ್ನಾಟಕದಲ್ಲೂ ಇವೆ.

ಆದರೆ ಡಾ. ಬಾಲಗೋಪಾಲ್ ಸೆರೆಯಿಂದ ಹೊರಬಂದ ನಂತರ ಮಾಡಿದ ಮೊದಲ ಕೆಲಸ ತಮ್ಮ ಪ್ರೊಫೆಸರ್‌ಗಿರಿಗೆ ರಾಜೀನಾಮೆ ನೀಡಿದ್ದು! ಮತ್ತು ಪೂರ್ಣಾವಧಿ ಕಾರ್ಯಕರ್ತನಾಗಿ ಮಾನವ ಹಕ್ಕುಗಳ ಹೋರಾಟಗಾರನಾಗಿ ತೊಡಗಿಸಿಕೊಂಡಿದ್ದು. ಆ ಸಂದರ್ಭದಲ್ಲಿ ಜಸ್ಟೀಸ್

[illegible] ಅವರ ಬಗ್ಗೆ ಹೀಗೆ ಬರೆದಿದ್ದಾರೆ: "ಗಣಿತ ಕ್ಷೇತ್ರದಲ್ಲೇ ಮುಂದುವರೆದಿದ್ದರೆ ಡಾ. ಬಾಲಗೋಪಾಲರಿಗೆ ಫೀಲ್ಡ್ಸ್ ಕೂಡಾ ದೊರೆಯುತ್ತಿತ್ತೋ ಏನೋ? ಅದೇನೇ ಇರಲಿ ಗಣಿತ ಕ್ಷೇತ್ರಕ್ಕೆ ನಷ್ಟವುಂಟಾದರೂ ಮಾನವ ಹಕ್ಕುಗಳ ಕ್ಷೇತ್ರಕ್ಕೆ ದೊಡ್ಡ ಲಾಭವೇ ಆಗಿದೆ."

ಬಾಲಗೋಪಾಲರು ಪೂರ್ಣಾವಧಿಯಾಗಿ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ದನಿ ಎತ್ತಲು ಪ್ರಾರಂಭಿಸಿದ ಸಂದರ್ಭ ಮಾನವ ಹಕ್ಕುಗಳ ಹೋರಾಟಗಾರರಿಗೆ ಅತ್ಯಂತ ಅಪಾಯಕಾರಿಯಾದ ಸಂದರ್ಭವಾಗಿತ್ತು. ಆಂಧ್ರದಲ್ಲಿ ನಕ್ಸಲ್ ದಮನದ ಹೆಸರಲ್ಲಿ ಮಾನವ ಹಕ್ಕು ಕಾರ್ಯಕರ್ತರ, ಇತರ ಹೋರಾಟಗಾರರ ಕಗ್ಗೊಲೆಗಳು ನಡೆಯುತ್ತಿದ್ದವು. ಗ್ರೀನ್ ಟೈಗರ್, ಪ್ರಜಾ ಬಂಧು ಇನ್ನಿತರ ಹೆಸರಲ್ಲಿ ಪೊಲೀಸರೇ ಮಾರುವೇಷದಲ್ಲಿ ಇಂಥಾ ಕಗ್ಗೊಲೆಗಳನ್ನು ಮಾಡುತ್ತಿದ್ದರು. ಇಂಥಾ ಒಂದು ಗುಂಪೇ 1993ರಲ್ಲಿ ಬಾಲಗೋಪಾಲರ್‌ನ್ನು ಖಮ್ಮಂನಲ್ಲಿ ಕಿಡ್ನಾಪ್ ಮಾಡಿ ಅವರ ಮೇಲೆ ಮಾರಣಾಂತಿಕ ಹಲ್ಲೆಯನ್ನೂ ನಡೆಸಿದ್ದರು. ಆದರೆ ಇವು ಯಾವುವೂ ಬಾಲಗೋಪಾಲರನ್ನು ತಮ್ಮ ಬದ್ಧತೆಯಿಂದ ಹಿಮ್ಮೆಟ್ಟಿಸಲಿಲ್ಲ.

1997ರಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಅಯೋಗದ (NHRC) ಎದಿರು ಅವರು ಮತ್ತು ಪ್ರಖ್ಯಾತ ವಕೀಲ ಕನ್ನಾಭೀರನ್ ಮಂಡಿಸಿದ ವಾದದಿಂದಾಗಿಯೇ ಪೊಲೀಸರ ಎನ್‌ಕೌಂಟರ್‌ಗಳ ಮೇಲೆ ನಿಯಂತ್ರಣ ಹೇರುವಂಥ ನಿರ್ದೇಶನವನ್ನು NHRC ಯಿಂದ ಪಡೆದುಕೊಂಡರು. ಅದರ ಪ್ರಕಾರ ಪೊಲೀಸರು ನಡೆಸುವ ಎನ್‌ಕೌಂಟರ್‌ಗಳ ಸಂದರ್ಭದಲ್ಲಿ ಎದುರಾಳಿಗಳ ಸಾವು ಸಂಭವಿಸಿದಲ್ಲಿ ಅದರಲ್ಲಿ ಪಾಲ್ಗೊಂಡ ಪೊಲೀಸರ ಮೇಲೆ ಕೊಲೆ ಮೊಕದ್ದಮೆ ದಾಖಲಿಸಬೇಕು. ಅದು ಸ್ವರಕ್ಷಣೆಗಾಗಿ ತಾವು ಮಾಡಿದ ದಾಳಿ ಎಂದು ರುಜುವಾತಾದ ನಂತರವೇ ಅವರಿಗೆ ಮತ್ತೆ ಪೊಲೀಸ್ ಅಧಿಕಾರ ಮರಳಿ ದಕ್ಕುತ್ತದೆ. ಇಂದು ಈ ನಿರ್ದೇಶನಕ್ಕೆ ಸುಪ್ರೀಂಕೋರ್ಟು ತಡೆಯಾಜ್ಞೆ ನೀಡಿದೆಯಾದರೂ ಅದು ಜಾರಿಯಲ್ಲಿದ್ದಷ್ಟು ಕಾಲ ಅಮಾಯಕರ ಪ್ರಾಣಹರಣ ಮಾಡದಂತೆ ಪೊಲೀಸರನ್ನು ಸ್ವಲ್ಪವಾದರೂ ಹದ್ದುಬಸ್ತಿನಲ್ಲಿಟ್ಟಿತ್ತು ಎಂಬುದೂ ನಿಜವೇ.

ತಮ್ಮ ಈ ಹೋರಾಟದ ಪ್ರಯಾಣದಲ್ಲಿ ಬಾಲಗೋಪಾಲರು ಹತ್ತು ಹಲವು ಬಾರಿ ಕರ್ನಾಟಕಕ್ಕೂ ಭೇಟಿ ನೀಡಿದ್ದಾರೆ. 2003ರಲ್ಲಿ ಮಲೆನಾಡಿನಲ್ಲಿ ಪಾರ್ವತಿ – ಹಾಜಿಮಾ ಎನ್‌ಕೌಂಟರ್ ನಡೆದಾಗ, ದೀನ್‌ದಾರ್ ಅಂಜುಮಾನ್ ಮೇಲಿನ ನಿಷೇಧದ ಪ್ರಕರಣದಲ್ಲಿ ಮತ್ತು ಇತ್ತೀಚೆಗೆ ಕರಾವಳಿಯಲ್ಲಿ ನಡೆದ ಚರ್ಚ್ ಮೇಲಿನ ದಾಳಿಯ ಸಂದರ್ಭಗಳಲ್ಲಿ ಅಖಿಲ ಭಾರತೀಯ ಸತ್ಯ ಶೋಧನಾ ತಂಡದ ಭಾಗವಾಗಿ ಅವರು ಕರ್ನಾಟಕಕ್ಕೆ ಭೇಟಿ ನೀಡಿದ್ದರು. ಅಲ್ಲದೇ ಈ ನಾಡಿನ ಹಲವು ವಿಶ್ವವಿದ್ಯಾಲಯಗಳಲ್ಲಿ, ಮಾನವ ಹಕ್ಕುಗಳ ಕಾರ್ಯಕರ್ತರ ಶಿಬಿರಗಳಲ್ಲಿ ಭಾಗವಹಿಸಿ ಮಾನವ ಹಕ್ಕು ಮತ್ತು ಸಮಾಜ ಬದಲಾವಣೆಯ ಬಗ್ಗೆ ತಮ್ಮ ಅತ್ಯದ್ಭುತ ವಿಶ್ಲೇಷಣೆಯ ಮೂಲಕ ಮತ್ತು ಮಾರ್ಕ್ಸ್‌ವಾದಿ ಎನ್ನಬಹುದಾದ ತಾತ್ವಿಕ ನೆಲಗಟ್ಟಿನಲ್ಲಿ ಉಪನ್ಯಾಸಗಳನ್ನು ನೀಡಿ ಎಲ್ಲರ ಅರಿವಿನ ಎತ್ತರವನ್ನು ಹೆಚ್ಚಿಸಿದ್ದರು.

ಅಷ್ಟು ಮಾತ್ರವಲ್ಲ. ಅವರು ಕೋರ್ಟನ್ನೂ ತಮ್ಮ ಹೋರಾಟದ ಕಣವಾಗಿ ಮಾಡಿಕೊಳ್ಳಲು ನಿರ್ಧರಿಸಿದ ಮೇಲೆ ವಕೀಲಿ ಪದವಿಯನ್ನು ಪಡೆದದ್ದೂ ಸಹ ಬೆಂಗಳೂರಿನಲ್ಲೆ.

ಭಾರತ ಸರ್ಕಾರದ ಯೋಜನಾ ಅಯೋಗ "ನಕ್ಸಲ್ ಹಿಂಸೆಯ ಮೂಲಗಳ" ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಲು ನೇಮಕವಾಗಿದ್ದ ಸಮಿತಿಯಲ್ಲಿ ಬಾಲಗೋಪಾಲರು ಸದಸ್ಯರಾಗಿದ್ದರು. ಈ ಸಮಿತಿಯು ನಕ್ಸಲ್ ಹಿಂಸೆಯನ್ನು ಪ್ರಭುತ್ವ ದಮನದ ಮೂಲಕ ಹತ್ತಿಕ್ಕುವುದನ್ನು ಸಾರಾಸಗಟಾಗಿ ವಿರೋಧಿಸಿದೆಯಲ್ಲದೆ ನಕ್ಸಲರ ಹಿಂಸಾತ್ಮಕ ಹೋರಾಟವನ್ನು ಅನಿವಾರ್ಯ ಮಾಡಿದ ದೇಶದ ಊಳಿಗಮಾನ್ಯ ಪದ್ಧತಿಯನ್ನು ನಿವಾರಿಸಿದ ಪ್ರಭಸತ್ವವನ್ನೇ ಅದಕ್ಕೆ ಹೊಣೆಯನ್ನಾಗಿಸಿದೆ. ಹಾಗೂ ನಕ್ಸಲ್ ಹೋರಾಟದಿಂದ ರೈತಾಪಿ ಜನತೆಗೆ ಊಳಿಗಮಾನ್ಯ ಶೋಷಣೆಯಿಂದ ವಿಮುಕ್ತಿ ಸಿಕ್ಕಿರುವುದನ್ನು ಮರೆಯಬಾರದೆಂದು ಎಚ್ಚರಿಸಿದೆ, ಹೀಗಾಗಿ ನಕ್ಸಲ್ ಹೋರಾಟದ ಮೂಲ ಕಾರಣವಾದ ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯನ್ನು ಇಲ್ಲದಂತೆ ಮಾಡಲು ಕ್ರಮಗಳನ್ನು ಹಾಕಿಕೊಳ್ಳುವುದು ಮತ್ತು ನಕ್ಸಲರೊಂದಿಗೆ ಮಾತುಕತೆಗೆ ಮುಂದಾಗುವುದು ಅಗತ್ಯವೆಂದು ಸಲಹೆ ಮಾಡಿದೆ.

ಬಾಲಗೋಪಾಲ್‌ರು ಕೇವಲ ಒಬ್ಬ ಮಾನವ ಹಕ್ಕುಗಳ ಕಾರ್ಯಕರ್ತರಾಗಿದ್ದುದು ಮಾತ್ರವಲ್ಲ. ಒಬ್ಬ ಶ್ರೇಷ್ಠ ಚಿಂತಕರೂ ಮತ್ತು ಸಿದ್ಧಾಂತಕರ್ತರೂ ಆಗಿದ್ದರು. ತುರ್ತು ಪರಿಸ್ಥಿತಿಯ ಕಾಲದಲ್ಲಿ ಪ್ರಭುತ್ವವು ನಾಗರಿಕ ಹಕ್ಕುಗಳನ್ನು ಅಮಾನತ್ತುಗೊಳಿಸಿದ ಸಂದರ್ಭದಲ್ಲಿ ಮರುಜೀವ ಪಡೆದುಕೊಂಡ ನಾಗರಿಕ ಹಕ್ಕುಗಳ ಪರಿಕಲ್ಪನೆಯು ಬಾಲಗೋಪಾಲರು ಈ ವಲಯದಲ್ಲಿ ಕಾಲಿಡುವ ತನಕ ಹೆಚ್ಚಿನ ಸೈದ್ಧಾಂತಿಕ ಬೆಳವಣಿಗೆಯೇನೂ ಸಾಧಿಸಿರಲಿಲ್ಲ. ಆದರೆ ಬಾಲಗೋಪಾಲರು ಪ್ರಭುತ್ವ ನಡೆಸುವ ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧ ಅವಿಶ್ರಾಂತವಾಗಿ ದನಿ ಎತ್ತುತ್ತಲೇ ಕೇವಲ ನಾಗರಿಕ ಹಕ್ಕುಗಳ ಪರಿಕಲ್ಪನೆಯಿಂದ ಮಾತ್ರವೇ ಮನುಷ್ಯರ ಸಂಪೂರ್ಣ ಮಾನವ ಹಕ್ಕುಗಳ ರಕ್ಷಣೆ ಸಾಧ್ಯವಿಲ್ಲವೆಂದು ಮನಗಂಡರು.

ಏಕೆಂದರೆ ಮಾನವ ಹಕ್ಕುಗಳ ಉಲ್ಲಂಘನೆ ಕೇವಲ ಪ್ರಭುತ್ವದಿಂದ ಮಾತ್ರವಲ್ಲದೆ ಸಮಾಜದಲ್ಲಿರುವ ವರ್ಗ, ಜಾತಿ, ಲಿಂಗ ಮತ್ತು ಧರ್ಮಗಳಾಧಾರಿತ ತಾರತಮ್ಯಗಳಿಂದ ದತ್ತವಾಗುವ ಅಧಿಕಾರ ಕೇಂದ್ರಗಳಿಂದಲೂ ಸಂಭವಿಸುತ್ತದೆ ಎಂದು ಮಾನವ ಹಕ್ಕುಗಳ ಪರಿಕಲ್ಪನೆಯನ್ನು ಮತ್ತಷ್ಟು ವಿಸ್ತರಿಸಿದರು.

ಹೀಗಾಗಿ ಮಾನವ ಹಕ್ಕು ಹೋರಾಟಗಾರರು ಕೇವಲ ಪ್ರಭುತ್ವದ ವಿರುದ್ಧದ ದನಿ ಎತ್ತುವುದು ಮಾತ್ರವಲ್ಲದೆ ಸಮಾಜದೊಳಗಿರುವ ಜಾತಿ, ವರ್ಗ ಸಂಬಂಧ, ಕುಟುಂಬ, ಇನ್ನಿತ್ಯಾದಿ ರಚನೆಗಳಿಂದ ಸಂಭವಿಸುವ ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧವೂ ದನಿ ಎತ್ತಬೇಕಾಗುತ್ತದೆಂದು ಎಲ್ಲಾ ಮಾನವ ಹಕ್ಕು ಸಂಘಟನೆಗಳಿಗೂ ಮನವರಿಕೆ ಮಾಡಿಕೊಟ್ಟರು. ಹೀಗಾಗಿಯೇ ಹಿಂದುತ್ವವಾದಿ ಶಕ್ತಿಗಳು ಮತ್ತು ಜಾಗತೀಕರಣದ ಶಕ್ತಿಗಳು ಅದರ ಜನತೆಯ ಮಾನವ ಹಕ್ಕುಗಳಿಗೆ ವ್ಯವಸ್ಥಿತವಾಗಿ ಹರಣ ಮಾಡುವುದರಿಂದ ಮಾನವ ಹಕ್ಕು ಹೋರಾಟಗಾರರು ಸಹಜವಾಗಿಯೇ ಅದರ ವಿರುದ್ಧ ಹೋರಾಡಬೇಕಿತ್ತು ಎಂದು ವ್ಯಾಖ್ಯಾನ ಮಾಡಿದರು. ಈ ಸ್ಪಷ್ಟತೆ ಮಾನವ ಹಕ್ಕು ಹೋರಾಟಗಾರರಿಗೆ ಮಾತ್ರವಲ್ಲ, ಎಲ್ಲಾ ಹೋರಾಟಗಾರರಿಗೂ ಹೊಸ ಸೈದ್ಧಾಂತಿಕ ಶಕ್ತಿಯನ್ನೇ ಒದಗಿಸಿತು.

ಡಾ. ಬಾಲಗೋಪಾಲರನ್ನು ಹಿಂಸೆ ಮತ್ತು ಅಹಿಂಸೆಯ ಬಗೆಗಿನ ಚರ್ಚೆಗಳಲ್ಲೂ ವಿಶೇಷವಾಗಿ ನೆನಸಿಕೊಳ್ಳಲಾಗುತ್ತದೆ. ಸಾಮಾಜಿಕ ಬದಲಾವಣೆಯ ಹೋರಾಟಗಳಲ್ಲಿ ಅದರಲ್ಲೂ ನಕ್ಸಲೀಯ ಹೋರಾಟಗಳು ಬಳಸುವ ಹಿಂಸೆಯನ್ನು ಮಾನವ ಹಕ್ಕುಗಳ ಕಾರ್ಯಕರ್ತರು ಹೇಗೆ ಎದುರಾಗಬೇಕೆಂಬ ಬಗ್ಗೆ ಕೇವಲ ನೇಪಥ್ಯದಲ್ಲಿ ನಡೆಯುತ್ತಿದ್ದ ಚರ್ಚೆಯನ್ನು ಬಾಲಗೋಪಾಲ್ ಅವರು ಮುನ್ನೆಲೆಗೆ ತಂದರು. ಅದರ ಬಗ್ಗೆ ಅವರ ಅಂತಿಮ ದಿನಗಳಲ್ಲಿ ತಳೆದ ನಿಲುವು ಮೊದಲಿಗಿಂತ ಹೆಚ್ಚು ಸಮತೋಲನದಿಂದ ಕೂಡಿರುವುದು ನಿಜವಾದರು ಪ್ರಾರಂಭದಲ್ಲಿ ಅದು ಅಷ್ಟು ಸ್ಪಷ್ಟವಾಗಿರಲಿಲ್ಲ.

ಯಾವುದೇ ಹೋರಾಟಗಾರರು ಅದರಲ್ಲೂ ಮುಖ್ಯವಾಗಿ ಮಾವೋವಾದಿಗಳು ತಮ್ಮ ಸಂಘರ್ಷದ ಭಾಗವಾಗಿ ನಡೆಸುವ ಹಿಂಸೆ ಅವರ ಉನ್ನತ ಉದ್ದೇಶಗಳ ಕಾರಣಕ್ಕಾಗಿಯೇ ಸಮರ್ಥನೀಯವಾಗಿ ಬಿಡುವುದಿಲ್ಲ ಮತ್ತು ಹಲವು ಬಾರಿ ಅವರು ನಡೆಸುವ ಬುದ್ಧಿಗೇಡಿ ಹಿಂಸೆಗಳು ಸಾಮಾನ್ಯ ಜನರ ಮೇಲೆ ಪ್ರಭುತ್ವ ಸೃಷ್ಟಿಸುವ ಭೀಭತ್ಸ ಪರಿಣಾಮವನ್ನೇ ಉಂಟುಮಾಡುತ್ತದಾದ್ದರಿಂದ ಆ ಹಿಂಸೆಯೂ ಖಂಡನೀಯ ಎಂಬುದು ಅವರ ಪ್ರಾರಂಭಿಕ ನಿಲುವಾಗಿತ್ತು. ಈ ನಿಲುವಿಗಾಗಿ ಅವರು ಹಲವಾರು ಸ್ನೇಹಿತರ ವೈಮನಸ್ಯವನ್ನೂ ಕಟ್ಟಿಕೊಳ್ಳಬೇಕಾಯಿತು. ಆ ಭಿನ್ನಾಭಿಪ್ರಾಯಗಳ ಬೆನ್ನಲ್ಲೇ ಎಪಿಸಿಎಲ್‌ಸಿಯಿಂದ ಹೊರಬಂದು "ಮಾನವ ಹಕ್ಕುಗಳ ವೇದಿಕೆ" ಯನ್ನು ಪ್ರಾರಂಭಿಸಿದರು.

ಆದರೆ ಇದರ ಬಗೆಗೆ ತಮ್ಮ ಪ್ರಾರಂಭಿಕ ನಿಲುವುಗಳಲ್ಲಿ ಇರಬಹುದಾದ ಕೆಲವು ಅತಿರೇಕಗಳನ್ನು ಬಹಳ ಬೇಗನೇ ಬಾಲಗೋಪಾಲ್ ಅವರು ಅರ್ಥ ಮಾಡಿಕೊಂಡರು. ತಮ್ಮ ನಿಲುವುಗಳು ಜನರ ಹೋರಾಟಗಳ ವಾಸ್ತವತೆಗಳ ಅರಿವೇ ಇಲ್ಲದಂಥ "ರೋಮ್ಯಾಂಟಿಕ್ ಅಹಿಂಸಾವಾದ"ವಾಗಿಬಿಡುವ ಅಪಾಯವನ್ನೂ ಅವರು ಮನಗಂಡಿದ್ದರು. ಹೀಗಾಗಿಯೇ ಹಿಂಸಾತ್ಮಕ ಹೋರಾಟಗಳನ್ನು ಅನಿವಾರ್ಯ ಮಾಡುವ ಪ್ರಭುತ್ವ ಹಿಂಸೆಯ ಬಗೆಗೆ ಮಾನವ ಹಕ್ಕು ಹೋರಾಟಗಾರರು ತಮ್ಮ ಪ್ರಧಾನ ಗಮನವನ್ನು ಕೇಂದ್ರೀಕರಿಸುವುದು ಉಚಿತವೆಂದು ಅವರು ಇತ್ತೀಚಿನ ವರ್ಷಗಳಲ್ಲಿ ಕಂಡುಕೊಂಡಿದ್ದರು.

ಅದೇ ರೀತಿ ಒಂದು ಆದರ್ಶ ಸಮಾಜವನ್ನು ಆಶ

ಯವಾಗುಳ್ಳ ಹಿಂಸಾತ್ಮಕ ಹೋರಾಟಗಳು ತಮ್ಮ ಆಚರಣೆಯಲ್ಲೂ ಅಂಥಾ ಆದರ್ಶವನ್ನು ಪಾಲಿಸಬೇಕೆಂಬುದು ಅವರ ಆಗ್ರಹವಾಗಿತ್ತು. ಹಿಂಸಾತ್ಮಕ ಹೋರಾಟಗಳಾಗಲೀ ಈ ಜಾಗತೀಕರಣದ ಕಾಲಘಟ್ಟದಲ್ಲಿ ಸರ್ಕಾರದ ಯಾವುದೇ ಜನ ವಿರೋಧಿ ನೀತಿಗಳನ್ನು ಅಮೂಲಾಗ್ರವಾಗಿ ಹಿಮ್ಮೆಟ್ಟಿಸುವಲ್ಲಿ ವಿಫಲವಾಗುತ್ತಿರುವುದೇಕೆ ಎಂಬುದರ ಬಗ್ಗೆ ಅವರು ಸದಾ ಕಳವಳಗೊಳ್ಳುತ್ತಲೇ ಪರ್ಯಾಯ ಹೋರಾಟ ಮಾರ್ಗವೇನಿರಬಹುದೆಂಬ ವಿಶ್ಲೇಷಣೆಯಲ್ಲಿ ತೊಡಗಿರುತ್ತಿದ್ದರು. ವಿಪರ್ಯಾಸವೆಂದರೆ ಜನರ ಬದುಕು ಮತ್ತು ಹೋರಾಟಗಳೊಡನೆ ಯಾವುದೇ ಸಾವಯವ ಸಂಬಂಧವಿರದ ಕರ್ನಾಟಕದ ಹಲವು ಬುದ್ಧಿಜೀವಿಗಳು ಬಾಲಗೋಪಾಲರು ಮುಂದಿಟ್ಟಿರುವ ಈ ಸಮಸ್ಯಾತ್ಮಕ ಸಂದರ್ಭವನ್ನು ಅರ್ಥವೇ ಮಾಡಿಕೊಳ್ಳದೆ ಅವರನ್ನು ನಕ್ಸಲ್ ಬೆಂಬಲಿಗ ಎಂಬ ಹಣೆಪಟ್ಟಿಯನ್ನೇ ಕಟ್ಟಿಬಿಟ್ಟಿದ್ದರು.

ಭಾರತ ಸರ್ಕಾರದ ಯೋಜನಾ ಆಯೋಗ "ನಕ್ಸಲ್ ಹಿಂಸೆಯ ಮೂಲಗಳ" ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಲು ನೇಮಕವಾಗಿದ್ದ ಸಮಿತಿಯಲ್ಲಿ ಬಾಲಗೋಪಾಲರು ಸದಸ್ಯರಾಗಿದ್ದರು. ಈ ಸಮಿತಿಯು ನಕ್ಸಲ್ ಹಿಂಸೆಯನ್ನು ಪ್ರಭುತ್ವ ದಮನದ ಮೂಲಕ ಹತ್ತಿಕ್ಕುವುದನ್ನು ಸಾರಾಸಗಟಾಗಿ ವಿರೋಧಿಸಿದೆಯಲ್ಲದೆ ನಕ್ಸಲರ ಹಿಂಸಾತ್ಮಕ ಹೋರಾಟವನ್ನು ಅನಿವಾರ್ಯ ಮಾಡಿದ ದೇಶದ ಊಳಿಗಮಾನ್ಯ ಪದ್ಧತಿಯನ್ನು ನಿವಾರಿಸಿದ ಪ್ರಭುತ್ವವನ್ನೇ ಅದಕ್ಕೆ ಹೊಣೆಯನ್ನಾಗಿಸಿದೆ.

ಹಾಗೂ ನಕ್ಸಲ್ ಹೋರಾಟದಿಂದ ರೈತಾಪಿ ಜನತೆಗೆ ಊಳಿಗಮಾನ್ಯ ಶೋಷಣೆಯಿಂದ ವಿಮುಕ್ತಿ ಸಿಕ್ಕಿರುವುದನ್ನು ಮರೆಯಬಾರದೆಂದು ಎಚ್ಚರಿಸಿದೆ. ಹೀಗಾಗಿ ನಕ್ಸಲ್ ಹೋರಾಟದ ಮೂಲ ಕಾರಣವಾದ ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯನ್ನು ಇಲ್ಲದಂತೆ ಮಾಡಲು ಕ್ರಮಗಳನ್ನು ಹಾಕಿಕೊಳ್ಳುವುದು ಮತ್ತು ನಕ್ಸಲರೊಂದಿಗೆ ಮಾತುಕತೆಗೆ ಮುಂದಾಗುವುದು ಅಗತ್ಯವೆಂದು ಸಲಹೆ ಮಾಡಿದೆ. ಆದರೆ ಇಂದು ಯುಪಿಎ ಸರ್ಕಾರ ಈ ಎಲ್ಲಾ ಸಲಹೆಗಳ ಬಗ್ಗೆ ಏನೂ ಗಮನ ಹರಿಸದೆ "ನಕ್ಸಲ್ ದಮನ"ದ ಹೆಸರಲ್ಲಿ ಸ್ವತಂತ್ರ ಭಾರತದ ಇತಿಹಾಸದಲ್ಲೇ ಕಂಡರಿಯದ ರಕ್ತಪಾತಕ್ಕೆ ಮುಂದಾಗುತ್ತಿದೆ. ಪ್ರಭುತ್ವ ದಮನ ಸಂವಿಧಾನವನ್ನು ಗಾಳಿಗೆ ತೂರುತ್ತಿರುವ ಈ ಸಂದರ್ಭದಲ್ಲಿ ಡಾ. ಬಾಲಗೋಪಾಲ್ ನಿಧನರಾಗಿರುವುದು ದೇಶದ ಮಾನವ ಹಕ್ಕುಗಳ ಸಂರಕ್ಷಣೆಗೆ ಅತಿ ದೊಡ್ಡ ನಷ್ಟವನ್ನುಂಟು ಮಾಡಿದೆ.

ಅದೇನೇ ಇದ್ದರೂ ಬಾಲಗೋಪಾಲ್ ಮಾತ್ರ ನುಡಿದಂತೆ ನಡೆದವರು. ಬಾಲಗೋಪಾಲರ ಸರಳ ಜೀವನ ಬೆರಗು ಹುಟ್ಟಿಸುವಂತದ್ದು. ಯೂನಿವರ್ಸಿಟಿ ಅಧ್ಯಾಪಕನಾಗುವುದೇ ಜೀವನದ ಪರಮ ಧ್ಯೇಯವಾಗಿಬಿಡುತ್ತಿರುವ ಈ ಸಂದರ್ಭದಲ್ಲಿ ಇದ್ದ ಪ್ರೊಫೆಸರ್‌ಗಿರಿಯನ್ನೂ ಮತ್ತು ತಮ್ಮ ಅಕೆಡಿಮಿಕ್ ವಿದ್ವತ್ತು ಕೊಡಮಾಡಬಹುದಾಗಿದ್ದ ಎಲ್ಲಾ ಸುಖ ಸೌಕರ್ಯಗಳನ್ನು ಬಾಲಗೋಪಾಲ್ ಶೋಷಿತ ಜನತೆಯ ಮಾನವ ಹಕ್ಕುಗಳಿಗಾಗಿ ಹೋರಾಡಲು ಬಿಟ್ಟುಕೊಟ್ಟರು. ಮತ್ತು ಅದನ್ನು ದೊಡ್ಡತ್ಯಾಗವೆಂಬಂತೆ ಬಣ್ಣಿಸುವುದನ್ನು ಅಸಹ್ಯಿಸಿಕೊಳ್ಳುತ್ತಿದ್ದರು. ಅದು ಭಾರತದ ಸಂದರ್ಭದಲ್ಲಿ ಒಬ್ಬ ಬುದ್ಧಿಜೀವಿ ಮಾಡಬೇಕಾದ ಕರ್ತವ್ಯ ಎಂದು ಬಗೆಯುತ್ತಿದ್ದರು.

ಅವರ ಬಾಳಸಂಗಾತಿ ವಸಂತಲಕ್ಷ್ಮಿ ಸಹ ಪತ್ರಕರ್ತರು ಮತ್ತು ಮಾನವ ಹಕ್ಕುಗಳ ಬಗೆಗೆ ಕಾಳಜಿ ಉಳ್ಳವರಾಗಿದ್ದರು. ಅವರ ಒಬ್ಬನೇ ಮಗ ಪ್ರಭಾತ್ ಈಗ ಪಿಯುಸಿ ವಿದ್ಯಾರ್ಥಿ. ಹೀಗೆ ಸಂಸಾರಸ್ಥರಾದರೂ ವಕೀಲಿ ವೃತ್ತಿ ಪ್ರಾರಂಭಿಸಿದ ಮೇಲೆ, ಬಡ ಮತ್ತು ಶೋಷಿತ ಜನತೆಯ ವಕೀಲರಾದ, ಅವರು ಹಲವಾರು ಕೇಸುಗಳನ್ನು ಫೀಸಿಲ್ಲದೆ ನಡೆಸುತ್ತಿದರು. ಏಕೆಂದರೆ ಅವರು ತಿಂಗಳಿಗೆ ಮೂರು ಸಾವಿರಕ್ಕಿಂತ ಹೆಚ್ಚಿನ ಆದಾಯ ಅಗತ್ಯವಾಗದಂತೆ ತಮ್ಮ ಸ್ವಂತ ಖರ್ಚನ್ನು ಸೀಮಿತಗೊಳಿಸಿಕೊಂಡಿದ್ದರು. ಇದು ನಮ್ಮ ನಡುವಿನಲ್ಲಿ ಇರುವ ಹಲವು ಯಾವುದೇ ಬಾಯಿಬಡುಕ ಗಾಂಧಿವಾದಿ ಬುದ್ಧಿಜೀವಿಗಳ ಬದುಕಿನ ಶೈಲಿಗೆ ಹೋಲಿಸಿಕೊಂಡರೆ ಎಷ್ಟು ಸರಳವಾದದ್ದು ಎಂದು ಯಾರಿಗಾದರೂ ಅರ್ಥವಾಗುತ್ತದೆ.

ವಕೀಲಿ ವೃತ್ತಿ ಪ್ರಾರಂಭಿಸಿದ ಮೇಲೆ ವಾರದ ಪ್ರತಿ ಶನಿವಾರ ಮತ್ತು ಭಾನುವಾರಗಳನ್ನು ಯಾವುದಾದರೂ ಸತ್ಯ ಶೋಧನೆಗೆ ಅಥವಾ ಕಾರ್ಯಕ್ರಮಗಳಿಗೆ ಹಾಜರಾಗಲು ಮೀಸಲಿಡುತ್ತಿದ್ದರು. ಕೋರ್ಟಿನ ರಜಾ ವೇಳೆಯಲ್ಲಿ ಇನ್ನಿತರ ಮಾನವ ಹಕ್ಕು ಸಂಘಟನೆಗಳೊಡಗೂಡಿ ಛತ್ತೀಸ್‌ಘಡ್, ಕಾಶ್ಮೀರ, ಈಶಾನ್ಯ ಭಾರತ ಇನ್ನಿತ್ಯಾದಿ ಕಡೆಗಳಲ್ಲಿ ವಾರಗಟ್ಟಲೆ ಸಂಚರಿಸಿ ಪ್ರಭುತ್ವ ದಮನದ ಬಗ್ಗೆ ಜನ ಜಾಗೃತಿ ಮೂಡಿಸುತ್ತಿದ್ದರು.

ಹೀಗಾಗಿ ಮುಂದೆ ಬಾಲಗೋಪಾಲ್ ಎಂಬ ವ್ಯಕ್ತಿ ನಮ್ಮೊಡನೆ ಇದ್ದರು ಎಂಬುದನ್ನೇ ಮುಂದಿನ ಪೀಳಿಗೆ ಆಶ್ಚರ್ಯಪಡಬಹುದಾದಂಥ ಅಧ್ಭುತ ಮತ್ತು ಅಪರೂಪದ ವ್ಯಕ್ತಿ ಡಾ. ಬಾಲಗೋಪಾಲ್. ಸಾಮಾನ್ಯವಾಗಿ "ತುಂಬಲಾಗದ ನಷ್ಟ" ಎಂಬುದು ಕ್ಲೀಷೆಯಾಗಿಬಿಟ್ಟಿರುವ ಮಾತು. ಆದರೆ ಡಾ.ಬಾಲಗೋಪಾಲರ ಸಾವು ಮಾತ್ರ ಅಕ್ಷರಶಃ ತುಂಬಲಾಗದ ನಷ್ಟವನ್ನೇ ಉಂಟುಮಾಡಿದೆ. ಏಕೆಂದರೆ ಈ ಜಾಗವನ್ನು ಭರ್ತಿ ಮಾಡುವ ಇನ್ನೊಬ್ಬ ವ್ಯಕ್ತಿ ಈ ಸದ್ಯಕ್ಕೆ ದೇಶದಲ್ಲಿ ಯಾರೂ ಇಲ್ಲ.

ಕೇವಲ ಅನುಕಂಪ ಅಥವಾ ಅಪರಾಧಿ ಪ್ರಜ್ಞೆ ಇವೆರಡರಲ್ಲೇ ಬಳಲುವ ಮಧ್ಯಮ ವರ್ಗದ ಪ್ರಜ್ಞಾವಂತರು ಮತ್ತು ಬುದ್ಧಿಜೀವಿಗಳು ತಮ್ಮ ದ್ವಂದ್ವಗಳನ್ನು ಮೀರಿ ದಮನಿತ ಜನರಿಗಾಗಿ ಅವರ ಮಾನವ ಹಕ್ಕುಗಳಿಗಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡರೆ ಸಮಾಜದಲ್ಲಿ ನ್ಯಾಯಪ್ರಜ್ಞೆಯನ್ನೂ, ಮಾನವೀಯತೆಯನ್ನು ಉಳಿಸಲು ಎಂಥಾ ದೊಡ್ಡ ಕೊಡುಗೆಗಳನ್ನು ನೀಡಬಹುದೆಂಬುದಕ್ಕೆ ಡಾ. ಬಾಲಗೋಪಾಲ್ ಉದಾಹರಣೆ. ಬಾಲಗೋಪಾಲರ ಅಕಾಲಿಕ ಸಾವು ಅವರು ನೀಡಿದ ಪ್ರಜ್ಞೆಯ ಕಾವನ್ನು ಕಡಿಮೆ ಮಾಡದಂತೆ ನೋಡಿಕೊಳ್ಳುವುದೇ ಅವರಿಗೆ ನಾವು ನೀಡಬಹುದಾದ ಅತಿ ದೊಡ್ಡ ಶ್ರದ್ಧಾಂಜಲಿ. □

ಬಾಲಗೋಪಾಲ್ ಅವರ ಬಾಳಸಂಗಾತಿ ವಸಂತಲಕ್ಷ್ಮಿ ಸಹ ಪತ್ರಕರ್ತರು ಮತ್ತು ಮಾನವ ಹಕ್ಕುಗಳ ಬಗೆಗೆ ಕಾಳಜಿ ಉಳ್ಳವರಾಗಿದ್ದರು. ಅವರ ಒಬ್ಬನೇ ಮಗ ಪ್ರಭಾತ್ ಈಗ ಪಿಯುಸಿ ವಿದ್ಯಾರ್ಥಿ. ಹೀಗೆ ಸಂಸಾರಸ್ಥರಾದರೂ ವಕೀಲಿ ವೃತ್ತಿ ಪ್ರಾರಂಭಿಸಿದ ಮೇಲೆ, ಬಡ ಮತ್ತು ಶೋಷಿತ ಜನತೆಯ ವಕೀಲರಾದ, ಅವರು ಹಲವಾರು ಕೇಸುಗಳನ್ನು ಫೀಸಿಲ್ಲದೆ ನಡೆಸುತ್ತಿದರು. ಏಕೆಂದರೆ ಅವರು ತಿಂಗಳಿಗೆ ಮೂರು ಸಾವಿರಕ್ಕಿಂತ ಹೆಚ್ಚಿನ ಆದಾಯ ಅಗತ್ಯವಾಗದಂತೆ ತಮ್ಮ ಸ್ವಂತ ಖರ್ಚನ್ನು ಸೀಮಿತಗೊಳಿಸಿಕೊಂಡಿದ್ದರು. ಇದು ನಮ್ಮ ನಡುವಿನಲ್ಲಿ ಇರುವ ಹಲವು ಯಾವುದೇ ಬಾಯಿಬಡುಕ ಗಾಂಧಿವಾದಿ ಬುದ್ಧಿಜೀವಿಗಳ ಬದುಕಿನ ಶೈಲಿಗೆ ಹೋಲಿಸಿಕೊಂಡರೆ ಎಷ್ಟು ಸರಳವಾದದ್ದು ಎಂದು ಯಾರಿಗಾದರೂ ಅರ್ಥವಾಗುತ್ತದೆ.

ಲೋಹಿಯಾ ಲೋಕ ಗ್ರಹಿಕೆಯ ನೆಲೆಗಳು

ಡಿ. ಎಸ್. ನಾಗಭೂಷಣ

ಡಾ|| ರಾಮಮನೋಹರ ಲೋಹಿಯಾ ಅವರ ಜನ್ಮ ಶತಮಾನೋತ್ಸವವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಏಕೆ ಆಚರಿಸುತ್ತಿದೆ ಎಂದು ನಿಮ್ಮಲ್ಲಿ ಕೆಲವರಿಗಾದರೂ ಆಶ್ಚರ್ಯವಾಗಿರಬಹುದು. ಇನ್ನು ಈ ವಿಚಾರ ಸಂಕಿರಣದ 'ಲೋಹಿಯಾ ಮತ್ತು ಕನ್ನಡ ಸಾಹಿತ್ಯ' ಎಂಬ ವಿಷಯ ಕೂಡಾ ಇಂತಹವರಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿರಬಹುದು. ರಾಜಕಾರಣಿ ಲೋಹಿಯಾಗೂ ಕನ್ನಡ ಸಾಹಿತ್ಯಕ್ಕೂ ಏನು ಸಂಬಂಧ ಎಂಬ ಕುತೂಹಲ ಇವರಲ್ಲಿ ಉಂಟಾಗಿರಬಹುದು. ಆದರೆ ಲೋಹಿಯಾ ಅವರ ರಾಜಕಾರಣದ ವಿವಿಧ ಮಗ್ಗಲುಗಳನ್ನು ಮತ್ತು ಅವರ ವ್ಯಕ್ತಿತ್ವದ ಬಹುಮುಖ ವಿಸ್ತರಣೆಗಳನ್ನು ಬಲ್ಲವರಿಗೆ, ಇಂತಹ ಯಾವ ಆಶ್ಚರ್ಯವೂ ಉಂಟಾಗಲಾರದು ಮತ್ತು ಇಂತಹ ಯಾವುದೇ ಪ್ರಶ್ನೆ ಏಳಲಾರದು ಎಂದು ನಾನು ಭಾವಿಸಿದ್ದೇನೆ.

ಗಾಂಧೀಜಿಯ ನಿಕಟ ಅನುಯಾಯಿಗಳಲ್ಲೊಬ್ಬರಾಗಿದ್ದ ಹೀರಾಲಾಲರ ಮಗನಾಗಿ ಲೋಹಿಯಾ, ಪರೋಕ್ಷವಾಗಿ ಗಾಂಧಿ ಪ್ರಭಾವದಲ್ಲೇ ಬೆಳೆದವರು. ಅವರು ತಮ್ಮ 22ನೇ ವಯಸ್ಸಿನಲ್ಲಿ, ಕಳೆದ ಶತಮಾನದ ಮೂರನೇ ದಶಕದಲ್ಲಿ ಜರ್ಮನಿಯ ವಿಶ್ವವಿದ್ಯಾಲಯವೊಂದರಿಂದ ರಾಜಕೀಯ ಶಾಸ್ತ್ರದಲ್ಲಿ ಡಾಕ್ಟೊರೇಟ್ ಪಡೆದು ಭಾರತಕ್ಕೆ ಹಿಂದಿರುಗಿದಾಗ, ಅವರ ಮುಂದೆ ಆಧುನಿಕ ಜಗತ್ತಿನ ಉನ್ನತ ಹುದ್ದೆಗಳ ಮತ್ತು ಸುಖ ಬದುಕಿನ ವಿಫುಲ ಸಾಧ್ಯತೆಗಳು ತೆರೆದಿದ್ದವು. ಆದರೆ ಅವರು ರಾಷ್ಟ್ರೀಯ ಹೋರಾಟಕ್ಕೆ ತಮ್ಮ ಬದುಕನ್ನು ಮುಡಿಪಾಗಿಡಲು ನಿರ್ಧರಿಸಿದರು. ಅದರ ಭಾಗವಾಗಿ ಅನೇಕ ಬಂಧನಗಳಿಗೆ ಒಳಗಾದರು, ಲಾಹೋರ್ ಕೋಟೆ ಸೆರೆಮನೆಯಲ್ಲಿ ತಿಂಗಳುಗಟ್ಟಲೆ ಚಿತ್ರಹಿಂಸೆಯನ್ನು ಅನುಭವಿಸಿದರು.

ಕಾಂಗ್ರೆಸ್ ಆಂದೋಲನದ ತತ್ವ ಮತ್ತು ಹೋರಾಟಗಳನ್ನು ರೂಪಿಸುವಲ್ಲಿ ತಮ್ಮದೇ ಸೃಜನಶೀಲ ಪಾತ್ರ ವಹಿಸುವ ಮೂಲಕ ಗಾಂಧೀಜಿಯ ಗಮನ ಸೆಳೆದರು. ಹಾಗಾಗಿ ಗಾಂಧೀಜಿಯವರೊಂದಿಗೆ ನಿಕಟ ಮತ್ತು ಆತ್ಮೀಯ ಸಂಬಂಧ ಸಾಧ್ಯವಾದ ಅಂದಿನ ಬಹಳಷ್ಟು ಹೋರಾಟಗಾರರಂತೆ, ಕಾರ್ಯಕರ್ತರಂತೆ, ಲೋಹಿಯಾ ರಾಜಕಾರಣವನ್ನು ಅಧಿಕಾರದ ಲೌಕಿಕ ಸಾಧನವನ್ನಾಗಿ ಮಾತ್ರ ನೋಡದೆ, ಬದುಕಿನ ಅರ್ಥದ ಅನ್ವೇಷಣೆಯ ಅಧ್ಯಾತ್ಮಿಕ ಸಾಧನವನ್ನಾಗಿ ರೂಪಿಸಿಕೊಂಡರು. ಅವರಿಗೆ ರಾಜಕಾರಣವೆನ್ನುವುದು ತಮ್ಮ ಬದುಕಿನ ಅರ್ಥಪೂರ್ಣ ವಿಸ್ತರಣೆಯೇ ಆಗಿತ್ತು. ಹಾಗಾಗಿಯೇ, ಇದರ ಭಾಗವಾಗಿ ಅವರು ರೂಪಿಸಿದ ಸಮಾಜವಾದ, ಆಗ ಜಗತ್ತಿನಲ್ಲಿ ಬಹು ಪ್ರಚಲಿತವಿದ್ದ ಮತ್ತು ರಾಜಕೀಯವಾಗಿ ಪ್ರಭಾವಯುತವೂ ಆಗಿದ್ದ ಮಾರ್ಕ್ಸವಾದಕ್ಕಿಂತ ಮೂಲಭೂತವಾಗಿ ಭಿನ್ನವಾಗಿತ್ತು.

ಲೋಹಿಯಾ ಗಾಂಧಿ ಪ್ರಭಾವಕ್ಕೆ ಒಳಗಾಗಿದ್ದರೂ, ಅವರು ಅದನ್ನು ಇಡಿಯಾಗಿ ಒಪ್ಪಲಿಲ್ಲ. ಆದ್ದರಿಂದಲೇ ಅವರು ತಮ್ಮನ್ನು ಮತ್ತು ತಮ್ಮ ಸಮಾಜವಾದಿ ಗೆಳೆಯರನ್ನು ಬಂಡಾಯ ಗಾಂಧಿವಾದಿಗಳು ಎಂದು ಕರೆದುಕೊಂಡರು. ಮನುಷ್ಯನ ಉದ್ಧಾರದ, ಬಿಡುಗಡೆಯ ನಿಜವಾದ ನೆಲೆ ನೈತಿಕತೆ ಎನ್ನುವ ಗಾಂಧೀವಾದದ ನಂಬಿಕೆಯನ್ನು ಅವರು ಇಡಿಯಾಗಿ ಒಪ್ಪಲಿಲ್ಲ. ಹಾಗೇ ಆ ನೆಲೆ ಮೂಲಭೂತವಾಗಿ ಆರ್ಥಿಕವಾದದ್ದು ಎನ್ನುವ ಮಾರ್ಕ್ಸವಾದಿ ನಂಬಿಕೆಯನ್ನೂ ಅವರು ಪೂರ್ಣವಾಗಿ ಒಪ್ಪಲಿಲ್ಲ. ಮುಖ್ಯವಾಗಿ ಅವರು ಈ ಆರ್ಥಿಕತೆ ಮತ್ತು ನೈತಿಕತೆಗಳ ಮಧ್ಯೆ ದ್ವಂದ್ವವಿದೆ ಮತ್ತು ಇವೆರಡರ ದ್ವಂದ್ವಶಕ್ತಿಯಿಂದಲೇ ಇತಿಹಾಸ ರೂಪಿತವಾಗುತ್ತದೆ ಎಂದು ಹೇಳುವ ದ್ವಂದ್ವಮಾನ ಭೌತವಾದವನ್ನೇ ಅವರು ಪ್ರಶ್ನಿಸಿದರು.

ಲೋಹಿಯಾ ಗಾಂಧಿ ಪ್ರಭಾವಕ್ಕೆ ಒಳಗಾಗಿದ್ದರೂ, ಅವರು ಅದನ್ನು ಇಡಿಯಾಗಿ ಒಪ್ಪಲಿಲ್ಲ. ಆದ್ದರಿಂದಲೇ ಅವರು ತಮ್ಮನ್ನು ಮತ್ತು ತಮ್ಮ ಸಮಾಜವಾದಿ ಗೆಳೆಯರನ್ನು ಬಂಡಾಯ ಗಾಂಧಿವಾದಿಗಳು ಎಂದು ಕರೆದುಕೊಂಡರು. ಮನುಷ್ಯನ ಉದ್ಧಾರದ, ಬಿಡುಗಡೆಯ ನಿಜವಾದ ನೆಲೆ ನೈತಿಕತೆ ಎನ್ನುವ ಗಾಂಧೀವಾದದ ನಂಬಿಕೆಯನ್ನು ಅವರು ಇಡಿಯಾಗಿ ಒಪ್ಪಲಿಲ್ಲ. ಹಾಗೇ ಆ ನೆಲೆ ಮೂಲಭೂತವಾಗಿ ಆರ್ಥಿಕವಾದದ್ದು ಎನ್ನುವ ಮಾರ್ಕ್ಸ್‌ವಾದಿ ನಂಬಿಕೆಯನ್ನೂ ಅವರು ಪೂರ್ಣವಾಗಿ ಒಪ್ಪಲಿಲ್ಲ. ಮುಖ್ಯವಾಗಿ ಅವರು ಈ ಆರ್ಥಿಕತೆ ಮತ್ತು ನೈತಿಕತೆಗಳ ಮಧ್ಯೆ ದ್ವಂದ್ವವಿದೆ ಮತ್ತು ಇವೆರಡರ ದ್ವಂದ್ವಶಕ್ತಿಯಿಂದಲೇ ಇತಿಹಾಸ ರೂಪಿತವಾಗುತ್ತದೆ ಎಂದು ಹೇಳುವ ದ್ವಂದ್ವಮಾನಭೌತವಾದವನ್ನೇ ಅವರು ಪ್ರಶ್ನಿಸಿದರು.



ರಾಮ್‌ಮನೋಹರ ಲೋಹಿಯಾ



ಮೋಹನ್‌ದಾಸ್ ಕರಮ್ ಚಂದ್ ಗಾಂಧಿ

ಗಾಂಧಿಯವರ ನೈತಿಕ ಮೂಲಭೂತವಾದ ದಂತೆಯೇ ಮಾರ್ಕ್ಸ್‌ನ ಆರ್ಥಿಕ ಮೂಲಭೂತವಾದವೂ ಮನುಷ್ಯನ ಬಿಡುಗಡೆ ಅಥವಾ ಉದ್ಧಾರಕ್ಕೆ ಸಮರ್ಥ ಹಾಗೂ ಸಂಪೂರ್ಣ ತಾತ್ವಿಕ ಸಾಧನವಾಗಲಾರದು ಎಂದು ಲೋಹಿಯಾ ಭಾವಿಸಿದರು. ಈ ಭೌತ-ಅಭೌತ ಅಥವಾ ವಸ್ತು-ಚೈತನ್ಯ(Matter and Spirit), ಮತ-ಮತಾತೀತತೆ, ವರ್ತಮಾನ-ಭವಿಷ್ಯ, ವ್ಯಕ್ತಿ-ಸಮಾಜ, ರೊಟ್ಟಿ ಮತ್ತು ಸ್ವಾತಂತ್ರ್ಯ ಇತ್ಯಾದಿ ದ್ವಂದ್ವ ಜೋಡಿಗಳೆಲ್ಲವೂ ಆಧುನಿಕ ನಾಗರೀಕತೆಯ ಸೃಷ್ಟಿಗಳು, ಅದರ ಆಲೋಚನಾ ಕ್ರಮದಿಂದಾಗಿ ಕಲ್ಪಿತವಾದವು ಎಂದು ವಿಶ್ಲೇಷಿಸಿದರು. ಅವರ ಪ್ರಕಾರ ಸ್ವಾತಂತ್ರ್ಯವಿಲ್ಲದ ರೊಟ್ಟಿ, ರುಚಿ ಇಲ್ಲದ ರೊಟ್ಟಿಯಾಗಿ ಸತ್ವಹೀನವಾಗಿರುತ್ತದೆ. ಹಾಗಾಗಿ ಅದು ಪೂರ್ಣಾರ್ಥದಲ್ಲಿ ಅದು ರೊಟ್ಟಿಯೇ ಅಲ್ಲ.

ಇಂತಹ ವಿಶ್ಲೇಷಣೆಯ ಭಾಗವಾಗಿ ಅವರ ಸಂಸ್ಕೃತಿಯ ಕಲ್ಪನೆ ಮೂಡಿಬಂತು. ಹಾಗಾಗಿಯೇ ಅವರಿಗೆ ಭಾರತ ಗಾಂಧೀಜಿಗೆ ಕಂಡಂತೆ ಆಕ್ರಮಣಗಳಿಂದಾಗಿಯಷ್ಟೇ ಸತ್ವಹೀನವಾಗಿದ್ದಂತೆ ಅಥವಾ ಅಡಗಿ ಹೋಗಿರುವ ಸುಪ್ತ ಪ್ರತಿಭೆಯ ಆಗರವಾಗಿಯಾಗಲೀ ಕಾಣಲಿಲ್ಲ. ಹಾಗೇ, ಮಾರ್ಕ್ಸ್‌ನಿಗೆ ಕಂಡಂತೆ ಹಾವು-ಕಪಿಗಳನ್ನು ಪೂಜಿಸುವಂತಹ ಮೌಢ್ಯ ಮತ್ತು ಹಿಂದುಳಿದಿರುವಿಕೆಯ ಹಾಳು ಕೊಂಪೆಯಂತಾಗಲೀ ಕಾಣಲಿಲ್ಲ. ಬದಲಾಗಿ ಅದು ಅಲ್ಲಲ್ಲಿ ಸುಂದರ ತಾವರೆಗಳು ಅರಳಿರುವ ಕೊಳಚೆಯಾದ ಕೊಳದಂತೆ ಕಂಡಿತು. ಆ ಕೊಳಚೆ ಆ ಕೊಳದ್ದೇ, ಅಲ್ಲೇ ಉತ್ಪತ್ತಿಯಾದದ್ದು. ಯಾರೋ ಹೊರಗಿನಿಂದ ತಂದು ಹಾಕಿದ್ದಲ್ಲ. ಹಾಗಾಗಿ ಭಾರತದ ಸಂಸ್ಕೃತಿ ಎಂದರೆ, ಸದ್ವಿಚಾರ ಮತ್ತು ಸದಾಚಾರಗಳ ಸ್ಫಟಿಕ ಶುದ್ಧ ಆಕೃತಿಯಲ್ಲ. ಅದು ಎಲ್ಲ ಒಳಿತು-ಕೆಡುಕುಗಳೂ, ಎಲ್ಲ ವಿಕೃತಿ ಮತ್ತು ಸೌಂದರ್ಯಗಳೂ ಒಟ್ಟಿಗೆ ಇರಬಲ್ಲ ಲೋಳೆ ಲೋಳೆಯಾದಂತಹ ಒಂದು ವಸ್ತು!

ಹಾಗಾಗಿಯೇ ಇಲ್ಲಿ ಎಲ್ಲವೂ ಭಗವಂತನ ಕೃಪೆಯ ರೂಪದಲ್ಲಿ ಇದ್ದು, ಸಮಾನವಾಗಿಯೇ ಇವೆ ಎಂಬ ಅತ್ಯುನ್ನತ ಚಿಂತನದಿಂದ ಹೊರಹೊಮ್ಮಿದ ಸತ್ಯದ ನೋಟ ಸಾಧ್ಯವಾಗಿದೆ. ಆದರೆ ಅದೇ ಸಮಯದಲ್ಲಿ ಈ ನೋಟ ಪಾರಮಾರ್ಥಿಕ ಸತ್ಯ ಮತ್ತು ವ್ಯಾವಹಾರಿಕ ಸತ್ಯವಾಗಿಯೂ ಒಡೆದುಹೋಗಿ, ಈ ಸಮಾನತೆಯನ್ನು ವ್ಯಾವಹಾರಿಕ ನೆಲೆಯಲ್ಲಿ ಒಪ್ಪದ ವ್ಯವಸ್ಥೆಯೊಂದು ಇಲ್ಲಿ ನಿರ್ಮಾಣಗೊಂಡಿದೆ. ಹಾಗಾಗಿ, ಸಮಾನತೆಯನ್ನು ಒಂದು ಪಾರಮಾರ್ಥಿಕ ಸತ್ಯವಾಗಿ ಹೇಳುವ ನಾಲಗೆಯುಳ್ಳ ದೇಹದ ಕೈಗಳೇ ವ್ಯಾವಹಾರಿಕ ಸತ್ಯದ ಸಮರ್ಥನೆಗಾಗಿ, ನಿಶ್ಚಿಂತೆಯಿಂದ ಕೊಲೆಯನ್ನೂ ಮಾಡಬಲ್ಲುದಾಗಿದೆ. ಇದರ ಮುಂದುವರಿಕೆಯಾಗಿಯೇ ಈ ಆಧುನಿಕ ಯುಗದಲ್ಲಿ, ಬೆಳಿಗ್ಗೆ ಎದ್ದು ಚರಕದ ಮಂತ್ರ ಹೇಳುವ ಮನುಷ್ಯನೇ ಮಧ್ಯಾಹ್ನ ಗಿರಣಿಯ ಸ್ವಿಚ್ಚನ್ನೂ ಒತ್ತಬಲ್ಲವನಾಗಿದ್ದಾನೆ, ಸಂಜೆಗೆ ದೊಡ್ಡ ಅಣೆಕಟ್ಟುಗಳ ಅಡಿಗಲ್ಲನ್ನೂ ಹಾಕಬಲ್ಲವನಾಗಿದ್ದಾನೆ ಎಂದು ಲೋಹಿಯಾ ಹೇಳುತ್ತಾರೆ.

ಹೀಗೆ ಬುಡದಿಂದ ಒಡೆದು ಹೋದ ಮನಸ್ಸನ್ನು ಒಗ್ಗೂಡಿಸಿ ಕಟ್ಟಬೇಕಾದ ಸಂಸ್ಕೃತಿಗೆ ಆಧಾರ, ಒಟ್ಟಿಗೇ ಲೌಕಿಕ ಮತ್ತು ಪಾರಮಾರ್ಥಿಕ ಅರ್ಥಗಳೆರಡನ್ನೂ ಹೊಂದಿರುವ ಸಮಾನತೆಯ ತತ್ವವೇ ಆಗಿರಬೇಕೆಂಬುದು ಅವರ ವಿಶಿಷ್ಟ ಹೊಳಹಾಗಿದ್ದಿತು. ಹಾಗಾಗಿ ಅವರ ಸಂಸ್ಕೃತಿಯ ಕಲ್ಪನೆ ಕೇವಲ ಜೀವನ ಮಟ್ಟದ ಕಲ್ಪನೆಗೆ ಸಂಬಂಧಿಸಿರದೆ, ಜೀವನವನ್ನು ಗ್ರಹಿಸುವ ಬಗೆಗೂ ಸಂಬಂಧಿಸಿತ್ತು. ಜೀವನವನ್ನು ಕೈಗಳು ಮಾತ್ರ ಕಟ್ಟುತ್ತಿರುವುದಿಲ್ಲ;

ಕಾಲ ಪ್ರವಾಹದಲ್ಲಿ ಪ್ರತಿಯೊಂದು ಕ್ಷಣವೂ, ಕ್ಷಣಿಕ ಅಂದರೆ ಸೀಮಿತ ಕಾಲ ಬಿಂದುವಾಗಿ ನಮಗೆ ಅನುಭವಕ್ಕೆ ಬರುವಂತೆಯೇ; ಅನಂತದ ಅನುಭವವನ್ನೂ ಸೃಷ್ಟಿಸಬಲ್ಲುದು. ಜಗತ್ತಿನಲ್ಲಿ ಯಾವುದೇ ಒಂದನ್ನು ವಸ್ತುವನ್ನಾಗಿ, ಅಂದರೆ ಅದರ ಭೌತಿಕ ಸ್ವರೂಪದಲ್ಲಿ ನೋಡಿದಾಗ, ಅದು ಅದರ ಕ್ಷಣಿಕ ರೂಪವಾಗಿ ನಮಗೆ ಕಂಡು, ನಮ್ಮ ಅರಿವಿನಿಂದ ಮರೆಯಾಗುತ್ತದೆ. ಆದರೆ ಅದನ್ನು ಒಂದು ವಿದ್ಯಮಾನವನ್ನಾಗಿ, ಅಂದರೆ ಅದರ ಉತ್ಪತ್ತಿಯೊಂದಿಗೆ ನೋಡಿದಾಗ, ಅದು ಅದರ ಅನಂತದ ರೂಪದಲ್ಲಿ ನಮ್ಮನ್ನು ಕಾಡತೊಡಗುತ್ತದೆ. ಹಾಗಾಗಿ ಜಗತ್ತು ಅರಿವಿನ ಈ ಎರಡೂ ನೆಲೆಗಳಲ್ಲಿ ಕಟ್ಟಲ್ಪಡುತ್ತಿದೆ. ಅಂದರೆ ಕ್ಷಣಿಕ ಜಗತ್ತಿನ ಭೌತಿಕ ಆಸ್ತಿಯೊಡನೆಯೇ, ಅನಂತ ಜಗತ್ತಿನ ಆದಿಭೌತಿಕ ಆಸ್ತಿಯೂ ತನ್ನ ಸಾಂಸ್ಕೃತಿಕ ರೂಪಗಳಲ್ಲಿ ಅದರೊಡನೆ ಅಭಿನ್ನವಾಗಿ ಬೆರೆತು ಸೃಷ್ಟಿಯಾಗಿರುತ್ತದೆ.

ಕಟ್ಟುತ್ತಿರುವ ಆ ಕೈಗಳ ಜೊತೆಗೇ ಇನ್ನೊಂದು ನೆಲೆಯಲ್ಲಿ ಆತನ ಮನಸ್ಸು ಆ ಕಟ್ಟುವಿಕೆಯ ವಿನ್ಯಾಸವನ್ನು, ಅದರ ಅನನ್ಯತೆಯನ್ನು ನಿಯಂತ್ರಿಸುತ್ತಿರುತ್ತದೆ ಎಂದು ಅವರು ಪ್ರತಿಪಾದಿಸಿದರು. ಅಂದರೆ ಮನುಷ್ಯನ ಯಾವುದೇ ಕೆಲಸದಲ್ಲಿ ಹೊರಗಿನ ಒತ್ತಡಗಳಷ್ಟೇ ಅಲ್ಲ, ಒಳಗಿನ ಸ್ಫೂರ್ತಿಗಳೂ ಕೆಲಸ ಮಾಡುತ್ತಿರುತ್ತವೆ. ಇದು, ವಸ್ತು-ಚೈತನ್ಯಗಳೆರಡೂ ಒಟ್ಟಿಗೇ ಅಭಿನ್ನವಾಗಿ ಕ್ರಿಯಾಶೀಲವಾಗುವ, ಮನುಷ್ಯನ ನಿಜವಾದ ಸೃಜನಶೀಲತೆಯ ಮೂಲ. ಹೀಗೆ, ಮನುಷ್ಯ ಇತಿಹಾಸದ ವಾಸ್ತವ ಪರಿಧಿಗಳಲ್ಲಿ, ಕಟ್ಟುಗಳಲ್ಲಿ ಬದುಕಲು ಹೆಣಗುತ್ತಿರುವಾಗಲೇ, ಇತಿಹಾಸದ ಆಚೆಯ ಅತಿವಾಸ್ತವದಲ್ಲೂ ಬದುಕಲು ಹವಣಿಸುತ್ತಿರುತ್ತಾನೆ ಎಂಬುದು ಅವರ ಮುಖ್ಯ ಮಾತು. ಹೀಗಾಗಿ ವರ್ತಮಾನವೆಂಬುದು ಒಂದು ಕಲ್ಪನೆಯೇ. ಮನುಷ್ಯ ನಿಜವಾಗಿ ಇರುವುದು ಈ ಎಲ್ಲ ಕಲ್ಪನೆಗಳಾಚೆಯೇ. ಮನುಷ್ಯನ ಇರವಿನ ಈ ನೆಲೆಯನ್ನೂ ಗುರುತಿಸದ, ಮಾನ್ಯ ಮಾಡದ ಇತಿಹಾಸ ಪ್ರಜ್ಞೆ, ಮನುಷ್ಯನನ್ನು ಕ್ರಾಂತಿಯ ಒಂದು ಸಾಧನವನ್ನಾಗಿ ಪರಿಗಣಿಸಬಲ್ಲದೇ ಹೊರತು, ಅವನನ್ನು ಅದರ ಅಂತಿಮ ಗುರಿಯನ್ನಾಗಿ ಗ್ರಹಿಸಲಾರದು ಎಂಬುದು ಅವರ ಕಾಣ್ಕೆಯಾಗಿತ್ತು. ಇದೇ ಭೌತವಾದಿ ನಾಗರೀಕತೆಯಾಗಿ ಕಟ್ಟಲ್ಪಡುತ್ತಿರುವ ಆಧುನಿಕ ನಾಗರೀಕತೆಯ ಅಂತಿಮ ದುರಂತಕ್ಕೆ ಕಾರಣವೂ ಆಗಬಹುದು ಎಂಬುದು ಅವರ ಆತಂಕ ಕೂಡಾ ಆಗಿತ್ತು.

ಹೀಗಾಗಿ ಅವರ ಕಾಲದ ಬಹು ದೊಡ್ಡ ರಾಜಕೀಯ ಸ್ಫೂರ್ತಿಯಾಗಿದ್ದ ಮತ್ತು ಈಗಲೂ ನಮ್ಮ ನಡುವಿನ ಬಹಳ ಜನ ಬುದ್ಧಿಜೀವಿಗಳಿಗೆ ತಾತ್ವಿಕ ಸ್ಫೂರ್ತಿಯಾಗಿರುವ ಮಾರ್ಕ್ಸ್‌ವಾದ ನಂಬಿದ್ದಂತೆ, ಮನುಷ್ಯನ ಆರ್ಥಿಕ ನೆಲೆಗಟ್ಟು ಅಥವಾ ಉತ್ಪಾದನಾ ಕ್ರಮವೇ ಬದುಕಿನ ಮೂಲ ನೆಲಗಟ್ಟು; ಅದನ್ನವಲಂಬಿಸಿ ಅಥವಾ ಅದು ನಿರ್ದೇಶಿಸಿದಂತೆಯೇ ಅವನ ಸಾಂಸ್ಕೃತಿಕ ನೆಲೆಗಟ್ಟು, ಅಂದರೆ ಅವನ ಕಾಲದ ಕಲೆ, ಧರ್ಮ, ಸಾಹಿತ್ಯ, ಸಂಗೀತ, ಶಿಲ್ಪಗಳು ರೂಪು ಪಡೆಯುತ್ತವೆ ಎಂಬುದನ್ನು ಒಪ್ಪಲು ಅವರು ನಿರಾಕರಿಸಿದರು. ಅಂದರೆ ಎಲ್ಲ ಅಭೌತವೂ, ಭೌತ ಪ್ರಪಂಚದ ಪ್ರತಿಬಿಂಬ ಅಥವಾ ಪರೋಕ್ಷ ಸೃಷ್ಟಿ ಎನ್ನುವುದನ್ನು ಅವರು ಅಲ್ಲಗೆಳೆದರು. ಭೌತ ಅಭೌತಗಳೆರಡೂ ಒಂದೇ ಕಾಲದಲ್ಲಿ ಪರಸ್ಪರ ಪ್ರಭಾವದಿಂದ ಜಗತ್ತನ್ನು ಕಾಣಿಸುತ್ತಾ, ಬದುಕನ್ನು ರೂಪಿಸುತ್ತಾ ಹೋಗುತ್ತದೆ ಎಂದು ಅವರು ನಂಬಿದ್ದರು.

ಕಾಲ ಪ್ರವಾಹದಲ್ಲಿ ಪ್ರತಿಯೊಂದು ಕ್ಷಣವೂ, ಕ್ಷಣಿಕ ಅಂದರೆ ಸೀಮಿತ ಕಾಲಬಿಂದುವಾಗಿ ನಮಗೆ ಅನುಭವಕ್ಕೆ ಬರುವಂತೆಯೇ; ಅನಂತದ ಅನುಭವವನ್ನೂ ಸೃಷ್ಟಿಸಬಲ್ಲುದು. ಜಗತ್ತಿನಲ್ಲಿ ಯಾವುದೇ ಒಂದನ್ನು ವಸ್ತುವನ್ನಾಗಿ, ಅಂದರೆ ಅದರ ಭೌತಿಕ ಸ್ವರೂಪದಲ್ಲಿ ನೋಡಿದಾಗ, ಅದು ಅದರ ಕ್ಷಣಿಕ ರೂಪವಾಗಿ ನಮಗೆ ಕಂಡು, ನಮ್ಮ ಅರಿವಿನಿಂದ ಮರೆಯಾಗುತ್ತದೆ. ಆದರೆ ಅದನ್ನು ಒಂದು ವಿದ್ಯಮಾನವನ್ನಾಗಿ, ಅಂದರೆ ಅದರ ವ್ಯುತ್ಪತ್ತಿಯೊಂದಿಗೆ ನೋಡಿದಾಗ, ಅದು ಅದರ ಅನಂತದ ರೂಪದಲ್ಲಿ ನಮ್ಮನ್ನು ಕಾಡತೊಡಗುತ್ತದೆ.

ಹಾಗಾಗಿ ಜಗತ್ತು ಅರಿವಿನ ಈ ಎರಡೂ ನೆಲೆಗಳಲ್ಲಿ ಕಟ್ಟಲ್ಪಡುತ್ತಿದೆ. ಅಂದರೆ ಕ್ಷಣಿಕ ಜಗತ್ತಿನ ಭೌತಿಕ ಆಸ್ತಿಯೊಡನೆಯೇ, ಅನಂತ ಜಗತ್ತಿನ ಆದಿಭೌತಿಕ ಆಸ್ತಿಯೂ ತನ್ನ ಸಾಂಸ್ಕೃತಿಕ ರೂಪಗಳಲ್ಲಿ ಅದರೊಡನೆ ಅಭಿನ್ನವಾಗಿ ಬೆರೆತು ಸೃಷ್ಟಿಯಾಗಿರುತ್ತದೆ. ಒಂದರಿಂದ ಅಥವಾ ಒಂದರ ನಂತರ ಇನ್ನೊಂದಲ್ಲ. ಒಂದರೊಳಗೊಂದು. ಲೋಹಿಯಾ ಗಾಂಧೀಜಿ ಕುರಿತು ಆಡಿದ ಈ ಮಾತು ಅವರ ಈ ಲೋಕದೃಷ್ಟಿಯನ್ನು ಸೂಕ್ಷ್ಮವಾಗಿ ಹಿಡಿದಿಡುತ್ತದೆ: 'ದೇವರು ಮತ್ತು ಹೆಣ್ಣು, ಪ್ರಾಯಶಃ ಇವೆರಡೇ ಬದುಕಿನ ಉದ್ದೇಶಗಳು ಎಂದು ನಾನೊಮ್ಮೆ ಹೇಳಿದ್ದೆ. ದೇವರನ್ನು ನಾನು ಕಂಡಿಲ್ಲ, ಹೆಣ್ಣು ಏಕೋ ನನಗೆ ಎಟುಕಿಲ್ಲ. ಆದರೆ ದೇವರು ಮತ್ತು ಹೆಣ್ಣು ಈ ಎರಡರ ಮಿಂಚುಗಳನ್ನೂ ಒಟ್ಟಿಗೇ ಪ್ರಕಾಶಿಸುತ್ತಿದ್ದ ಮನುಷ್ಯನನ್ನು ಕಾಣುವ ಸೌಭಾಗ್ಯ ನನ್ನದಾಗಿತ್ತು. ಆತ ಕಣ್ಮರೆಯಾದಂದಿನಿಂದ ಆ ಪ್ರಕಾಶದ ನೆನಪು ಗಾಢವಾಗಿ ನನ್ನನ್ನು ಕಲಕುತ್ತಿದೆ. ಜೊತೆಗೆ ಅಂತಹ ಪ್ರಕಾಶದ ಅನ್ವೇಷಣೆ ನನ್ನಲ್ಲಿ ಹೊಸದಾಗಿ ಆರಂಭವಾಗಿದೆ'

ಇಲ್ಲಿಯೇ ಲೋಹಿಯಾ, ಸಮೂಹದೊಳಗಿನ ಮನುಷ್ಯ ಕೆಲ ಕ್ಷಣಗಳಾದರೂ ಅದರಿಂದ ಕಳಚಿಕೊಂಡು ತನ್ನ ಖಾಸಗೀತನದಲ್ಲಿ ವಿಹರಿಸಲು, ತನ್ನನ್ನು ತಾನು ಹೊಸದಾಗಿ ಮಾಡಿಕೊಳ್ಳಲು, ನೋಡಿಕೊಳ್ಳಲು ತುಡಿಯುವ ಅವನ ನೈಸರ್ಗಿಕ ಹಕ್ಕನ್ನೂ, ಅದನ್ನು ಕಾಪಾಡುವ ಅಗತ್ಯವನ್ನೂ ಎತ್ತಿ ಹೇಳುವುದು. 1) ಮನುಷ್ಯ ಇಡಿಯಾಗಿ ಇತಿಹಾಸದಡಿಯಲ್ಲಿಯೇ, ಅದರ ಸ್ವಯಂಸಿದ್ಧ ನಿಯಮಗಳ ಪ್ರಕಾರವೇ ಬದುಕುತ್ತಾ ಬಂದಿದ್ದಲ್ಲಿ, ವರ್ಗ ಸಮಾನವಾದ ಆರ್ಥಿಕ ತುಡಿತಗಳ ಪ್ರೇರಣೆಗಳಿಂದಲೇ ಬದುಕುವಂತಾಗಿದ್ದರೆ, ಸಾಮಾನ್ಯರು, ಬಡವರು, ಶೋಷಿತರು ಅಥವಾ ಅವಮಾನಿತರು ಎಂದು ವರ್ಗೀಕರಿಸಬಹುದಾದ

ಸಮುದಾಯ ಕೇವಲ ಅಷ್ಟೋ ಇಷ್ಟೋ ತಿಂದು ಭೋಗಿಸುತ್ತಾ, ಪ್ರಾಣಿಗಳಂತಷ್ಟೇ ಬದುಕುವ ಖಂಡನೆಗೆ ಒಳಗಾಗುತ್ತಿದ್ದರು. ಆದರೆ ಅವರು ದೊಡ್ಡ ಪ್ರಮಾಣದಲ್ಲಿ ಮತ್ತು ಅಷ್ಟೇ ದೊಡ್ಡ ರೀತಿಯಲ್ಲಿ ಸೃಜನಶೀಲರೂ ಆಗಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಅವರು ಇತಿಹಾಸದುದ್ದಕ್ಕೂ ಧರ್ಮ, ಸಂಸ್ಕೃತಿ, ಕಲೆ, ಸಾಹಿತ್ಯ, ಶಿಲ್ಪ, ಸಂಗೀತ ಇತ್ಯಾದಿಗಳಿಗೆ ದೊಡ್ಡ ಕೊಡುಗೆಗಳನ್ನು ಸಲ್ಲಿಸುತ್ತಲೇ ಬಂದಿದ್ದಾರೆ. ವರ್ಗ ಔದಾಸೀನ್ಯತೆಗಳ ನಡುವೆಯೂ ಬದುಕನ್ನು ತಮ್ಮ ಮಿತಿಗಳಲ್ಲೇ ಸಹ್ಯ ಮತ್ತು ಸಂತೋಷಕರ ಮಾಡಿಕೊಂಡು ಇತಿಹಾಸದ ವಿರುದ್ಧ ತಿರುಗಿ ಬೀಳುವ ಶಕ್ತಿಯನ್ನು ಅವರು ಕ್ರೋಢೀಕರಿಸಿಕೊಂಡಿದ್ದಾರೆ.

ಹಾಗಾಗಿ ಜಗತ್ತಿನಲ್ಲಿ ವರ್ಗ ಹೋರಾಟಗಳೇನಾದರೂ ಸಂಭವಿಸಿ ಕ್ರಾಂತಿಯಾಗಿದ್ದರೆ, ಅದಕ್ಕೆ ಅವುಗಳ ಹಿಂದೆ ಬಹಿರಂಗ ರೂಪದ ತತ್ಕಾಲೀನ ಆರ್ಥಿಕ ಕಾರಣಗಳಷ್ಟೇ, ಇವುಗಳಿಂದ ಪ್ರಭಾವಿತವಾಗದ ಅಂದಿನ ಮನುಷ್ಯನ ಅಂತರಂಗದ ಅವರ್ಗೀಕೃತ ಅಜ್ಞಾತ ಶಕ್ತಿಯೂ ಕಾರಣವಾಗಿದೆ. ಹಾಗಾಗಿ ಜಗತ್ತಿನ ಇತಿಹಾಸ ಮಾರ್ಕ್ಸ್ ಹೇಳಿದಂತೆ, ಕೇವಲ ವರ್ಗ ಹೋರಾಟಗಳ ಇತಿಹಾಸವಾಗದೆ, ಮನುಷ್ಯನ ಅಂತರಂಗದ ಆಳಗಳಲ್ಲಿ ನಡೆದ ಪ್ರಜ್ಞಾಸ್ಫೋಟಗಳ ಮತ್ತು ವಿಸ್ತರಣೆಗಳ ಇತಿಹಾಸವೂ ಆಗಿದೆ. ಮನುಷ್ಯನ ಖಾಸಗಿ ಕ್ಷಣಗಳ ಈ ಅಜ್ಞಾತ ಶಕ್ತಿಯ ಆಟವನ್ನು ಇತಿಹಾಸದ ಭೌತವಾದಿ ನಿರೂಪಣೆ ವಿವರಿಸಲು ಶಕ್ಯವಾಗುವುದಿಲ್ಲ.

ಉದಾಹರಣೆಗೆ ಭಾರತದ ಬಹು ದೊಡ್ಡ ಮತ್ತು ವಿಶಿಷ್ಟ ಸಾಮಾಜಿಕ ಆಂದೋಲನವೂ ಎನಿಸಿದ ಭಕ್ತಿ ಆಂದೋಲನವನ್ನು ದ್ವಂದ್ವಮಾನ ಭೌತವಾದ ಸಂಪೂರ್ಣವಾಗಿ ವಿವರಿಸಲಾರದು. ಅದು ವಿವರಿಸಲು ಯತ್ನಿಸಿದಷ್ಟೂ ಭಕ್ತಿ ಆಂದೋಲನದ ಹಿಂದಿನ ಚೈತನ್ಯವೇ ಉಡುಗಿದಂತಾಗಿ, ಅದರ ಇತಿಹಾಸ ವಿರೂಪಗೊಳ್ಳುತ್ತಾ ಹೋಗುತ್ತದಷ್ಟೆ. 2) ಲೋಹಿಯಾ ವಿಶ್ವ ಸಮಾಜವಾದಿ ಸಮ್ಮೇಳನದಲ್ಲಿ ಪ್ರತಿಪಾದಿಸಿದ ಸಪ್ತ ಕ್ರಾಂತಿಗಳಲ್ಲಿ ಮನುಷ್ಯನ ಖಾಸಗಿತನದ ಮೇಲಿನ ಆಕ್ರಮಣದ ವಿರುದ್ಧ ರಕ್ಷಣೆಯೂ ಸೇರಿತ್ತು ಎಂಬುದು ಇಲ್ಲಿ ಗಮನಾರ್ಹ.

ಬದುಕನ್ನು, ಇತಿಹಾಸವನ್ನು ಭೌತವಾದಿಯಾಗಷ್ಟೇ ನೋಡುವ ಕ್ರಮವನ್ನು ಲೋಹಿಯಾ ಹೀಗೆ ಮೂಲಭೂತವಾಗಿ ಪ್ರಶ್ನಿಸಲು ಕಾರಣವಾದದ್ದು, ಅವರು ಭಾರತದ ಬದುಕನ್ನು ತಾವು ಕಲಿತ ಪಶ್ಚಿಮದ ಶಿಕ್ಷಣದ ಕಣ್ಣಿಂದ ಅಂದಿನ ಆಧುನಿಕತಾವಾದಿಗಳಂತೆ ಸಂದೇಹದಿಂದ ನೋಡದೆ, ಗಾಂಧಿ ಸ್ಫೂರ್ತಿಯಲ್ಲಿ ಅದನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು, ಅದರ ಮೌಲ್ಯ-ನಂಬಿಕೆಗಳ ನೆಲೆಯಲ್ಲೇ ನೋಡಿ ಅದರ ಶಕ್ತಿ-ದೌರ್ಬಲ್ಯಗಳನ್ನು ಕಂಡುಕೊಂಡಿದ್ದರಿಂದಾಗಿ ಎಂದು ಕಾಣುತ್ತದೆ. ಇದಕ್ಕೆ ಅತ್ಯುತ್ತಮ ಉದಾಹರಣೆಗಳು ಅವರ 'ರಾಜಕೀಯದ ಮಧ್ಯೆ ಬಿಡುವು' ಕೃತಿಯಲ್ಲಿನ ಅನೇಕ ಲೇಖನಗಳು. ಇದು ರಾಜಕೀಯದ ಮಧ್ಯೆ ಬಿಡುವು ಅಲ್ಲ, ಇತಿಹಾಸದ ನಡುವೆ ಬಿಡುವು. ಒಂದು ರೀತಿಯಲ್ಲಿ ಇತಿಹಾಸಕ್ಕೆ ಹೇಳುವ ಧಿಕ್ಕಾರ ಕೂಡಾ! ಇಲ್ಲಿನ 'ರಾಮ, ಕೃಷ್ಣ, ಶಿವ', 'ಯೋಗದಲ್ಲಿ ಒಂದು ಅಧ್ಯಾಯ', 'ಕಲ್ಲಿನ ಮಾತು' 'ಡೆಲ್ಲಿ ಎಂದೂ ಕರೆಯುವ ದಿಲ್ಲಿ' 'ವಸಿಷ್ಠರು ಮತ್ತು ವಾಲ್ಮೀಕಿಯರು' ಇತ್ಯಾದಿ ಲೇಖನಗಳು ಯಾವುದೇ ಅತ್ಯುತ್ತಮ ಸಾಹಿತಿಯ ಬರಹಗಳಿಗೆ ಸರಿ ಸಾಟಿಯಾಗಿ ನಿಲ್ಲಬಲ್ಲವು.

'ರಾಮ, ಕೃಷ್ಣ, ಶಿವ' ಲೇಖನ ಲೋಹಿಯಾರ ರಾಜಕೀಯ ವ್ಯಕ್ತಿತ್ವದ ಎಲ್ಲ ಸಂಕೀರ್ಣತೆಗಳನ್ನೂ ಅದ್ಭುತವಾಗಿ ನಿರೂಪಿಸುವ ಒಂದು ವಿಶಿಷ್ಟ ಲೇಖನ.

ಭಾರತದ ಮನಸ್ಸು ಸೃಷ್ಟಿಸಿದ ವ್ಯಕ್ತಿತ್ವದ ಮಾದರಿಗಳನ್ನು ಶೋಧಿಸುವ ಮೂಲಕ ಅದರ ನಾಗರೀ ಕತೆಯ ಸತ್ವವನ್ನು ಅರಿಯಲು ಪ್ರಯತ್ನಿಸುವ ಈ ಲೇಖನ, ಈ ಮೂರೂ ಪುರಾಣೀಕೃತ ವ್ಯಕ್ತಿತ್ವಗಳು ಹೇಗೆ ಸತತವಾಗಿ ಇತಿಹಾಸವನ್ನು ಧಿಕ್ಕರಿಸುವ ಭಾರತೀಯ ಬದುಕಿನ ನಿರಂತರ ಪ್ರತೀಕಗಳಾಗಿ ಬೆಳೆದು ಉಳಿದಿವೆ ಎಂಬುದನ್ನು ಬಹು ಮನೋಹರವಾಗಿ ಹೇಳುತ್ತದೆ. ಶಿವನನ್ನು ನಿರಾಯಾಮ ವ್ಯಕ್ತಿತ್ವವೆಂದೂ, ಕೃಷ್ಣನನ್ನು ಸಮೃದ್ಧ ವ್ಯಕ್ತಿತ್ವವೆಂದೂ, ರಾಮನನ್ನು ಸೀಮಿತ ವ್ಯಕ್ತಿತ್ವವೆಂದೂ ಗುರುತಿಸುವ ಈ ಲೇಖನ, ಇಂದಿನ ಆಧುನಿಕ ವಾಸ್ತವ ಬದುಕಿಗೆ ಆಯ್ದುಕೊಳ್ಳುವುದು ಸೀಮಿತ ವ್ಯಕ್ತಿತ್ವದ ಮಾದರಿಯನ್ನೇ. ಈ ಲೇಖನದ ಕೊನೆಯ ವಾಕ್ಯ, ಲೋಹಿಯಾ ಪ್ರತಿಪಾದಿಸಿದ ಸಮಾಜವಾದಕ್ಕೆ ಒಂದು ರೂಪಕ ನಿರ್ಮಿಸಿದಂತಿದೆ:

'ತಾಯಿ ಭಾರತಿ, ನಮಗೆ ಶಿವನ ಮನಸ್ಸನ್ನೂ, ಕೃಷ್ಣನ ಹೃದಯವನ್ನೂ, ರಾಮನ ಲೋಕವನ್ನೂ ಕೊಡು. ನಿರಾಯಾಮವಾದ ಮನಸ್ಸು, ಸಮೃದ್ಧ ಹೃದಯ, ಆದರೆ ಸೀಮೆಗಳುಳ್ಳ ಬದುಕು, ಇವುಗಳಿಂದ ನಮ್ಮನ್ನು ನಿರ್ಮಿಸು' ಮೇರೆಗಳಿಲ್ಲದ ಮನಸ್ಸಿನ ವಿಹಂಗಮತೆ ಮತ್ತು ಸಮೃದ್ಧ ಮನಸ್ಸಿನ ತುಂಬು ಅಲೆಗಳು ಬದುಕಿನ ವಾಸ್ತವದ ಗೆರೆಗಳೊಳಗೆ ಇದ್ದಲ್ಲಿ ಮಾತ್ರ ಅವು ಸೌಂದರ್ಯವನ್ನೂ, ನೆಮ್ಮದಿಯನ್ನೂ ಸೃಷ್ಟಿಸಬಲ್ಲವು. ಇಂತಹ ಸೌಂದರ್ಯ ಮತ್ತು ನೆಮ್ಮದಿಗಳ ಪ್ರತೀಕವಾಗಿಯಷ್ಟೇ ಲೋಹಿಯಾ ಸಮಾನತೆಯನ್ನು ವ್ಯಾಖ್ಯಾನಿಸುತ್ತಾರೆ.

ಬರೀ ಬೋಳು ಸಾರ್ವಜನಿಕ ಸಮಾನತೆಯನ್ನಲ್ಲ. ಅವರ ಪ್ರಕಾರ ಸಮಾನತೆ ಎಂದರೆ, ಸಮತೆ; ಎಲ್ಲ ರೀತಿಯ, ಅಂದರೆ ಆಂತರಿಕ ಮತ್ತು ಬಾಹ್ಯ ಸಮತೋಲನ. ಹಾಗಾಗಿಯೇ ಅವರು ಪ್ರತಿಪಾದಿಸಿದ ಸಮಾಜವಾದದ ಪ್ರಕಾರ ರಾಷ್ಟ್ರದೊಳಗಿನ ಸಮಾನತೆಯ ಜೊತೆಗೆ ರಾಷ್ಟ್ರಗಳ ನಡುವಣ ಸಮಾನತೆಯೂ ಸಾಧಿತವಾಗಬೇಕು.

ಹಾಗೇ ಸಮಾಜದಲ್ಲಿ ಬಾಹ್ಯ ಬಂಧುತ್ವವಲ್ಲದೆ ವೈಯುಕ್ತಿಕವಾದ ಆಂತರಿಕ ಪ್ರಶಾಂತಿಯನ್ನೂ ಅದು ಸಾಧಿಸುವಂತಿರಬೇಕು. ಇಂದಿನ ಆಧುನಿಕ ಜಗತ್ತಿನಲ್ಲಿ ಹೀಗೆ ಸೌಂದರ್ಯ ಮತ್ತು ನೆಮ್ಮದಿಗಳ ಪ್ರತೀಕವಾದ ಮತ್ತು ಒಂದು ರೀತಿಯಲ್ಲಿ ಬದುಕಿನ ಒಂದು ಆವೃತ ದೃಷ್ಟಿಕೋನದಿಂದ ಹುಟ್ಟುವ ಇಂತಹ ಸಮಾನತೆಯ ಕಲ್ಪನೆ ಸಾಕಾರಗೊಳ್ಳಲು ಸಾಧ್ಯವಾಗುವುದು, ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಬದುಕಿನ ಶೈಲಿಗೆ ಪರ್ಯಾಯವಾಗಿ ಬದುಕಿಗೆ ಒಂದು ಸರಳ ಸಭ್ಯ ಜೀವನ ಮಟ್ಟದ ಗೆರೆ ಹಾಕಿಕೊಂಡಾಗ ಮಾತ್ರ. ಅಂತಹ ಗೆರೆ ಹಾಕುವ ರಾಜಕಾರಣದ ಭಾಗವಾಗಿಯೇ ಅವರು ತಮ್ಮ ಸಮಾಜವಾದವನ್ನು ನಿರೂಪಿಸಿದ್ದು. ಅವರ ಜಾತಿ ವಿನಾಶ, ಖರ್ಚಿನ ಮೇಲೆ ಮಿತಿ, ಸಣ್ಣ ಪ್ರಮಾಣದ ತಂತ್ರಜ್ಞಾನ, ಇಂಗ್ಲಿಷ್ ತೊಲಗಿಸಿ ಇತ್ಯಾದಿಗಳೆಲ್ಲವೂ, ಮನುಷ್ಯ ಆಧುನಿಕ ನಾಗರೀಕತೆಯ ಹಲವು ಮೋಹಗಳ ನಡುವೆ ಕಳೆದು ಹೋಗದಂತೆ ಒಂದು ಸಂಯಮ ರೂಢಿಸಿಕೊಂಡು ಹೊಸದೊಂದು ಘನತೆಯನ್ನು ಕಂಡುಕೊಳ್ಳುವ ಕಾರ್ಯಕ್ರಮಗಳಾಗಿಯೇ ಪ್ರಸ್ತುತಗೊಂಡವು ಎಂಬುದನ್ನು ನಾವು ಗಮನಿಸಬೇಕು. ಈ ನೆಲೆಯಲ್ಲಿಯೇ ಲೋಹಿಯಾ ಅವರು ತಮ್ಮ ಸಪ್ತ ಕ್ರಾಂತಿಗಳ ಕಲ್ಪನೆಯಲ್ಲಿ ಜಗತ್ತಿನ ಸೌಂದರ್ಯಶಾಸ್ತ್ರದಲ್ಲಿನ ಕ್ರಾಂತಿಯನ್ನೂ ಸೇರಿಸಿದ್ದುದು.

ಹೀಗೆ ಸಮಾನತೆಯ ಅರ್ಥವನ್ನು ಕೇವಲ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಇತ್ಯಾದಿ ಬಿಡಿ ಬಿಡಿ ನೆಲೆಗಳಲ್ಲಿ ಹುಡುಕದೆ, ಅವೆಲ್ಲ ಒಟ್ಟಾರೆ ಸೇರಿದಂತಿರುವ ಮನುಷ್ಯನ ವೈಯುಕ್ತಿಕ ಘನತೆಯ ಸಾಧನೆಯ ರೂಪದಲ್ಲಿ ಕಂಡರಿಸುವ ಲೋಹಿಯಾ ಪ್ರಯತ್ನ, ಸಹಜವಾಗಿಯೇ ಸೂಕ್ಷ್ಮ ಮನಸ್ಸಿನ ಚಿಂತಕ-ಲೇಖಕ-ಕಲಾವಿದರ ಗಮನ ಸೆಳೆಯಿತು. ಅವರು ಸಂಪಾದಿಸುತ್ತಿದ್ದ 'ಒಚಿಟಿಇುಟಿಜ' ಪತ್ರಿಕೆ ಜಾಗತಿಕ ಮಟ್ಟದಲ್ಲಿ ಮನುಷ್ಯನ ಇಂತಹ ಲೌಕಿಕ ಸಂಯಮವನ್ನಾಧರಿಸಿದ ಅಧ್ಯಾತ್ಮಿಕ ಘನತೆಯ ಅನ್ವೇಷಣೆಯ ದೊಡ್ಡ ವೇದಿಕೆಯಾಗಿತ್ತು. ಜಗತ್ತಿನ ಮತ್ತು ಭಾರತದ ಅತ್ಯುತ್ತಮ ಮನಸ್ಸುಗಳು ಈ ಪತ್ರಿಕೆಯಲ್ಲಿ ಬರೆದವು, ಚರ್ಚಿಸಿದವು. ಮಿತಿಯಿಲ್ಲದ ಸುಖದ ಅನ್ವೇಷಣೆಯಲ್ಲಿರುವ ಇಂದಿನ ವಿಪತ್ಕಾರಿಯಾದ ಆಧುನಿಕ ನಾಗರೀಕತೆಗೆ ಪರ್ಯಾಯವಾಗಿ ಮಿತಿಗಳುಳ್ಳ ಬದುಕಿನ ಹೊಸ ನಾಗರೀಕತೆಯ ಮಾತೃಕೆಗಳನ್ನು ಅವು ರೂಪಿಸಲು ಯತ್ನಿಸಿದವು.

ಲೋಹಿಯಾ ನೇತೃತ್ವದ ಇಂತಹ ಪ್ರಯತ್ನ ಭಾರತದ ಸಾಂಸ್ಕೃತಿಕ ಲೋಕದಲ್ಲಿಯೂ ಹೊಸ ಸಂಚಲನ ಉಂಟು ಮಾಡಿದ್ದರಲ್ಲಿ ಆಶ್ಚರ್ಯವಿಲ್ಲ. ಆ ಕಾಲದ ಬಹುಪಾಲು ಎಲ್ಲ ಶ್ರೇಷ್ಠ ಲೇಖಕರು, ಕಲಾವಿದರು, ಉದಾಹರಣೆಗೆ ಧರ್ಮವೀರ ಭಾರತಿ, ಅಗ್ಗೇಯ, ಬೀರೇಂದ್ರ ಕುಮಾರ್ ಭಟ್ಟಾಚಾರ್ಜಿ, ಎಂ.ಎಫ್.ಹುಸೇನ್ ಇತ್ಯಾದಿಗಳಲ್ಲದೆ ಕರ್ನಾಟಕದ ಶ್ರೇಷ್ಠ ಮನಸ್ಸುಗಳು- ಕುವೆಂಪು, ಪು.ತಿ.ನ., ಜಿಎಸ್ಸೆಸ್ ಅವರಿಂದ ಹಿಡಿದು, ಲಂಕೇಶ್, ತೇಜಸ್ವಿ, ಸುಬ್ಬಣ್ಣ, ಆಲನಹಳ್ಳಿ ಕೃಷ್ಣ, ಅನಂತಮೂರ್ತಿ,

'ತಾಯಿ ಭಾರತಿ, ನಮಗೆ ಶಿವನ ಮನಸ್ಸನ್ನೂ, ಕೃಷ್ಣನ ಹೃದಯವನ್ನೂ, ರಾಮನ ಲೋಕವನ್ನೂ ಕೊಡು. ನಿರಾಯಾಮವಾದ ಮನಸ್ಸು, ಸಮೃದ್ಧ ಹೃದಯ, ಆದರೆ ಸೀಮೆಗಳುಳ್ಳ ಬದುಕು, ಇವುಗಳಿಂದ ನಮ್ಮನ್ನು ನಿರ್ಮಿಸು' ಮೇರೆಗಳಿಲ್ಲದ ಮನಸ್ಸಿನ ವಿಹಂಗಮತೆ ಮತ್ತು ಸಮೃದ್ಧ ಮನಸ್ಸಿನ ತುಂಬು ಅಲೆಗಳು ಬದುಕಿನ ವಾಸ್ತವದ ಗೆರೆಗಳೊಳಗೆ ಇದ್ದಲ್ಲಿ ಮಾತ್ರ ಅವು ಸೌಂದರ್ಯವನ್ನೂ ನೆಮ್ಮದಿಯನ್ನೂ ಸೃಷ್ಟಿಸಬಲ್ಲವು. ಇಂತಹ ಸೌಂದರ್ಯ ಮತ್ತು ನೆಮ್ಮದಿಗಳ ಪ್ರತೀಕವಾಗಿಯಷ್ಟೇ ಲೋಹಿಯಾ ಸಮಾನತೆಯನ್ನು ವ್ಯಾಖ್ಯಾನಿಸುತ್ತಾರೆ. ಬರೀ ಬೋಳು ಸಾರ್ವಜನಿಕ ಸಮಾನತೆಯನ್ನಲ್ಲ. ಅವರ ಪ್ರಕಾರ ಸಮಾನತೆ ಎಂದರೆ, ಸಮತೆ; ಎಲ್ಲ ರೀತಿಯ, ಅಂದರೆ ಆಂತರಿಕ ಮತ್ತು ಬಾಹ್ಯ ಸಮತೋಲನ.

ದೇವನೂರ ಮಹಾದೇವರವರೆಗೆ ಅನೇಕರ ಆಲೋಚನಾ ಕ್ರಮ ಮತ್ತ ಬರವಣಿಗೆಯನ್ನು ಪ್ರಭಾವಿಸಿದವು. ಇದರಿಂದಾಗಿ ಸಾಹಿತ್ಯದಲ್ಲಿ ಹೊಸ ರೀತಿಯ, ಹೊಸ ನೆಲೆಯ ಬದುಕಿನ ಅನ್ವೇಷಣೆಯ ಪ್ರಯತ್ನಗಳು ಆರಂಭವಾದವು. ಭಾರತದ ಮಟ್ಟಿಗೆ ಮಾತನಾಡುವ ಅರ್ಹತೆ ನನಗಿಲ್ಲ. ಆದರೆ ಕನ್ನಡದ ಮಟ್ಟಿಗೆ ಹೇಳುವುದಾದರೆ, ಗಾಂಧಿ ನಂತರ ಲೋಹಿಯಾರಷ್ಟು ಕನ್ನಡದ ಸೃಜನಶೀಲ ಮನಸ್ಸುಗಳನ್ನು ಪ್ರಭಾವಿಸಿದ ಸಾರ್ವಜನಿಕ ವ್ಯಕ್ತಿತ್ವ ಮತ್ತೊಂದಿಲ್ಲ ಎನ್ನುವುದು ಅತಿಶಯೋಕ್ತಿಯ ಮಾತಾಗಲಾರದು.

ಹಾಗಾಗಿಯೇ ಭಾರತದ ಸಮಾಜವಾದಿ ಆಂದೋಲನ ಬಡವರಿಂದ, ಶೋಷಿತರಿಂದ, ಅವಮಾನಿತರಿಂದಷ್ಟೇ ಅಲ್ಲದೆ, ಸೂಕ್ಷ್ಮ ಮತ್ತು ಸಂವೇದನಾಶೀಲ ಮನಸ್ಸುಗಳ ಸಾಹಿತಿ-ಕಲಾವಿದರಿಂದ ತುಂಬಿರುತ್ತಿತ್ತು. ಸಮಾಜವಾದಿಗಳ ಸಭೆ ಎಂದರೆ, ಅದು ಬರೀ ಆರ್ಥಿಕ-ಸಾಮಾಜಿಕ ಚರ್ಚೆ-ಘೋಷಣೆ-ಕಾರ್ಯಕ್ರಮಗಳ ಸಭೆಯಾಗದೆ, ಒಂದು ದೊಡ್ಡ ಸಾಂಸ್ಕೃತಿಕ ಸಂಘಟನೆಯ ಸಭೆಯಂತೆ ತಲ್ಲಣಿಸುತ್ತಿರುತ್ತಿತ್ತು. ಈ ಆಂದೋಲನ ಲೋಹಿಯಾರಂತಹ ಚುಂಬಕ ಶಕ್ತಿ ಇಲ್ಲವಾದ ತದನಂತರವೇ ಒಂದು ಸಂಘಟನೆಯಾಗಿ ಉಳಿಯದೇ ಛಿದ್ರವಾಗಿ ವಿವಿಧ ಸಂಘಟನೆಗಳಲ್ಲಿ ಹಂಚಿ ಹೋಗಲು ಇದೂ ಒಂದು ಕಾರಣವಾಗಿದ್ದರಲೂಬಹುದು!

ಅದೇನೇ ಇರಲಿ, ಸಮಾಜವಾದಿ ಆಂದೋಲನ ಇಂತಹ ಸಾಂಸ್ಕೃತಿಕ ಸ್ವರೂಪಕ್ಕೆ ಸಾಕ್ಷಿಯಂತಿದ್ದಾರೆ ಇಂದಿನ ಇಬ್ಬರು ನಮ್ಮ ಅತಿಥಿಗಳಾದ, ಇಂದಿನ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಕಡಿದಾಳು ಶಾಮಣ್ಣ ಮತ್ತು ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಲಿರುವ ಎಚ್.ಗಣಪತಿಯಪ್ಪನವರು. ಇಬ್ಬರೂ ಅಷ್ಟೇನೂ ರಾಜಕೀಯಕ್ಕೆ ಅಂಟಿಕೊಳ್ಳದೆ ರಾಜಕಾರಣ ಮಾಡಿದ ವ್ಯಕ್ತಿಗಳು. ಶಾಮಣ್ಣ ಹೋರಾಟದಲ್ಲಿದ್ದೂ ಬರೀ ಹೋರಾಟಗಾರರಾಗದೆ, ತೇಜಸ್ವಿ, ಲಂಕೇಶ್, ಅನಂತಮೂರ್ತಿಯರಂತಹವರ ಒಡನಾಟದಲ್ಲಿ ಒಂದು ಸಾಂಸ್ಕೃತಿಕ ವ್ಯಕ್ತಿತ್ವವನ್ನು ಉಳಿಸಿಕೊಂಡು ಬಂದವರು. ಇನ್ನು ಗಣಪತಿಯಪ್ಪ ಸ್ವಾತಂತ್ರ್ಯ ಹೋರಾಟಗಾರ, ಭೂ ಹೋರಾಟಗಾರರೆಂದು ಹೆಸರಾದರೂ, ಅವರು ತಮ್ಮ ಈ ಹೋರಾಟಗಳನ್ನು ಕಾಗೋಡಿನಲ್ಲಿ ಆರಂಭಿಸಿದ್ದು ಒಂದು ಸಾಂಸ್ಕೃತಿಕ ಹೋರಾಟವಾಗಿ ಎಂಬುದನ್ನು ನಾವು ಗಮನಿಸಬೇಕು. ಅವರು ದೀವರನ್ನು ಭೂಮಾಲಿಕರ ವಿರುದ್ಧ ಹೋರಾಟಕ್ಕೆ ಅಣಿ ಮಾಡಿದ್ದು, ಮೊದಲಿಗೆ ಅವರಿಗೆ ಬದುಕಿನ ಕೆಲವು ಮೂಲಭೂತ ಅಚ್ಚುಕಟ್ಟುಗಳನ್ನು ಕಲಿಸುವ ಮೂಲಕ. ಅಕ್ಷರ ಜ್ಞಾನ, ಮಾತುಗಾರಿಕೆ, ನಾಗರಿಕ ಸ್ವಚ್ಛತೆ ಇತ್ಯಾದಿಗಳ ಪ್ರಜ್ಞೆಯನ್ನು ಅವರಲ್ಲಿ ಮೂಡಿಸುವ ಮೂಲಕ.

ಹೀಗಾಗಿ ಇವರಿಬ್ಬರ ಉಪಸ್ಥಿತಿಯಲ್ಲಿ ಈ ವಿಚಾರ ಸಂಕಿರಣ ಲೋಹಿಯಾ ಅವರ ಸಾಂಸ್ಕೃತಿಕ ವ್ಯಕ್ತಿತ್ವವನ್ನು, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಮೇಲೆ ಅವರು ಮಾಡಿರುವ ಪ್ರಭಾವಗಳ ನೆಲೆಗಳನ್ನು ಅರ್ಥ ಮಾಡಿಕೊಳ್ಳುವ, ಅರ್ಥ ಮಾಡಿಸಿಕೊಡುವ ಕೆಲಸವನ್ನು ಗಂಭೀರವಾಗಿ ಮಾಡುತ್ತದೆ ಎಂಬ ಆಶಯದೊಂದಿಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಭಾರತದ ಸಮಾಜವಾದಿ ಆಂದೋಲನ ಬಡವರಿಂದ, ಶೋಷಿತರಿಂದ, ಅವಮಾನಿತರಿಂದಷ್ಟೇ ಅಲ್ಲದೆ, ಸೂಕ್ಷ್ಮ ಮತ್ತು ಸಂವೇದನಾಶೀಲ ಮನಸ್ಸುಗಳ ಸಾಹಿತಿ-ಕಲಾವಿದರಿಂದ ತುಂಬಿರುತ್ತಿತ್ತು. ಸಮಾಜವಾದಿಗಳ ಸಭೆ ಎಂದರೆ, ಅದು ಬರೀ ಆರ್ಥಿಕ-ಸಾಮಾಜಿಕ ಚರ್ಚೆ-ಘೋಷಣೆ-ಕಾರ್ಯಕ್ರಮಗಳ ಸಭೆಯಾಗದೆ, ಒಂದು ದೊಡ್ಡ ಸಾಂಸ್ಕೃತಿಕ ಸಂಘಟನೆಯ ಸಭೆಯಂತೆ ತಲ್ಲಣಿಸುತ್ತಿರುತ್ತಿತ್ತು. ಈ ಆಂದೋಲನ ಲೋಹಿಯಾರಂತಹ ಚುಂಬಕ ಶಕ್ತಿ ಇಲ್ಲವಾದ ತದನಂತರವೇ ಒಂದು ಸಂಘಟನೆಯಾಗಿ ಉಳಿಯದೇ ಛಿದ್ರವಾಗಿ ವಿವಿಧ ಸಂಘಟನೆಗಳಲ್ಲಿ ಹಂಚಿ ಹೋಗಲು ಇದೂ ಒಂದು ಕಾರಣವಾಗಿದ್ದರಲೂ ಬಹುದು!

1. ಮನುಷ್ಯನ ಈ ಖಾಸಗಿ ಕ್ಷಣಗಳ ನೈಸರ್ಗಿಕ ಹಕ್ಕನ್ನೂ ಜಾತಿ ಪ್ರಜ್ಞೆ ಅತಿಕ್ರಮಿಸಿದೆ, ಅಂದರೆ ಆತನ ಸಾಕ್ಷೀ ಪ್ರಜ್ಞೆಯನ್ನೂ ಅದು ದಮನ ಮಾಡಿದೆ ಎಂದು ಲೋಹಿಯಾ ಹೇಳಿದ್ದಾರೆಂದು ನಂತರ ಮಾತನಾಡಿದ ನಟರಾಜ್ ಹುಳಿಯಾರ್ ಹೇಳಿದರು. ಹಾಗಿದ್ದಲ್ಲಿ, ಯಾರೇ ಆಗಲೀ ಯಾವುದೇ ಕಾರಣದಿಂದ ತಮ್ಮ ಜಾತಿಯನ್ನು ಮೀರಲಾಗದವರಾಗಿಬಿಡುತ್ತಾರೆ! ಇದು, ಸಾಮಾಜಿಕ ನ್ಯಾಯ ಪರಿಕಲ್ಪನೆಯು ಇಂದು ಲೋಹಿಯಾ ಪ್ರತಿಪಾದಿಸಿದ ಜಾತಿ ವಿನಾಶ ಕಾರ್ಯಕ್ರಮವನ್ನು ತಿರಸ್ಕರಿಸಿ ತಲುಪಿರುವ ಜಾತಿ ಸಮಾನತೆಯೆಂಬ, ಭ್ರಷ್ಟಗೊಂಡ ಸಮಾಜವಾದಿ(ಅಥವಾ ಅ-ಸಮಾಜವಾದಿ) ಗುರಿಯೆಡೆಗೆ ನಮ್ಮನ್ನು ಕೊಂಡೊಯ್ಯುತ್ತದಷ್ಟೆ... ಆದುದರಿಂದ ಲೋಹಿಯಾ ಎತ್ತಿ ಹೇಳುವ ನೈಸರ್ಗಿಕ ಹಕ್ಕು ಇನ್ನೂ ಆಳದ; ಅಜ್ಞಾತ ಸ್ತರದ ಪ್ರಜ್ಞೆಗೆ ಸಂಬಂಧಿಸಿದ್ದು ಎಂಬುದು ಸ್ಪಷ್ಟ

2. ಮಾರ್ಕ್ಸ್‌ವಾದದ ಇತ್ತೀಚಿನ ಅಧ್ಯಯನಗಳು ಎಂದು ಹೇಳಲಾಗುವ ಕೆಲವು ಹೊಸ ವಾದಗಳು ಈ ಆರ್ಥಿಕ ಮತ್ತು ಪಾರಮಾರ್ಥಿಕಗಳ ಸಂಬಂಧವನ್ನು, ಅದು ನಿರೂಪಿಸಿದ್ದ ಒಂದರಿಂದ ಇನ್ನೊಂದು ಎಂಬ ನಿಯಮದ ಬಂಧನದಿಂದ ಸ್ವಲ್ಪ ಮಟ್ಟಿಗೆ ಬಿಡಿಸಲೆತ್ನಿಸಿವೆ. ಆದರೆ, ಇದರ ಪರಿಣಾಮವಾಗಿ ಅದು ಮುಂದಿನ ತನ್ನ ಇತರೆಲ್ಲ ಪ್ರಮೇಯಗಳನ್ನೂ ಪುನರ್‌ನಿರೂಪಿಸಬೇಕಾದ ಇಕ್ಕಟ್ಟಿಗೆ ಸಿಕ್ಕಿದೆ. ಇದರಿಂದಾಗಿ ಮಾರ್ಕ್ಸ್‌ವಾದವೆನ್ನುವುದು, ತನ್ನ ಮೂಲ ರೂಪ ಮತ್ತು ಅರ್ಥ ಸಾಂಗತ್ಯ ಹಾಗೂ ಆ ಮೂಲಕ ತನ್ನ ವಿಶಿಷ್ಟ ಕ್ರಾಂತಿಕಾರತ್ವವನ್ನೂ ಕಳೆದುಕೊಂಡಿರುವುದನ್ನು ನಾವು ಗಮನಿಸಬಹುದಾಗಿದೆ.

* * * *

2009ರ ಅಕ್ಟೋಬರ್ 11 ರಂದು ಸಾಗರದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು 'ಪ್ರಜ್ಞಾರಂಗ' ತಂಡದ ಸಹಕಾರದಲ್ಲಿ ಆಯೋಜಿಸಿದ್ದ 'ಲೋಹಿಯಾ ಮತ್ತು ಕನ್ನಡ ಸಾಹಿತ್ಯ' ಕುರಿತ ವಿಚಾರ ಸಂಕಿರಣದಲ್ಲಿ ಆಡಿದ ಆಶಯದ ಮಾತುಗಳು. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೪೮೦೪೮೩೦೬

ಭಾರತ ಮತ್ತು ಭಾರತೀಯರು

ಪ್ರೊ. ಸಂಗನಾಳ ಮಠ. ಯು. ಎನ್

1948ರಲ್ಲಿ ಬ್ರಿಟನ್ನಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ಸರ್ ವಿನ್‌ಸ್ಟನ್ ಚರ್ಚಿಲ್‌ರು ಭಾರತದ ಭವಿಷ್ಯದ ಕರಾಳ ಚಿತ್ರವನ್ನು ಈ ಮಾತುಗಳಲ್ಲಿ ಹೇಳಿದರು:-

"ಈ ಸಂದರ್ಭದಲ್ಲಿ ಭಾರತದ ಮಿಲಿಯಗಟ್ಟಳೆ ಹಸಿದ ಜನಗಳ ಭವಿಷ್ಯವನ್ನು 'ಅವರ' ಕೈಗೆ ಕೊಡುವದೆಂದರೆ, ದೇಶವನ್ನು ಸುಲಿಗೆ ಮತ್ತು ದರೋಡೆ ಮಾಡುವರ ಘಟಿಂಗರ ಕೂಟ (Gansofrogues) ನೀಚರು ಮತ್ತು ಕೊಳ್ಳೆಹೊಡೆಯುವವರ(Rascals & Free booters) ತಂಡದ ವಶಕ್ಕೆ ಒಪ್ಪಿಸಿದಂತೆ. ರಾಜಕಾರಣದ ಪ್ರಾಥಮಿಕ ಶಾಲೆ ಮುಗಿಸಲು ನೂರಾರು ವರ್ಷಗಳೇ ಬೇಕು..... ಸರಕಾರದ ಇಲಾಖೆಗಳು ಒಂದರ ಹಿಂದೆ ಒಂದು ಅಧಃಪತನವಾಗುವವು. ಸಿವಿಲ್ ಸರ್ವಿಸ್ ವಿಭಾಗಗಳು ಕೆಡುತ್ತವೆ, ನಂತರ ಪೊಲೀಸ್ ಇಲಾಖೆ, ಕೊನೆಗೆ ಮಿಲಿಟರಿಗೂ ಪಸರಿಸುತ್ತದೆ... ಸ್ವಾತಂತ್ರ್ಯ ಕೊಟ್ಟದ್ದೇ ಅಪರಾಧವಾಗಬಹುದು... ಸಾಮಾನ್ಯರಿಗೆ ಎಣೆ ಇಲ್ಲದ ದುರದೃಷ್ಟಕರವಾದ ದುರ್ದಿನಗಳು ಬರಲಿವೆ. ಒಂದು ಗ್ಲಾಸ್ ನೀರಿಗಾಗಿ ತೆರಿಗೆ ಹಾಕಬಹುದು. ಬಹುಶಃ ಗಾಳಿ ಮಾತ್ರ ಪುಕ್ಕಟೆ ಸಿಗಬಹುದು... ರಾಜಕೀಯ ಒಳಜಗಳದಲ್ಲಿ ದೇಶ ನಿರ್ನಾಮವಾಗವುದು... ಗಾಂಧಿಯವರು ಸಾಯದಂತೆ ಬ್ರಿಟಿಷರು 20 ವರ್ಷಕಾಲ ಅವರನ್ನು ರಕ್ಷಿಸಿದರು ಆದರೆ ನೀವು ಭಾರತೀಯರು ಅವರನ್ನು ಆರು ತಿಂಗಳೂ ಬದುಕಲು ಬಿಡಲಿಲ್ಲ... ಇದರ ಒಳಿತು ಕೆಡಕುಗಳ ಬೆಲೆಯನ್ನು ಸಂಪೂರ್ಣವಾಗಿ ನೀವೇ ತೆರಬೇಕು".

1916 ಫೆಬ್ರವರಿ 6. ಬನಾರಸ ಹಿಂದೂ ವಿಶ್ವವಿದ್ಯಾಲಯದ ಔಪಚಾರಿತ ಉದ್ಘಾಟನೆಯ ಸನ್ನಿವೇಶ. ಆಗಿನ ವೈಸರಾಯ್ ಲಾರ್ಡ್ ಹಾರ್ಡಿಂಜ್ ವಿಶ್ವವಿದ್ಯಾಲಯದ ಶಂಕು-ಸ್ಥಾಪನೆ ಮಾಡಿ ಸಮಾರಂಭವನ್ನು ಉದ್ಘಾಟಿಸಿದ, ಗಾಂಧೀಜಿ ಆ ಸಮಯದಲ್ಲಿ ಭಾಷಣಕಾರರಾಗಿ ಬಂದಿದ್ದರು. ಅಂದು ಅವರು ನೇರವಾಗಿ ಖಾರವಾಗಿ ತೀಕ್ಷ್ಣವಾಗಿ ಮರ್ಮಬೇಧಕವಾಗಿ ಮಾತನಾಡಿದರು ಮಾತನ್ನು ಕೇಳಿ ಆ್ಯನಿಬೆಸೆಂಟ್ ಹುಸಿ ಮುನಿಸುಗೊಂಡರಂತೆ. ಮೂರು ಸಂಗತಿಗಳು ಗಾಂಧೀಜಿಗೆ ಆಳವಾಗಿ ಮಾನಸಿಕ ಕ್ಷೋಭೆ ಉಂಟುಮಾಡಿತ್ತು. 1) ನಮ್ಮ ಜನರನ್ನು ಉದ್ದೇಶಿಸಿ ಸಮಸ್ಯೆಗಳನ್ನು ಹಂಚಿಕೊಳ್ಳಲು ಆಂಗ್ಲ ಭಾಷೆಯಲ್ಲಿ ಮಾತನಾಡುವುದು. (ಗಾಂಧೀಜಿ ಸಹ ಅಸಮಾಧಾನದಿಂದ ಆಂಗ್ಲ ಭಾಷೆಯಲ್ಲಿ ಮಾತನಾಡಿದರು). 2) ಸಮಾರಂಭಕ್ಕೆ ಬಂದ ಗಣ್ಯಾರಿಗಣ್ಯರೆಲ್ಲ ವೈಭವಯುತವಾಗಿ ಬಂದದ್ದು. 3) ಬನಾರಸ ನಗರದ ಎಲ್ಲೆಡೆ ಸಹಿಸಲಾಗದ ಕೊಳಚೆ ತುಂಬಿ ದುರ್ವಾಸನೆ ಬಂದಿದ್ದು. ಅವರ ಭಾಷಣದ ಸಾರವನ್ನು ಕೊಡವುದಾದರೆ-ಪರಕೀಯ ಭಾಷೆಯಲ್ಲಿ ಮಾತನಾಡುವುದು ದಾಸ್ಯದ ಪ್ರತೀಕ.

ಕೆಲವರಿಗೆ ನಮ್ಮ ದೇಶದ ಭಾಷೆಗಳು ನಮ್ಮ ವಿಚಾರಗಳನ್ನು ಮುಟ್ಟಿಸಲು ದುರ್ಬಲಾ ಅಸಮರ್ಥ ಎನಿಸುತ್ತದೆ. ನಾವಾಡುವ ಭಾಷೆ ನಮ್ಮ ಪ್ರತಿಬಿಂಬವಾಗಿರುತ್ತದೆ ನಮ್ಮ ದೇಶದ ಸರ್ವಸಾಮಾನ್ಯ ಜನರು ಆಡುವ ಭಾಷೆಗಳಲ್ಲಿ ನಮ್ಮ ಮಕ್ಕಳಿಗೆ ನಾವು ಶಿಕ್ಷಣ ಕೊಟ್ಟರೆ ಅವರು ಜನಸಾಮಾನ್ಯರ ಹತ್ತಿರವಾಗುತ್ತಾರೆ. ಆದರೆ ಇಂದು ಶಿಕ್ಷಣವೆಂದರೆ ಆಂಗ್ಲ ಭಾಷಾ ಪ್ರಾವೀಣ್ಯ ಎಂಬ ಮೂರ್ಖಾ ಕಲ್ಪನೆ ಹರಡಿದೆ. ಇದು ನಮ್ಮ ದೈವಿ ದುರ್ವಿಲಾಸ....... ಈ ರಾಜಮಹಾರಾಜರ ಟೊಳ್ಳು ವೈಭವದ ಔಚಿತ್ಯವೇನೂ ಎಂದು ಪ್ರಶ್ನಿಸಿ ಹೊಸಬ ಯಾರಾದರೂ ಬಂದರೆ ಇದನ್ನು ಪ್ರದರ್ಶನ ಎನ್ನುತ್ತಾನೆ. ನಂತರ ರಾಜಮಹಾರಾಜರನ್ನು

ಕೆಲವರಿಗೆ ನಮ್ಮ ದೇಶದ ಭಾಷೆಗಳು ನಮ್ಮ ವಿಚಾರಗಳನ್ನು ಮುಟ್ಟಿಸಲು ದುರ್ಬಲಾ ಅಸಮರ್ಥ ಎನಿಸುತ್ತದೆ. ನಾವಾಡುವ ಭಾಷೆ ನಮ್ಮ ಪ್ರತಿಬಿಂಬವಾಗಿರುತ್ತದೆ ನಮ್ಮ ದೇಶದ ಸರ್ವ ಸಾಮಾನ್ಯ ಜನರು ಆಡುವ ಭಾಷೆಗಳಲ್ಲಿ ನಮ್ಮ ಮಕ್ಕಳಿಗೆ ನಾವು ಶಿಕ್ಷಣ ಕೊಟ್ಟರೆ ಅವರು ಜನಸಾಮಾನ್ಯರ ಹತ್ತಿರವಾಗುತ್ತಾರೆ. ಆದರೆ ಇಂದು ಶಿಕ್ಷಣವೆಂದರೆ ಆಂಗ್ಲ ಭಾಷಾ ಪ್ರಾವೀಣ್ಯ ಎಂಬ ಮೂರ್ಖಾ ಕಲ್ಪನೆ ಹರಡಿದೆ. ಇದು ನಮ್ಮ ದೈವಿ ದುರ್ವಿಲಾಸ... ಈ ರಾಜ ಮಹಾರಾಜರ ಟೊಳ್ಳು ವೈಭವದ ಔಚಿತ್ಯವೇನೂ ಎಂದು ಪ್ರಶ್ನಿಸಿ ಹೊಸಬ ಯಾರಾದರೂ ಬಂದರೆ ಇದನ್ನು ಪ್ರದರ್ಶನ ಎನ್ನುತ್ತಾನೆ. ನಂತರ ರಾಜಮಹಾರಾಜರನ್ನು ಉದ್ದೇಶಿಸಿ, ನಿಮ್ಮೆಲ್ಲ ಈ ಸಂಪತ್ತನ್ನು ಕಳಚಿ ಬಡವರ ಏಳ್ಗೆಗಾಗಿ ಉಪಯೋಗವಾಗುವಂತೆ ಒಂದು ವಿಶ್ವಸ್ಥನಿಧಿಗೆ ಕೊಡಿ.

ಉದ್ದೇಶಿಸಿ, ನಿಮ್ಮೆಲ್ಲ ಈ ಸಂಪತ್ತನ್ನು ಕಳಚಿ ಬಡವರ ಏಳ್ಗೆಗಾಗಿ ಉಪಯೋಗವಾಗುವಂತೆ ಒಂದು ವಿಶ್ವಸ್ಥನಿಧಿಗೆ ಕೊಡಿ. ಹೀಗೆ ನೀವು ಮಾಡದ ಹೊರತು ಭಾರತದ ನೈಜ ಬಿಡುಗಡೆ ಆಗದು. ಆದರೆ ಇದಕ್ಕೆ ಗಾಂಧೀಜಿ ತಮ್ಮನ್ನು ಅವಮಾನಿಸಿದರೆಂದು ಸಂಸ್ಥಾನಿಕರೆಲ್ಲ ಅಸಮ್ಮತಿ ವ್ಯಕ್ತಪಡಿಸಿದರು....ಈ ವಿದ್ರೂಪ, ಹೊಲಸು ಅಸಹ್ಯ ನೋಡಿ ಇದು ಹಿಂದೂಗಳ ಪವಿತ್ರ ಮಂದಿರದ ಸ್ಥಳವೇ ಈ ಮಣ್ಣುಕ್ಷೇತ್ರ ಇಷ್ಟು ನಾರುತ್ತಿರುವಾಗ ಉಳಿದ ಊರುಗಳ ಪಾಡೇನು? ಭಾರತೀಯ ನಗರಗಳ ಸಾರ್ವಜನಿಕ ಸ್ಥಳಗಳು ದುರ್ಗಂಧಗಳ ಬೀಡಾಗಿವೆ. ಮೂರನೇ ದರ್ಜೆ ರೇಲ್ವೆ ಬೋಗಿಗಳು ಅಸಹನೀಯ ಸ್ಥಿತಿಯಲ್ಲಿವೆ"....

ಗಾಂಧೀಜಿ ಈ ಭಾಷಣ ಮಾಡಿ 93 ವರ್ಷಗಳು ಗತಿಸಿವೆ. ಆಗಿನ ಭಾರತ ಭಾರತೀಯರು ಬದಲಾಗಿದೆಯೇ -ಇಲ್ಲ ಗಾಂಧೀಜಿಯ ಕಳವಳ ತಳಮಳ ಇನ್ನೂ ಹಾಗೇ ಇವೆ, 'ಪ್ರಗತಿ' ಎಂಬ ಭ್ರಮೆಯಲ್ಲಿರುವೆವು. ಈಗಿನ ಸಾಕಷ್ಟು ಮಂತ್ರಿ-ರಾಜ್ಯಪಾಲರು ಶಾಸಕರು ಹಿಂದಿನ ರಾಜ ಮಹಾರಾಜರಷ್ಟೆ ವೈಭವಯುತವಾಗಿದ್ದಾರೆ ಅಂದಿನ ನಗರಗಳ ಗಲೀಜು ಅವ್ಯವಸ್ಥೆ ಹಾಗೇ ಉಳಿದಿದೆ. ಇಂಗ್ಲೀಷ್ ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ಇನ್ನೂ ಭದ್ರವಾಗಿದೆ. ಮಾತೃ ಭಾಷೆ ಪ್ರಾದೇಶಿಕ ಭಾಷೆಗಳನ್ನು ಕಡೆಗಣಿಸಿದ್ದೇವೆ. ಇದಕ್ಕಾಗಿ ನಾಚಿ ತಲೆತಗ್ಗಿಸಬೇಕಾಗಿದೆ.

ಜಾತ್ಯಾತೀತ ಭಾರತದಲ್ಲಿ ಜಾತೀಯತೆ ಪ್ರಧಾನವಾಗಿದೆ. ಶಿಕ್ಷಣದಲ್ಲಿ, ಉದ್ಯೋಗದ ಆಯ್ಕೆಯಲ್ಲಿ, ನೇಮಕಾತಿಯಲ್ಲಿ ರಾಜಕೀಯದಲ್ಲಿ, ಸಚಿವರ ಆಯ್ಕೆಯಲ್ಲಿ ಎಲ್ಲ ಕ್ಷೇತ್ರದಲ್ಲಿ ಜಾತಿ ಪ್ರಧಾನವಾಗಿದೆ. ಹಳೆಯ ಭಾರತವನ್ನು ದ್ವೇಷಿಸುತ್ತ ಅವರ ಹೆಸರಿನ ಎಲ್ಲ ಮೌಲ್ಯ ವಿಚಾರ ಭಾವನೆ ಆದರ್ಶ ಪುರುಷರು ಎಲ್ಲವನ್ನು ಕೋಮು ಭಾವನೆಯಿಂದ ದೃಷ್ಟಿಸುತ್ತ ಇಲ್ಲಿ ರಷ್ಯಾ, ಚೈನಾಗಳ ಪ್ರೇತಾತ್ಮಗಳ ಭಾರತವನ್ನು ಕಾಣುವ ಎಡಪಂಥೀಯರು.

ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿ ದಿಕ್ಕು ತಪ್ಪಿರುವ ಯುವಜನತೆ, ಜೀವನ ಇರುವುದು ಐಷಾರಾಮಿ ಜೀವನ ಸಾಗಿಸುವದಕ್ಕೆ ಎಂದು ಭಾವಿಸಿದ್ದಾರೆ. ಇತ್ತ ಹಳ್ಳಿ ಹಳ್ಳಿಗಳಲ್ಲಿ ಕುಡಿಯಲು ನೀರಿಲ್ಲದೆ, ನಡೆಯಲು ರಸ್ತೆಗಳಿಲ್ಲದೇ, ತಿನ್ನಲು ಅನ್ನವಿಲ್ಲದೇ, ವಿದ್ಯೆ ಇಲ್ಲದೇ, ಉದ್ಯೋಗವಿಲ್ಲದೆ, ಆಶೆ-ಆಮಿಷಗಳಿಗೆ ತನ್ನ ಓಟನ್ನು ಮಾರಿಕೊಂಡು, ಜಾತಿಯೇ ಪ್ರಧಾನ ಎಂದು ತಿಳಿಯುತ್ತ ಜೀವಿಸುತ್ತಿರುವ ಪ್ರಜಾಪ್ರಭುತ್ವದ ಆಧಾರ ಸ್ತಂಬಗಳಾಗಿರುವ ಸಾಮಾನ್ಯ ಜನತೆಯೇ ಶೋಷಿತರಾಗಿದ್ದಾರೆ. ಇದು ಸಾಮಾನ್ಯನ ಭಾರತ!

ಪ್ರತಿ 17 ಸೆಕೆಂಡಿಗೆ ಒಂದಂತೆ ಅಪರಾಧ ಸಂಭವಿಸುತ್ತದೆ! ಪ್ರತಿ 15 ನಿಮಿಷಕ್ಕೆ 1 ಅತ್ಯಾಚಾರ, 3 ನಿಮಿಷಕ್ಕೆ 1 ರಂತೆ ಮಹಿಳೆ ವಿರುದ್ಧ ಅಪರಾಧ, ಪ್ರತಿ 77 ನಿಮಿಷಕ್ಕೆ 1 ವರದಕ್ಷಿಣೆ ಸಾವು, ಪ್ರತಿ 16 ನಿಮಿಷಕ್ಕೆ 1 ಕೊಲೆ, ಪ್ರತಿ 10 ನಿಮಿಷಕ್ಕೆ ದೊಂಬಿ. ಪ್ರತಿ ಎರಡು ತಾಸಿಗೊಮ್ಮೆ ಢಕಾಯತಿ, ಪ್ರತಿ 53 ನಿಮಿಷಕ್ಕೆ ಲೈಂಗಿಕ ದೌರ್ಜನ್ಯ ನಡೆಯುತ್ತವೆ. ಇದು National Crime Records Bureau ಪ್ರಕಾರ ಅಧಿಕೃತ ದಾಖಲೆ.. 2005ರಲ್ಲಿ ಅಪರಾಧಗಳ ಸಂಖ್ಯೆ 50,26,337 ಆದರೆ 2007ರಲ್ಲಿ 57,33,407 ಕ್ಕೆ ಏರಿದೆ! ವರ್ಷಕ್ಕೆ ಮೂರುವರೆ ಲಕ್ಷ ಅಪರಾಧಗಳು ಹೆಚ್ಚುತ್ತಿವೆ. ಅನಕ್ಷರತೆ, ಬಡತನ, ಶೋಷಣೆ, ಒಂದು ಪಟ್ಟಿಯಾದರೆ, ಹಣ, ಅಧಿಕಾರ, ಜಾತಿಬಲ ಇನ್ನೊಂದೆಡೆ, ಜಾತಿ ದ್ವೇಷ ಭಯೋತ್ಪಾದನೆ ಉಗ್ರಗಾಮಿ ಚಟುವಟಿಕೆಗಳು ಕಾರಣವಾಗುವುವು.

> **ಜಾತ್ಯಾತೀತ ಭಾರತದಲ್ಲಿ ಜಾತೀಯತೆ ಪ್ರಧಾನವಾಗಿದೆ. ಶಿಕ್ಷಣದಲ್ಲಿ, ಉದ್ಯೋಗದ ಆಯ್ಕೆಯಲ್ಲಿ, ನೇಮಕಾತಿಯಲ್ಲಿ ರಾಜಕೀಯದಲ್ಲಿ, ಸಚಿವರ ಆಯ್ಕೆಯಲ್ಲಿ ಎಲ್ಲ ಕ್ಷೇತ್ರದಲ್ಲಿ ಜಾತಿ ಪ್ರಧಾನವಾಗಿದೆ. ಹಳೆಯ ಭಾರತವನ್ನು ದ್ವೇಷಿಸುತ್ತ ಅವರ ಹೆಸರಿನ ಎಲ್ಲ ಮೌಲ್ಯ ವಿಚಾರ ಭಾವನೆ ಆದರ್ಶ ಪುರುಷರು ಎಲ್ಲವನ್ನು ಕೋಮು ಭಾವನೆಯಿಂದ ದೃಷ್ಟಿಸುತ್ತ ಇಲ್ಲಿ ರಷ್ಯಾ, ಚೈನಾಗಳ ಪ್ರೇತಾತ್ಮಗಳ ಭಾರತವನ್ನು ಕಾಣುವ ಎಡಪಂಥೀಯರು. ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿ ದಿಕ್ಕು ತಪ್ಪಿರುವ ಯುವಜನತೆ, ಜೀವನ ಇರುವದು ಐಷಾರಾಮಿ ಜೀವನ ಸಾಗಿಸುವದಕ್ಕೆ ಎಂದು ಭಾವಿಸಿದ್ದಾರೆ.**

ಅಪರಾಧ ಎಲ್ಲ ಕ್ಷೇತ್ರಗಳಿಗೂ ವ್ಯಾಪಿಸಿದೆ. 15ನೇ ಲೋಕಸಭೆಯಲ್ಲಿ ಕ್ರಿಮಿನಲ್ ಪ್ರಕರಣ ಆರೋಪ ಎದುರಿಸುತ್ತಿರುವ ಸಂಸದರ ಸಂಖ್ಯೆ 153. ಅಂದರೆ ಲೋಕಸಭೆಯ ಒಟ್ಟು ಬಲದ ಶೇ.28.60 ರಷ್ಟು. ಕೊಲೆ ಹಾಗೂ ಅಪಹರಣದಂಥ ಗಂಭೀರ ಅಪವಾದ ಎದುರಿಸುತ್ತಿರುವ ಸಂಸದರು 74 ಅಂದರೆ ಲೋಕಸಭೆಯ ಬಲದ ಶೇ. 13.83 ರಷ್ಟರಟು. ಗಂಭೀರವಾದ ಕ್ರಿಮಿನಲ್ ಅಪರಾಧಗಳನ್ನು ಎದುರಿಸುತಿರುವ ಸಂಖ್ಯೆ 50. ನಮ್ಮನ್ನಾಳುವ ಜನನಾಯಕರೇ ಈ ರೀತಿ ಪ್ರಮಾಣದಲ್ಲಿದ್ದರೆ ದೇಶದ ಗತಿ ಹೇಗೆ?

ಹಾಗಾದರೆ ನಾವೆಲ್ಲಿ ಎಡುವುತ್ತಿದ್ದೇವೆ? ಶಿಕ್ಷಣ ಕ್ರಮದಲ್ಲಿಯೇ, ಆರ್ಥಿಕ ವ್ಯವಸ್ಥೆಯಲ್ಲಿಯೇ ಜಾತ್ಯಾತೀತ ಹೆಸರಿನಲ್ಲಿ ನಡೆಯುತ್ತಿರುವ ಜಾತೀಯವಾದ, ಮತೀಯವಾದದಲ್ಲಿಯೇ. ದೇಶದ ಉದ್ದಗಲಕ್ಕೂ ಸಾಂಕ್ರಾಮಿಕ ವ್ಯಾಧಿಯಂತೆ ವ್ಯಾಪಿಸಿರುವ ಭ್ರಷ್ಟಚಾರ ಪೂರಿತ ಆಡಳಿತ ವ್ಯವಸ್ಥೆಯಲ್ಲಿಯೇ. ಯಾವುದರಲ್ಲಿ? ಕಾನೂನಿನ ಬಿಗಿತನ ಕಡಿಮೆಯಾಗುತ್ತಲಿದೆ. ಅಲ್ಲಿಯೂ ಭ್ರಷ್ಟಚಾರ ಇಣಿಕಿ ಹಾಕುತ್ತಲಿದೆ. ಕರೀಂಲಾಲ ತೆಲಗಿ, ಅಬ್ದುಲ್ ಮದಾನಿ, ಅಫಜಲ್ ಗುರು ಇವರೆಲ್ಲ ಸೆರೆ ಮನೆಯಲ್ಲಿ ರಾಜೋಪಚಾರ ಹೊಂದಿ ರಾಜಾರೋಷವಾಗಿ ಬದುಕುತ್ತಿದ್ದಾರೆ. ಏನಿದರರ್ಥ?

2008ರ ಅಂಕಿ ಅಂಶಗಳ ಪ್ರಕಾರ ಭಾರತದ ಜನಸಂಖ್ಯೆ 1149.3 ದಶಲಕ್ಷ, ಚೀನ 1324.7 ದಶಲಕ್ಷ ಜನಸಂಖ್ಯೆ ಹೊಂದಿ ಪ್ರಥಮ ಸ್ಥಾನದಲ್ಲಿದೆ 2030ರ ವೇಳೆಗೆ ಭಾರತ ಚೀನಾವನ್ನು ಮೀರಿಸಿ 153 ಕೋಟಿದಾಟಲಿದೆ ಜನಸಂಖ್ಯಾ ತಜ್ಞರ ಪ್ರಕಾರ ಈ ಬೆಳವಣಿಗೆ ಮುಂದುವರಿದರೆ 2050ಕ್ಕೆ 180 ಕೋಟಿ. 2100ಕ್ಕೆ 2 ಶತಕೋಟಿ ದಾಟುತ್ತದೆ. ಅಮರ್ತ್ಯಸೇನ್ ಒಂದೆಡೆ ಹೇಳುತ್ತಾರೆ. 'ಮೊದಲ ಮಗುವಿನ ಪ್ರಾಣ ರಕ್ಷಣೆಯೇ ಅತಿದೊಡ್ಡ ಜನಸಂಖ್ಯಾ ನಿಯಂತ್ರಣ ತಂತ್ರ' ಅಲ್ಲದೆ ಈ ವಿಷಯಗಳ ಬಗ್ಗೆ ಸರಕಾರ ಗಮನಿಸಬೇಕು. ಪೋಷಕರಲ್ಲಿ ಅರಿವು, ಹೆಚ್ಚಾಗಿ ಮಹಿಳೆಯರಲ್ಲಿ ಜಾಗೃತಿ ಮೂಡಿಸುವದು, ಅಪ್ರಾಪ್ತ ವಯಸ್ಸಿನ ಮಕ್ಕಳ ವಿವಾಹಕ್ಕೆ ತಡೆ ಮಾಡುವದು, ಬಡತನ ನಿವಾರಣೆ, ಸಮಾನ ನಾಗರಿಕ ಸಂಹಿತೆ ಕಾಯದೆ ಜಾರಿ ಮಾಡುವದು, ಬಾಂಗ್ಲಾದೇಶ, ಇಂಡೋನ್ನೇಶಿಯಾ, ಕೊಲ್ಲಿಯಂಥ ಇಸ್ಲಾಮಿಕ್ ರಾಷ್ಟ್ರಗಳಲ್ಲಿ ಕುಟುಂಬ ಯೋಜನೆಗಳು ಚಾಲ್ತಿಯಲ್ಲಿವೆ. ಅಲ್ಲಿ ಧರ್ಮ ಅಡ್ಡ ಬಂದಿರುವದಿಲ್ಲ. ಭಾರತದಲ್ಲಿರುವ ಧರ್ಮ ಬೇರೆಯೇ ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಏಕೆಂದರೆ ಧರ್ಮ ಹುಟ್ಟಿದಾಗ ಜನಸಂಖ್ಯೆ ಸಮಸ್ಯೆಯೇ ಇದ್ದಿಲ್ಲ. ನಮ್ಮ ದೇಶದ ದೊಡ್ಡ ಸಮಸ್ಯೆ ಎಂದರೆ ಸಾಕಲು ತಾಕತ್ತು ಇಲ್ಲದವರು ಮಕ್ಕಳನ್ನು ಹುಟ್ಟಿಸಿ ಬೀದಿಗೆ ಬಿಡುವದು. ಇದು ನಿಯಂತ್ರಣವಾಗಬೇಕು. ಮಾನವ ಸಂಪನ್ಮೂಲ ಸದ್ಬಳಕೆಯಾದರೆ ಎಷ್ಟೋ ಸಮಸ್ಯೆಗಳು ನಿವಾರಣೆಯಾಗುತ್ತವೆ. ಜನರು ತಮ್ಮ ತಮ್ಮ ಪ್ರದೇಶದಲ್ಲಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಸೌಲಭ್ಯಗಳನ್ನು ಸಾಧನಗಳನ್ನು ಬಳಸಿಕೊಂಡು ಜೀವನ ಸಾಗಿಸಿದರೆ ಅಭಿವೃದ್ಧಿ ಪಥದಲ್ಲಿ ಸಾಗಬಹುದು.

ಗ್ರಾಮಗಳ ಉದ್ಧಾರ, ಕೃಷಿಕರ ಏಳ್ಗೆ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳ ಪೂರೈಕೆ ಬಗ್ಗೆ ಈಗ ಹೆಚ್ಚು ಹೆಚ್ಚಾಗಿ ಯೋಜನೆಗಳು ರೂಪುಗೊಂಡರೂ ಅವುಗಳ ಕಾರ್ಯ ಪ್ರಾಯೋಗಿತವಾಗಿ ಬರುವದರಲ್ಲಿ ವಿಫಲವಾಗುತ್ತಿವೆ ಯೋಜನೆಗಳಲ್ಲಿ ಸೋಲಿಕೆ ಇದೆ ಎಂಬುದು ಅನೇಕರಿಗೆ ತಿಳಿದಿದ್ದರೂ 'ಜನಜಾಗೃತಿ' ಕಾರ್ಯ ಈ ದೇಶದಲ್ಲಿ ಆಗುತ್ತಿಲ್ಲ. ಹಾಗಾದರೆ ಹಳ್ಳಿಗಳು ಹೇಗೆ ಜೀವಂತವಾಗಿವೆ. ಸಣ್ಣ ಕೃಷಿಕರು ತಾವೇ ಬೆಳೆದು ಅದರಲ್ಲಿ ಸಿಕ್ಕದ್ದೇ ಲಾಭ. ದೊಡ್ಡ ಕೃಷಿಕರು ಯಾಂತ್ರೀಕೃತ ಬೇಸಾಯದಿಂದ ಬೆಳೆದು ಉತ್ಪಾದಿಸಿ ಲಾಭ ಹೊಂದುತ್ತಾರೆ. ಮಧ್ಯಮ ವರ್ಗದ ಕೃಷಿಕರು ಸ್ವಂತ ಕೃಷಿ ಮಾಡಲು ಸಾಧ್ಯವಾಗುತ್ತಿಲ್ಲ ಕೂಲಿಗಳ ಮೂಲಕ ಮಾಡಿಸುವದು ಕಷ್ಟಸಾಧ್ಯ ಹಾಗಾಗಿ ಜಮೀನಿನಲ್ಲಿ ಸಿಕ್ಕಷ್ಟನ್ನು ಪಡೆದು ಜೀವಿಸುತ್ತಿದ್ದಾರೆ ಅದಕ್ಕಾಗಿ ಗ್ರಾಮೀಣ ಯೋಜನೆಗಳು ಮೇಲ್ಮಟ್ಟದಲ್ಲಿ ಕೇವಲ ಅಂಕಿ-ಅಂಶಗಳ ಆಧಾರದಿಂದ ಉನ್ನತ ಅಧಿಕಾರಿಗಳಿಂದ ಐಷಾರಾಮಿಯಾಗಿ ಕುಳಿತು ರೂಪಿತವಾಗದೇ ಪ್ರತ್ಯಕ್ಷ ಅಭ್ಯಸಿಸಿ ಜನರೊಡನೆ ಬೆರೆತು ಕೆಳಹಂತದಲ್ಲಿ ರೂಪಿತವಾಗಬೇಕು.

ಪ್ರತಿ ಗ್ರಾಮದಲ್ಲಿ ಹಿರಿಯ ವ್ಯಕ್ತಿಗಳಿಂದ ಕೂಡಿದ ಸಂಘವನ್ನು ಪಕ್ಷಾತೀತ, ಜಾತ್ಯಾತೀತ, ರಚಿಸಿ ಅವರ ಸಲಹೆ-ಸೂಚನೆ ಹೊಂದಬೇಕು. ಗ್ರಾಮದ ಮಕ್ಕಳು ಅದೇ ಗ್ರಾಮದಲ್ಲಿ ಶಿಕ್ಷಣ ಹೊಂದಬೇಕು. ಹಾಗೂ ಹೆಚ್ಚು ಭೂಮಿ ಇರುವವರು ನಗರಗಳಲ್ಲಿ ಉದ್ಯೋಗ ಅರಸಬಾರದು. ಯುವಕರು, ಸಾವಯುವ ಕೃಷಿ, ಬಹುಮಹಡಿ ಕೃಷಿ ಸಹಜಕೃಷಿ ಶೂನ್ಯ ಕೃಷಿಯಲ್ಲಿರುವ ತಮಗೆ ಅನುಕೂಲವಾದ ವಿಷಯಗಳನ್ನು ತಮ್ಮ ಕೃಷಿಕಾರ್ಯಗಳಲ್ಲಿ ಅಳವಡಿಸಿಕೊಳ್ಳಬೇಕು. ಸಾರ್ವಜನಿಕರು, ತಮ್ಮ ಮನೆಯ ಸುತ್ತಲೂ ಮತ್ತು ಉಪಯೋಗಿಸುವ ಸಾರ್ವಜನಿಕ ಸ್ಥಳಗಳ ಪರಿಸರವನ್ನು ಕಾಪಾಡುವ ಪ್ರಜ್ಞೆ ಹೊಂದಬೇಕು. ಜಗತ್ತಿನಲ್ಲಿ ಆಸ್ಟ್ರೇಲಿಯನ್‌ರು ಶುಚಿತ್ವ ಮತ್ತು ಸುಸಜ್ಜಿತತನವನ್ನು ಕಾಪಾಡುವರದಲ್ಲಿ ಅಗ್ರಗಣ್ಯರು.

ಇತ್ತೀಚೆಗೆ ಇನ್‌ಫೋಸಿಸ್‌ನ ಎನ್.ಆರ್ ನಾರಾಯಣ ಮೂರ್ತಿಯವರು ತಮ್ಮ A Better India A Better World ಪುಸ್ತಕದಲ್ಲಿ ಭಾರತೀಯರು. ಏನನ್ನು ಕಲಿಯಬೇಕು ಮತ್ತು ಏನನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂಬುದನ್ನು ವಿವರಿಸಿದ್ದಾರೆ. ಅದರ ಸಂಕ್ಷಿಪ್ತ

[illegible]

[illegible] ಕುಟುಂಬದ ವಾತಾವರಣ ಪುನಃ ಈಗ ನಿರ್ಮಾಣವಾಗಬೇಕಿದೆ. ಇದರಿಂದ ಚದುರಿದ ಮಾನವೀಯ ಸಂಬಂಧಗಳು ಪುನಃ ಚಿಗುರುತ್ತವೆ. ಹಾಗೆ ಪಾಶ್ಚಿಮಾತ್ಯರಲ್ಲಿರುವ ಕೆಲವು ಗುಣಗಳನ್ನು ನಾವು ಅನುಸರಿಸಬೇಕಾಗಿದೆ. ಅವರು ಸಮಾಜದ ಬಗ್ಗೆ ಸಾರ್ವಜನಿಕ ಒಳಿತಿಗಾಗಿ ಹೆಚ್ಚು ಕಾಳಜಿ ಹೊಂದಿರುತ್ತಾರೆ. ಸಾರ್ವಜನಿಕ ಸ್ಥಳಗಳನ್ನು ತಮ್ಮ ಸ್ವತಂದ್ದು ಎನ್ನುವ ರೀತಿಯಲ್ಲಿ ಕಾಪಾಡುತ್ತಾರೆ. ಸಂಚಾರ ನಿಯಮಗಳನ್ನು ಕಟ್ಟು-ನಿಟ್ಟಾಗಿ ಪಾಲಿಸುತ್ತಾರೆ. ಯಾವದೇ ಸಮಸ್ಯೆಗಳು ಉಂಟದರೂ ಅದಕ್ಕೆ ಸೂಕ್ತ ಪರಿಹಾರವನ್ನು ಹುಡುಕುತ್ತಾರೆ ಯಾವದೇ ವ್ಯಕ್ತಿ ತನ್ನ ಕೆಲಸದಲ್ಲಿ ಸಣ್ಣ ತಪ್ಪು ಮಾಡಿದರೂ ಅವನು ಅದಕ್ಕೆ ಹೊಣೆಗಾರನಾಗಿರುತ್ತಾನೆ ಸಾರ್ವಜನಿಕ ರಂಗದ ಉದ್ದಿಮೆಗಳು ನಷ್ಟದ ಸ್ಥಿತಿಗೆ ಕಾರಣರಾದವರಿಗೆ ಶಿಕ್ಷೆ ಇದೆ. ಅಲ್ಲಿ ಪ್ರತಿಯೊಬ್ಬನಿಗೂ ಕ್ರಮಗೌರವವಿದೆ. ಕೂಲಿಕೆಲಸ ಎಂದು ನಿಕೃಷ್ಟತೆ ಇಲ್ಲ. ಉನ್ನತ ಹುದ್ದೆ ಹೊಂದಿದ ವ್ಯಕ್ತಿಗಳಿಗೆ ಗೌರವ ಸಲ್ಲಿಸುವಂತೆ ಕೂಲಿ ಕೆಲಸದವರಿಗೂ ಗೌರವ ಇದೆ. ಹೊಟ್ಟೆ ಕಿಚ್ಚು, ಸುಳ್ಳು ಹೇಳುವುದು ದೂರವಿದ್ದು ಸ್ಪರ್ಧಾತ್ಮಕ ಮನೋಭಾವ ಇರುತ್ತದೆ. ಸಮಯ ಪಾಲನೆ ಅವರ ಮುಖ್ಯ ಗುಣ. ಇವೆಲ್ಲವನ್ನು ಭಾರತದಲ್ಲಿ ನಕಾರಾತ್ಮಕವಾಗಿ ನೋಡಬೇಕಾಗಿದೆ.

ಒಂದಾನೊಂದು ಕಾಲದಲ್ಲಿ ಭಾರತ ಈ ಮೌಲ್ಯಗಳಿಗೆ ಹೆಸರಾದದ್ದೇ ಆದರೆ ಈಗ ಅವುಗಳನ್ನು ಪಾಲಿಸುತ್ತಿಲ್ಲ. ಪಾಶ್ಚಿಮಾತ್ಯರು ಅವುಗಳನ್ನು ಪಾಲಿಸಿ ನಮಗೆ ಅವರು ಮಾದರಿ ಆಗಿದ್ದಾರೆ. ನಾವು ಈಗ ಕೇಳುತ್ತಿರುವದು ಹಕ್ಕುಗಳನ್ನು ಮಾತ್ರ! ಆ ಹಕ್ಕಿಗೆ ಪ್ರತಿಯಾಗಿ ನಾವು ಸಲ್ಲಿಸುವ ಕರ್ತವ್ಯಗಳನ್ನು ಮರೆತಿರುವೆವು. ನಾವು ನಮ್ಮ ಕುಟುಂಬಕ್ಕೆ ಹೇಗೆ ಭಾದ್ಯಸ್ಥರಾಗಿರುವೆವು ಹಾಗೆ ಸಮಾಜಕ್ಕೆ ಸಹ ಆಗಬೇಕು. ವಿನ್ಸಟನ್ ಚರ್ಚಿಲ್‌ರ ಒಂದು ಮಾತನ್ನು ನೆನಪಿಸುತ್ತಾರೆ "ನಮ್ಮ ಕುಟುಂಬದ ಮೌಲ್ಯಗಳನ್ನು ನಮ್ಮ ಮನೆಯ ಅಂಗಳದಾಚೆಗೆ ವಿಸ್ತರಿಸುವ ಅಗತ್ಯ ಅವಶ್ಯಕತೆ ಇಂದು ಬೇಕಾಗಿದೆ."

'ಸ್ವದೇಶಿ' ಎಂಬುದು ಒಂದು ವ್ಯವಸ್ಥೆ ಸ್ವದೇಶಿ 'ವಿಶ್ವವೆಲ್ಲ ಒಂದಾಗಿ ಸುಖ-ಸಂತೋಷದಿಂದ ಇರಬೇಕು' ಎಂಬ ವಿಶ್ವಮಾನವ ತತ್ವದ ವಿಕೇಂದ್ರಿಕೃತ ರೂಪ ಎನ್ನಬಹುದು. ಪ್ರತಿಯೊಬ್ಬರೂ ತಮ್ಮ ಮೂಲಭೂತ ಸೌಕರ್ಯಗಳನ್ನು ಪೂರೈಸಿಕೊಳ್ಳಲು ತಾವೇ ಸಿದ್ದರಾಗಿ ಸ್ವಾವಲಂಬನೆ ಹೊಂದಬೇಕು. ನಮ್ಮ ದೇಶದ ಸಂಸ್ಕೃತಿ, ರೀತಿ-ನೀತಿ, ಸೌಲಭ್ಯ, ಸಂಪನ್ಮೂಲ, ಸಲಕರಣೆಗಳನ್ನು ಬಳಸಿಕೊಂಡು 'ನಮ್ಮತನ' ಹೊಂದುವದು ಅವಶ್ಯ. ಇದರಿಂದ ಆರ್ಥಿಕ ಸಾಮಾಜಿಕ ಪ್ರಗತಿ ಸಾಧ್ಯ. ನಮ್ಮ ದೇಶದಲ್ಲಿ ಉತ್ಪಾದಿಸಬಲ್ಲ ಈ ವಸ್ತುಗಳನ್ನು ಎಷ್ಟು ಜನರು ಉಪಯೋಗಿಸುವರು, ಎಂಬುದನ್ನು ಯೋಚಿಸಿ ನೋಡಿರಿ.

ನಿತ್ಯೋಪಯೋಗಿ ವಸ್ತುಗಳಾದ ಇಮಾಮಿ, ಹಿಮಾನಿ, ಬೋರೋಪ್ಲಸ್, ವಿಕೋಟರಮೆರಿಕ್, ಡಾಬರ್‌ಆಮ್ಲ ಕೇಶತೈಲ, ನವರತ್ನ ತೈಲ, ಬೋರೋಲಿನ್, ಗೋದ್ರೇಜ್, ಫೇಸ್‌ಪೌಡರ್, ಶೇವಿಂಗ್ ಕ್ರೀಮ್, ಶಾಂಪೂ ಇತ್ಯಾದಿ; ವಿಕೋವಜ್ರದಂತಿ, ಡಾಬರ್, ಬಬುಲ್, ಮೆಸ್‌ವಾಕ್, ಪ್ರಾಮೀಸ್, ನಂಜನಗೂಡು ಟೂಥ್ ಪೇಸ್ಟ್ ಮತ್ತು ಪೌಡರ್.; ಮೈಸೂರ್ ಸ್ಯಾಂಡಲ್ ಸೋಪ್, ಮೈಸೂರ್ ಬೇಬಿ ಸೋಪ್, ಸಿಂಥಾಲ್, ಚಂದ್ರಿಕಾ, ನಿರ್ಮಾ, ಸಂತೂರ್, ಕುಟೀರ್, ಚಂದನ,



ಮೆಡಿಮಿಕ್ಸ್ ಸ್ನಾನದ ಸಾಬೂನುಗಳು; ನಿರ್ಮಾ, 555, ವಿಮಲ್ ಟಾಟಾ ಶುದ್ಧ ಡಿಟರಜೆಂಟ್; ಲೇಸರ್, ಸೂಪರ್ ಮ್ಯಾಕ್ಸ್, ಅಶೋಕ ಭಾರತ ಬ್ಲೇಡುಗಳು; ಉಜಾಲಾ, ರೂಬಿ ನೀಲಿಗಳು; ಆಸ್ಯಾಂಡೀ ಟಾಟಾಕೆಫೆ, ಬ್ರಹ್ಮಪುತ್ರ ಟೀ ಪೌಡರ್; ರಸ್ನಾ, ಲಸ್ಸಿ, ಹಲ್ದಿರಾಮ್ ತಂಪುಪಾನೀಯ; ಲಿಬರ್ಟಿ, ಲಖಾರಿ, ಖಾದಿ ಬೂಟು ಚಪ್ಪಲಿ; ನಟರಾಜ ಅಪ್ಸರಾ ಕ್ಯಾಮೆಲ್ ಪೆನ್ಸ್; ಏಷ್ಯನ್ ಪೇಂಟ್ಸ್ ಟಚ್‌ವುಡ್ ಓರಿಯೆಂಟ್, ಬೆಡಾನ್, ಪೋಲಾರ್, ಉಷಾ, ಬಜಾಜಾ ಫ್ಯಾನ್ಸ್; ಸೀಮಾ ಸೂರ್ಯ ಪ್ರಕಾಶ್, ಆ್ಯಂಕರ್ ಮೈಸೂರ ಬಲ್ಬ್‌ಗಳು; ಟೈಟನ್ ಹೆಚ್‌ಎಂಟಿ ಅಜಂತಾ ವಾಚ್‌ಗಳು; ವಿಕ್ರಾಂತ್ ಎಂಆರ್‌ಎಫ್ ಅಟ್ಲಾಸ್ ಅಪೋಲೋ ಟೈರ್‌ಗಳು; ಅಮುಲ್, ಪಾರ್ಲೆ ಬ್ರಿಟಾನಿಯಾ, ನ್ಯೂಟ್ರಿನ್, ಸಾರೆ ಬಿಸ್ಕಿಟ್‌ಗಳು; ಗೋದ್ರೇಜ್ ಬಿಪಿಎಲ್ ಬಜಾಜ್ ಸುಮಿತ್, ವಿಡಿಯೋಕಾನ್ ಎಲೆಕ್ಟ್ರಾನಿಕ್ ಸಾಮಾನುಗಳು; ಎಂಟಿಆರ್ ಪಿಲ್ಸಬರಿ ಲಜ್ಜತ್ ವಾಸು ಇ. ರೆಡಿಪುಡ್ ಮಸಾಲ; ಖಾದಿ, ಮಫತಲಾಲ್, ಬಾಂಬೆ ಡೈಯಿಂಗ್ ದಿನೇಶ, ವಿಮಲ್ ಗ್ವಾಲಿಯರ್ ಪ್ರಿಯದರ್ಶಿನಿ, ಕೆ-ಟೆಕ್ಸ್ ಕೋಆಪ್‌ಟೆಕ್ಸ್ ಇ, ಬಟ್ಟೆ ಗಳು... ಈ ರೀತಿ ಇನ್ನೂ ಅನೇಕ ಇವೆ ಮುಖ್ಯವಾದವುಗಳನ್ನು ಹೇಳಲಾಗಿದೆ ಎಂದು ಭಾವಿಸಿರುವೆ.

ಇತ್ತೀಚಿನ ಒಂದು ಸಮೀಕ್ಷೆಯ ಪ್ರಕಾರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತ ವಿಶಿಷ್ಟ ಸ್ಥಾನ ಹೊಂದಿದೆ. ಭಾರತ ಏಷ್ಯಾಖಂಡದಲ್ಲಿ ಅಷ್ಟೇ ಅಲ್ಲ ಪ್ರಪಂಚದಲ್ಲಿ ತನ್ನ ವಿಶಿಷ್ಟ ಛಾಪು ಮೂಡಿಸಿದೆ ಎಂದು ಅಮೇರಿಕ ತಿಳಿದು ಭಾರತದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದೆ. ವಿಶ್ವಸಂಸ್ಥೆ ಶಾಂತಿಪಾಲನೆ ಪಡೆಯಲ್ಲಿ, ಆಫ್ರಿಕಾ ಖಂಡ ಸೇರಿದಂತೆ ವಿಶ್ವದ ಹಲವೆಡೆ ಶಾಂತಿ ಸ್ಥಾಪನೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಆ ದೇಶಗಳಲ್ಲಿ ಜನೋಪಯೋಗಿ ಶಿಕ್ಷಣ ಸೇರಿದಂತೆ ಕಾರ್ಯ ನಿರ್ವಹಿಸುತ್ತಿದೆ. ಎರಡು ವರ್ಷದ ಹಿಂದೆ ಪಾಕ್ ಭೂಕಂಪ ಪೀಡಿತ ಸ್ಥಳಗಳಿಗೆ ವೈದ್ಯಕೀಯ ತುರ್ತು ಅವಶ್ಯಕತೆಗಳನ್ನು ಪೂರೈಸಿತ್ತು ಭಾರತ ಉದ್ಯಮಿಗಳು ವಿದೇಶಿಗಳಲ್ಲಿ ಕಂಪನಿ ಹುಡಿಕೆ, ಸ್ಥಾಪಿಸುತ್ತಿದ್ದಾರೆ ಚಂದ್ರನತ್ತ ಸಾಗುವಷ್ಟು ತಂತ್ರಜ್ಞಾನದಲ್ಲಿ ಮುಂದುವರಿದಿದೆ ಹಲವು ವ್ಯಕ್ತಿಗಳು ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಸೇರಿದ್ದಾರೆ.

ಆಂತರಿಕವಾಗಿ ಹಲವಾರು ದಶಕಗಳಿಂದ ಅನೂಚಾನವಾಗಿರುವ, ನಿರುದ್ಯೋಗ, ಬಡತನ, ಅನಕ್ಷರತೆ, ಜನಸಂಖ್ಯಾ ಬೆಳವಣಿಗೆ, ಶೋಷಣೆ, ಭ್ರಷ್ಟಾಚಾರ, ಬೆಲೆ ಏರಿಕೆ, ಕಾಶ್ಮೀರ ಸಮಸ್ಯೆಗಳ ಜೊತೆಗೆ ಇತ್ತೀಚಿನ ಕೋಮವಾದ, ಭಯೋತ್ಪಾದನೆ ಉಗ್ರಾಮಿ ಚಟುವಟಿಕೆ, ನಕ್ಸಲ ಬಾರಿ ಸಮಸ್ಯೆ, ವೋಟ್ ಬ್ಯಾಂಕ್ ಮತ್ತು ಅಪರಾಧಿ ರಾಜಕಾರಣ, ಅಸ್ಥಿರ ಸರಕಾರಗಳು, ಅಧಿಕಾರ ದಾಹದ ಪಕ್ಷಪದ್ಧತಿ, ಕೃಷಿ ಸಮಸ್ಯೆ ಈ ಎಲ್ಲ ಚಕ್ರವ್ಯೂಹದಲ್ಲಿ ಸಾಮಾನ್ಯ ನಲುಗುತ್ತಿದ್ದಾನೆ. ಇದಕ್ಕೆ ಕೊನೆ ಇಲ್ಲವೇ ಎಂಬ ಪ್ರಶ್ನೆ ಸದಾ ಕಾಡುತ್ತಲಿದೆ. □

ಇತ್ತೀಚಿನ ಒಂದು ಸಮೀಕ್ಷೆಯ ಪ್ರಕಾರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತ ವಿಶಿಷ್ಟ ಸ್ಥಾನ ಹೊಂದಿದೆ. ಭಾರತ ಏಷ್ಯಾಖಂಡದಲ್ಲಿ ಅಷ್ಟೇ ಅಲ್ಲ ಪ್ರಪಂಚದಲ್ಲಿ ತನ್ನ ವಿಶಿಷ್ಟ ಛಾಪು ಮೂಡಿಸಿದೆ ಎಂದು ಅಮೇರಿಕ ತಿಳಿದು ಭಾರತದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದೆ. ವಿಶ್ವಸಂಸ್ಥೆ ಶಾಂತಿಪಾಲನೆ ಪಡೆಯಲ್ಲಿ, ಆಫ್ರಿಕಾ ಖಂಡ ಸೇರಿದಂತೆ ವಿಶ್ವದ ಹಲವೆಡೆ ಶಾಂತಿ ಸ್ಥಾಪನೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಆ ದೇಶಗಳಲ್ಲಿ ಜನೋಪಯೋಗಿ ಶಿಕ್ಷಣ ಸೇರಿದಂತೆ ಕಾರ್ಯ ನಿರ್ವಹಿಸುತ್ತಿದೆ.

ಮಗು - ತಾಯಿ ಮತ್ತು ಬಂದೂಕು

ಕಾಶ್ಮೀರದಲ್ಲಿ ಹಿಮ-ಮಂಜು
ಮಂಜು ಮುಸುಕಿದ ಬದುಕು
ಬಂದೂಕು, ಗುಂಡಿನ ಸುರಿಮಳೆ
ಹದಿಹರೆಯದ ಹುಡುಗರು
ಬಂದೂಕು-ಭಯೋತ್ಪಾದನೆ-ರಕ್ತನೋಕುಳಿ!

ಇಲ್ಲಿ,
ಮದ್ದು ಗುಂಡುಗಳ ಸುರಿಮಳೆಯಲ್ಲಿ
ಅನಾಥ ಮಗುವೊಂದು
ಹಿಮದಲ್ಲಿ ಚಿತ್ರ ಬಿಡಿಸತೊಡಗಿದೆ.
ಕೈ-ಕಾಲು-ಕಣ್ಣು-ಮೂಗು
ಥೇಟ್ ತನ್ನ ತಾಯಿಯ ಚಿತ್ರ!

ನೋಡಿ ಖುಷಿ ಪಡುವಷ್ಟರಲ್ಲೇ
ಕಣ್ಣೆದುರಿನ ಚಿತ್ರ ಕರಗತೊಡಗುತ್ತದೆ
ಕಿವಿ-ಮೂಗು-ರುಂಡ-ಕೈಕಾಲು
ಒಂದೊಂದೇ ಉಚ್ಚಿ ಬೀಳುತ್ತವೆ.
ತಾನೇ ನಿರ್ಮಿಸಿದ ತನ್ನ ತಾಯಿಯ ಚಿತ್ರ
ಹೀಗೆ ತನ್ನ ಕಣ್ಮುಂದೇ ಕರಗಿ
ಹೋಗುತ್ತಿರುವುದನ್ನು ಕಂಡು
ಮಗುವಿನ ಕಣ್ಣಾಲೆಗಳು ತುಂಬಿ ಬರುತ್ತವೆ
ಮಗುವಿನ ಕಣ್ಣೀರ ಹನಿಯೊಂದಿಗೆ
ತಾಯಿಚಿತ್ರ ಅಳುಕಿ ಹೋಗುತ್ತದೆ.

ಅಲ್ಲಿ,
ಎದೆ ತನಕ ಬೆಳೆದುನಿಂತ ಮಗ
ಭಯೋತ್ಪಾದಕರ ಗುಂಡಿಗೆ ಬಲಿ!
ತಾಯಿ ಎದೆ ಎದೆ ಬಡಿದುಕೊಂಡು
ಅಳುತ್ತಿದ್ದಾಳೆ-ಚೀರುತ್ತಿದ್ದಾಳೆ,
ಆ ಕ್ರಂದನ ಮುಗಿಲು ಮುಟ್ಟಿದೆ
ಕರುಳ ಬಳ್ಳಿಯ ಕಥೆ
ವ್ಯಥೆಯಾಗಿ ಹರಿದಿದೆ!

ಚಿತ್ರಬಿಡಿಸಿದ ಮಗುವಿನ ಕಣ್ಣೀರು
ಮಗನನ್ನು ಕಳೆದುಕೊಂಡ ತಾಯಿ ಕಣ್ಣೀರು
ನಿತ್ಯ ಹರಿದೂ-ಹರಿದೂ
ಕಾಶ್ಮೀರ ಕಣಿವೆಯ
ಹೂಗಳೆಲ್ಲ ಕೆಂಪಾಗಿವೆ.
ಪಟಾಕಿ ಸಿಡಿಸಿದಂತೆ
ಮತ್ತೆ ಮತ್ತೆ ಬಂದೂಕಿನ
ಸದ್ದು ಕೇಳುತ್ತಲೇ ಇದೆ
ಮಗು ಅಳುತ್ತಲೇ ಇದೆ!

○ ಡಾ.ಬಸವರಾಜ ಸಬರದ

ಸಂಸ್ಕೃತ ವಿಶ್ವವಿದ್ಯಾಲಯವೆಂಬ ಹೆಣದ ಶೃಂಗಾರ

ಕೆ. ಎಲ್. ಚಂದ್ರಶೇಖರ್ ಐಜೂರ್

ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆ, ಗೋ ಹತ್ಯೆ ನಿಷೇಧ, ಮತಾಂತರ ನಿಷೇಧ ಕಾರ್ಯಕ್ರಮಗಳನ್ನು ತಮ್ಮ ಸರ್ಕಾರದ ಅಧಿಕೃತ ಯೋಜನೆಯಂತೆ ಜಾರಿಮಾಡಲು ಹೊರಟಿರುವ ಬಿಜೆಪಿಯ ನೀಚ ನಿಲುವುಗಳನ್ನು ಕನ್ನಡದ ಲೇಖಕ ವರ್ಗ ದಿಟ್ಟವಾಗಿ ಖಂಡಿಸುತ್ತಲೇ ಬಂದಿದೆ. ಬಿಜೆಪಿ ಈಗ ಸಂಸ್ಕೃತದಂತಹ ಸತ್ತ ಹೆಣಕ್ಕೆ ಕೈಹಾಕಿದೆ. ಸತ್ತ ಹೆಣಕ್ಕೆ ಎಷ್ಟು ಬೇಕಾದರೂ ಶೃಂಗಾರ ಮಾಡಬಹುದು. ಅದಕ್ಕೆ ಜೀವ ತುಂಬಲು ಸಾಧ್ಯವಿಲ್ಲವೆಂಬ ಕನಿಷ್ಠ ಅರಿವು ನಮ್ಮನ್ನಾಳುವ ಮಂದಿಗೆ ಗೊತ್ತಿದ್ದಂತೆ ಕಾಣುತ್ತಿಲ್ಲ. ಈಗ ಬಿಜೆಪಿ ಮಾಡಲು ಹೊರಟಿರುವುದು ಇಷ್ಟೇ, 'ಹೆಣಕ್ಕೆ ಶೃಂಗಾರ ಮಾಡುವ ಕೆಲಸ'. ಒಂದು ಕಾಲದಲ್ಲಿ ಬಹುಜನರಿಗೆ ನಿರಾಕರಿಸಲ್ಪಟ್ಟ ಭಾಷೆಯೊಂದು ತನ್ನ ಆಕ್ರಮಣ, ಯಜಮಾನಿಕೆ ಮತ್ತು ಸನಾತನಿಗಳ ಬಿಗಿಹಿಡಿತದಿಂದಾಗಿಯೇ ತೀರಿಕೊಂಡದ್ದು ಈಗ ಇತಿಹಾಸ. ಈಗ ಇಂಥ ಸತ್ತ ಭಾಷೆಯ ನಾರುವ ನಾತದಿಂದ ಇನ್ನೂ ಉಸಿರಾಡುತ್ತಿರುವ ವರ್ಗವೊಂದು ಆ ನಾತದಲ್ಲೇ ತನ್ನ ಅಧಿಪತ್ಯದ ಉಳಿವಿಗಾಗಿ ನಡೆಸುತ್ತಿರುವ ಸರ್ಕಸ್ಸುಗಳೆಲ್ಲ ಈ ನಾಡಿನ ಪ್ರಜ್ಞಾವಂತರ ಕಣ್ಣಿಗೆ ಎದ್ದು ಕಾಣುತ್ತಿದೆ.

ತಿರುಪತಿ ತಿಮ್ಮಪ್ಪನಿಗೆ ಕಿರೀಟ ಕೊಡಿಸಿದಂತಹ ಅಡ್ಡಕಸಬಿ ದುಡ್ಡಿನಲ್ಲಿ ಈ ಸರ್ಕಾರದ ನೀಚರು ವೇದ ಸಂಸ್ಕೃತ ವಿಶ್ವವಿದ್ಯಾಲಯವನ್ನೋ, ರಾಷ್ಟ್ರೋತ್ಥಾನದ ಚೆಡ್ಡಿ ಪುಸ್ತಕಗಳನ್ನೋ ಈ ನಾಡಿಗೆ, ಈ ನಾಡಿನ ಶಾಲೆಗಳ ಎಳೆಯ ಮಕ್ಕಳಿಗೆ ಕೊಡಲು ಹೊರಟಿಲ್ಲ. ಈ ಹರಾಮಿ ಕೆಲಸಗಳಿಗೆ ಬಳಕೆಯಾಗುತ್ತಿರುವುದು ಈ ಮಣ್ಣಿನ ಜನ ತಮ್ಮ ಬೆವರು ಬಸಿದು ಸರ್ಕಾರಕ್ಕೆ ಕಟ್ಟಿರುವ ತೆರಿಗೆ ಹಣ. ಮಠಮಂದಿರಗಳಲ್ಲಿ ಬಿಟ್ಟಿತಿಂದು ಕೊಬ್ಬಿರುವ ಹಂದಿಗಳ ರಕ್ಷಣೆಗೆಂದೇ ಈ ಸರ್ಕಾರ ಟೊಂಕಕಟ್ಟಿ ನಿಂತಂತಿದೆ. ತಮ್ಮ ಜುಟ್ಟು ಜನಿವಾರ ಬ್ರಾಹ್ಮಣ್ಯಗಳನ್ನು ಕಳಚಿಕೊಳ್ಳುವುದರ ಬದಲು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳುತ್ತಿರುವ ಸನಾತನಿಗಳು, ವೈದಿಕ-ಅಗ್ರಹಾರಗಳ ಗೊಂಡಾರಣ್ಯದ ಲೇಖಕರು ಕರ್ನಾಟಕ ಇನ್ನೂ ಸಂಪೂರ್ಣವಾಗಿ ಗುಜರಾತ್ ಆಗದಿರುವುದಕ್ಕೆ ಖೇದಗೊಂಡಿರಬಹುದು. ಧರ್ಮ, ದೇಶಪ್ರೇಮದ ಹೆಸರಿನಲ್ಲಿ ಮುಗ್ಧಮಕ್ಕಳ ಪಠ್ಯಗಳಲ್ಲಿ ವಿಷ ತುಂಬುವ ವಿಕೃತ ಕೆಲಸಗಳನ್ನು ಈ ದೊಡ್ಡ ದೇಶದಲ್ಲಿ ಸನಾತನಿಗಳಲ್ಲದೆ ಬೇರಿನ್ನ್ಯಾರೂ ತಾನೇ ಮಾಡಿಯಾರು. ಎಲ್ಲಿ issueಗಳಿರುವುದಿಲ್ಲವೋ ಅಲ್ಲಿ issueಗಳನ್ನು ಹುಟ್ಟುಹಾಕುವುದು ಸನಾತನಿಗಳ ನರನಾಡಿಗಳಿಗೆ ಅಂಟಿಕೊಂಡಿರುವ ಮೂಲಭೂತ ಕಾಯಿಲೆಯಂತೆ ಕಾಣುತ್ತದೆ. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯದ ಎರಡು ಶ್ರೇಷ್ಠ ಮನಸ್ಸುಗಳಾದ ಡಾ.ಚಂದ್ರಶೇಖರ ಕಂಬಾರ ಮತ್ತು ಡಾ.ಜಿ.ಎಸ್.ಶಿವರುದ್ರಪ್ಪನವರನ್ನು ಈ ನಾಡಿಗೆ ಸಂಸ್ಕೃತ ವಿಶ್ವವಿದ್ಯಾಲಯದ ಅಗತ್ಯವಿದೆಯೇ ಎಂದು ಮಾತಿಗೆಳೆದಾಗ, ಈ ಇಬ್ಬರು ನಿಷ್ಠುರವಾಗಿ ಅದರ ಅಗತ್ಯವಿಲ್ಲವೆಂದು ಹೇಳಿದರು. ಚಂದ್ರಶೇಖರ ಕಂಬಾರರು ಸಂಸ್ಕೃತವನ್ನು ಮೃತ ಭಾಷೆಯೆಂದು ಕರೆದರೆ ಜಿಎಸ್ಸೆಸ್ ಅದನ್ನು ಚಲಾವಣೆಯಲ್ಲಿಲ್ಲದ ಸ್ಥಗಿತಗೊಂಡ ಭಾಷೆ ಎಂದರು. ಈ ಇಬ್ಬರೊಂದಿಗೂ ನಡೆಸಿದ ಸಂದರ್ಶನದ ಪೂರ್ಣಪಾಠ ಇಲ್ಲಿದೆ.

ಡಾ.ಚಂದ್ರಶೇಖರ ಕಂಬಾರರೊಂದಿಗೆ ನಡೆಸಿದ ಸಂದರ್ಶನದ ಭಾಗ

ಪ್ರಶ್ನೆ : ನೀವು ಹಿಂದೊಮ್ಮೆ 'ಇಡೀ ಜಾನಪದ ಸಾಹಿತ್ಯವೇ ಸಾಯುತ್ತಿದೆ ಅದನ್ನು ಉಳಿಸಿಕೊಳ್ಳುವ ಪ್ರಯತ್ನಕ್ಕಿಂತ ಅದಕ್ಕೊಂದು ಗೌರವಯುತ ಸಂಸ್ಕಾರವಾದರೂ ಸಿಗಬೇಕು' ಎಂದು ಹೇಳಿದ್ದಿರಿ. ಇದು ಇವತ್ತಿನ ಸಂಸ್ಕೃತ ಭಾಷೆಗೂ ಹೆಚ್ಚು ಅನ್ವಯಿಸುತ್ತದೆ ಎಂದು ನಿಮಗನ್ನಿಸುತ್ತದೆಯೇ?

ಕಂಬಾರ: ಜಾನಪದ ಮತ್ತು ಸಂಸ್ಕೃತವನ್ನು ಹೋಲಿಸುವ ಮಾತುಗಳೇ ಬೇಡ. ಜಾನಪದ ಸಾಹಿತ್ಯಕ್ಕಿರುವ Oralityಯನ್ನು ನಾವು ಸಂಸ್ಕೃತದಲ್ಲಿ ಯಾವತ್ತೂ ಕಾಣಲು ಸಾಧ್ಯವಿಲ್ಲ. ಸಂಸ್ಕೃತ ಒಂದು ಲಿಖಿತ ಭಾಷೆ ಅನ್ನುವುದನ್ನು ಬಿಟ್ಟರೆ ಜನರ ನಾಲಿಗೆಯಿಂದ ನಾಲಿಗೆಗೆ ಹರಿದಾಡುವ ಮೌಖಿಕ ಭಾಷೆಯೆಂದು ಪರಿಗಣಿಸುವುದಕ್ಕೆ ಸಾಧ್ಯವೇ ಇಲ್ಲ. ನಾನು ನಿಮ್ಮ ಕೈಲಿ ಜಾನಪದ ಸಾಹಿತ್ಯವನ್ನು ಉಳಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲವೆಂದಾದರೆ ಅದರ ಸಾವಿಗೆ ಗೌರವದ ಸಂಸ್ಕಾರವಾದರೂ ಕೊಡಿ ಎಂದೆ. ಈ ಮಾತುಗಳನ್ನು ಬಹುಜನರ ಭಾಷೆಯಲ್ಲದ ಸಂಸ್ಕೃತದ ಬಗ್ಗೆ ಹೇಳಲು ಸಾಧ್ಯವಿಲ್ಲ.

ಪ್ರಶ್ನೆ: ಒಂದು ಭಾಷೆ ಬೆಳೆಯಬೇಕೆಂದರೆ ಅದಕ್ಕೊಂದು ವಿಶ್ವವಿದ್ಯಾಲಯದ ಅಗತ್ಯವಿದೆಯೇ?

ಕಂಬಾರ: ಭಾಷೆಯ ಬೆಳವಣಿಗೆಗೋಸ್ಕರ ವಿಶ್ವವಿದ್ಯಾಲಯ ಸ್ಥಾಪಿಸುವುದು ಖಂಡಿತ ಬೇಕಿಲ್ಲ. ಭಾಷೆ ಅನ್ನುವುದು ವಿಶ್ವವಿದ್ಯಾಲಯದ ಮೂಲಕ ಬೆಳೆಯುವಂತಹ ಪ್ರಕ್ರಿಯೆಯಲ್ಲ.

ಪ್ರಶ್ನೆ: ಇವತ್ತು ಈ ದೇಶದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಪ್ರತ್ಯೇಕವಾಗಿ ಸಂಸ್ಕೃತ ಭಾಷೆಯ ವಿಭಾಗಗಳಿದ್ದು, ಮತ್ತದು ಚಲನೆಯನ್ನೇ ಕಳೆದುಕೊಂಡು ಸೊರಗಿರುವಾಗ ಪ್ರತ್ಯೇಕ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಗೆ ಹೊರಟಿರುವ ಈ ಸರ್ಕಾರದ ಕ್ರಮ ಎಷ್ಟು ಸರಿ?

ಕಂಬಾರ: ಭಾರತದ 12 ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಭಾಷೆ ಕಲಿಸುವ 23 ಪ್ರತ್ಯೇಕ

ಡಾ.ಚಂದ್ರಶೇಖರ ಕಂಬಾರ

ತಿರುಪತಿ ತಿಮ್ಮಪ್ಪನಿಗೆ ಕಿರೀಟ ಕೊಡಿಸಿದಂತಹ ಅಡ್ಡಕಸಬಿ ದುಡ್ಡಿನಲ್ಲಿ ಈ ಸರ್ಕಾರದ ನೀಚರು ವೇದ ಸಂಸ್ಕೃತ ವಿಶ್ವವಿದ್ಯಾಲಯವನ್ನೋ, ರಾಷ್ಟ್ರೋತ್ಥಾನದ ಚೆಡ್ಡಿ ಪುಸ್ತಕಗಳನ್ನೋ ಈ ನಾಡಿಗೆ, ಈ ನಾಡಿನ ಶಾಲೆಗಳ ಎಳೆಯ ಮಕ್ಕಳಿಗೆ ಕೊಡಲು ಹೊರಟಿಲ್ಲ. ಈ ಹರಾಮಿ ಕೆಲಸಗಳಿಗೆ ಬಳಕೆಯಾಗುತ್ತಿರುವುದು ಈ ಮಣ್ಣಿನ ಜನ ತಮ್ಮ ಬೆವರು ಬಸಿದು ಸರ್ಕಾರಕ್ಕೆ ಕಟ್ಟಿರುವ ತೆರಿಗೆ ಹಣ. ಮಠ ಮಂದಿರಗಳಲ್ಲಿ ಬಿಟ್ಟಿ ತಿಂದು ಕೊಬ್ಬಿರುವ ಹಂದಿಗಳ ರಕ್ಷಣೆಗೆಂದೇ ಈ ಸರ್ಕಾರ ಟೊಂಕಕಟ್ಟಿ ನಿಂತಂತಿದೆ. ತಮ್ಮ ಜುಟ್ಟು ಜನಿವಾರ ಬ್ರಾಹ್ಮಣ್ಯಗಳನ್ನು ಕಳಚಿಕೊಳ್ಳುವುದರ ಬದಲು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳುತ್ತಿರುವ ಸನಾತನಿಗಳು, ವೈದಿಕ-ಅಗ್ರಹಾರಗಳ ಗೊಂಡಾರಣ್ಯದ ಲೇಖಕರು ಕರ್ನಾಟಕ ಇನ್ನೂ ಸಂಪೂರ್ಣವಾಗಿ ಗುಜರಾತ್ ಆಗದಿರುವುದಕ್ಕೆ ಖೇದಗೊಂಡಿರಬಹುದು.

ವಿಭಾಗಗಳಿವೆ ಮತ್ತು ಸಂಸ್ಕೃತದ ಬೆಳವಣಿಗೆಗೆ 1400ಕೋಟಿ ರೂಪಾಯಿಗಳನ್ನು ಪ್ರತಿವರ್ಷ ಖರ್ಚುಮಾಡಲಾಗುತ್ತಿದೆ. ಇಷ್ಟಾದರೂ ಭಾಷೆಯ ಅಭಿವೃದ್ಧಿಯಲ್ಲಿ ಸಂಸ್ಕೃತದ ಸಾಧನೆ ಮಾತ್ರ ಶೂನ್ಯ. ಈಗಿರುವ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಭಾಷೆಯನ್ನು ಬಲಪಡಿಸಲು ಹೊರಟರೆ ಸಾಕು. ಪ್ರತ್ಯೇಕ ಸಂಸ್ಕೃತ ವಿಶ್ವವಿದ್ಯಾಲಯದ ಅಗತ್ಯ ಖಂಡಿತ ಬರದು.

ಇವತ್ತು ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ, ಕಲೆ, ಸಾಹಿತ್ಯದ ಅನೇಕ ಶಾಖೆಗಳನ್ನು ತೆರೆದು ವಿದ್ಯಾರ್ಥಿಗಳನ್ನು ಇನ್ನಷ್ಟು ಮುಟ್ಟಬೇಕಾದ ತುರ್ತಿದೆ. ಸರ್ಕಾರಗಳು ತೀರಾ ಅಗತ್ಯವಿರುವ, ವಿದ್ಯಾರ್ಥಿಗಳ ಜ್ಞಾನ ಬಲವರ್ಧನೆಯ ಮಾರ್ಗಗಳನ್ನು ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿಸಿ ಜ್ಞಾನದ ವಿವಿಧ ಶಾಖೆಗಳನ್ನು ಮತ್ತಷ್ಟು ವಿಸ್ತರಿಸುವ ಕೆಲಸಗಳನ್ನು ಮಾಡಬೇಕು. ಇದನ್ನು ಬಿಟ್ಟು ಸತ್ತ ಭಾಷೆಯೊಂದಕ್ಕೆ ವಿಶ್ವವಿದ್ಯಾಲಯದ ಹೆಸರಿನ ತೇಪೆ ಹಚ್ಚುವ ಕೆಲಸಗಳನ್ನು ಮಾಡಹೊರಟರೆ ಅದು ಹಲವು ಅನುಮಾನಗಳನ್ನು ಹುಟ್ಟುಹಾಕುತ್ತದೆ.

ಪ್ರಶ್ನೆ: ಸಂಸ್ಕೃತ ಒಂದು ಮೃತ ಭಾಷೆ ಅನ್ನುವುದನ್ನು ನೀವು ಒಪ್ಪಿಕೊಳ್ಳುತ್ತೀರಾ?

ಕಂಬಾರ: ಹೌದು ಸಂಸ್ಕೃತ ಒಂದು ಮೃತ ಭಾಷೆ ಎನ್ನುವುದನ್ನು ಒಪ್ಪಿಕೊಳ್ಳುವೆ.

ಪ್ರಶ್ನೆ: ಹಾಗಿದ್ದರೆ ಮೃತ ಭಾಷೆಯಂತಿರುವ ಸಂಸ್ಕೃತದಿಂದ ಇವತ್ತಿನ ಕನ್ನಡ ಸಾಹಿತ್ಯ ಜಗತ್ತಿಗೆ ಏನೂ ಅನುಕೂಲಗಳಿಲ್ಲವೇ?

ಕಂಬಾರ: ಸಂಸ್ಕೃತವನ್ನು ನೆಚ್ಚಿಕೊಂಡು ಬದುಕುತ್ತಿರುವ ಭಾಷೆ ಕನ್ನಡವಲ್ಲ. ರವೀಂದ್ರನಾಥ ಟ್ಯಾಗೋರರು ಹೇಳಿರುವ ಹಾಗೆ ಸಂಸ್ಕೃತ ಸಮುದ್ರ ಇರಬಹುದೇನೋ. ಆದರೆ ಅದು ನದಿಯಂತೆ ಹರಿಯುವ ಭಾಷೆಯಂತೂ ಖಂಡಿತ ಅಲ್ಲ.

ಪ್ರಶ್ನೆ: ನೆರೆಯ ತಮಿಳು, ತೆಲುಗು, ಮಲಯಾಳಂ, ಮರಾಠಿ ಭಾಷೆಗಳ ಜೊತೆ ಅನುಸಂಧಾನಕ್ಕೆ ತೊಡಗಬೇಕಾದ ಈ ಹೊತ್ತಲ್ಲಿ ಚಲಾವಣೆಯಲ್ಲಿಲ್ಲದ ಮೃತಭಾಷೆ ಸಂಸ್ಕೃತ ವಿಶ್ವವಿದ್ಯಾಲಯದ ಸ್ಥಾಪನೆ ಮೂಲಕ ಸರ್ಕಾರ ಏನನ್ನು ಹೇಳಲು ಹೊರಟಿದೆ?

ಕಂಬಾರ: ನಾವು ಸಾಹಿತ್ಯದ ವಿವಿಧ ಪ್ರಕಾರಗಳನ್ನು ತಮಿಳು, ತೆಲುಗು, ಬೆಂಗಾಲಿ, ಮರಾಠಿ, ಮಲಯಾಳಂ ಭಾಷೆಗಳಿಂದ ಕನ್ನಡಕ್ಕೆ ತಂದಿರುವಷ್ಟು ಸಂಸ್ಕೃತದಿಂದ ಪಡೆದುಕೊಂಡಿಲ್ಲ. ಈ ನೆರೆಯ ಭಾಷೆಗಳ ಜೊತೆಗೆ ನಮ್ಮ ಅನುಸಂಧಾನಗಳು ಬೆಳೆದಿರುವುದೇ ಕೊಡುಪಡೆಯುವ ಸಾಹಿತ್ಯದ ಅನುವಾದಗಳಿಂದ. ಇವತ್ತು ಇಂಗ್ಲಿಷ್ ಭಾಷೆ ಬೆಳೆದಂತೆ ಅದರೊಂದಿಗೆ ನಾವು ಬೆಳೆಯಬೇಕಾದ ಅನಿವಾರ್ಯತೆ ಇದೆ. ಈ ಎಲ್ಲ ಭಾಷೆಗಳ ಜೊತೆಗೂಡಿ ನಡೆಯುವ ಸಾಧ್ಯತೆ ಮತ್ತು ಅವಕಾಶಗಳನ್ನು ನಾವು ಸಂಸ್ಕೃತದಲ್ಲಿ ಕಾಣಲಾಗದು.

ಜಾನಪದ ಸಾಹಿತ್ಯದಲ್ಲಿರುವ ಭಾಷೆಯ ಮಿಡಿತವನ್ನು ನಾವು ಸಂಸ್ಕೃತದಲ್ಲಿ ಕಾಣಲಾರೆವು. ಬಿ.ಜೆ.ಪಿಯಂತಹ ಸರ್ಕಾರ ಸಂಸ್ಕೃತವನ್ನು ಒಂದು ವಿಶ್ವವಿದ್ಯಾಲಯದ ಮಟ್ಟದಲ್ಲಿ ಸ್ಥಾಪಿಸುವ ಕೆಲಸಗಳನ್ನು ಮಾಡ ಹೊರಟರೆ ಅದು ವಿಶ್ವವಿದ್ಯಾಲಯದ ಹಂತದಲ್ಲಿ ಮೂಢನಂಬಿಕೆಗಳನ್ನು ಬಿತ್ತನೆ ಮಾಡಲು ಹೊರಟಂತೆ ಕಾಣುತ್ತದೆ. ಬಿಜೆಪಿಯಂತಹ ಬಲಪಂಥೀಯ ದೋರಣೆಯುಳ್ಳ ಪಕ್ಷಕ್ಕೆ ಶಿಕ್ಷಣವೇ ಬಹುದೊಡ್ಡ ಹಿಡನ್

ಕಂಬಾರ: ನಾವು ಸಾಹಿತ್ಯದ ವಿವಿಧ ಪ್ರಕಾರಗಳನ್ನು ತಮಿಳು, ತೆಲುಗು, ಬೆಂಗಾಲಿ, ಮರಾಠಿ, ಮಲಯಾಳಂ ಭಾಷೆಗಳಿಂದ ಕನ್ನಡಕ್ಕೆ ತಂದಿರುವಷ್ಟು ಸಂಸ್ಕೃತದಿಂದ ಪಡೆದುಕೊಂಡಿಲ್ಲ. ಈ ನೆರೆಯ ಭಾಷೆಗಳ ಜೊತೆಗೆ ನಮ್ಮ ಅನುಸಂಧಾನಗಳು ಬೆಳೆದಿರುವುದೇ ಕೊಡುಪಡೆಯುವ ಸಾಹಿತ್ಯದ ಅನುವಾದಗಳಿಂದ. ಇವತ್ತು ಇಂಗ್ಲಿಷ್ ಭಾಷೆ ಬೆಳೆದಂತೆ ಅದರೊಂದಿಗೆ ನಾವು ಬೆಳೆಯಬೇಕಾದ ಅನಿವಾರ್ಯತೆ ಇದೆ. ಈ ಎಲ್ಲ ಭಾಷೆಗಳ ಜೊತೆಗೂಡಿ ನಡೆಯುವ ಸಾಧ್ಯತೆ-ಅವಕಾಶಗಳನ್ನು ನಾವು ಸಂಸ್ಕೃತದಲ್ಲಿ ಕಾಣಲಾಗದು. ಜಾನಪದ ಸಾಹಿತ್ಯದಲ್ಲಿರುವ ಭಾಷೆಯ ಮಿಡಿತವನ್ನು ನಾವು ಸಂಸ್ಕೃತದಲ್ಲಿ ಕಾಣಲಾರೆವು. ಬಿ.ಜೆ.ಪಿಯಂತಹ ಸರ್ಕಾರ ಸಂಸ್ಕೃತವನ್ನು ಒಂದು ವಿಶ್ವವಿದ್ಯಾಲಯದ ಮಟ್ಟದಲ್ಲಿ ಸ್ಥಾಪಿಸುವ ಕೆಲಸಗಳನ್ನು ಮಾಡ ಹೊರಟರೆ ಅದು ವಿಶ್ವವಿದ್ಯಾಲಯದ ಹಂತದಲ್ಲಿ ಮೂಢ ನಂಬಿಕೆಗಳನ್ನು ಬಿತ್ತನೆ ಮಾಡಲು ಹೊರಟಂತೆ ಕಾಣುತ್ತದೆ.

ಅಜೆಂಡಾ. ಅವರು ನೇರ ಜನರನ್ನು ತಲುಪಿ 'ನೀವು ಸಂಸ್ಕೃತವನ್ನು ಕಡ್ಡಾಯವಾಗಿ ಕಲಿಯಲೇ ಬೇಕು' ಎಂದು ಹೇಳಲಾರರು, ಹಾಗೊಮ್ಮೆ ಹೇಳಿದರೂ ಜನ ಇವರ ಮಾತುಗಳಿಗೆ ಕಿವಿಗೊಡಲಾರರು. ಹೀಗಾಗಿ ಇವರ ಹಿಡನ್ ಅಜೆಂಡಾಗಳನ್ನು ಪ್ರಯೋಗಕ್ಕೆ ಒಳಪಡಿಸಲು ಶಿಕ್ಷಣವೇ ಬಹುದೊಡ್ಡ ವೇದಿಕೆ. ಇಲ್ಲಿ ಮಾತ್ರ ಇವರ ಬಲಪಂಥೀಯ ಕಾರ್ಯಕ್ರಮಗಳಿಗೆ ಒಂದು ಸ್ಪಷ್ಟ ಯೋಜನೆ ರೂಪಿಸಲು ಸಾಧ್ಯ.

ಪ್ರಶ್ನೆ: ನೀವು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಂಥವರು, ಕನ್ನಡ ವಿ.ವಿ.ಯ ಸಂಶೋಧನೆಗಳು, ಅದು ಹೊರತರುವ ಸಂಶೋಧನಾ ಕೃತಿಗಳು – ದಲಿತ, ಜಾನಪದ, ಮಹಿಳೆ, ಬುಡಕಟ್ಟು, ದ್ರಾವಿಡ, ಅಭಿವೃದ್ಧಿ ಈ ಯಾವುದೇ ಪ್ರಕಾರಗಳಿರಬಹುದು –ಅವು ತುಂಬಾ ಮಹತ್ವದವು ಮತ್ತು ಸಂಶೋಧನೆಗೆಂದೇ ಇಡೀ ಕನ್ನಡ ವಿ.ವಿ. ತೆತ್ತುಕೊಂಡಿರುವುದು ಮೆಚ್ಚುವಂಥದ್ದು. ಇಂಡಿಯಾದಲ್ಲಿ ಈ ಬಗೆಯ ವಿಶ್ವವಿದ್ಯಾಲಯಗಳು ತೀರಾ ಕಮ್ಮಿಯೆಂದೇ ಹೇಳಬೇಕು. ಅದೆಷ್ಟೇ ಸರ್ಕಸ್ಸುಗಳಾದರೂ ಬಲಪಂಥೀಯರ ವಿಚಾರಗಳಿಗೆ ಕನ್ನಡ ವಿ.ವಿ. ಕೊಂಚವೂ space ಕೊಡದಿರುವುದು ಎಲ್ಲರಿಗೂ ಗೊತ್ತಿರುವಂಥದ್ದೇ. ಈಗ ಈ ಬಿಜೆಪಿ ಸರ್ಕಾರ ಕನ್ನಡ ವಿ.ವಿ.ಗೆ ಪರ್ಯಾಯವಾಗಿ ಬರೀ ಬಲಪಂಥೀಯರನ್ನೇ ಒಂದು ಹೊಸ ವಿಶ್ವವಿದ್ಯಾಲಯದಡಿ ತುಂಬಲು ಸಂಸ್ಕೃತ ಭಾಷೆಯನ್ನು ತನ್ನ ಮೂಲ ಆಯುಧವನ್ನಾಗಿ ಬಳಸಿಕೊಳ್ಳುತ್ತಿದೆಯೇ?

ಕಂಬಾರ: ಕನ್ನಡ ವಿಶ್ವವಿದ್ಯಾಲಯದಂತೆ ಸಂಶೋಧನೆಗಳಿಗೆ ಹೆಚ್ಚು ಒತ್ತುಕೊಡುವ ಕೆಲಸಗಳಿಗೆ ಕೈಹಾಕುವಂತಿದ್ದರೆ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪಿಸುವ ಬದಲಿಗೆ ಈ ಸರ್ಕಾರ ಇದೇ ಬಗೆಯ ಸಂಶೋಧನಾ ವಿಶ್ವವಿದ್ಯಾಲಯ ಸ್ಥಾಪಿಸಲು ಹೊರಡುತ್ತಿತ್ತು. ಬಲಪಂಥೀಯರಿಗೆ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸುವ ಅಗತ್ಯವೇ ಇಲ್ಲ. ಇವತ್ತು ಈ ನಾಡಿನಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಬಲಪಂಥೀಯ ಶಿಕ್ಷಕರು ತುಂಬಿಕೊಂಡಿದ್ದಾರೆ, ಈ ಬಗ್ಗೆ ಅನುಮಾನಗಳೇ ಬೇಡ.

ಪ್ರಶ್ನೆ: ಕನ್ನಡ ಸಾಹಿತ್ಯಕ್ಕೆ ಬೇಕಾಗುವ ವಸ್ತು, ವಿಷಯ, ಪ್ರಕಾರಗಳು ನಿಜಕ್ಕೂ ಸಂಸ್ಕೃತದಲ್ಲಿವೆಯೇ?

ಕಂಬಾರ: ನಾನು ಈ ಮೊದಲೇ ಹೇಳಿದ್ದೇನೆ. ಜಾನಪದ ಸಾಹಿತ್ಯದಲ್ಲಿ ಸಿಗುವ ಭಾಷೆಯ ಮಿಡಿತವನ್ನು ನಾವು ಖಂಡಿತವಾಗಿಯೂ ಸಂಸ್ಕೃತದಲ್ಲಿ ಕಾಣಲು ಸಾಧ್ಯವಿಲ್ಲ. ನಾವು ಕನ್ನಡದಲ್ಲಿ ಏಕವಚನ ಮತ್ತು ಬಹುವಚನಗಳನ್ನು ಮಾತ್ರ ಉಳಿಸಿಕೊಂಡರೆ, ಸಂಸ್ಕೃತದಲ್ಲಿ ಏಕ, ದ್ವಿ ಮತ್ತು ಬಹುವಚನಗಳು ಬರುತ್ತವೆ. ರಾಮ ಬಂದ, ಇಬ್ಬರು ರಾಮರು ಬಂದರು, ಅನೇಕ ರಾಮರು ಬಂದರು ಎಂದು ಹೇಳುವುದೇ ಸಂಸ್ಕೃತದ ನಿಜವಾದ ಬಂಡವಾಳ. ನಮ್ಮ ಮಹಾಕಾವ್ಯ ರಾಮಾಯಣ, ಮಹಾಭಾರತಗಳನ್ನೇ ಗಮನಿಸಿ. ರಾಮ ಮೇಲ್ದರ್ಜೆಯ ಸಂಸ್ಕೃತ ಭಾಷೆಯನ್ನು ಬಳಸಿದರೆ ಅವನ ಹೆಂಡತಿಯಾದ ಸೀತೆ ಕೆಳದರ್ಜೆಯ ಸಂಸ್ಕೃತವನ್ನು ಬಳಸಬೇಕಾಗಿತ್ತು. ಒಂದೇ ಕಾಲದಲ್ಲಿ ಒಂದೇ ಭಾಷೆಯೊಂದನ್ನು ಇಬ್ಬರು ಭಿನ್ನವಾಗಿ ಬಳಸಬೇಕಾಗಿತ್ತು. ಯಾವ ಕಾರಣಕ್ಕೂ ಹೆಣ್ಣು ಗಂಡಿನೆದುರು ಉತ್ತಮ ದರ್ಜೆಯ ಸಂಸ್ಕೃತವನ್ನು ಬಳಸುವಂತಿರಲಿಲ್ಲ. ಒಬ್ಬ ಚಕ್ರವರ್ತಿಯ ಹೆಂಡತಿಯ ಸ್ಥಿತಿಯೇ ಹೀಗಿದ್ದ ಮೇಲೆ ಆ ಕಾಲದ ದಲಿತ, ಶೂದ್ರರ ಸ್ಥಿತಿಗಳು ಹೇಗಿದ್ದವು ಎಂಬುದನ್ನು ಯಾರು ಬೇಕಾದರೂ ಸುಲಭವಾಗಿ ಗ್ರಹಿಸಬಹುದು.

ಪ್ರಶ್ನೆ: ಸಂಸ್ಕೃತ ವಿ.ವಿ. ಸ್ಥಾಪನೆ ಮಾಡಲು ಹೊರಟಿರುವ ಇದೇ ಸರ್ಕಾರ ಗೋಹತ್ಯೆ ನಿಷೇಧ, ಮತಾಂತರ ನಿಷೇಧ ಕಾಯ್ದೆಗಳನ್ನು ಜಾರಿಗೆ ತರಲು ಹೊರಟಿದೆ. ಸಂಸ್ಕೃತ ವಿ.ವಿ.ಯನ್ನು ಸ್ಥಾಪಿಸುವ ಮೂಲಕ ಈ ಬಿಜೆಪಿ ಸರ್ಕಾರ ತನ್ನ ಮೂಲಭೂತವಾದಗಳಿಗೆ ಹೆಚ್ಚು ಅಂಟಿಕೊಂಡು ಅದನ್ನು ಜನತೆಯ ಮೇಲೆ ಹೇರಲು ಯತ್ನಿಸಬಹುದೇ?

ಕಂಬಾರ: ತನ್ನ ಮೂಲಭೂತವಾದವನ್ನು ಹೆಚ್ಚು ಹಂಚಲು ಬಿಜೆಪಿಯಂಥ ಪಕ್ಷಕ್ಕೆ ಅವಕಾಶವಿರುವುದು ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ. ಶಿಕ್ಷಣದ ಮೂಲಕ ತನ್ನ ಮೂಲಭೂತವಾದಕ್ಕೆ ನೀರುಗೊಬ್ಬರ ಹಾಕುವ ಕೆಲಸಗಳನ್ನು ಈ ಸರ್ಕಾರ ಎಗ್ಗಿಲ್ಲದೆ ಮಾಡಬಲ್ಲದು. ಜನತೆಯ ಹೋರಾಟದ ಮೂಲಕ ಸಂಸ್ಕೃತದಂತಹ ಮೂಢನಂಬಿಕೆ ಬಿತ್ತನೆ ಕೆಲಸಗಳನ್ನು ನಾವೆಲ್ಲ ತಡೆಯಬೇಕಿದೆ. ಜನತೆಯ ಹೋರಾಟದಿಂದ ಇದು ಸಾಧ್ಯ.

* * * * *

ಡಾ. ಜಿ. ಎಸ್. ಶಿವರುದ್ರಪ್ಪನವರೊಂದಿಗೆ ನಡೆಸಿದ ಸಂದರ್ಶನದ ಭಾಗ

ಪ್ರಶ್ನೆ: ಇವತ್ತು ಈ ನಾಡಿನ ಸರ್ಕಾರ ತನ್ನ ಆಡಳಿತದ ಅಧಿಕೃತ ಕಾರ್ಯಕ್ರಮದಂತೆ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಹೊರಟಿದೆ. ಒಂದು

ಭಾಷೆ ಬೆಳೆಯಬೇಕೆಂದರೆ ಅದಕ್ಕೊಂದು ವಿಶ್ವವಿದ್ಯಾಲಯದ ಅಗತ್ಯವಿದೆಯೇ?

ಜಿವಿಸ್ಸೆಸ್: ಒಂದು ಭಾಷೆಯನ್ನು ವಿಶ್ವವಿದ್ಯಾಲಯ ಸ್ಥಾಪಿಸುವ ಮೂಲಕ ಬೆಳೆಸಲು ಖಂಡಿತ ಸಾಧ್ಯವಿಲ್ಲ. ಜನ ಹೆಚ್ಚು ಬಳಸಿದಾಗ ಮಾತ್ರ ಒಂದು ಭಾಷೆ ಜೀವಂತವಾಗಿರಲು ಸಾಧ್ಯ. ಜನ ತಮ್ಮ ದಿನನಿತ್ಯದ ಬದುಕಿನಲ್ಲಿ ವ್ಯಾಪಾರ, ಆಡಳಿತ, ಶಿಕ್ಷಣಗಳಲ್ಲಿ ಭಾಷೆಯನ್ನು ಹೆಚ್ಚು ಬಳಸುತ್ತಾ ಹೋದಂತೆ ಆ ಭಾಷೆ ಜನರ ನಡುವೆ ಹೆಚ್ಚು ಬೆಳೆಯುತ್ತದೆ.

ಪ್ರಶ್ನೆ: ಸಂಸ್ಕೃತ ಚಲಾವಣೆಯಲ್ಲಿಲ್ಲದ ಒಂದು ಮೃತ ಭಾಷೆ ಅನ್ನುವುದನ್ನು ನೀವು ಒಪ್ಪಿಕೊಳ್ಳುತ್ತೀರಾ?

ಜಿವಿಸ್ಸೆಸ್: ಸಂಸ್ಕೃತವನ್ನು ಮೃತ ಭಾಷೆಯೆಂದು ಕರೆಯಲಾರೆ, ಅದನ್ನು ಸ್ಥಗಿತಗೊಂಡ ಭಾಷೆಯೆಂದು ಕರೆಯಬಹುದು.

ಪ್ರಶ್ನೆ: ಸಧ್ಯದ ಸ್ಥಿತಿಯಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಯಿಂದ ಕನ್ನಡಕ್ಕೆ, ಕನ್ನಡ ಸಾಹಿತ್ಯ ಜಗತ್ತಿಗೆ ಏನಾದರೂ ಅನೂಕೂಲಗಳಾಗಲಿವೆಯೇ?

ಜಿವಿಸ್ಸೆಸ್: ನಾವು ಸಂಸ್ಕೃತದಿಂದ ಸಾಹಿತ್ಯಕವಾಗಿ ಪಡೆಯಬಹುದಾದದ್ದೆಲ್ಲವನ್ನು ಈಗಾಗಲೇ ಪಡೆದು ಕೊಂಡಾಗಿದೆ. ಈಗ ಸಂಸ್ಕೃತದಿಂದ ಪಡೆಯುವಂಥದ್ದು ಏನೂ ಉಳಿದಿಲ್ಲವೇನೋ. ನೃಪತುಂಗನಿಂದ ಕುವೆಂಪು ವರೆಗೂ ಕನ್ನಡ ಸಾಹಿತ್ಯ ಜಗತ್ತು ತಮಗೆಷ್ಟು ಬೇಕೋ ಅಷ್ಟು ಸಂಸ್ಕೃತ ಭಾಷೆಯನ್ನು ಬಳಸಿಕೊಂಡಿದೆ. ನೆರೆಯ ತೆಲುಗು, ಮಲಯಾಳಂ ಭಾಷೆಗಳು ತಮಗೆಷ್ಟು ಬೇಕೋ ಅಷ್ಟು ಸಂಸ್ಕೃತವನ್ನು ಉಳಿಸಿಕೊಂಡಿದ್ದರೆ, ತಮಿಳು ಭಾಷೆ ಸಂಪೂರ್ಣವಾಗಿ ಸಂಸ್ಕೃತವನ್ನೇ ತಿರಸ್ಕರಿಸಿದೆ. ಜನ ಸಾಮಾನ್ಯರ ದೃಷ್ಟಿಯಲ್ಲಿ ಸಂಸ್ಕೃತ ಚಲಾವಣೆಯಲ್ಲಿಲ್ಲದ ಭಾಷೆಯಂತೆ ಕಂಡರೆ ಅದು ಸಹಜವೇ.

ಪ್ರಶ್ನೆ: ಹನ್ನೆರಡನೇ ಶತಮಾನದ ವಚನ ಪರಂಪರೆ



ಜಿ.ಎಸ್. ಶಿವರುದ್ರಪ್ಪ

ಈ ನೆಲದ ಸಾಹಿತ್ಯವನ್ನು, ಓದುಗನನ್ನು ಮುಟ್ಟಿದಷ್ಟು ತೀವ್ರವಾಗಿ ಸಂಸ್ಕೃತ ಭಾಷೆಗೇಕೆ ಸಾಧ್ಯವಾಗಲಿಲ್ಲ?

ಜಿವಿಸ್ಸೆಸ್: ವಚನ ಪರಂಪರೆ ಅನ್ನುವುದೇ ಕನ್ನಡದ ಬಹುದೊಡ್ಡ ಸಾಹಿತ್ಯ ಪರಂಪರೆ. ಇವತ್ತು ಒಬ್ಬ ಸಾಮಾನ್ಯ ಓದುಗನನ್ನು ವಚನಗಳು ತಟ್ಟುವಷ್ಟು ಸಂಸ್ಕೃತ ಸಾಹಿತ್ಯ ತಟ್ಟುತ್ತಿಲ್ಲ ಅನ್ನುವುದು ನಿಜ. ಕಾಳಿದಾಸನ ಕಾವ್ಯಗಳಲ್ಲಿ, ರಾಮಾಯಣ, ಮಹಾಭಾರತ ಮತ್ತು ಹಳಗನ್ನಡದ ಸಾಹಿತ್ಯದಲ್ಲಿ ಸಂಸ್ಕೃತವನ್ನು ಹೆಚ್ಚು ಕಾಣಬಹುದಾದರೂ ಅದರ ಪ್ರಸ್ತುತತೆ ಇವತ್ತು ಕಡಿಮೆಯಾಗಿದೆ.

ಪ್ರಶ್ನೆ: ಕನ್ನಡ ವಿಶ್ವವಿದ್ಯಾಲಯದಂತೆ ಸಂಶೋಧನೆಗೆ ಹೆಚ್ಚು ಒತ್ತು ಕೊಡುವ ಕೆಲಸಗಳನ್ನು ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾಡಲು ಸಾಧ್ಯವೇ?

ಜಿವಿಸ್ಸೆಸ್: ಸಾಹಿತ್ಯ, ಸಂಶೋಧನೆ ಮತ್ತು [illegible] ಅಧ್ಯಯನಗಳಿಗೆ ಕನ್ನಡ ವಿಶ್ವವಿದ್ಯಾಲಯ ತೆತ್ತುಕೊಂಡಿರುವಂತೆ ಸಂಸ್ಕೃತ ವಿಶ್ವವಿದ್ಯಾಲಯ ತೆತ್ತುಕೊಳ್ಳಲು ಖಂಡಿತ ಸಾಧ್ಯವಿಲ್ಲ. ಚಲಾವಣೆಯಲ್ಲಿಲ್ಲದ ಇಂಥ ಭಾಷೆಯಿಂದ ದೊಡ್ಡ ಸಂಶೋಧನೆಗಳನ್ನು ನಿರೀಕ್ಷಿಸುವುದು ತಪ್ಪಾಗುತ್ತದೆ.

ಪ್ರಶ್ನೆ: ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನಗಳು ಸಿಕ್ಕರೂ ಅದಕ್ಕೆ ಸಲ್ಲಬೇಕಾದ ಗೌರವಗಳು ಇನ್ನೂ ಸಂದಿಲ್ಲ. ಇಂತಹ ಸಂದರ್ಭದಲ್ಲಿ ಕನ್ನಡ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕಾದ ಸರ್ಕಾರವೇ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಗೆ ಹೊರಟಿರುವುದು ಅದರ ಹೊಣೆಗೇಡಿತನವನ್ನು ಎತ್ತಿ ತೋರಿಸುವುದಿಲ್ಲವೇ?

ಜಿವಿಸ್ಸೆಸ್: ನಿಜ, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಗೌರವಗಳು ಸಿಕ್ಕರೂ ಅದಕ್ಕೆ ನಿಜಕ್ಕೂ ಸಿಗಲೇಬೇಕಾದ ಸ್ಥಾನಮಾನಗಳು ಸಿಕ್ಕಿಲ್ಲ. ಶಾಸ್ತ್ರೀಯ ಭಾಷೆ ಗೌರವ ಸಿಗುವುದಕ್ಕೂ ಮುನ್ನ ಕನ್ನಡಕ್ಕೆ ಯಾವ ಸಮಸ್ಯೆಗಳು ಕಾಡಿದ್ದವೋ ಅವು ಈಗಲೂ ಮುಂದುವರೆಯುತ್ತಿವೆ. ಸಂಸ್ಕೃತದಿಂದ ತಮಗೆಷ್ಟು ಬೇಕೋ ಅಷ್ಟು ಸಾಹಿತ್ಯದ ಅನುಕೂಲತೆಗಳನ್ನು ಪಡೆದುಕೊಂಡಿರುವ ಕನ್ನಡ ಲೇಖಕ ವರ್ಗ ಅದರ ಆಕ್ರಮಣ, ಯಜಮಾನ್ಯವನ್ನು ಪ್ರಶ್ನಿಸಿದೆ. ಒಂದು ಭಾಷೆಯಿಂದ ವಿದ್ಯೆಯನ್ನು ಪಡೆಯುವಾಗ ಅದರ ವಿವೇಚನೆಯನ್ನು ಪಡೆಯುವುದು ಮುಖ್ಯ. ಈ ಹಿಂದೆ ಇಲ್ಲಿ ಸಂಸ್ಕೃತ ಪ್ರಥಮ ಭಾಷೆ ಆಗಿದ್ದರಿಂದಲೇ ಗೋಕಾಕ್ ಚಳುವಳಿ ಹುಟ್ಟಿಕೊಂಡದ್ದು. ಈ ನಾಡಿಗೆ ಸಂಸ್ಕೃತ ವಿಶ್ವವಿದ್ಯಾಲಯ ಬೇಕೇ ಬೇಡವೇ ಎಂಬ ಪ್ರಶ್ನೆಗೆ ನಾನು ದಿಟ್ಟವಾಗಿ ಬೇಡ ಎನ್ನುವೆ. □

ಪ್ರವಾಹ ಎಂಬ ದುರಂತ– ಪರಿಹಾರ ಎಂಬ ಆಪತ್ತು?

(9ನೇ ಪುಟದಿಂದ)

ಎಂದು ವರದಿಯಾಗಿದೆ. ಅದೇ ರೀತಿ ಸುನಾಮಿಯಿಂದ ಮನೆಮಠ ಕಳೆದುಕೊಂಡವರಿಗೆ ತತ್‌ಕ್ಷಣದ ಶೆಡ್‌ಗಳನ್ನು ಕಟ್ಟಿಕೊಳ್ಳಲು ತಲಾ 2000 ರೂ. ನೀಡಲು 20 ಕೋಟಿಯನ್ನು ಸರ್ಕಾರ ಬಿಡುಗಡೆ ಮಾಡಿತ್ತು. ಆದರೆ ಮರುವಾರದಲ್ಲೇ 1 ಲಕ್ಷ ತಾತ್ಕಾಲಿಕ ಮನೆಗಳನ್ನು ನಿರ್ಮಿಸಲು ಖಾಸಗಿಯವರಿಗೆ 40 ಕೋಟಿ ರೂಗಳನ್ನು ನೀಡಿ ಹಳೆಯ ಯೋಜನೆ ರದ್ದುಪಡಿಸಲಾಯಿತು. ನಾಲ್ಕು ವರ್ಷ ಕಳೆದರೂ ಈ ಯೋಜನೆಯಲ್ಲಿ ಕೇವಲ 35,000 ಮನೆಗಳನ್ನು ಮಾತ್ರ ನಿರ್ಮಿಸಲಾಗಿತ್ತು. ಹೀಗಾಗಿ ಉಳಿದವರು ಬೀದಿಪಾಲಾಗಿಯೇ ಉಳಿದರು.

ಇಂದು ಕರ್ನಾಟಕ ಸರ್ಕಾರವೂ ಸಹ ಖಾಸಗಿ ಸಹಭಾಗಿತ್ವದಲ್ಲಿ 2 ಲಕ್ಷಮನೆ ನಿರ್ಮಿಸುವ ಯೋಜನೆ ಹಾಕುತ್ತಿರುವಾಗ ಮತ್ತು ಪರಿಹಾರ ವಿತರಣೆಗೆ ನೀತಿಯನ್ನು ರೂಪಿಸುವ ಕ್ರಮದಲ್ಲಿರುವಾಗ ಸುನಾಮಿ ಪರಿಹಾರ ಸೃಷ್ಟಿಸಿದ ಅಸಮಾನತೆ ಮತ್ತು ವೈಪರೀತ್ಯಗಳು ಗಮನದಲ್ಲಿರಬೇಕು. ಅದರಲ್ಲೂ ಹಾಲಿ ಸರ್ಕಾರಕ್ಕೆ ಮತ-ಮಾನ್ಯಗಳ ಮತ್ತು ಜಾತಿ ಸಂಘಟನೆಗಳ ಬಗ್ಗೆ ವಿಶೇಷ ವ್ಯಾಮೋಹವಿರುವಾಗ ಈ ಎಚ್ಚರಿಕೆ ನಾಗರಿಕ ಸಮಾಜಕ್ಕಾದರೂ ಅತ್ಯಗತ್ಯವಾಗಿದೆ.

ಅದೇ ರೀತಿ ಗುಜರಾತ್ ಭೂಕಂಪದ ಪರಿಹಾರ ನಿಧಿಗೆ ಆರೆಸ್ಸೆಸ್‌ನ ಅಂಗಸಂಸ್ಥೆಗಳು ಸರ್ಕಾರದ ಸಂಪೂರ್ಣ ಬೆಂಬಲದೊಂದಿಗೆ ಹಣ ಸಂಗ್ರಹ ಮಾಡಿದವು. ಅದರ ವಿತರಣೆಯ ಜವಾಬ್ದಾರಿಯನ್ನೂ ಹೊತ್ತವು. ನಂತರದಲ್ಲಿ ಆವಾಜ್ ಎಂಬ ಸಂಸ್ಥೆಯೊಂದು ಅಲ್ಲಿ ನಡೆದ ಪರಿಹಾರ ವಿತರಣೆಯ ಬಗ್ಗೆ ಅಧ್ಯಯನಮಾಡಿ ವರದಿಯನ್ನು ಬಿಡುಗಡೆ ಮಾಡಿತು. ಅದರ ಪ್ರಕಾರ ಪರಿಹಾರದಲ್ಲಿ ವ್ಯವಸ್ಥಿತವಾಗಿ ಅಲ್ಪಸಂಖ್ಯಾತರಿಗೆ ಮತ್ತು ದಲಿತರಿಗೆ ಮೋಸವಾಗಿತ್ತಲ್ಲದೆ ಬಹಳಷ್ಟು ಹಣ ಆರೆಸ್ಸೆಸ್‌ನ ಯೋಜನೆಗಳಿಗೆ ಬಳಕೆಯಾಗಿತ್ತು. ಅದೇ ರೀತಿ ಒರಿಸ್ಸಾ ಚಂಡಮಾರುತ ಪರಿಹಾರ ನಿಧಿಗೂ ಕೈ ಹಾಕಿದ್ದ ಆರೆಸ್ಸೆಸ್ ಬ್ರಿಟನ್ನಿನಲ್ಲಿ ಒರಿಸ್ಸಾದ ಚಂಡ ಮಾರುತ ಸಂತ್ರಸ್ತರಿಗೆಂದು ಸೇವಾ ಇಂಟರ್‌ನ್ಯಾಷನಲ್ ಎಂಬ ಮತ್ತೊಂದು ಆರೆಸ್ಸೆಸ್ ಮುಖವಾಡ ಸಂಸ್ಥೆಯ ಮೂಲಕ ಸಂಗ್ರಹಿಸಿದ 2,60,000 ಪೌಂಡ್ (ಅಂದಾಜು ಒಂದು ಕೋಟಿ ಎಂಭತ್ತೆರೆಡು ಲಕ್ಷ ರೂಗಳು) ಹಣವನ್ನು ಆರೆಸ್ಸೆಸ್ಸಿನ ಮತ್ತೊಂದು ಮುಖವಾಡ ಸಂಸ್ಥೆಯಾದ ಉತ್ಕಲ್ ಬಿಪನ್ನ ಸಾಹಿತ್ಯ ಸಮಿತಿ ಎಂಬ ಸಂಸ್ಥೆಗೆ ಹಸ್ತಾಂತರಿಸಿತ್ತೆಂದು ಸಹ ವರದಿಯಾಗಿದೆ.

ಹೀಗಾಗಿ ಬಿಜೆಪಿ ಸರ್ಕಾರಕ್ಕೆ ಪ್ರವಾಹದಂಥ ಭೀಕರ ಸನ್ನಿವೇಶವೂ ಸಹ ಆರೆಸ್ಸೆಸ್ಸನ್ನು ಕಟ್ಟಲು ಅತ್ಯುತ್ತಮ ಅವಕಾಶವೆಂದು ಕಂಡುಬರುತ್ತಿದೆ. ಇಂದು ಕರ್ನಾಟಕದ ದುರದೃಷ್ಟ ಹೇಗಿದೆಯೆಂದರೆ ಇತಿಹಾಸದಲ್ಲೇ ಅತ್ಯಂತ ಭೀಕರವಾದ ಪ್ರವಾಹವೊಂದೆಡೆ ಯಾದರೆ, ಕರ್ನಾಟಕದ ಇತಿಹಾಸದಲ್ಲೇ ಕಂಡರಿಯದ ದುಷ್ಟ, ಅದಕ್ಷ ಮತ್ತು ಅನನುಭವಿ ಸರ್ಕಾರ ವಿಧಾನ ಸೌಧದಲ್ಲಿ ಕೂತಿದೆ. ಹದ್ದಿನ ತರ ಮಸಣದ ಮನೆಯಲ್ಲೂ ಮಿಕವನ್ನು ಹುಡುಕುತ್ತಿದೆ. ಹೀಗಾಗಿ ಪರಿಹಾರವೆಂಬುದು ಜನತೆಯ ಸಾಮಾಜಿಕ ಬದುಕಿಗೆ ಕಂಟಕವಾಗದಂತೆ ಬದುಕನ್ನು ಪೋಷಿಸುವಂತೆ ಮಾಡುವ ಹೊಣೆ ನಮ್ಮೆಲ್ಲರ ಮೇಲೂ ಇದೆ. □

"ಸೋಲುತ್ತಿವೆ ಎದೆಯ ಹಾಡುಗಳು"

ಸುರೆ ಕುಡಿದು ತಲೆಹಿಡಿದು,
ಬವಳಿ ಬಂದಂತೆ ನೆಲದಲ್ಲಿ:
ಅಂಗಾತ ಮಲಗಿ ಎಣಿಸುವಾಗ,
ನೀಲಾಕಾಶಕ್ಕೆ ಅಂಟಿಕೊಂಡ 'ಚುಕ್ಕಿ'ಗಳ
ಆ ಬೆಳಕಿನಲ್ಲಿ ಮೈಮರೆಯುವಾಗ,
ಹಾಳು ಕವಿತೆಗಳು ಹೊರಬಿದ್ದು ಬಿಡುತ್ತವೆ.
ನಿರ್ಬಂಧವಿಲ್ಲದೆ ಸ್ವಚ್ಚಂದವಾಗಿ ಹೀಗೆ...!

ನಮ್ಮ ಹಿರೀಕರು 'ಪುಣ್ಯವಂತರು?!'
ಪುಣ್ಯಕ್ಕಾಗಿ ನಕ್ಷತ್ರಗಳಾದವರು
ಇಲ್ಲಿ ದಕ್ಕಿಸಿಕೊಳ್ಳಲಾಗದ ಬೆಳಕ
ಅಲ್ಲಿ ಕಂಡರೇನೋ ಆಕಾಶ ದೀಪ್ತಿಗಳಾಗಿ
ಬಾಗಿಬಿದ್ದ ಬೆನ್ನುಗಳ, ಸವೆದ ರಟ್ಟೆಗಳ
ಅವರೂ ನನ್ನಂತೆ ಸುರೆ ಹೀರಿ
ಕಂಡಿರಬೇಕು ಸುಖದ ಕನಸುಗಳನ್ನು
ಕರಾಳ ರಾತ್ರಿಗಳನ್ನು ಕೊಲ್ಲಲು ದಾರಿಗಳಿಲ್ಲದೆ!!

ಎಷ್ಟು ವಿಘ್ನ? ಎಷ್ಟು ಬವಣೆ?
ಹಾದರಕ್ಕೆ–ಚಾರದಕ್ಕೆ ನೂರೆಂಟು ಒಗ್ಗರಣೆ
ಸೋಲುತ್ತಿವೆ ಎದೆಯ ಹಾಡುಗಳು
ನಡುಹಗಲೆ ಶಿಕಾರಿಯಾಗುವ ಕನಸುಗಳ ಕಂಡು
ಸೋತಕೈಯಲ್ಲಿ ತಟ್ಟೆಗೆ ಮುತ್ತಿದ ನೊಣಗಳನ್ನು
ಓಡಿಸಲಾಗದಷ್ಟು ತೃಣ ಮಾತ್ರನಾಗಿ
ಕನವರಿಸುತ್ತೇನೆ.

ರಾತ್ರಿ ಸುರೆಕುಡಿದು ಉಕ್ಕಿ ಬರುವ
ದುಃಖವನ್ನು ಒತ್ತರಿಸಿಡುತ್ತೇನೆ.
ಹಳೆಯ ಚಪ್ಪಲಿಗಳಿಗೆ ಮೊಳೆ ಬಡಿಯುತ್ತಾ,
ನನ್ನಪ್ಪ ಕೂತಲ್ಲೆ ವಿಷಾದವನ್ನು ಕೆಮ್ಮುತ್ತಾನೆ;
ಅವನಿಗೂ "ನಶೆ" ಹತ್ತಿರಬೇಕು....!

○ ಉದಯಕುಮಾರ್.ಎಂ ಬಸವನತ್ತೂರು

ಕಥೆ

ಧರ್ಮೋ ರಕ್ಷತಿ ರಕ್ಷಿತಃ

○ ಡಾ. ಜೆ. ಬಾಲಕೃಷ್ಣ

ಟ್ರೈನು ಚಲಿಸುತ್ತಲೇ ಇತ್ತು. ಸಂಜಯನಿಗೆ ನಿದ್ರೆಯೇ ಬರುತ್ತಿರಲಿಲ್ಲ. ಮಗ್ಗಲು ಹೊರಳಿಸಿ ಸಾಕಾಗಿತ್ತು, ಮೈ ಕೈಯೆಲ್ಲಾ ನೋಯುತ್ತಿತ್ತು. ರೊಂಯ್‌ಗುಟ್ಟುವ ಟ್ರೈನಿನ ಫ್ಯಾನುಗಳ ಸದ್ದು. ನಿದ್ದೆ ಹೋಗುವ ಮನಸ್ಥಿತಿಯಲ್ಲಿ ಅವನಿರಲೇ ಇಲ್ಲ. ಎದುರಿನ ಬರ್ತ್‌ನಲ್ಲಿ ಮಲಗಿದ್ದ ಮಗ ಗೌತಮನೆಡೆಗೆ ನೋಡಿದ. ಕಣ್ಣು ಮುಚ್ಚಿದ್ದ. ನಿದ್ರೆ ಮಾಡುತ್ತಿದ್ದನೋ ಇಲ್ಲವೋ ಅವನಿಗೆ ತಿಳಿಯಲಿಲ್ಲ. ಹೊಟ್ಟೆಯಲ್ಲಿ ಕಿವುಚಿದಂತೆ ವಿಪರೀತ ಸಂಕಟವಾಗತೊಡಗಿತು. ಬೆಳಿಗ್ಗೆ ಮಗನನ್ನು ಭೇಟಿಯಾದಾಗಲಿಂದಲೂ ಹಾಗೆಯೇ ಆಗುತ್ತಿದೆ. ನೋಡ ನೋಡುತ್ತಲೇ ಎಷ್ಟೊಂದು ಬೆಳೆದುಬಿಟ್ಟಿದ್ದಾನೆ! ಸಮಯ ಎಷ್ಟು ಬೇಗ ಹೋಗುತ್ತದೆ. ನಿನ್ನೆ ಮೊನ್ನೆಯವರೆಗೆ ಅವನನ್ನು ಎತ್ತಿ ಆಡಿಸುತ್ತಿದ್ದೆ! ಈಗ ಅವನು ಸ್ವತಂತ್ರ, ಅವನದೇ

'ಅಪ್ಪ, ನಾನೀಗ ನಿಮ್ಮೊಂದಿಗೆ ಮಾತನಾಡಲು ಕರೆದಿದ್ದು ಒಂದು ಮುಖ್ಯ ವಿಷಯ ತಿಳಿಸಲು. ನಮ್ಮದೊಂದು ಭೂಗತ ಸಂಘಟನೆಯೊಂದಿದೆ. ನಾವು ದೇಶದಾದ್ಯಂತ ಸಂಚರಿಸಿ ನಮ್ಮ ಶಾಖೆಗಳೊಂದಿಗೆ ನಮ್ಮ ಇಡೀ ಜಾಲವನ್ನು ದೇಶವೆಲ್ಲಾ ಪ್ರಸರಿಸಬೇಕೆಂಬ ಸಂಕಲ್ಪ ತೊಟ್ಟಿದ್ದೇವೆ. ನಮ್ಮ ಭಾರತ ಮಾತೆಯನ್ನು ಉಳಿಸಿಕೊಳ್ಳಬೇಕಿದೆ. ಈಗ ಆ ಕೆಲಸ ಮಾಡದಿದ್ದಲ್ಲಿ ತುಂಬಾ ತಡವಾಗಿ ಬಿಡುತ್ತದೆ. ಅವಶ್ಯಕವಿದ್ದಲ್ಲಿ ನಾವೂ ಬಾಂಬೂಗಳನ್ನು ಇಡುತ್ತೇವೆ. ನಾವೂ ಒಂದು ಆತ್ಮಹತ್ಯ ದಳವೊಂದನ್ನು ಸಿದ್ಧಪಡಿಸುತ್ತಿದೇವೆ, ಅವರನ್ನು ಕೊಚ್ಚಿ ಕೊಂದು ಹಾಕುತ್ತೇವೆ. ತಾಯಿಯ ರಕ್ಷಣೆಗಾಗಿ ನಾವು ಎಲ್ಲದಕ್ಕೂ ಸಿದ್ಧರಾಗಿದ್ದೇವೆ. ನಾನು ಹೊರಡುತ್ತಿದ್ದೇನೆ. ಮತ್ತೆಂದು ವಾಪಸ್ಸು ಬರುತ್ತೇನೋ ಗೊತ್ತಿಲ್ಲ.

ಆಲೋಚನೆಗಳು! ಅವನನ್ನು ಬೆಳೆಸುವಲ್ಲಿ ಎಲ್ಲಿ ತಪ್ಪು ಮಾಡಿದೆವು? ಹೆಂಡತಿ ಸುಶೀಲಾಳ ನೆನಪಾಯಿತು. ಈಗ ಅವಳು ಏನು ಮಾಡುತ್ತಿರಬಹುದು? ತನ್ನ ಮಗ ಮಾಡಹೊರಟಿರುವ ಕಾರ್ಯದ ಬಗ್ಗೆ ಅವಳಿಗೆ ಸ್ವಲ್ಪವೂ ತಿಳಿದಿರಲಿಕ್ಕಿಲ್ಲ. ಅವನ ಆಲೋಚನೆಗಳು ಏನೇ ಇರಬಹುದು, ಆದರೆ ಅವನಲ್ಲಿನ ಮುಗ್ಧತೆ ಇನ್ನೂ ಮಾಸಿಲ್ಲ. ಆ ಮುಗ್ಧತೆಯೇ ಅವನಿಗೆ ಮುಳುವಾಗಿದೆಯೆ? ಅವನ ತಲೆ ಕೆಡಿಸಿದವರು ಯಾರು? ನನ್ನ ಆದರ್ಶಗಳೆನಾಗಿತ್ತು, ಈಗ ಅವನ ವಿಚಾರಗಳು ಯಾವ ದಿಕ್ಕಿನಲ್ಲಿ ಹೋಗುತ್ತಿವೆ? ಸಂಜಯನ ಮನಸ್ಸು ಅತ್ಯಂತ ದುಗುಡದಿಂದ ತುಂಬಿತ್ತು.

ಎರಡು ದಿನಗಳ ಹಿಂದೆ ಆಫೀಸಿನಲ್ಲಿ ಕೂತಿದ್ದಾಗ ಮಗ ಗೌತಮ ಫೋನ್ ಮಾಡಿದ್ದ, 'ಅಪ್ಪ, ನಿಮ್ಮ ಜೊತೆಯಲ್ಲಿ ಮಾತನಾಡಬೇಕು. ದಯವಿಟ್ಟು ಇಲ್ಲಿಗೆ ಬನ್ನಿ. ಆದರೆ ಅಮ್ಮನಿಗೆ ಏನೂ ಹೇಳಬೇಡಿ. ಸುಮ್ಮನೆ ನನ್ನನ್ನು ನೋಡಿ ಬರುತ್ತೇನೆ ಎಂದು ಅಮ್ಮನಿಗೆ ಹೇಳಿ ಬನ್ನಿ. ಇದು ತುರ್ತಿನ ವಿಷಯ. ಇಂದು ರಾತ್ರಿಯೇ ಹೊರಟು ಬನ್ನಿ'. ಸಂಜಯನಿಗೆ ಅಚ್ಚರಿಯಾಗಿತ್ತು ಹಾಗೇ ಗಾಭರಿಯೂ ಆಗಿತ್ತು. ಮಗ ಹಾಸ್ಟೆಲಿಗೆ ಸೇರಿ ಇನ್ನೇನು ನಾಲ್ಕು ವರ್ಷಗಳಾಗುತ್ತವೆ. ಇನ್ನು ಕೆಲವೇ ತಿಂಗಳಲ್ಲಿ ಅವನ ಬಿ.ಇ. ಸಹ ಮುಗಿಯುತ್ತದೆ. ಇಷ್ಟು ವರ್ಷಗಳಲ್ಲಿ ಅವನು ಹೀಗೆಂದೂ ಫೋನ್ ಮಾಡಿದವನಲ್ಲ. 'ಅಲ್ಲ, ಏನಾದರೂ ಗಲಾಟೆ, ತೊಂದರೆಯಲ್ಲಿ ಸಿಕ್ಕಿಹಾಕಿಕೊಂಡಿಲ್ಲ ತಾನೆ?' ಕೊಂಚ ಗಾಭರಿಯಿಂದಲೇ ಕೇಳಿದ್ದರು.

'ಇಲ್ಲ, ಅಂಥದ್ದೇನೂ ಆಗಿಲ್ಲ. ನೀವು ಸುಮ್ಮನೆ ಬನ್ನಿ. ನಿಮ್ಮ ಜೊತೆ ಒಂದರ್ಧ ಗಂಟೆ ಮಾತನಾಡಬೇಕು' ಎಂದಿದ್ದ. 'ನೀನೇ ಬಂದಿದ್ದರೆ, ಇಲ್ಲೇ ಮಾತನಾಡಬಹುದಿತ್ತು. ನಿನ್ನ ಅಮ್ಮ ಸಹ ನಿನ್ನನ್ನು ನೋಡಿ ಬಹಳ ದಿನಗಳಾಯಿತು ಎನ್ನುತ್ತಿದ್ದಳು...' ಅವರು ಮಾತು ಮುಗಿಸುವ ಮುನ್ನವೇ ಗೌತಮ, 'ಇಲ್ಲ ಇಲ್ಲ. ಅದು ಅಮ್ಮನ ಎದುರು ಮಾತನಾಡುವ ವಿಷಯವಲ್ಲ. ಅದಕ್ಕೇ ಇಲ್ಲಿಗೆ ನಿಮ್ಮನ್ನು ಬರಲು ಹೇಳಿದ್ದು' ಎಂದ. 'ಅಲ್ಲಪ್ಪ, ಯಾರನ್ನಾದರೂ ಹುಡುಗಿಯನ್ನು ಲವ್ ಗಿವ್ ಮಾಡುತ್ತಿದ್ದೀಯೇನು...?' ಮತ್ತೆ ಮಾತು ತುಂಡರಿಸಿ, 'ಇಲ್ಲಪ್ಪ, ಅಂಥದ್ದೇನೂ ಇಲ್ಲ. ಅದಕ್ಕಿಂತ ಮುಖ್ಯ ವಿಚಾರ, ನಮ್ಮ ದೇಶದ ವಿಚಾರ, ನಮ್ಮ ಧರ್ಮದ ವಿಚಾರ. ನೀವು ಬನ್ನಿ. ಇಲ್ಲಿಗೆ ಬಂದಾಗ ಎಲ್ಲಾ ಹೇಳುತ್ತೇನೆ' ಮಾತು ಮುಂದುವರಿಸದೆ ಗೌತಮ ಫೋನ್ ಇಟ್ಟು ಬಿಟ್ಟಿದ್ದ. ಸಂಜಯನಿಗೆ ಕುತೂಹಲ ಇನ್ನೂ ಹೆಚ್ಚಾಗಿತ್ತು. 'ಇನ್ನೂ ಚಿಕ್ಕ ಹುಡುಗ. ಆಗಲೇ ದೇಶ–ಧರ್ಮದ ವಿಚಾರ ಎನ್ನುತ್ತಾನೆ. ಇಲ್ಲಿಗೇ ಬನ್ನಿ ಮಾತನಾಡೋಣ ಎನ್ನುತ್ತಾನೆ. ವಿಷಯ ಏನಿರಬಹುದು?' ಎಂದು ಯೋಚಿಸುತ್ತ ಸುಶೀಲಾಳಿಗೆ ಹೇಳಿ ಅಂದು ರಾತ್ರಿಯೇ ಬಸ್ಸು ಹಿಡಿದು ಹೊರಟಿದ್ದರು.

ಹುಬ್ಬಳ್ಳಿ ತಲುಪಿದಾಗ ಆಗಷ್ಟೇ ಬೆಳಕು ಮೂಡಿತ್ತು. ಆಟೋ ಹಿಡಿದು ಗೌತಮನ ಹಾಸ್ಟೆಲು ತಲುಪಿದರು. ಹೊರಗಡೆ ಗೇಟಲ್ಲೇ ನಿಂತು ಫೋನ್ ಮಾಡಿದರು. ಒಂದೆರಡು ನಿಮಿಷದಲ್ಲೇ ಗೌತಮ ಹೊರಬಂದು ಅವರನ್ನು ಗೆಸ್ಟ್ ರೂಮಿಗೆ ಕರೆದೊಯ್ದ. ಆಗ ತಾನೇ ಸ್ನಾನ ಮಾಡಿ ಬಿಳಿಯ ಶುಭ್ರ ಕುರ್ತಾ ಪೈಜಾಮ ಧರಿಸಿದ್ದ ಮಗನನ್ನು ನೋಡಿ ಸಂಜಯನಿಗೆ ಅಚ್ಚರಿಯಾಯ್ತು. ಅವನೆಂದೂ ಆ ಧಿರಿಸು ತೊಟ್ಟವನಲ್ಲ. ಅದಕ್ಕಿಂತ ಹೆಚ್ಚು ಅಚ್ಚರಿ ಹಾಗೂ ಆಘಾತವಾಗಿದ್ದು ಅವನ ಹಣೆಯಲ್ಲಿನ ಕುಂಕುಮ ಕಂಡು. ಸಂಜಯ ಏನೂ ಹೇಳಲಿಲ್ಲ. ಅವನಿಗೆ ಎಲ್ಲ ವಿಚಿತ್ರವೆನ್ನಿಸುತ್ತಿತ್ತು. ಅವನಿಗರಿವಾಗದಂತೆ ಕೊಂಚ ಹೆದರಿಕೆಯೂ ಆಗತೊಡಗಿತು. ಗೆಸ್ಟ್ ರೂಮಿನಲ್ಲಿ ಸಂಜಯ ಸ್ನಾನ ಮುಗಿಸಿ, ಬಟ್ಟೆ ಬದಲಿಸಿ ಮಗನ ಎದುರಿಗೆ ಕೂತ.

'ಏನಿದೆಲ್ಲಾ? ನಿನ್ನ ವಿಚಿತ್ರ ವೇಷ. ಹಣೆಯಲ್ಲಿ ಕುಂಕುಮ? ಇದ್ದಕ್ಕಿದ್ದಂತೆ ದೈವ ಭಕ್ತಿ ಹೆಚ್ಚಾದಂತಿದೆ?' ಮಗನನ್ನು ಕೇಳಿದರು. ಅಪ್ಪ ಹಿಡಿದು ತಂದಿದ್ದ ನ್ಯೂಸ್ ಪೇಪರನ್ನು ತಿರುವಿ ಹಾಕುತ್ತಿದ್ದ ಗೌತಮ ನಗುತ್ತ, 'ಏನಿಲ್ಲ. ನಮ್ಮ ಮೂಲವನ್ನು ಹುಡುಕಿಕೊಳ್ಳುವ ಪ್ರಯತ್ನವಷ್ಟೆ' ಎಂದ ಸಂಜಯನಿಗೆ ಅವನ ಮಾತಿನ ಅರ್ಥ ತಿಳಿಯಲಿಲ್ಲ. 'ಇಲ್ಲ ನಿನ್ನ ಮಾತು ನನಗರ್ಥವಾಗುತ್ತಿಲ್ಲ. ಸ್ವಲ್ಪ ವಿವರಿಸಿ ಹೇಳು' ಕೇಳಿದರು. ಅವನು ಉತ್ತರ ಹೇಳಲಿಲ್ಲ. ತಲೆಬಗ್ಗಿಸಿ ನ್ಯೂಸ್ ಪೇಪರ್ ನೋಡುತ್ತಲೇ ಇದ್ದ.

'ಇಲ್ಲಿ ನೋಡಿ, ಮತ್ತೆ ಸೂರತ್‌ನಲ್ಲಿ ಎಷ್ಟೊಂದು ಬಾಂಬ್‌ಗಳನಿಟ್ಟಿದ್ದಾರೆ! ದುಷ್ಟರು! ದೇವರ ದಯದಿಂದ ಯಾವುದೂ ಸಿಡಿದಿಲ್ಲ' ಗೌತಮ ಸಿಟ್ಟಿನಿಂದ ಹೇಳಿದ. ಅವನ ಮುಖ ಕೆಂಪಾಗಿತ್ತು. ಸಂಜಯನಿಗೆ ಮಗನ ನಡತೆ ಮಾತುಗಳಿಂದ ಒಂದು ರೀತಿಯ ಗಾಭರಿ, ಹೆದರಿಕೆಯಾಗಿತ್ತು. ಇದ್ದಕ್ಕಿದ್ದಂತೆ 'ದೇವರು' ಎನ್ನುವ ಪದವನ್ನು ಎಷ್ಟೊಂದು ಸಾರಿ ಬಳಸುತ್ತಿದ್ದಾನೆ?

'ಹೌದು, ಬಾಂಬುಗಳನ್ನು ಇಡುವವರೆಲ್ಲಾ ದುಷ್ಟರು, ಕ್ರೂರಿಗಳು. ಅದರಲ್ಲಿ ಎರಡು ಮಾತಿಲ್ಲ' ಎಂದಷ್ಟೇ ಹೇಳಿ ಮಗನನ್ನೇ ನೋಡುತ್ತಿದ್ದರು. ಅವನು ತಲೆ ಬಗ್ಗಿಸಿಯೇ ಇದ್ದ. ಅಪ್ಪನ ಮುಖವನ್ನೇ ನೋಡುತ್ತಿರಲಿಲ್ಲ. ಕೊನೆಗೆ ತಲೆ ಎತ್ತಿ,

'ಅಪ್ಪ, ನಿಮಗೊಂದು ವಿಷಯ ಹೇಳಬೇಕು. ಅದನ್ನು ಯಾರಿಗೂ ಹೇಳುವುದಿಲ್ಲವೆಂದು ದೇವರ ಮೇಲೆ ಪ್ರಮಾಣ ಮಾಡಿ ಹೇಳಿ' ಎಂದು ಹೇಳಿದ. ಅವನು ತಲೆ ಎತ್ತಿ ಹೇಳುತ್ತಿದರೂ ಅವನಿಗೆ ಅಪ್ಪನ ಕಣ್ಣುಗಳನ್ನು ನೇರ ನೋಡಲಾಗುತ್ತಿರಲಿಲ್ಲ.

'ನಿನಗೇ ಗೊತ್ತಲ್ಲ, ನನಗೆ ಎಲ್ಲರ ಕಲ್ಪನೆಯ ದೇವರ ಬಗ್ಗೆ ನಂಬಿಕೆ ಇಲ್ಲವೆಂದು?' ಎಂದರು.

'ಇಲ್ಲ, ನೀವು ಪ್ರಮಣ ಮಾಡಲೇಬೇಕು' ಎಂದು ಹೇಳಿ ಅಪ್ಪನ ಕೈ ಹಿಡಿದ.

'ನನ್ನ ಪ್ರಮಾಣದ ಸ್ಥಿರತೆ ನೀನು ಹೇಳುವ ವಿಷಯವನ್ನು ಅವಲಂಬಿಸಿರುತ್ತದೆ. ನಾನು ನನ್ನ ಪ್ರಮಾಣವನ್ನೂ ಮುರಿಯಬಹುದು...'

'ಇಲ್ಲ. ನನಗೆ ನಿಮ್ಮ ಮೇಲೆ ನಂಬಿಕೆಯಿದೆ. ನೀವು ನನಗೆ ಚಿಕ್ಕಂದಿನಿಂದಲೂ ನನಗೆ ಹೇಳುತ್ತಿದ್ದಿರಿ. ನಾನು ಏನೇ ಮಾಡಿದರೂ ನಿಮಗೆ ತಿಳಿಸಿ ಹೇಳಿಯೇ ಮಾಡಬೇಕೆಂದು. ನಾನು ನಿಮಗೆ ತಿಳಿಸಿ ಹೇಳದೆ ಏನನ್ನೂ ಮಾಡಿಲ್ಲ. ನನ್ನ ವಿಚಾರಗಳನ್ನು ತಿಳಿದ ನಂತರ ನೀವೂ ಸಹ ನನ್ನ ಕಾರ್ಯಕ್ಕೆ ಸಮ್ಮತಿಸುತ್ತೀರಿ. ನನಗೆ ನಿಮ್ಮ ಮೇಲೆ ನಂಬಿಕೆಯಿದೆ. ದಯವಿಟ್ಟು ಪ್ರಮಾಣ ಮಾಡಿ'. ಗೌತಮ ಹಿಡಿದ ಕೈ ಬಿಡಲಿಲ್ಲ. ಸಂಜಯ ತನ್ನ ಕೈ ಹಿಡಿದಿದ್ದ ಮಗನ ಕೈಯೆಡೆಗೆ ನೋಡಿದ. ಮಗನ ಕೈ ಎಷ್ಟು ಬೆಳೆದು ಬಿಟ್ಟಿದೆ. ಇದೇ ಕೈಗಳಲ್ಲವೆ ಅವನು ಹಸುಗೂಸಾಗಿದ್ದಾಗ ತನ್ನ ಒಂದು ಬೆರಳನ್ನು ಹಿಡಿಯಲು ಪ್ರಯತ್ನ ಮಾಡುತ್ತಿದ್ದುದು.

ಸಂಜಯ ಏನೊಂದೂ ಹೇಳಲಿಲ್ಲ. ಸುಮ್ಮನಿದ್ದ. ಗೌತಮ ಮತ್ತೆ, 'ಅಪ್ಪ, ಪ್ಲೀಸ್..' ಎಂದ.

'ಅಪ್ಪ, ಪ್ಲೀಸ್ ಚಾಕೊಲೇಟ್ ಕೊಡಿಸು' ಎನ್ನುವಂತಿತ್ತು ಅವನ ಧ್ವನಿ.

'ನನ್ನ ಮೇಲೆ ನಂಬಿಕೆಯಿದ್ದರೆ ಹೇಳು. ಇಲ್ಲದಿದ್ದರೆ ಬೇಡ. ನಾನು ಯಾವುದೇ ಪ್ರಮಾಣ ಮಾಡುವುದಿಲ್ಲ. ನನಗೆ ಅವುಗಳಲ್ಲೆಲ್ಲಾ ನಂಬಿಕೆಯಿಲ್ಲ' ಮಗನ ಕೈಯಿಂದ ಕೈ ಬಿಡಿಸಿಕೊಂಡರು.

'ಆಯ್ತು ಹೇಳುತ್ತೇನೆ. ಆದರೆ ದಯವಿಟ್ಟು ಯಾರಲ್ಲಿಯೂ ಹೇಳಬೇಡಿ. ಕಳೆದ ಒಂದು ತಿಂಗಳಿಂದ ನಡೆದ ಘಟನೆಗಳನ್ನು ನೋಡುತ್ತಿದ್ದೀರಲ್ಲ. ಬೆಂಗಳೂರಲ್ಲಿ, ಅಹ್ಮದಾಬಾದ್‌ನಲ್ಲಿ ಬಾಂಬ್‌ಗಳ ಸ್ಫೋಟ. ಇದನ್ನೆಲ್ಲಾ ಮಾಡುತ್ತಿರುವವರು ಯಾರು?' ಗೌತಮನ ಪ್ರಶ್ನೆಗೆ ಏನು ಹೇಳಬೇಕೆಂದು ಸಂಜಯನಿಗೆ ತೋಚಲಿಲ್ಲ. ಈ ಪ್ರಶ್ನೆಗಳನ್ನು ಕೇಳುತ್ತಿರುವವನು ತಮ್ಮ ಮಗನೇ? ಎಂದು ಅಚ್ಚರಿಯಾಗತೊಡಗಿತ್ತು ಅವನಿಗೆ.

ಮತ್ತೆ ಗೌತಮ ಮುಂದುವರಿಸಿದ, 'ಇದೆಲ್ಲಾ ಆ ಮುಸಲ್ಮಾನರದೇ ಕೆಲಸ'. ಅವನ ಮಾತಿನಿಂದ ಒಂದರೆಕ್ಷಣ ತನ್ನ ಎದೆಭಡಿತ ನಿಂತಹಾಯ್ತು ಸಂಜಯನಿಗೆ. ಕೈಕಾಲು ನಡುಗತೊಡಗಿತು, ಬಾಯಿ ಒಣತೊಡಗಿತು. ಅಲ್ಲಿಯೇ ಇದ್ದ ಗಾಜಿನ ಜಗ್‌ನಿಂದ ಗ್ಲಾಸಿಗೆ ನೀರು ಬಗ್ಗಿಸಿಕೊಂಡು ಅವರ ಕೈ ನಡುಕದಿಂದ ಒಂದಷ್ಟು ನೀರು ಚೆಲ್ಲಿತು. ಮುಂದಕ್ಕೆ ಬಾಗಿದ ಗೌತಮ ಅವರ ಗ್ಲಾಸಿಗೆ ನೀರು ಸರಿಯಾಗಿ ಬಗ್ಗಿಸಿ ಅವರಿಗೆ ನೀಡಿದ. ನೀರು ಕುಡಿದ ಸಂಜಯ ಕುರ್ಚಿಯಿಂದೆದ್ದು ಹಾಸಿಗೆಯ ಮೇಲೆ ಕೂತು ಕಣ್ಣುಮುಚ್ಚಿಕೊಂಡ. ಕೂಡಲೇ ಎದ್ದ ಗೌತಮ, 'ಅಪ್ಪ, ಏನಾಯಿತು?' ಎಂದ.

'ಇಲ್ಲ. ಹಾಗಿಲ್ಲ. ನೀನು ಹೇಳುವುದು ಮುಂದುವರಿಸು...' ಎಂದ ಸಂಜಯ ಕಣ್ಣು ತೆರೆಯುತ

ಗೌತಮ ಮುಂದುವರಿಸಿದ. 'ಮುಸಲ್ಮಾನರು ಹದ್ದುಮೀರಿ ಹೋಗಿದ್ದಾರೆ. ಭಾರತ ಮಾತ್ರವಲ್ಲ, ಇಡೀ ಜಗತ್ತನ್ನೇ ಹಾಳುಮಾಡುತ್ತಿದ್ದಾರೆ. ಭಾರತದ ಮೂಲ ನಿವಾಸಿಗಳು ನಾವು ಹಿಂದೂಗಳು. ನಮ್ಮ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ, ಹಿಂದೂಗಳನ್ನು ಕೊಚ್ಚಿ ಕೊಲ್ಲುತ್ತಿದ್ದಾರೆ...'

ಸಂಜಯನ ಮನಸ್ಸು ಸುಮಾರು ಹನ್ನೆರಡು–ಹದಿಮೂರು ವರ್ಷಗಳ ಹಿಂದಕ್ಕೆ ಹೋಯಿತು. ಆಗ ಗೌತಮನಿಗೆ ಎಂಟು ವರ್ಷ. ಬಹಶಃ ಆಗ ಅವನು ಮೂರನೇ ಕ್ಲಾಸಿನಲ್ಲಿ ಇದ್ದ ಎನ್ನಿಸುತ್ತದೆ. ಒಂದು ದಿನ ಶಾಲೆಯಿಂದ ಬಂದವನೆ, 'ಅಪ್ಪ, ನಾವು ಹಿಂದುಗಳಾ, ಮುಸಲ್ಮಾನರಾ?' ಎಂದು ಕೇಳಿದ. ಅವನ ಆ ಪ್ರಶ್ನೆಯಿಂದ ಸಂಜಯ ಸುಶೀಲಾ ಇಬ್ಬರೂ ಚಕಿತಗೊಂಡರು. ಈ ಚಿಕ್ಕ ವಯಸ್ಸಿನಲ್ಲಿ ಅವನ ಮನಸ್ಸಿನಲ್ಲೇಕೆ ಈ ಪ್ರಶ್ನೆ ಮೂಡಿತು? ಎಂದುಕೊಂಡರು.

ಸಂಜಯ ಮತ್ತು ಸುಶೀಲಾರ ಜಗತ್ತೇ ಬೇರೆಯದಾಗಿತ್ತು. ಅವರಿಗೆ ಯಾವುದೇ ಧರ್ಮದಲ್ಲಿ ನಂಬಿಕೆಯಿರಲಿಲ್ಲ. ಎಲ್ಲ ಧರ್ಮಗಳನ್ನೂ ಗೌರವಿಸಿ, ಉತ್ತಮ ಮಾನವರಾಗಿ ಬದುಕಬೇಕೆನ್ನುವುದು ಅವರ ನಂಬಿಕೆಯಾಗಿತ್ತು. ಹಾಗಾಗಿ ಅದೇ ರೀತಿ ತಮ್ಮ ಮಗನನ್ನೂ ಬೆಳೆಸುವ ಪ್ರಯತ್ನ ಮಾಡುತ್ತಿದ್ದರು.

'ಯಾಕೀಗ ಆ ಪ್ರಶ್ನೆ?' ಸಂಜಯ ಕೇಳಿದ್ದ. 'ಯಾಕಿಲ್ಲಾ, ನಮ್ಮ ಟೀಚರ್ ಕೇಳಿದರು' ಎಂದ. ಸಂಜಯನಿಗೆ ನೆನಪಾಯಿತು; ಶಾಲೆಯ ಅರ್ಜಿಯಲ್ಲಿ 'ಧರ್ಮ/ಜಾತಿ' ಎಂದಿರುವೆಡೆ 'ಭಾರತೀಯರು' ಎಂದು ಮಾತ್ರ ಬರೆದಿದ್ದ. ಆದ್ದರಿಂದ ಟೀಚರ್ ಆ ಪ್ರಶ್ನೆ ಕೇಳಿರಬಹುದು ಎಂದುಕೊಂಡ. ಈಗ ಬೆಳೆದು ನಿಂತ ಗೌತಮ, 'ನಾವು ಹಿಂದೂಗಳು' ಎನ್ನುತ್ತಿದ್ದಾನೆ.

'ಅಪ್ಪ, ನಾವಿದನ್ನೆಲ್ಲಾ ಕೊನೆಗಾಣಿಸಬೇಕು. ಭಾರತ ರಾಷ್ಟ್ರ ನಮ್ಮದು. ಭಾರತದಲ್ಲಿರುವ ಪರಕೀಯರು ಯಾರೇ ಆದರೂ ನಾವು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕು. ಇಲ್ಲದಿದ್ದಲ್ಲಿ ಅವರು ಪಾಕಿಸ್ತಾನಕ್ಕೋ, ಮತ್ತೊಂದು ದೇಶಕ್ಕೋ ತೊಲಗಲಿ. ನಾವಿವರನ್ನು ಹಾಗೆಯೇ ಬಿಟ್ಟಲ್ಲಿ ಅವರೇ ನಮ್ಮನ್ನು ಆಳಲು ಪ್ರಾರಂಭಿಸುತ್ತಾರೆ. ಇಡೀ ಹಿಂದೂ ಧರ್ಮವನ್ನೇ ನಾಶಮಾಡಿ ಬಿಡುತ್ತಾರೆ...' ಗೌತಮ ಹೇಳುತ್ತಲೇ ಇದ್ದ.

ಸಂಜಯನಿಗೆ ಏನು ಹೇಳಬೇಕೆಂದು ತೋಚಲಿಲ್ಲ. 'ಇಷ್ಟು ವರ್ಷ ಮಗನನ್ನು ನಾನು ಬೆಳೆಸಿದ್ದು ಇದಕ್ಕಾಗಿಯೇ? ನಾವು ಅವನಿಗೆ ತಿಳಿಸಿಕೊಟ್ಟ ಆದರ್ಶಗಳೆಲ್ಲಾ ಏನಾದವು? ಕಾಲೇಜಿನಲ್ಲಿ, ಹಾಸ್ಟೆಲಿನಲ್ಲಿ ಯಾರೋ ಅವನ ತಲೆ ಕೆಡಿಸಿದ್ದಾರೆ' ಎಂದುಕೊಂಡ. ಅವನ ಮನಸ್ಸಿನಲ್ಲಿನ ದುಗುಡ, ಆತಂಕ ಮಗ ಗೌತಮನಿಗೆ ತಿಳಿಯಲಿಲ್ಲ.

'ಅಪ್ಪ, ನಾನೀಗ ನಿಮ್ಮಂದಿಗೆ ಮಾತನಾಡಲು ಕರೆದಿದ್ದು ಒಂದು ಮುಖ್ಯ ವಿಷಯ ತಿಳಿಸಲು. ನಮ್ಮದೊಂದು ಭೂಗತ ಸಂಘಟನೆಯೊಂದಿದೆ. ನಾವು ದೇಶದಾದ್ಯಂತ ಸಂಚರಿಸಿ ನಮ್ಮ ಶಾಖೆಗಳೊಂದಿಗೆ ನಮ್ಮ ಇಡೀ ಜಾಲವನ್ನು ದೇಶವೆಲ್ಲಾ ಪ್ರಸರಿಸಬೇಕೆಂಬ ಸಂಕಲ್ಪ ತೊಟ್ಟಿದ್ದೇವೆ. ನಮ್ಮ ಭಾರತಮಾತೆಯನ್ನು ಉಳಿಸಿಕೊಳ್ಳಬೇಕಿದೆ. ಈಗ ಆ ಕೆಲಸ ಮಾಡದಿದ್ದಲ್ಲಿ ತುಂಬಾ ತಡವಾಗಿಬಿಡುತ್ತದೆ. ಅವಶ್ಯಕವಿದ್ದಲ್ಲಿ ನಾವೂ ಬಾಂಬೂಗಳನ್ನು ಇಡುತ್ತೇವೆ. ನಾವೂ ಒಂದು ಆತ್ಮಹತ್ಯ ದಳವೊಂದನ್ನು ಸಿದ್ಧಪಡಿಸುತ್ತಿದೇವೆ, ಅವರನ್ನು ಕೊಚ್ಚಿ ಕೊಂದುಹಾಕುತ್ತೇವೆ. ತಾಯಿಯ ರಕ್ಷಣೆಗಾಗಿ ನಾವು ಎಲ್ಲದಕ್ಕೂ ಸಿದ್ಧರಾಗಿದ್ದೇವೆ. ನಾನು ಹೊರಡುತ್ತಿದ್ದೇನೆ. ಮತ್ತೆಂದು ವಾಪಸ್ಸು ಬರುತ್ತೇನೋ ಗೊತ್ತಿಲ್ಲ. ದೇಶವೇ ಹಾಳಗುತ್ತಿರುವಾಗ ಶಿಕ್ಷಣ ಏಕೆ ಬೇಕು? ನಾನು ಕಾಲೇಜು ಬಿಟ್ಟು ಹೊರಡುತ್ತಿದ್ದೇನೆ. ದಯವಿಟ್ಟು ನನ್ನನ್ನು ಆಶೀರ್ವದಿಸಿ'

ನೇರ ರೈಲ್ವೇ ಸ್ಟೇಶನ್‌ಗೆ ಹೋಗಿ ಟಿಕೆಟ್ ಬುಕ್ ಮಾಡಿಸಿ ಸಂಜಯ ಅಲ್ಲೇ ಇದ್ದ ಬೆಂಚಿನ ಮೇಲೆ ಕೂತ. ತನ್ನ ಮಗನಲ್ಲಿ ಆಗಿರುವ ಬದಲಾವಣೆಗಳು ಕಂಡು ಅವನಿಗೆ ತೀವ್ರ ಆಘಾತವಾಗಿತ್ತು. ತಾನು ಇಷ್ಟು ವರ್ಷ ಯಾವುದನ್ನು ಬಲವಾಗಿ ನಂಬಿ, ಆಚರಿಸಿ ಬದುಕುತ್ತಿದ್ದನೋ, ಅದನ್ನೆಲ್ಲಾ ತನ್ನ ಮಗನಲ್ಲಿ ಕಾಣಬಯಸಿದ್ದನೋ ಅದಕ್ಕೆಲ್ಲಾ ವಿರುದ್ಧವಾಗಿ ಮಗ ಬೆಳೆದಿದ್ದ. ಅವನಿಗೆ ಹೊರಗೆ ಎಲ್ಲಿಗೂ ಹೋಗುವುದು ಇಷ್ಟವಾಗಲಿಲ್ಲ. ಅಲ್ಲೇ ರೈಲ್ವೇ ಸ್ಟೇಶನ್ನಿನಲ್ಲೇ ಕೂತು ಹೋಗಿಬರುವವರನ್ನು ನೋಡುತ್ತಿದ್ದ. ಟ್ರೈನುಗಳು ಬರುತ್ತಿದ್ದವು, ಹೋಗುತ್ತಿದ್ದವು. ಒಂದು ಬೋಗಿಯೊಳಗೆ ಎಲ್ಲ ಧರ್ಮದವರೂ ಹತ್ತುತ್ತಾರೆ.

ಗೌತಮ ಎದ್ದು ಬಂದು ಅಪ್ಪನ ಕೈ ಹಿಡಿದ. ಗರಬಡಿದವನಂತೆ ಕೂತಿದ್ದ ಸಂಜಯ ತಲೆ ಬಾಗಿಸಿದ್ದ. ಗೌತಮ ಅಪ್ಪನ ತಲೆ ಬಲವಂತವಾಗಿ ಮೇಲೆತ್ತಿದ. ಸಂಜಯನ ಮುಖ ಕಳೆಗುಂದಿದ್ದು ಕಂಡು 'ಅಪ್ಪ, ನಾನು ಹೋಗುತ್ತೇನೆಂದು ನಿಮಗೆ ದುಃಖವೆ? ಅಳಬೇಡಿ. ನನ್ನ ಘನ ಕಾರ್ಯದ ಬಗ್ಗೆ ನೀವು ಹೆಮ್ಮೆ ಪಡುತ್ತೀರಿ' ಎಂದ ಅಪ್ಪನನ್ನು ತಬ್ಬಿಕೊಂಡು.

ಸ್ವಲ್ಪ ಹೊತ್ತಾದ ಮೇಲೆ ಏನೋ ನಿರ್ಧರಿಸಿದವನಂತೆ ಸಂಜಯ ಎದ್ದು ನಿಂತ. ಬಾತ್‌ರೂಮಿಗೆ ಹೋಗಿ ಮುಖತೊಳೆದುಕೊಂಡು ಬಂದ. ಮತ್ತೆ ಗೌತಮನ ಎದುರಿಗೆ ಕೂತು, 'ಗೌತಮ, ನಿನ್ನ ಮಾತುಗಳನ್ನೆಲ್ಲ ಕೇಳಿದೆ. ನಿನ್ನ ಮಾತಿನಲ್ಲಿ ಸತ್ಯಾಂಶವಿದೆ ಎನ್ನಿಸುತ್ತಿದೆ. ನನಗೂ ಭಾರತದಲ್ಲಿ, ಈ ಜಗತ್ತಿನಲ್ಲಿ ನಡೆಯುತ್ತಿರುವುದನ್ನೆಲ್ಲ ಕಂಡು ಮನಸ್ಸು ರೋಸಿಹೋಗಿತ್ತು. ನಿನಗಿಂತ ದೊಡ್ಡವನಾದ ನನಗೆ ನಿನ್ನ ಆಲೋಚನೆಗಳು ಮೊದಲೇಕೆ ಬರಲಿಲ್ಲ? ಇರಲಿ, ನಿನ್ನ ಮನಸ್ಸಿಗೆ ಈ ವಿಚಾರಗಳನ್ನು ತುಂಬಿದವರು ಪುಣ್ಯಾತ್ಮರು. ಅವರನ್ನು ನಾನು ಅಭಿನಂದಿಸಲೇಬೇಕು.' ಅಪ್ಪನ ಮಾತುಗಳನ್ನು ಕೇಳಿ ಗೌತಮನಿಗೆ ಅಚ್ಚರಿಯಾಯಿತು. ಅಪ್ಪ ನಿಜವಾಗಿ ಹೇಳುತ್ತಿದ್ದಾರೋ ಅಥವಾ ನಾಟಕವಾಡುತ್ತಿದ್ದಾರೋ?

'ನನಗನ್ನಿಸುತ್ತಿದೆ, ನಾನೂ ಸಹ ನಿನ್ನ ಕಾರ್ಯದಲ್ಲಿ ಭಾಗಿಯಾಗಬೇಕೆಂದು. ನಾವು ಬದುಕಿನಲ್ಲಿ ತಿಳಿದೋ ತಿಳಿಯದೆಯೋ ಬಹಳಷ್ಟು ತಪ್ಪುಗಳನ್ನು ಮಾಡಿಬಿಟ್ಟಿರುತ್ತೇವೆ. ನೀನು ಹೇಳುತ್ತಿರುವುದೆಲ್ಲ ನನಗೂ ಸರಿ ಎನಿಸುತ್ತಿದೆ' ಎಂದಷ್ಟೇ ಹೇಳಿದ.

ಅಪ್ಪನಲ್ಲಾದ ಈ ಬದಲಾವಣೆಯಿಂದ ಗೌತಮನಿಗೂ ಕುತೂಹಲಭರಿತ ಸಂತೊಷವಾಯಿತು.

ಸ್ವಲ್ಪ ಹೊತ್ತಾದ ನಂತರ, 'ಗೌತಮ ನೀನು ಹೇಗೂ ಕಾಲೇಜು ಬಿಟ್ಟು ಹೊರಡಬೇಕೆಂದು ತೀರ್ಮಾನಿಸಿದ್ದೀಯ. ಹೋದ ಮೇಲೆ ವಾಪಸ್ಸು ಬರುವುದೆಂದೋ ನಿನಗೂ ತಿಳಿದಿಲ್ಲ. ಹೋಗುವ ಮೊದಲು ಊರಿಗೆ ಬಂದು ಅಮ್ಮನನ್ನು ಕಂಡು ಹೋಗು ನಿನ್ನ ಎಲ್ಲ ಕೆಲಸಕ್ಕೂ ನಮ್ಮ ಆಶೀರ್ವಾದವಿದೆ. ನಮ್ಮ ಮಗ ಧರ್ಮರಕ್ಷಕನೆಂಬ ಹೆಮ್ಮೆ ನಮಗೂ ಇದೆ.' ಸಂಜಯ ಮಗನನ್ನು ಅಪ್ಪಿಕೊಂಡು ಬೆನ್ನು ತಟ್ಟಿದ.' ಎಂದ.

'ಆದರೆ, ಊರಿಗೆ ಈ ದಿನವೇ ಹೊರಡಬೇಕೆ...?' ಎಂದ ಗೌತಮ.

"ಹಾಗೇನಿಲ್ಲ. ನೀನು ನಿನ್ನ ಭೂಗತ ಜಗತ್ತಿಗೆ ಹೊರಡುವ ಮೊದಲು ನಿನಗೆ ಎಂದು ಸಮಯ ಸಿಗುತ್ತದೋ ಅಂದೇ ಬಂದು ಹೋಗು. ಧರ್ಮರಕ್ಷಕ ಕಾರ್ಯಕ್ಕೆ ಹೊರಟ ನಿನಗೆ ಅಮ್ಮನ ಆಶೀರ್ವಾದ ಬೇಡವೆ? ಎಂದು ಕೇಳಿದ ಸಂಜಯ ಎದ್ದು ತಾನು ಎಂದಿದ್ದ ಕೈಚೀಲ ಹಿಡಿದು ನಿಂತ.

'ನಾನು ಈ ಶನಿವಾರ ಊರಿಗೆ ಬರುತ್ತೇನೆ' ಎಂದ ಗೌತಮ ಮತ್ತೆ ಅರೆ ಕ್ಷಣ ಯೋಚಿಸಿ, 'ಇಲ್ಲ ಈ ಶನಿವಾರ ಆಗುವುದಿಲ್ಲ. ಆ ದಿನ ನಮ್ಮ ಶಾಖೆಯ ಸಭೆಯೊಂದಿದೆ. ಇಂದೇ ನಿಮ್ಮ ಜೊತೆ ಬಂದುಬಿಡುತ್ತೇನೆ. ಅಮ್ಮನನ್ನು ಕಂಡು ನಾಳೆ ವಾಪಸ್ಸು ಬಂದುಬಿಡಬಹುದು' ಎಂದ.

'ನಿನ್ನಿಷ್ಟ, ನಿನಗೆ ಹೇಗೆ ಅನುಕೂಲವೋ ಹಾಗೇ ಮಾಡು' ಎಂದ ಸಂಜಯ.

'ನೀವು ಟ್ರೈನಿನಲ್ಲಿ ಹೋಗುವುದಾದರೆ ನನಗೂ ಟಿಕೆಟ್ ರಿಸರ್ವ್ ಮಾಡಿಸಿಬಿಡಿ' ಎಂದ ಗೌತಮ ಎದ್ದು ನಿಂತ ಅಪ್ಪನನ್ನು ನೋಡಿ 'ಅಪ್ಪ, ನಮ್ಮ ಹಾಸ್ಟೆಲಿನಲ್ಲೇ ತಿಂಡಿ ತಿಂದು ಹೋಗಿ..' ಎಂದ.

'ಬೇಡ, ಈಗ ಅದಕ್ಕೆಲ್ಲಾ ಸಮಯವಿಲ್ಲ. ನಾನು ಎಲ್ಲಾದರೂ ತಿನ್ನುತ್ತೇನೆ. ಸಂಜೆ ಫೋನ್ ಮಾಡುತ್ತೇನೆ. ರೈಲ್ವೇ ಸ್ಟೇಶನ್‌ಗೆ ಬಂದು ಬಿಡು' ಎನ್ನುತ್ತಾ ಹೊರಹೊರಟ. ತಕ್ಷಣ ಏನೋ ನೆನಪುಮಾಡಿಕೊಂಡು, 'ಹಾಂ ಮರೆತಿದ್ದೆ. ನಿನ್ನ ಅಮ್ಮ ನಿನಗೆ ಇಷ್ಟವಾದ ಕೊಬ್ಬರಿ ಮಿಠಾಯಿ ಕಳುಹಿಸಿದ್ದಾಳೆ. ತಗೋ' ಎಂದು ತಾವು ತಂದಿದ್ದ ಕೈಚೀಲದಿಂದ ಪೊಟ್ಟಣವೊಂದನ್ನು ತೆಗೆದುಕೊಟ್ಟರು. ಗೌತಮ ಅದನ್ನು ಅಲ್ಲೇ ಬಿಡಿಸಿ ಕೊಬ್ಬರಿ ಮಿಠಾಯಿಯ ಒಂದು ತುಂಡನ್ನು ಬಾಯಿಗೆ ಹಾಕಿಕೊಂಡ. ಅದನ್ನು ನೋಡುತ್ತಿದ್ದ ಸಂಜಯ, 'ಆ ಸಿಹಿತಿಂಡಿಯಲ್ಲಿ ಯಾವುದಾದರೂ ಧರ್ಮದ ವಾಸನೆ ಬರುತ್ತಿದೆಯೆ?' ಎಂದು ಕೇಳಿದ. ಗೌತಮ ನಗುತ್ತಾ, 'ನನ್ನ ಅಮ್ಮನ ವಾಸನೆ ಬರುತ್ತಿದೆ' ಎಂದ.

ನೇರ ರೈಲ್ವೇ ಸ್ಟೇಶನ್‌ಗೆ ಹೋಗಿ ಟಿಕೆಟ್ ಬುಕ್ ಮಾಡಿಸಿ ಸಂಜಯ ಅಲ್ಲೇ ಇದ್ದ ಬೆಂಚಿನ ಮೇಲೆ ಕೂತ. ತನ್ನ ಮಗನಲ್ಲಿ ಆಗಿರುವ ಬದಲಾವಣೆಗಳು ಕಂಡು ಅವನಿಗೆ ತೀವ್ರ ಆಘಾತವಾಗಿತ್ತು. ತಾನು ಇಷ್ಟು ವರ್ಷ ಯಾವುದನ್ನು ಬಲವಾಗಿ ನಂಬಿ, ಆಚರಿಸಿ ಬದುಕುತ್ತಿದ್ದನೋ, ಅದನ್ನೆಲ್ಲಾ ತನ್ನ ಮಗನಲ್ಲಿ ಕಾಣಬಯಸಿದ್ದನೋ ಅದಕ್ಕೆಲ್ಲಾ

ಏರುದ್ಧವಾಗಿ ಮಗ ಬೆಳೆದಿದ್ದ. ಅವನಿಗೆ ಹೊರಗೆ ಎಲ್ಲಿಗೂ ಹೋಗುವುದು ಇಷ್ಟವಾಗಲಿಲ್ಲ. ಅಲ್ಲೇ ರೈಲ್ವೇ ಸ್ಟೇಶನ್ನಿನಲ್ಲೇ ಕೂತು ಹೋಗಿ ಬರುವವರನ್ನು ನೋಡುತ್ತಿದ್ದ. ಟ್ರೈನುಗಳು ಬರುತ್ತಿದ್ದವು, ಹೋಗುತ್ತಿದ್ದವು. ಒಂದು ಬೋಗಿಯೊಳಗೆ ಎಲ್ಲ ಧರ್ಮದವರೂ ಹತ್ತುತ್ತಾರೆ. ತಮ್ಮ ತಮ್ಮ ಸ್ಟೇಶನ್ ಬಂದಂತೆ ಇಳಿದುಹೋಗುತ್ತಾರೆ. ಇಷ್ಟವೋ ಕಷ್ಟವೋ ಅಡ್ಜಸ್ಟ್ ಮಾಡಿಕೊಂಡು ಪ್ರಯಾಣಿಸುತ್ತಾರೆ. ಬದುಕೆಂಬ ಟ್ರೈನಿನಲ್ಲಿ ಅದೇಕೆ ಸಾಧ್ಯವಾಗುವುದಿಲ್ಲ.

ಮನೆಗೆ ಸುಶೀಲಾಳಿಗೆ ಫೋನ್ ಮಾಡಿ ನಡೆದದ್ದೆಲ್ಲಾ ನಿಧಾನವಾಗಿ ವಿವರಿಸಿ ಹೇಳಿದರು. ಅತ್ತ ಸುಶೀಲಾ ಸಹ ಮಗನಲ್ಲಾದ ಬದಲಾವಣೆ ಕಂಡು ಗಾಬರಿಯಾಗಿದ್ದಳು. ಸಂಜಯ ಧೈರ್ಯ ಹೇಳಿದ. ನಾಳೆಯೇ ಬೆಳಗ್ಗೆ ಬೆಂಗಳೂರು ತಲುಪುವುದಾಗಿ ತಿಳಿಸಿದ.

ಸಂಜಯ ಮತ್ತು ಗೌತಮ ಬೆಂಗಳೂರು ತಲುಪಿದಾಗ ಬೆಳಗ್ಗೆ ಆರು ಗಂಟೆಯಾಗಿತ್ತು. ಚಿಂತಿತನಾದದ್ದರಿಂದಲೋ ಅಥವಾ ನಿದ್ರೆ ಇಲ್ಲದ್ದರಿಂದಲೋ ಏನೋ ಸಂಜಯನ ಕಣ್ಣುಗಳು ಕೆಂಪಾಗಿದ್ದವು. ಆಟೋ ಹಿಡಿದು ಮನೆ ತಲುಪಿದರು. ದಾರಿಯಲ್ಲಿ ತಂದೆ ಮಗ ಇಬ್ಬರೂ ಏನೂ ಮಾತನಾಡಿರಲಿಲ್ಲ. ಗೌತಮನೇ ಮೊದಲು ಇಳಿದು ಮನೆಯೊಳಕ್ಕೆ ಹೊರಟ. ಸಂಜಯ ಹಿಂಬಾಲಿಸಿದ. ಮನೆಯ ಮುಂದಿನ ಬಾಗಿಲು ತೆಗೆದೇ ಇತ್ತು. ಒಳಕ್ಕೆ ಕಾಲಿಡುತ್ತಲೇ ಗೌತಮ, 'ಅಮ್ಮಾ' ಎಂದು ಕರೆದ. ಹಾಲಿನ ಸೋಫಾದ ಮೇಲೆ ಕೂತ ಸಂಜಯ ಅಮ್ಮನಿದ್ದ ಕೋಣೆಗೆ ಹೋಗಲು ಯತ್ನಿಸಿದ ಗೌತಮನನ್ನು ತಡೆದು ಅಲ್ಲೇ ಪಕ್ಕದಲ್ಲೇ ಗೌತಮನನ್ನು ಕೂರುವಂತೆ ಹೇಳಿದ. ಗೌತಮನಿಗೆ ಇದೆಲ್ಲಾ ವಿಚಿತ್ರವಾಗಿ ಕಂಡಿತು.

'ನಿನ್ನ ಅಮ್ಮನನ್ನು ನಾನೇ ಕರೆಯುತ್ತೇನೆ. ಇಲ್ಲೇ ಕೂರು' ಎಂದ ಸಂಜಯ 'ಶಕೀಲಾ' ಎಂದು ಕರೆದ. ಗೌತಮನಿಗೆ ಆಶ್ಚರ್ಯವಾಯಿತು. 'ಶಕೀಲಾ?.. ಯಾರದು ಶಕೀಲಾ?' ಎಂದ ಗೊಂದಲದಿಂದ.

'ಶಕೀಲಾ ಎಂದರೂ ಒಂದೇ, ಸುಶೀಲಾ ಎಂದರೂ ಒಂದೆ. ಏನೆಂದು ಕರೆದರೂ ಅದು ನಿನ್ನ ಅಮ್ಮನೇ' ಎಂದ ಸಂಜಯ.

ರೂಮಿನಿಂದ ಸುಶೀಲಾ ಉರುಫ್ ಶಕೀಲಾ ಹೊರ ಬಂದಳು. ಬುರ್ಖಾ ಧರಿಸಿದ್ದಳು. ಮುಖ ಕಾಣಿಸುತ್ತಿತ್ತು. ತುಂಬಾ ಅತ್ತಿದ್ದರಿಂದ ಆಕೆಯ ಕಣ್ಣು ಸಹ ಕೆಂಪಗಾಗಿತ್ತು. ಆಕೆಯೂ ನಿದ್ರೆ ಮಾಡಿಲ್ಲವೆಂಬುದು ತಿಳಿಯುತ್ತಿತ್ತು.

ಗೌತಮ ಸಿಟ್ಟಿನಿಂದ, ಏನಿದೆಲ್ಲಾ ತಮಾಷೆ? ಅಮ್ಮಾ ಏನಿದು ಹುಡುಗಾಟಿಕೆ?

ಕಾಡು ಕುಸುಮಗಳು



ಕಾಡು ಕುಸುಮಗಳು ನಾವು
ನಮಗಿಲ್ಲ ಭೇದ ಭಾವ
ನಿಜ ಪರಿಸರ, ಒಂದೇ ನೆಲ
ನಮಗಿಲ್ಲ ಗಡಿ, ಗಡಿ ರೇಖೆ
ನಮಗುಂಟು ನೂರು ಬೇರು, ನೂರು ರೆಂಬೆ,
ವೈವಿಧ್ಯತೆಯೇ ನಮ್ಮ ನೆಲೆ
ಅರಳುವೆವು ಒಮ್ಮನಿಸಿನಿಂದ
ಪಸರಿಸಿ ಪರಿಮಳ
ಮುಗಿಲೆಡೆಗೆ ನಮ್ಮ ಪಯಣ
ಕಾಯುವವ, ಕಾಯ್ದವರ ಹಂಗಿಲ್ಲ
ಸ್ವತಂತ್ರರು ನಾವು ಹಕ್ಕಿಯಂತೆ
ಹಾರುವೆವು ನೆಲ ಮುಗಿಲ ಒಂದು ಮಾಡಿ
ಬದುಕಿನೊಂದಿಗೇ ನಮ್ಮ ಹೋರಾಟ
ನಾವೇ ಕಾಡು ಕುಸುಮಗಳು.

○ ಭಾಗ್ಯ ಹಾಗಲಗಂಚಿ

ಗೌತಮನಿಗೆ ಏನು ಹೇಳಲೂ ತೋಚಲಿಲ್ಲ. ಅತ್ತ, ಅಮ್ಮ ಅಳುತ್ತಲೇ ಇದ್ದಳು. 'ನನಗೇಕೆ ಇಷ್ಟೂ ದಿನ ಏನೂ ಹೇಳಿರಲಿಲ್ಲ?' ಕೊನೆಗೆ ಗೌತಮ ಕೇಳಿದ. ಅಪ್ಪ, ಅಮ್ಮ ಇಬ್ಬರೂ ಉತ್ತರಿಸಲಿಲ್ಲ.
ನಂತರ ಸಂಜಯ ಹೇಳಿದ, 'ಯಾರದೋ ಮಾತು ಕೇಳಿ ಮತಾಂಧನಾಗಿರುವ ನಿನಗೆ ಇವೆಲ್ಲಾ ಅರ್ಥವಾಗುವುದಿಲ್ಲ ಬಿಡು. ನಾನು ನಿನಗೆ ಅಲ್ಲಿ ಹೇಳಿದ್ದೆನಲ್ಲವೆ, ನಾವೂ ಸಹ ತಿಳಿದೋ ತಿಳಿಯದೆಯೋ ತಪ್ಪು ಮಾಡಿದ್ದೇವೆಂದು, ನಾನು ಈ ಮುಸಲ್ಮಾನಳನ್ನು ಮದುವೆಯಾಗಿದ್ದು ನಿನ್ನ ದೃಷ್ಟಿಯಲ್ಲಿ ಘೋರಪರಾಧವಲ್ಲದೆ ಮತ್ತೇನು? ನಿನ್ನ ಕೊಚ್ಚಿ ಕೊಲ್ಲುವ ಕಾರ್ಯಕ್ಕೆ ನಾನೂ ಸಹ ಸಹಾಯ ಮಾಡುತ್ತೇನೆ, ಅದನ್ನು ನಮ್ಮ ಮನೆಯಿಂದಲೇ ಪ್ರಾರಂಭಿಸು..'

ಯಾಕ್ತೀಗೆ ಹುಚ್ಚರಂಗ ಆಡ್ತಾ ಇದೀರ?' ಎಂದು ಎದ್ದು ನಿಂತು ಅಮ್ಮನ ಬುರ್ಖಾ ಕಿತ್ತು ಹಾಕಲು ಹೊರಟ. ಶಕೀಲಾ ಅಲ್ಲೇ ಕುಸಿದು ಕೂತಳು. ಗೌತಮನೂ ಕೂತ. ಅವನನ್ನು ತಬ್ಬಿ ಶಕೀಲಾ ಅಳತೊಡಗಿದಳು.

'ಗೌತಮ, ನಿನ್ನ ತಾಯಿ ಒಬ್ಬ ಮುಸಲ್ಮಾನಳು. ಅವಳ ಹೊಟ್ಟೆಯ ಕುಡಿ ನೀನು ಅವಳ ಎದೆಹಾಲು ಕುಡಿದು ದೊಡ್ಡವನಾದವನು ನೀನು. ಶಕೀಲಾ ಆಗಿದ್ದ ಅವಳು ಸಮಾಜದ ಕಣ್ಣಿಗೆ ಸುಶೀಲಾ ಆಗಬೇಕಾಯಿತು' ಹೇಳಿದ ಸಂಜಯ.

ತಬ್ಬಿಬ್ಬಾದ ಗೌತಮನಿಗೆ ಏನು ಹೇಳಬೇಕೆಂದು ತೋಚಲಿಲ್ಲ, ಅಮ್ಮ ಅಪ್ಪ ಇಬ್ಬರನ್ನೂ ಬಿಟ್ಟ ಕಣ್ಣು ಬಿಟ್ಟಂತೆ ನೋಡುತ್ತಿದ್ದ. 'ಅಂದರೆ ಅಮ್ಮ ಹಿಂದೂ ಧರ್ಮಕ್ಕೆ ಮತಾಂತರಗೊಂಡರ?' ಕೊನೆಗೆ ಸಾವರಿಸಿಕೊಂಡು ಕೇಳಿದ.

ಸಂಜಯ ಜೋರಾಗಿ ನಕ್ಕ. 'ಮತಾಂತರ?... ಯಾವುದೇ ಮತದಲ್ಲಿ ನಂಬಿಕೆ ಇಲ್ಲದ ನಮಗೆ ಮತಾಂತರ ಏಕೆ ಬೇಕು? ಮಾನವ ಧರ್ಮದಲ್ಲಿ ಮಾತ್ರ ನಂಬಿಕೆ ಉಳ್ಳವರು ನಾವು. ನಿನಗೆಂದಾದರೂ ನಾವು ಇಂಥದೇ ಧರ್ಮಕ್ಕೆ ಸೇರಿದವರೆಂದು ಹೇಳಿದ್ದೇವೆಯೆ? ನಮ್ಮ ಮನೆಯಲ್ಲಿ ಯಾವುದಾದರೂ ಧರ್ಮದ ಆಚರಣೆಯನ್ನು ಕಂಡಿರುವೆಯಾ ನೀನು? ನೀನೂ ಸಹ ಎಲ್ಲ ಧರ್ಮಗಳನ್ನೂ ಮೀರಿ ಬೆಳೆದು ಉತ್ತಮ ಮನುಷ್ಯನಾಗಬಹುದೆಂದು ನಾವು ಕನಸು ಕಂಡಿದ್ದೆವು. ನಿನ್ನನ್ನು ಅದೇ ರೀತಿ ಬೆಳೆಸಿದ್ದೆವು. ಆದರೆ ಈಗ ನೀನು ದೊಡ್ಡವನಾಗಿದ್ದೀಯ. ನಿನಗೆ ನಿನ್ನದೇ ಆಲೋಚನೆ, ವಿಚಾರಗಳನ್ನು ಹೊಂದುವ ಸ್ವಾತಂತ್ರ್ಯ ಇದೆ. ನಾವು ಯಾವುದಕ್ಕೂ ಅಡ್ಡಿ ಬರುವುದಿಲ್ಲ' ಎಂದು ಹೇಳಿ ಸುಮ್ಮನಾದ.

ಗೌತಮನಿಗೆ ಏನು ಹೇಳಲೂ ತೋಚಲಿಲ್ಲ. ಅತ್ತ, ಅಮ್ಮ ಅಳುತ್ತಲೇ ಇದ್ದಳು. 'ನನಗೇಕೆ ಇಷ್ಟೂ ದಿನ ಏನೂ ಹೇಳಿರಲಿಲ್ಲ?' ಕೊನೆಗೆ ಗೌತಮ ಕೇಳಿದ. ಅಪ್ಪ, ಅಮ್ಮ ಇಬ್ಬರೂ ಉತ್ತರಿಸಲಿಲ್ಲ.

ನಂತರ ಸಂಜಯ ಹೇಳಿದ, 'ಯಾರದೋ ಮಾತು ಕೇಳಿ ಮತಾಂಧನಾಗಿರುವ ನಿನಗೆ ಇವೆಲ್ಲಾ ಅರ್ಥವಾಗುವುದಿಲ್ಲ ಬಿಡು. ನಾನು ನಿನಗೆ ಅಲ್ಲಿ ಹೇಳಿದ್ದೆನಲ್ಲವೆ, ನಾವೂ ಸಹ ತಿಳಿದೋ ತಿಳಿಯದೆಯೋ ತಪ್ಪು ಮಾಡಿದ್ದೇವೆಂದು, ನಾನು ಈ ಮುಸಲ್ಮಾನಳನ್ನು ಮದುವೆಯಾಗಿದ್ದು ನಿನ್ನ ದೃಷ್ಟಿಯಲ್ಲಿ ಘೋರಪರಾಧವಲ್ಲದೆ ಮತ್ತೇನು? ನಿನ್ನ ಕೊಚ್ಚಿ ಕೊಲ್ಲುವ ಕಾರ್ಯಕ್ಕೆ ನಾನೂ ಸಹ ಸಹಾಯ ಮಾಡುತ್ತೇನೆ, ಅದನ್ನು ನಮ್ಮ ಮನೆಯಿಂದಲೇ ಪ್ರಾರಂಭಿಸು..' ಎದ್ದು ನಿಂತ ಸಂಜಯ ಅಡುಗೆ ಮನೆಗೆ ಹೋಗಿ ಚಾಕುವೊಂದನ್ನು ತಂದ.

'ತಗೋ ಈ ಚಾಕು. ಮುಸಲ್ಮಾನರನ್ನು ಕಂಡರೆ ನಿನಗೆ ದ್ವೇಷವಲ್ಲವೆ? ಅವರು ಪರಕೀಯರಲ್ಲವೆ? ಮುಸಲ್ಮಾನಳಾದ ನಿನ್ನ ಪರಕೀಯ ಅಮ್ಮನನ್ನು ಕೊಂದುಬಿಡು. ನಿನ್ನ ಧರ್ಮ ರಕ್ಷಕ ಕಾರ್ಯ ಇಲ್ಲಿಂದಲೇ ಪ್ರಾರಂಭವಾಗಲಿ' ಎಂದು ಹೇಳಿ ಚಾಕುವನ್ನು ಗೌತಮನ ಕೈಗೆ ತುರುಕಿ ಸಂಜಯ ರೂಮಿನೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡ. ರಾತ್ರಿಯೆಲ್ಲಾ ನಿದ್ರೆ ಇಲ್ಲದ್ದರಿಂದ, ಅತ್ಯಂತ ಆಯಾಸವಾಗಿದ್ದುದರಿಂದ ಹಾಸಿಗೆಯ ಮೇಲುರುಳಿಕೊಂಡ ಸಂಜಯ ಅವನಿಗರಿವಿಲ್ಲದ ಗಾಢ ನಿದ್ರೆಗೆ ಶರಣಾಗಿದ.

ಕಿಟಾರನೆ ಕಿರುಚಿಕೊಂಡ ಶಕೀಲಾಳ ಕೂಗು ಅವನಿಗೆ ಕೇಳಿಸಲೇ ಇಲ್ಲ. □

ಗತವನ್ನು ಬೆಸೆಯುವ ಕಥನ ವಿಧಾನ

ಪಳಮೆ ಪದವು ಕೊಡಗಿನ ಭಾಷೆಯಲ್ಲಿ ಬಾಯಿಂದ ಬಾಯಿಗೆ ಹರಡುವ ಕಥೆ, ಆಚರಣೆ, ನಂಬಿಕೆ, ಅಂತೆಯೇ ಕನ್ನಡ ಮತ್ತು ತುಳು ಭಾಷೆಗಳಲ್ಲಿ 'ಹಳೆಯದು' ಎಂಬ ಅರ್ಥವನ್ನು ಹೊಂದಿದೆ. ಪಳಮೆಯು ವಿಜಯ ಪೂಣಚ್ಚರವರು ಇತ್ತೀಚೆಗಷ್ಟೆ ಸಂಪಾದಿಸಿರುವ ಒಂದು ಉತ್ತಮ ಕೃತಿಯಾಗಿದೆ. ಕರ್ನಾಟಕದ ಕೆಲವು ನಿರ್ದಿಷ್ಟ ಮೌಖಿಕ ಸಂಪ್ರದಾಯಗಳ ಆಕರಗಳನ್ನು ಆಯ್ದುಕೊಂಡು ನಮ್ಮ ಸಮಾಜಗಳಲ್ಲಿ ಕಥೆಗಳ ಪಾತ್ರವೇನು ಎಂಬುದನ್ನು ಸ್ಥೂಲವಾಗಿ ಚಿತ್ರಿಸಲು ಪ್ರಯತ್ನಿಸಿದ್ದಾರೆ. ಭೂತಕೋಲ, ಮಂಟೇಸ್ವಾಮಿ, ಎಲ್ಲಮ್ಮ ಜಾತ್ರೆ, ಮಲೆಮಾದೇಶ್ವರ ಜಾತ್ರೆ ಇತ್ಯಾದಿ ಆಚರಣೆಗಳು ಒಳಗೊಂಡಿರುವ ಕಥೆಗಳ ಸೂಚನೆಗಳೆ ಅವುಗಳನ್ನು ನಡೆಸಿಕೊಂಡು ಬರಲು ಇರುವ ನಿಜವಾದ ಉದ್ದೇಶಗಳು ಎಂದು ಅರ್ಥೈಸಿ ಅವುಗಳನ್ನು ವಿಶ್ಲೇಷಿಸುವುದು ಲೇಖಕರ ಪ್ರಯತ್ನವಾಗಿದೆ.

ಈ ಎಲ್ಲಾ ಆಚರಣೆಗಳಿಗೆ ಸಂಬಂದಿಸಿರುವ ಕಥೆಗಳ ಆಧಾರದ ಮೇಲೆಯೆ ಆಚರಣೆಗಳನ್ನು ಹಾಗೂ ಸಮಾಜಗಳಲ್ಲಿ "ಪ್ರಧಾನವಲ್ಲದ ಸಂಸ್ಕೃತಿಗಳನ್ನು" ಹಿಸ್ಟಾರಿಸೈಸೇಶನ್ ಮಾಡುವುದು ಲೇಖಕರ ಪ್ರಮುಖ ಉದ್ದೇಶವೂ ಆಗಿದೆ. ಕನ್ನಡದಲ್ಲಿ ಆಚರಣೆಗಳಿಗೆ ಸಂಬಂದಿಸಿದಂತೆ ಪ್ರಕಟವಾದ ಜನಪದ ಸಂಸ್ಕೃತಿಯ ಪುಸ್ತಕಗಳಲ್ಲಿ ಇದು ಸುಸಂಬದ್ಧವಾದ ತಾರ್ಕಿಕ ನೆಲೆಯನ್ನು ಹೊಂದಿದೆ. ಲೇಖಕರು ಒಂದು ಉದ್ದೇಶವನ್ನು ಇಟ್ಟುಕೊಂಡು ಅದಕ್ಕೆ ಪೂರಕವಾಗಿ ತಮ್ಮ ವಾದವನ್ನು ಬೆಳೆಸಿರುವ ಪರಿ ಉತ್ತಮವಾಗಿದೆ.

ತಮ್ಮ ವಾದದಲ್ಲಿ ಹಲವಾರು ವಿಚಾರಗಳೊಡನೆ ಗೊಂದಲ ಮಾಡಿಕೊಳ್ಳದೆ ಸುಸಂಗತವಾಗಿ ಆಚರಣೆಗಳನ್ನು ಹಾಗೂ ಕಥೆಗಳನ್ನು ವಿಶ್ಲೇಷಿಸಿದ್ದಾರೆ. ಇಂತಹ ಒಂದು ಸುಸಂಬದ್ಧತೆಯ ವಾದವೇ ಪುಸ್ತಕದ ವಾದವಿಷಯವನ್ನು ಚರ್ಚೆಯ ಮೂಲಕ ಮುಂದುವರೆಸಲು ನಮಗೆ ಅನುವುಮಾಡಿಕೊಡುತ್ತದೆ. ಆದಕಾರಣ ಪಳಮೆಯು ಓದಲು ಬಹಳ ಆಸಕ್ತಿದಾಯಕವಾದ ಪುಸ್ತಕವಾಗಿದೆ. ಇಂತಹ ಚರ್ಚೆಯನ್ನು ಸಾಧ್ಯವಾಗಿಸಲು ಪ್ರಯತ್ನಿಸಿರುವ ಲೇಖಕರಿಗೆ ನನ್ನ ಧನ್ಯವಾದಗಳು. ಪುಸ್ತಕವು ಎತ್ತುವ ಚರ್ಚೆಯನ್ನು ಮುಂದುವರೆಸುವ ಸಲುವಾಗಿ ಇಲ್ಲಿ ನನಗಿರುವ ಕೆಲವೊಂದು ಪ್ರಶ್ನೆಗಳನ್ನು ಎತ್ತುತ್ತೇನೆ.

ಲೇಖಕರೆ ಹೇಳುವಂತೆ ಅವರ ಉದ್ದೇಶ ಈ ಕೆಳ ಕಂಡಂತಿದೆ:

"ಏಕೀಕರಣೋತ್ತರ ದಿನಗಳಲ್ಲಿ ಭೌಗೋಳಿಕವಾಗಿ ಕಂಡುಕೊಂಡ 'ಕರ್ನಾಟಕದ' ಚರಿತ್ರೆಯನ್ನು ನಿರ್ವಚಿಸುವ ಸಂದರ್ಭದಲ್ಲಿ ಚರಿತ್ರೆಕಾರರು ಭಿನ್ನ ಭಿನ್ನ ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಹಾಗೆಯೇ ಭಿನ್ನ ಭಿನ್ನ ಸೈದ್ಧಾಂತಿಕ ದೃಷ್ಟಿಕೋನಗಳಿಂದ ಕರ್ನಾಟಕದ ಚರಿತ್ರೆಯನ್ನು ಅರ್ಥೈಸಲು ಪ್ರಯತ್ನಿಸಿದ್ದಾರೆ. ಪ್ರಸ್ತುತ ಕೃತಿಯು ಹೆಚ್ಚು ಕಡಿಮೆ ತಾಂತ್ರಿಕ ನೆಲೆಗಟ್ಟಿನಲ್ಲಿ ವಿಜಯನಗರೋತ್ತರ ಕಾಲದಿಂದ ಭಾರತವು ವಸಾಹತುಶಾಹಿಗಳಿಂದ ಮುಕ್ತವಾಗುವ ಕಾಲದೊಳಗಿನ "ಕರ್ನಾಟಕದ" ಚರಿತ್ರೆಯನ್ನು ರೂಪಿಸುವ ಮತ್ತು ಅರ್ಥೈಸುವ ಪ್ರಯತ್ನವೊಂದನ್ನು ಮಾಡಲಾಗಿದೆ".

ಇಲ್ಲಿ ಪ್ರಮುಖವಾಗಿ ಎರಡು ರೀತಿಯ ಪ್ರಶ್ನೆಗಳನ್ನು ಎತ್ತುತ್ತಾ ಲೇಖಕರ ವಾದದ ಮಿತಿಯನ್ನು ಗ್ರಹಿಸುವುದು ನನ್ನ ಉದ್ದೇಶವಾಗಿದೆ. ಮೊದಲನೆಯದಾಗಿ, ಆಚರಣೆಗಳನ್ನು ಅರ್ಥಮಾಡಿಕೊಳ್ಳಲು ಅವುಗಳನ್ನು ಹಿಸ್ಟಾರಿಸೈಸೇಶನ್ ಮಾಡುವ ಅಗತ್ಯವಾದರೂ ಏನಿದೆ ಅಥವಾ ಅವುಗಳನ್ನು ಹಿಸ್ಟರಿಯ ಮೂಲಕವೆ ಅರ್ಥಮಾಡಿಕೊಳ್ಳುವ ಜರೂರಾದರೂ ಏನು? ಹಾಗೂ ಆಚರಣೆಗಳ ಸಂದರ್ಭಗಳಲ್ಲಿ ಜನಪದರು ಬಳಸುವ ಕಥೆಗಳಾಗಲಿ ಅಥವಾ ಪಾಡ್ದನಗಳಾಗಲಿ ಸಮಾಜದಲ್ಲಿ ವಹಿಸುವ ಪಾತ್ರವೇನು? ಈ ಎರಡೂ ಪ್ರಶ್ನೆಗಳು ಬೇರೆ ಬೇರೆ ಪಾತಳಿಯಲ್ಲಿರುವಂತೆ ಕಂಡರೂ ಮೊದಲನೆಯ ಪ್ರಶ್ನೆಯು ಎರಡನೆಯ ಪ್ರಶ್ನೆಗೆ ಪೂರಕವಾದುದಾಗಿದೆ

ಪ್ರಸ್ತುತ ಪಳಮೆ ಕೃತಿಯು ಆಚರಣೆಗಳಿಗೆ ಸಂಬಂಧಿಸಿದಂತೆ ಇರುವ ಹಲವಾರು ಕಥೆಗಳನ್ನು ಉದಾಹರಿಸಿದೆ. ಎಲ್ಲಾ ಕಥೆಗಳ ಸಂಕ್ಷಿಪ್ತ ಸಾರಾಂಶವೆಂದರೆ ಭೂತ ಕೋಲ, ಮಂಟೇಸ್ವಾಮಿ, ಮಲೆ ಮಾದೇಶ್ವರ ಇತ್ಯಾದಿ ಆಚರಣೆಗಳು ಸಾಂಸ್ಕೃತಿಕ ವೀರರ ಸ್ಮರಣೆಯೆ ಆಗಿದೆ. ಈ ಎಲ್ಲಾ ಸಾಂಸ್ಕೃತಿಕ ನಾಯಕರು ಸಮಾಜದ ಒಂದಲ್ಲಾ ಒಂದು ರೀತಿಯ ಶೋಷಣೆ ಹಾಗೂ ಜಾತಿ ವ್ಯವಸ್ಥೆಯ ವಿರುದ್ದ ಬಂಡೆದ್ದವರೆ ಆಗಿದ್ದಾರೆ.

ಪುಸ್ತಕ ಅವಲೋಕನ

ಲೇ : ವಿಜಯ್ ಪೂಣಚ್ಚ ತಂಬಂಡ
ಬೆಲೆ : ರೂ.100/-
ಪ್ರಕಾಶನ : ಪ್ರಸಾರಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂತೋಷ್

ಮೊದಲನೆಯ ಪ್ರಶ್ನೆಯಿಂದ ಪ್ರಾರಂಭಿಸುವ. ಯಾವುದೆ ಆಚರಣೆಗಳನ್ನು ಹಿಸ್ಟಾರಿಸೈಸೇಶನ್ ಮಾಡುವ ಅಗತ್ಯವಾದರೂ ಏನು? ಅದಕ್ಕಿರುವ ಸರಳ ಉತ್ತರವೆಂದರೆ ಮೌಖಿಕ ಪರಂಪರೆಗಳು ಕಣ್ಮರೆಯಾಗುತ್ತಿರುವ ಕಾಲಕ್ಕೆ ಅವುಗಳನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕು ಎಂದು ಹೆಣಗಾಡುವವರ ಕಸರತ್ತೆ ಈ ಹಿಸ್ಟಾರಿಸೈಸೇಶನ್ ಮಾಡುವ ಪ್ರಕ್ರಿಯೆ. ಇಲ್ಲಿ ಉಳಿಸಿಕೊಳ್ಳುವುದು ಆಚರಣೆಗಳನ್ನೆ ಅಥವಾ ಅವುಗಳಿಗೆ ಸಂಬಂಧಪಟ್ಟ ಕಥೆಗಳನ್ನೆ ಎಂಬುದು ಮಾತ್ರ ಸ್ಪಷ್ಟವಿಲ್ಲ. ಏಕೆಂದರೆ ಕಥೆಗಳನ್ನು ಹಿಸ್ಟಾರಿಸೈಸೇಶನ್ ಮಾಡುವುದರಿಂದ ಆಚರಣೆಗಳನ್ನು ಉಳಿಸಿಕೊಂಡಂತಾಗುತ್ತದೆಯೆ? ಅಥವಾ ಆಚರಣೆಗಳನ್ನು ಹಿಸ್ಟಾರಿಸೈಸೇಶನ್ ಮಾಡುವುದರಿಂದ ಆಚರಣೆಗಳಿಗೆ ಸಂಬಂದಿಸಿದ ಕಥೆಗಳನ್ನು ಉಳಿಸಿಕೊಂಡಂತಾಗುತ್ತದೆಯೆ? ಅಥವಾ ಇವೆರಡನ್ನೂ ಹಿಸ್ಟಾರಿಸೈಸೇಶನ್ ಮಾಡುವುದರಿಂದ ಯಾವುದಾದರು ಸಂಸ್ಕೃತಿ ಉಳಿಯುತ್ತದೆಯೆ ಎಂಬುದನ್ನು ಪಳಮೆ ಕೃತಿಯು ಸ್ಪಷ್ಟಪಡಿಸುವುದಿಲ್ಲ.

ಆದಕಾರಣ ಆಚರಣೆಗಳಿಗೂ ಹಾಗೂ ಕಥೆಗಳಿಗೂ ಇರುವ ಸಂಬಂಧಗಳನ್ನು ಸ್ಪಷ್ಟೀಕರಿಸುವುದು ಅತ್ಯಗತ್ಯವಾಗಿದೆ. ಹಿಸ್ಟಾರಿಸೈಸ್ ಪ್ರಕ್ರಿಯೆಯ ಉದ್ದೇಶಗಳಲ್ಲಿರುವ ಪ್ರಮುಖವಾದ ಮತ್ತೊಂದು ತತ್ವವೆಂದರೆ; ಗತವನ್ನು ಇತಿಹಾಸದ (ಆಂಗ್ಲ ಭಾಷೆಯ 'ಹಿಸ್ಟರಿ' ಎಂಬ ಅರ್ಥದಲ್ಲಿ ಇತಿಹಾಸವನ್ನು ಬಳಸುತ್ತಿದ್ದೇನೆ) ಮೂಲಕ ಕಟ್ಟುವುದರಿಂದ ಅದು ವರ್ತಮಾನದ ಪೀಳಿಗೆಗೆ ಅನುಕೂಲವಾಗುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಕಾಲದಿಂದ ಕಾಲಕ್ಕೆ, ಪೀಳಿಗೆಯಿಂದ ಪೀಳಿಗೆಗೆ ಸಂಪ್ರದಾಯಗಳು ದಾಟಿಕೊಂಡು ಬರುತ್ತಿರುವುದು ಯಾವುದೆ ಐತಿಹಾಸಿಕ ಗ್ರಂಥಗಳ ಮೂಲಕವಲ್ಲ ಬದಲಿಗೆ ಭಾಷೆ, ಆಚರಣೆ, ಹಾಗೂ ಅನುಕರಣೆ ಇತ್ಯಾದಿಗಳ ಮೂಲಕವೂ ಆಗುತ್ತದೆ. ಅಂದರೆ ಇವುಗಳಲ್ಲಿ ಯಾವುದೂ ನಿರ್ದಿಷ್ಟವಲ್ಲ, ಆಯಾ ಸಂದರ್ಭಕ್ಕೆ ತಕ್ಕಂತೆ ಸಂಪ್ರದಾಯಗಳು ದಾಟುವ ಪ್ರಕ್ರಿಯೆಯು ಬದಲಾಗುತ್ತದೆ. ಇದಕ್ಕೆ ಭಾರತದ ಆಚರಣೆಗಳೆ ಒಂದು ಉತ್ತಮ ನಿದರ್ಶನ.

ದಕ್ಷಿಣ ಕನ್ನಡದಲ್ಲಿ ಜರುಗುವ ಭೂತಕೋಲದಂತಹ ಆಚರಣೆಗಳನ್ನು ಗಮನಿಸಿದರೆ ಅವುಗಳನ್ನು ಇದುವರೆಗೂ ಮುಂದುವರೆಸಿಕೊಂಡು ಬಂದಿರುವುದಕ್ಕೆ ಎಲ್ಲೂ ಐತಿಹಾಸಿಕ ಗ್ರಂಥಗಳ ಆಧಾರಗಳು ಸಿಗುವುದಿಲ್ಲ. ಅವು ಕೇವಲ ಆಚರಣೆಗಳಾಗಿರುವ ಕಾರಣಕ್ಕೆ ಮುಂದುವರೆಯು

ತ್ತಿವೆ ಅಷ್ಟೆ, ಕಾರಣ ಅವುಗಳನ್ನು ಮುಂದುವರೆಸಿಕೊಂಡು ಬರುತ್ತಿರುವ ಅಂಶಗಳಾವುವು ಎಂಬುದು ಸಧ್ಯಕ್ಕೆ ಸ್ಪಷ್ಟವಿಲ್ಲ. ಆದರೆ ನನಗನಿಸುವಂತೆ ಇವುಗಳನ್ನು ಹಿಸ್ಟಾರಿಸೈ ಸೇಶನ್ ಮ್ಯಾಡುವ ಉದ್ದೇಶದಲ್ಲಿ ಉಂಟಾಗುವ ಗೊಂದಲವನ್ನು ಗುರುತಿಸಬಹುದು; ಭೂತಕೋಲದಂತಹ ಆಚರಣೆಗಳನ್ನು ಅಧ್ಯಯನ ಮಾಡಿದ ಅನೇಕ ವಿದ್ವಾಂಸರಲ್ಲಿರುವ ಸಾಮಾನ್ಯವಾದ ಒಂದು ಅಭಿಪ್ರಾಯವೆಂದರೆ ಈ ಆಚರಣೆಗಳು ಶೋಷಣೆಯ ಸಂಕೇತವಾಗಿವೆ. ಜಾತಿ ವ್ಯವಸ್ಥೆಯ ರೌದ್ರಾವತಾರವನ್ನು ಇಲ್ಲಿ ಕಾಣಬಹುದಾಗಿದೆ ಎಂಬುದು. ಆದೇ ತೆರನಾದ ನಂಬಿಕೆಯು ಜನರಲ್ಲಿದೆಯೆ ಅಥವಾ ಕೇವಲ ವಿದ್ವಾಂಸರಲ್ಲಿದೆಯೆ ಎಂಬುದನ್ನು ಒರೆಗೆ ಹಚ್ಚಬೇಕಾದುದು ಬೇರೆಯದೆ ವಿಚಾರ.

ಇವು ಶೋಷಣೆಯ ಸಂಕೇತವಾಗಿರುವುದು ನಿಜವಾದರೆ ಅವುಗಳನ್ನು ರಕ್ಷಿಸುವ ಹೊಣೆಗಾರಿಕೆಯನ್ನು ವಿದ್ವಾಂಸರು ಏಕೆ ಹೊರಬೇಕು? ಒಂದೊಮ್ಮೆ ಅವುಗಳು ನಾಶವಾದರೆ ಶೋಷಣೆಗಳು ಕಡಿಮೆಯಾಗುತ್ತವೆ ಎಂದು ಏಕೆ ಅವನ್ನು ನಿರ್ಲಕ್ಷಿಸಬಾರದು? ಅದೇನೆ ಇರಲಿ. ಆಚರಣೆಗಳನ್ನು ವಿಶ್ಲೇಷಿಸುವ ಹಾಗೂ ಅವುಗಳನ್ನು ರಕ್ಷಿಸುವ ಪ್ರಕ್ರಿಯೆಗೂ ಯಾವುದೆ ರೀತಿಯ ಸಂಬಂಧ ನಮಗೆ ಕಾಣಸಿಗುವುದಿಲ್ಲ. ಆದರೆ ಅವುಗಳನ್ನು ವಿಶ್ಲೇಷಿಸಲು ಹಿಸ್ಟರಿಯ ಟೂಲ್ಸ್‌ಗಳೆ ಅತ್ಯಗತ್ಯವೆ ಎಂಬುದು ನನ್ನ ಪ್ರಶ್ನೆ. ನಮ್ಮ ಸಂಪ್ರದಾಯಗಳಲ್ಲಿ ಗತವನ್ನು ಒಂದು ರೀತಿ ಆಚರಣೆಗಳ ಮೂಲಕವೂ ಮುಂದುವರೆಸಿಕೊಂಡು ಹೋಗುತ್ತೇವೆ. ಕಾರಣ, ಆಚರಣೆಗಳನ್ನು ಏಕೆ ಮಾಡುತ್ತೀರಿ ಎಂದು ಯಾರಿಗಾದರೂ ಕೇಳಿದರೆ, ಜನರು ಹಿಂದಿನಿಂದ ಬಂದಿದೆ ಎಂಬ ಉತ್ತರವನ್ನು ನೀಡುತ್ತಾರೆ.

ನಮ್ಮನ್ನು ಗತಕಾಲದೊಂದಿಗೆ ಸಮೀಕರಿಸಿಕೊಳ್ಳುವ ವಿಧಾನದಲ್ಲಿ ಇತಿಹಾಸವು ಒಂದು. ಆದರೆ ಅದೇ ಅತ್ಯಂತಿಕವಾದುದಲ್ಲ ಎಂಬುದು ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ. ಇದು ಸತ್ಯವೂ ಕೂಡ. ಭಾರತದಂತಹ ಸಮಾಜಗಳಲ್ಲಿ ಕಥೆಗಳ ಮೂಲಕವೂ ಗತವನ್ನು ಬೆಸೆದುಕೊಳ್ಳುವ ವಿಧಾನವೂ ಇದೆ. ಭಾರತದಲ್ಲಿ ತಮ್ಮ ಗತವನ್ನು ಇತಿಹಾಸದ ಮೂಲಕ ನೋಡುವ ಕಾರ್ಯ ವಸಾಹತು ಕಾಲದಿಂದ ಪ್ರಾರಂಭವಾಯಿತು ಎಂಬುದರಲ್ಲಿ ಅನುಮಾನವಿಲ್ಲ. ರೋಮಿಲಾ ಥಾಪರ್‌ರವರು ಸ್ಪಷ್ಟ ಪಡಿಸುವಂತೆ "ಭಾರತೀಯರಲ್ಲಿ 'ಚಾರಿತ್ರಿಕ ಪ್ರಜ್ಞೆ' ಇಲ್ಲ ಹಾಗೂ ಭಾರತೀಯರಿಗೆ 'ಮಿಥ್' ಮತ್ತು 'ಚರಿತ್ರೆ'ಯ ನಡುವಿನ ವ್ಯತ್ಯಾಸಗಳಿಲ್ಲ ಎಂಬುದು ಜೇಮ್ಸ್ ಮಿಲ್‌ನ ವಿಚಾರವಾಗಿತ್ತು".

ಕಥೆಗಳಿಗೂ ಹಾಗೂ ಇತಿಹಾಸಕ್ಕೂ ಇರುವ ವ್ಯತ್ಯಾಸವೆಂದರೆ; ಕಥೆಗಳು, ಪುರಾಣಗಳು ಗತದ ಸತ್ಯಾಸತ್ಯತೆಗಳ ಕುರಿತು ಅನಾಸಕ್ತಿ ಧೋರಣೆಯನ್ನು ಬೆಳೆಸಿದರೆ, ಗತವು ಸತ್ಯವಾದುದು ಎಂಬ ಧೋರಣೆಯನ್ನು ಹಿಸ್ಟಾರಿಸೈಸೇಶನ್ ಮಾಡುವ ಪ್ರಕ್ರಿಯೆ ಬೆಳೆಸುತ್ತದೆ. ತಮ್ಮದು ಸತ್ಯವಾದ ಗತ ಎಂಬ ಧೋರಣೆಯು ಹಲವಾರು ಸಮಸ್ಯೆಗಳಿಗೆ ಎಡೆ ಮಾಡಿಕೊಡುತ್ತದೆ.

ಉದಾಹರಣೆಗೆ ಇಂದು ಸಂಘ ಪರಿವಾರವು ರಾಮಸೇತು ವಿವಾದದಲ್ಲಿ ರಾಮಾಯಣದಂತಹ ಕಥೆಗಳನ್ನು ಇತಿಹಾಸ ಎಂಬಂತೆ ಗ್ರಹಿಸುತ್ತಿರುವುದರಿಂದ ಸಂಘರ್ಷಗಳು ಹೆಚ್ಚಾಗುತ್ತಿರುವುದನ್ನು ಇಂದು ನಾವು ಕಾಣಬಹುದು. ಪುರಾಣಗಳನ್ನಾಗಲಿ ಅಥವಾ ಆಚರಣೆಗಳನ್ನಾಗಲಿ ಹಿಸ್ಟಾರಿಸೈಸೇಶನ್ ಮಾಡುವುದರಿಂದ ಸಮಸ್ಯೆಗಳು ಹೆಚ್ಚಾಗುತ್ತವೆಯೆ ವಿನಃ ಅವುಗಳು ನಮಗೆ ಅರ್ಥವಾಗುವುದಿಲ್ಲ.

ಯಾವುದೆ ಆಚರಣೆಗಳನ್ನು ಹಿಸ್ಟಾರಿಸೈಸೇಶನ್ ಮಾಡುವುದರಿಂದ ಉಂಟಾಗುವ ಮೊದಲ ಸಮಸ್ಯೆಯ 'ಸತ್ಯ'ದ ಪ್ರತಿಪಾದನೆ. ಇತಿಹಾಸವು ಘಟನೆಗಳನ್ನು ಸತ್ಯ ಅಥವಾ ಸುಳ್ಳುಗಳ ಪಾತಳಿಗಳಲ್ಲಿ ಮಾತ್ರ ಕಲೆಹಾಕುವ ಧೋರಣೆಯನ್ನು ಮುಂದೊಡ್ಡುತ್ತದೆ. ಇದರಿಂದಾಗಿ, ತಮ್ಮ ಗತ ಹಾಗೂ ಆಚರಣೆಗಳ ಸತ್ಯಾಸತ್ಯತೆಗಳ ಗೋಜಿಗೆ ಹೋಗದ ಜನರಿಗೆ ಇತಿಹಾಸವು ಗೊಂದಲವನ್ನುಂಟು ಮಾಡುತ್ತದೆ. ಆಚರಣೆಗಳು ಸತ್ಯವೊ ಅಥವಾ ಸುಳ್ಳೊ ಎಂದು ಗುರುತಿಸಲು ಸಾಧ್ಯವೆ?

ಜನರಿಗೆ ಗೊತ್ತಿರುವ ಕಥೆಗಳು ಸತ್ಯವೆಂದಾಗಲಿ ಅಥವಾ ಸುಳ್ಳೆಂದಾಗಿ ಅವರಿಂದ ರೂಪುಗೊಳ್ಳುವುದಿಲ್ಲ. ಅವುಗಳನ್ನು ಹೇಳುತ್ತಾರೆ ಅಷ್ಟೆ. ಆದರೆ ಅದರ ಸತ್ಯಾಸತ್ಯತೆಯು ವಿದ್ವಾಂಸರಿಗೆ ಮಾತ್ರ ತೊಂದರೆ ಕೊಡುತ್ತದೆ. ಉದಾಹರಣೆಗೆ, "ಪಾಡ್ದನಗಳಲ್ಲಿ ಕಲ್ಕುಡನು ಕಾರ್ಕಳದ ಭೈರರಸರ ಕಾಲದಲ್ಲಿದ್ದ ಮತ್ತು, ಹಾಗೆಯೇ ಕಲ್ಕುಡನು ವೇಣೂರಿನಲ್ಲಿಯೂ ಇದ್ದ ಎಂಬ ವಿವರಗಳನ್ನು ನೋಡಬಹುದು. ಆದರೆ ಶಾಸನಗಳ ಪ್ರಕಾರ ಕಾರ್ಕಳದ ಭೈರರಸರ ಕಾಲಕ್ಕೂ ಹಾಗೂ ವೇಣೂರಿನ ಅರಸರ ಕಾಲಕ್ಕೂ ಸುಮಾರು 161 ವರ್ಷಗಳ ಕಾಲದ ವ್ಯತ್ಯಾಸವಿದೆ." ಈ ಉಲ್ಲೇಖವು ತಿಳಿಸುವಂತೆ ಪಾಡ್ದನಗಳಲ್ಲಿ ಬರುವ ಕಥೆಗಳನ್ನು ಗತಕಾಲದಲ್ಲಿ ನಡೆದ ಸತ್ಯ ಘಟನೆಗಳೆಂದು ನಿರೂಪಿಸಲು ಸಾಧ್ಯವಾಗುವುದಿಲ್ಲ. ಹಾಗಾದರೆ ನಮ್ಮ ಎರಡನೆಯ ಪ್ರಶ್ನೆ ಇಲ್ಲಿಂದಲೆ ಉದ್ಭವಿಸುತ್ತದೆ; ಆಚರಣೆಗಳ ಸಂದರ್ಭಗಳಲ್ಲಿ ಜನಪದರು ಬಳಸುವ ಕಥೆಗಳಾಗಲಿ ಅಥವಾ ಪಾಡ್ದನಗಳಾಗಲಿ ನಮ್ಮ ಸಮಾಜಗಳಲ್ಲಿ ವಹಿಸುವ ಪಾತ್ರವೇನು?

ಪ್ರಸ್ತುತ ಪಳಮೆ ಕೃತಿಯು ಆಚರಣೆಗಳಿಗೆ ಸಂಬಂಧಿಸಿದಂತೆ ಇರುವ ಹಲವಾರು ಕಥೆಗಳನ್ನು ಉದಾಹರಿಸಿದೆ. ಎಲ್ಲಾ ಕಥೆಗಳ ಸಂಕ್ಷಿಪ್ತ ಸಾರಾಂಶವೆಂದರೆ ಭೂತಕೋಲ; ಮಂಟೇಸ್ವಾಮಿ; ಮಲೆಮಾದೇಶ್ವರ ಇತ್ಯಾದಿ ಆಚರಣೆಗಳು ಸಾಂಸ್ಕೃತಿಕ ವೀರರ ಸ್ಮರಣೆಯೆ ಆಗಿದೆ. ಈ ಎಲ್ಲಾ ಸಾಂಸ್ಕೃತಿಕ ನಾಯಕರು ಸಮಾಜದ ಒಂದಲ್ಲಾ ಒಂದು ರೀತಿಯ ಶೋಷಣೆ ಹಾಗೂ ಜಾತಿ ವ್ಯವಸ್ಥೆಯ ವಿರುದ್ಧ ಬಂಡೆದ್ದವರೆ ಆಗಿದ್ದಾರೆ. ಅವರ ಸ್ಮರಣಾರ್ಥವಾಗಿ ಈ ಎಲ್ಲಾ ಆಚರಣೆಗಳು ಜರುಗುವುದು ಎಂಬುದು ವಿದ್ವಾಂಸರ ಅವಿರೋಧ ಅಭಿಪ್ರಾಯವಾಗಿದೆ. ಲೇಖಕರು ಇವುಗಳನ್ನು ಹಿಸ್ಟಾರಿಸೈಸೇಶನ್ ಮಾಡುವ ಪ್ರಕ್ರಿಯೆಯಲ್ಲಿ ಕಥೆಗಳನ್ನು ನಿಜವಾಗಿ ನಡೆದ ಘಟನೆಗಳೆಂಬುದಾಗಿ ಬಿಂಬಿಸುತ್ತಾ ತಮ್ಮ ವಿವರಣೆಯನ್ನು ನೀಡುತ್ತಾರೆ. ಇಲ್ಲಿರುವ ಸಮಸ್ಯೆಯೆಂದರೆ, ಸಾಮಾನ್ಯವಾಗಿ ಒಂದೆ ಆಚರಣೆಗೆ ಹಲವಾರು ಕಥೆಗಳಿರುತ್ತವೆ. ಅದೂ ಪ್ರದೇಶದಿಂದ ಪ್ರದೇಶಕ್ಕೆ ಹಾಗೂ ಜನರಿಂದ ಜನರಿಗೆ ಭಿನ್ನವಾಗುತ್ತಾ ಹೋಗುತ್ತದೆ.

ನಮ್ಮನ್ನು ಗತಕಾಲದೊಂದಿಗೆ ಸಮೀಕರಿಸಿಕೊಳ್ಳುವ ವಿಧಾನದಲ್ಲಿ ಇತಿಹಾಸವು ಒಂದು, ಆದರೆ ಅದೇ ಅತ್ಯಂತಿಕವಾದುದಲ್ಲ ಎಂಬುದು ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ. ಇದು ಸತ್ಯವೂ ಕೂಡ. ಭಾರತದಂತಹ ಸಮಾಜಗಳಲ್ಲಿ ಕಥೆಗಳ ಮೂಲಕವೂ ಗತವನ್ನು ಬೆಸೆದುಕೊಳ್ಳುವ ವಿಧಾನವೂ ಇದೆ. ಭಾರತದಲ್ಲಿ ತಮ್ಮ ಗತವನ್ನು ಇತಿಹಾಸದ ಮೂಲಕ ನೋಡುವ ಕಾರ್ಯ ವಸಾಹತು ಕಾಲದಿಂದ ಪ್ರಾರಂಭವಾಯಿತು ಎಂಬುದರಲ್ಲಿ ಅನುಮಾನವಿಲ್ಲ. ರೋಮಿಲಾ ಥಾಪರ್ ರವರು ಸ್ಪಷ್ಟ ಪಡಿಸುವಂತೆ "ಭಾರತೀಯರಲ್ಲಿ 'ಚಾರಿತ್ರಿಕ ಪ್ರಜ್ಞೆ' ಇಲ್ಲ ಹಾಗೂ ಭಾರತೀಯರಿಗೆ 'ಮಿಥ್'–'ಚರಿತ್ರೆ'ಯ ನಡುವಿನ ವ್ಯತ್ಯಾಸಗಳಿಲ್ಲ ಎಂಬುದು ಜೇಮ್ಸ್ ಮಿಲ್‌ನ ವಿಚಾರವಾಗಿತ್ತು".

ಆದರೆ ಆಚರಣೆಗಳನ್ನು ಅಭ್ಯಸಿಸಿದ ವಿದ್ವಾಂಸರುಗಳು ಮಾತ್ರ ಕೆಲವೆ ಕೆಲವು ಕಥೆಗಳನ್ನು ಆಯ್ದುಕೊಂಡು ಅವುಗಳೆ ಸತ್ಯವಾದವು ಎಂಬುದಾಗಿ ಬಿಂಬಿಸುತ್ತಾರೆ. ಕೋಟಿ ಚೆನ್ನಯ್ಯ ಪಾಡ್ದನವನ್ನು ಗಮನಿಸಿದಾಗ ಒಂದೆಡೆ ಬ್ರಾಹ್ಮಣರು ಅವರಿಗೆ ಸಹಾಯ ಮಾಡಿದರೆಂಬುದಾಗಿ ಮತ್ತೊಂದೆಡೆ ಬಂಟರು ಸಹಾಯ ಮಾಡಿದರೆಂಬುದಾಗಿ ಹಾಗೂ ಮತ್ತೊಂದೆಡೆ ಬಂಟರಿಗೂ ಕೋಟಿ ಚೆನ್ನಯ್ಯ ಜಗಳವಾಗಿದೆ ಎಂದು ಹಾಗೂ ಇಬ್ಬರಿಗೂ ಜಗಳವಾಗಿಲ್ಲ ಎಂಬುದಾಗಿ ಹಲವಾರು ವಿಭಿನ್ನ ಕಥೆಗಳು ದೊರಕುತ್ತವೆ. ಜನಪದರು ಆ ಕಥೆಗಳನ್ನೆ ಪಾಡ್ದಗಳ ರೂಪದಲ್ಲಿ ಕೆಲವಾರು ಸಂದರ್ಭಗಳಲ್ಲಿ ಹಾಡುತ್ತಾರೆ. ಇಂತಹ ಕಥೆಗಳು ನಾವು ರಾಮಾಯಣ, ಮಹಾಭಾರತದಂತಹ ಕಥೆಗಳನ್ನು ಅರ್ಥಮಾಡಿಕೊಳ್ಳುವಿದಕ್ಕಿಂತ ತುಂಬಾ ಭಿನ್ನವಾಗೇನು ಇಲ್ಲ. ರಾಮಾಯಣದ ಕಥೆಗಳು ವಿಭಿನ್ನ ರೀತಿಯಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆಯಾಗಿರುವುದನ್ನು ಎ.ಕೆ. ರಾಮಾನುಜನ್ ರವರು 'ಮುನ್ನೂರು ರಾಮಾಯಣಗಳು' ಎಂಬ ಲೇಖನದಲ್ಲಿ ಸ್ಪಷ್ಟಪಡಿಸುತ್ತಾರೆ.

ಕಥೆಗಳಲ್ಲಿಯೆ ಇಂತಹ ವೈವಿಧ್ಯತೆ ಇರುವಾಗ ಅವುಗಳನ್ನು ಏಕಮಾತ್ರವೆಂದು ಬಿಂಬಿಸಿ ಹಿಸ್ಟಾರಿಸೈಸೇಶನ್ ಮಾಡುವುದರಿಂದ ಪ್ರಯೋಜನವಿಲ್ಲ. ಬದಲಿಗೆ ಕಥೆಗಳಲ್ಲಿರುವ ವೈವಿಧ್ಯತೆಯನ್ನು ಅರ್ಥಮಾಡಿಕೊಂಡರೆ ಸಂಸ್ಕೃತಿಯ ಬೇರೆ ಬೇರೆ ಆಯಾಮಗಳು ಸ್ಪಷ್ಟವಾಗುತ್ತವೆ. ಆದಕಾರಣ, ಕಥೆಗಳನ್ನು ಸತ್ಯ ಹಾಗೂ ಸುಳ್ಳುಗಳ ಪಾತಳಿಯಲ್ಲಿ ನೋಡುವುದು ನಿರುಪಯುಕ್ತ, ಕಾರಣ ಅವುಗಳು ಸತ್ಯವೊ ಅಥವಾ ಸುಳ್ಳೊ ಎಂದು ಪರೀಕ್ಷಿಸಲು ಸಾಧ್ಯವಿಲ್ಲ. ಜನಪದರು ಕಥೆಯನ್ನು ಹೇಳುತ್ತಾರೆಂದಾಕ್ಷಣ ಅವರು ನಿಜವಾಗಿ ನಡೆದ ಘಟನೆಗಳನ್ನೆ ವಿವರಿಸುತ್ತಿದ್ದಾರೆಂಬ ಭಾವನೆ ವಿದ್ವಾಂಸರಲ್ಲಿ ಒಡಮೂಡುತ್ತದೆ. ಆದ್ದರಿಂದಲೆ ಕಥೆಗಳ ಪಾತ್ರವನ್ನು ಗುರುತಿಸುವ ಬದಲು ಅವುಗಳು ಇತಿಹಾಸವೆಂಬಂತೆ ನೋಡುವುದೆ ಒಂದು ದೊಡ್ಡ ಸಮಸ್ಯೆಯಾಸಗಿದೆ.

ಇದೆ ತೆರನಾದ ಇತಿಹಾಸದ ವಿವರಣೆಯ ಮಾದರಿಯನ್ನು ಇನ್ನೊಂದೆಡೆ ಗುರುತಿಸಬಹುದಾಗಿದೆ. ಭಾರತಕ್ಕೆ ಆಗಮಿಸಿದ ಯುರೋಪಿಯನ್ನರು ಅದರ ಸಮಾಜದ ಚಿತ್ರಣವನ್ನು ನೀಡುವಾಗ ಬುದ್ದಿಸಂ, ಜೈನಿಸಂ, ಮುಂತಾದ ರಿಲಿಜನ್‌ಗಳು ಬ್ರಾಹ್ಮಣಿಸಂ ವಿರುದ್ಧ ಹೋರಾಡಿದ ರಿಲಿಜನ್‌ಗಳೆಂದು ವಿವರಿಸಿದ್ದರು. ಅಂತೆಯೆ, ಸ್ಥಳೀಯ ಸಂಸ್ಕೃತಿಯನ್ನು ಅಭ್ಯಸಿಸುವಾಗ ಜನಪದ

[illegible]
ಹಂತದಲ್ಲಿ ನೀಡದ ಚಿತ್ರಣವನ್ನು ಕರ್ನಾಟಕದ ಜನಪದರ ಪಾತಳಿಗೆ ಇಳಿಸಿರುವುದು ಮೇಲ್ನೋಟಕ್ಕೆ ಗೋಚರಿಸುತ್ತದೆ. ಸ್ಥಳೀಯ ಸಾಂಸ್ಕೃತಿಕ ವೀರರು ಜೈನಿಸಂ ಹಾಗೂ ಬುದ್ಧಿಸಂನಂತೆ ಇಲ್ಲಿನ ಬ್ರಾಹ್ಮಣರ ವಿರುದ್ಧ ಹೋರಾಡಿದ ಕಥೆಗಳಾಗಿವೆ. ಇದು ಸತ್ಯವೊ ಇಲ್ಲವೊ ಗೊತ್ತಿಲ್ಲ. ಆದರೆ ಯುರೋಪಿಯನ್ನರ ವಿವರಣೆಗಿಂತ ತುಂಬಾ ವಿಭಿನ್ನವಾದ ವಿವರಣೆಯನ್ನು ಜನಪದ ವಿದ್ವಾಂಸರು ನೀಡಿಲ್ಲ.

ಹಾಗಾದರೆ ಜನರು ಏಕೆ ಕಥೆಗಳನ್ನು ಬಳಸಿಕೊಳ್ಳುತ್ತಾರೆ, ಅಂತಹ ಕಥೆಗಳು ಸಮಾಜದಲ್ಲಿ ಏನನ್ನು ಮಾಡುತ್ತವೆ ಎಂಬ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ. ಕಥೆಗಳು ಸತ್ಯ ಅಥವಾ ಸುಳ್ಳು ಎಂಬ ಪ್ರತಿಪಾದನೆಗಿಂತ ಹೆಚ್ಚಾಗಿ ಅವು ನಮ್ಮ ಸಮಾಜದಲ್ಲಿ ಇತರ ಜನರೊಡನೆ ಹೇಗೆ ಬದುಕಬೇಕೆಂಬ ರೀತಿಯನ್ನು ಕಲಿಸಲು ಪ್ರಯತ್ನಿಸುತ್ತವೆ. ಅವುಗಳ ಮೂಲಕ ಒಳ್ಳೆಯ ಅಥವಾ ಕೆಟ್ಟ ಗುಣಗಳನ್ನು ಗುರುತಿಸಿ ನಾವು ಹೇಗೆ ಬದುಕಬೇಕೆಂಬ ಸಂದೇಶವನ್ನು ಸಾರುತ್ತವೆ. ಹಾಗೆ ಸಾರಲು ಅವುಗಳು ಸತ್ಯವಾಗಿರಬೇಕಾಗೇನೂ ಇಲ್ಲ. ಉದಾಹರಣೆಗೆ, ನೀನು ರಾಮನ ಹಾಗೆ ಅಥವಾ ಲಕ್ಷ್ಮಣ ಹಾಗೆಯೊ ಬದುಕಬೇಕೆಂದು, ಅಥವಾ ಜಮದಗ್ನಿಯಂತೆ ಕೋಪಿಷ್ಠನಾಗಬಾರದೆಂದು, ಹೀಗೆ ಹಲವಾರು ಕಥೆಗಳನ್ನು ಹೇಳುವಾಗ ನಮಗೆ ಅನ್ವಯಿಸಿ ನಮ್ಮ ಹಿರಿಯರು ಹೇಳಿರುವುದನ್ನು ನಾವು ಕೇಳಿರುತ್ತೇವೆ. ಅಂತಹ ಕಥೆಗಳು ನಮಗೆ ಬದುಕಲು ಕಲಿಯುವ ವಿಧಾನವನ್ನು ಸೂಚಿಸುವ ಅಂಶಗಳಲ್ಲಿ ಒಂದಾಗಿರುತ್ತವೆ.

ಹಾಗೆಯೆ ಕಂಬಾರರು ಹೇಳುವಂತೆ "ಕಥೆಗಳು ಯಾವ ಕ್ಷಣದಲ್ಲಾದರೂ ಸೃಷ್ಟಿಯಾಗಬಹುದು, ಅದು ಹೇಳುವವರ ಮೇಲೆ ಅವಲಂಬಿತವಾಗಿರುತ್ತದೆ". ಆಚರಣೆಗಳನ್ನು ನಡೆಸುವ ಸಂದರ್ಭದಲ್ಲಿ ಈ ಕಥೆಗಳು ಅವುಗಳಿಗೆ ಪೂರಕವಾಗಿರುತ್ತವೆ ನಿಜ, ಆದರೆ ಕೇವಲ ಆ ಕಥೆಗಳೆ ಆಚರಣೆಗಳನ್ನು ಮುಂದುವರೆಸುವುದಿಲ್ಲ. ಯಾವುದೆ ಆಚರಣೆ ಜರುಗಬೇಕಾದರೆ ವೃತ್ತಿ ಕೌಶಲ್ಯವೂ ಅಗತ್ಯವಾಗಿರುತ್ತದೆ. ಕೆಲವಾರು ಕೌಶಲ್ಯಗಳನ್ನು ಕೆಲವಾರು ಜನರು ಹೊಂದಿರುತ್ತಾರೆ, ಆದಕಾರಣ ಆಚರಣೆಗಳಲ್ಲಿ ಕಥೆಗಳಿದ್ದರೂ ಸಹ ವೃತ್ತಿ ಕೌಶಲ್ಯಗಳಿಲ್ಲದೆ ಅವುಗಳು ಮುಂದುವರೆಯಲು ಸಾಧ್ಯವಿಲ್ಲ.

> ಕಂಬಾರರು ಹೇಳುವಂತೆ "ಕಥೆಗಳು ಯಾವ ಕ್ಷಣದಲ್ಲಾದರೂ ಸೃಷ್ಟಿಯಾಗಬಹುದು, ಅದು ಹೇಳುವವರ ಮೇಲೆ ಅವಲಂಬಿತವಾಗಿರುತ್ತದೆ".

ಅಂತಹ ಕೌಶಲ್ಯಗಳನ್ನು ಮತ್ತೆ ಜಾತಿವ್ಯವಸ್ಥೆಯ ಚೌಕಟ್ಟಿನಿಂದ ನೋಡಿದರೆ ಬ್ಯೂಗಲ್ ಅಥವಾ ಹೊಕಾರ್ಟ್‌ರವರ ಸಿದ್ಧಾಂತಕ್ಕೆ ತಲೆದೂಗಬೇಕಾಗುತ್ತದೆಯೆ ಹೊರತು ನಮಗೆ ಬೇರೆ ಆಯಾಮಗಳು ತಿಳಿಯುವುದಿಲ್ಲ. ಅಂದರೆ, ಆಚರಣೆಗಳು ನಮ್ಮ ಸಮಾಜದಲ್ಲಿ ಏನು ಮಾಡುತ್ತವೆ ಹಾಗೆಯೇ ವೃತಿ ಕೌಶಲ್ಯಗಳ ಪಾತ್ರವೇನು ಇವ್ಯಾವುದೂ ನಮಗೆ ಅರ್ಥವಾಗುವುದಿಲ್ಲ. ಆದಕಾರಣ ಆಚರಣೆಗಳಿಗೆ ಕ್ರಿಯೆಗಳು ಮುಖ್ಯವೆ ಹೊರತು ಬೇರೆನೂ ಅಲ್ಲ. ಆಂದರೆ ಕಥೆಗಳಿಗಿಂತ ಕ್ರಿಯೆಗಳು ಆಚರಣೆಗಳಲ್ಲಿ ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತವೆ.

ನಮಗೆ ಆಚರಣೆಗಳು ಅರ್ಥವಾಗಬೇಕಾದರೆ ಆಚರಣೆಗಳು ಒಳಗೊಂಡಿರುವ ಕ್ರಿಯೆಗಳನ್ನು ಪರಿಶೀಲಿಸಬೇಕಾಗುತ್ತದೆ, ಏಕೆಂದರೆ ಆಚರಣೆಗಳೆ ಒಂದು ರೀತಿಯ ಕ್ರಿಯೆಗಳಾಗಿವೆ. ಆದ್ದರಿಂದ ಕ್ರಿಯೆ ಹಾಗೂ ಕಥೆಗಳಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕಾಗುತ್ತದೆ. ಅಂದರೆ ಕಥೆಗಳಿಗೂ ಹಾಗೂ ಕ್ರಿಯೆಗಳಿಗೂ ಸಂಬಂಧವಿದೆಯೆ ಎಂಬ ಪ್ರಶ್ನೆ ಹಾಗೇ ಉಳಿಯುತ್ತದೆ. ಕಥೆಯನ್ನು ಕೇಳಿದಾಕ್ಷಣ ಕ್ರಿಯೆಯು ಅರ್ಥವಾಗುತ್ತದೆಂಬ ವಿಧಾನವು ಉಪಯೋಗವಾಗುವುದಿಲ್ಲ.

ಪಳಮೆ ಪುಸ್ತಕದಲ್ಲಿ ನಮೂದಿಸಿರುವ ಎಲ್ಲಾ ಕಥೆಗಳ ಸಾರಾಂಶವನ್ನು ಮೇಲೆ ಹೇಳಿದಂತೆ ಶೋಷಣೆಯ ವಿರುದ್ಧ ತಿರುಗಿಬಿದ್ದ ಜನರ ಶೋಕಗೀತೆಯೆ ಆಗಿದೆ. ಇದರ ಸಮಸ್ಯೆ ಎಂದರೆ; ನಮಗೆ ಕೆಲವು ನಿರ್ದಿಷ್ಟ ಚೌಕಟ್ಟುಗಳು ನಮ್ಮ ಸುತ್ತಮುತ್ತಲಿನ ಪರಿಸರವನ್ನು ಗ್ರಹಿಸಲು ಅನುವು ಮಾಡಿಕೊಡುತ್ತವೆ. ಉದಾಹರಣೆಗೆ, ಪೊಲೀಸರಿಗೆ ಎಲ್ಲವೂ ಅನುಮಾಸ್ಪದವಾಗಿ ಕಂಡರೆ, ಪರಮ ಭಕ್ತರಿಗೆ ಎಲ್ಲೆಲ್ಲೂ ದೇವರು ಕಾಣುವಂತೆ, ಆಧುನಿಕ ಶಿಕ್ಷಣ ಪಡೆದ ನಮಗೆಲ್ಲರಿಗೂ ಎಲ್ಲೆಲ್ಲಿಯೂ ಜಾತಿಯೇ ಪ್ರಧಾನವಾಗಿ ಕಾಣುತ್ತದೆ. ನಾವು ಯಾವುದೆ ಕಥೆಗಳನ್ನಾಗಲಿ, ಆಚರಣೆಗಳನ್ನಾಗಲಿ ನೋಡಿದಾಕ್ಷಣ ಅಲ್ಲೆಲ್ಲಾ ಜಾತಿಯೇ ಸಮಸ್ತವಾಗಿರುವಂತೆ ಗೋಚರಿಸುತ್ತದೆ.

ಆದ್ದರಿಂದ ಜಾತಿಯಿಂದ ಹೊರತಾದ ವಿವರಣೆಗಳನ್ನು ನೀಡಲು ಶಕ್ತರಾಗಬೇಕು. ಏಕೆಂದರೆ ವಸಾಹತುಶಾಹಿ ಕಾಲದಿಂದ ಇಲ್ಲಿಯವರೆಗೂ ಯಾವುದೆ ಬದಲಾವಣೆಗಳಿಲ್ಲದೆ ಸರಾಗವಾಗಿ ಮುಂದುವರೆಯುತ್ತಿರುವ ಸಂಗತಿಯೆಂದರೆ ನಮ್ಮ ಸಮಾಜದ ಕುರಿತಾದ ಅವರ ವಿವರಣೆಯೆ ಆಗಿದೆ. ಇಂತಹ ವಿವರಣೆಗಳನ್ನೆ ನೆಚ್ಚಿಕೊಂಡು ಕೂತರೆ ನಮ್ಮ ಆಚರಣೆ ಹಾಗು ಕಥೆಗಳ ಸಾಮಾಜಿಕ ಮಹತ್ವವೆ ತಿಳಿಯದಾಗುತ್ತದೆ. □

ವೇಮನನ ಮೂರು ಪದ್ಯಗಳು

ಮುಟ್ಟು... ಮುಟ್ಟು... ಎನ್ನುವರು
ಮುಟ್ಟಬಾರದನ್ನುವರು
ಈ ಮುಟ್ಟೊಳಗಿನ ರಕ್ತವು
ಈ ಮುಟ್ಟೊಳಗಿನ ಕೀವು
ಹುಟ್ಟಿದಂದೇ ಅಲ್ಲದೆ
ಸತ್ತ ಚಣ ಅಲ್ಲವೋ?
ವಿಶ್ವದಭಿರಾಮಾ... ಕೇಳೊ ವೇಮ.

ನಾಯಿ ತಿಂದವನು
ಗುರುಲಿಂಗ ಜಂಗಮ
ಹಂದಿ ತಿಂದವನು ಪರಮಯೋಗಿ
ಆನೆ ತಿಂದವನು ಎಂಥಾ ಸುಜ್ಞಾನಿ ಕಾಣಾ
ವಿಶ್ವದಭಿರಾಮಾ.. ಕೇಳೊ ವೇಮ.

ಮೊಲೆಯ ಕುಡಿದು
ಮೊಲೆಯನ್ನೇ ಪಿಡಿದು
ಯೋನಿಯೊಳಗೆ ಹುಟ್ಟಿ
ಯೋನಿಗೆ ಆಶಿಸಿದವನು
ಧರೆಯಲ್ಲಿ ನಾಚಿಕೆ ಇರದ ಜೀವಿ ಕಾಣಾ
ವಿಶ್ವದಭಿರಾಮಾ.. ಕೇಳೊ ವೇಮ.

❍ ಕನ್ನಡಕ್ಕೆ– ಗಂಗಪ್ಪ ತಳವಾರ

ಸಾಮಾಜಿಕ ನ್ಯಾಯ

ನನ್ನ ಹರಿದ ಅಂಗಿಯ ಮಧ್ಯದಿಂದ
ತುಂಡು ಬಟ್ಟೆ ಕತ್ತರಿಸಿ ಅವ್ವ
ಹೊಲಿದಳು ನನಗೊಂದು ನಮಾಜಿನ ಟೋಪಿ
ಸೊಟ್ಟಗಿದ್ದ ನನ್ನ ಬಡ ಟೊಪ್ಪಿಗೆ ನೋಡಿ
ಚಂದದ ಕಸೂತಿ ಹಾಕಿದ ಟೊಪ್ಪಿಗೆ
ಬಿಂಕದಲಿ ಭಿಮ್ಮೆಂದು ಬೀಗುತ್ತ
ಅಹಮ್ಮಿನ ನೋಟ ಬೀರಿ
ನನ್ನ ಬಡತನದ ಅಸಹಾಯಕತೆಯನು
ಹೇಗೆ ಅಣಕಿಸಿ ನಗುತ್ತಿದ ನೋಡು!



ಬೀಡಿ ಕಟ್ಟುವ ನನ್ನವ್ವನ
ಚಕಮಕ ಚಟುವಟಿಕೆಯ
ಎಸಳು ಬೆರಳುಗಳು
ಅಜಾಹ್‌ನ ಕರೆಗೆ ಓಗೊಟ್ಟು
ತಟ್ಟನೆ ಕೆಲಸ ನಿಲ್ಲಿಸಿ
ತಲೆ ಸೆರಗು ಸರಿಪಡಿಸಿ
ನಮಾಜಿನ ವಜು ಮಾಡಿ
ಹರಿದ ಬಟ್ಟೆಯನ್ನೇ ಹಾಸಿ
ನಮಾಜು ಮಾಡುತ್ತಿರುವಾಗ
ಪಕ್ಕದ ಬಂಗಲೆಯವಳ
ಮಕಮಲ್ಲಿನ ಜಾನಿಮಾಜು
ಬಿಂಕದ ನೋಟ ಬೀರುತ್ತಿದೆ ನೋಡು!

ಶ್ರಮಜೀವಿ ನನ್ನಪ್ಪ
ರಿಕ್ಷಾ ತುಳಿದು ಗಳಿಸಿದ
ಪುಡಿಗಾಸನ್ನು ಲೆಕ್ಕ ಮಾಡಿ
ನನ್ನವ್ವನ ಕೈಗಿಟ್ಟು
ಅಲ್ಲಾಹ್‌ನ ಮೇಲೆ ಭಾರಹಾಕಿ
ಕಣ್ಣೆತ್ತಿ ನೋಡಿದರೆ
ಬಂಗಲೆ ಸಾಹುಕಾರನ
ಕೆಂಪು ನೋಟಿನ ಕಟ್ಟು
ನನ್ನವ್ವನ ಕೈಯಲ್ಲಿದ್ದ
ಪುಡಿಗಾಸು ಚಿಲ್ಲರೆ ನೋಡಿ
ಕಿಸಕ್ಕನೆ ಅಣಕಿಸಿ ನಗುತ್ತಿದೆ ನೋಡು!

ನನ್ನವ್ವನ ಹರಿದ ಸೀರೆ
ಅಪ್ಪನ ಲಡ್ಡುಗಟ್ಟಿದ ಪಂಚೆ
ತೇಪೆ ಹಾಕಿದ ರವಿಕೆಯ ನೋಡಿ
ಸಾಹುಕಾರತಿಯ ಜರಿ ಪಿತಾಂಬರ
ಧಣಿಯ ಸೂಟು, ಬೂಟುಗಳು
ಕುಹಕದ ನಗೆ ಬೀರುತ್ತಿದೆ ನೋಡು!

ಅಸಮತೆಯ ಅಗ್ನಿಯಲಿ ಬೆಂದು
ಬೂದಿಯಾಗುತ್ತಿರುವಾಗ
ವ್ಯವಸ್ಥೆಯ ಎದೆಗೊದ್ದು
ಕೇಳಬೇಕೆನಿಸುತ್ತದೆ
ಹೇಳು ಇಲ್ಲಿ ಬಚ್ಚಿಟ್ಟುರುವೆ
ನಿನ್ನ ಸಾಮಾಜಿಕ ನ್ಯಾಯ?

○ ಕೆ. ಷರೀಫಾ

ಬೀದಿಗೆ ಬಿದ್ದ ಹಬ್ಬಗಳು

(ಹಿಂದಿನ ಸಂಚಿಕೆಯಿಂದ)

ಜಯಪ್ರಕಾಶ್ ಶೆಟ್ಟಿ .ಹೆಚ್

ಹೀಗೆ ಬೀದಿಯ ಉತ್ಸವದ ಕಟ್ಟುವಿಕೆ ಸಾಧ್ಯವಾಗುತ್ತಲೇ ಸಮುದಾಯದ ಜುಟ್ಟು ಉತ್ಸವ ಸಂಘಟಕರೆಂಬ ಕಾಸಿನಡಬ್ಬಿ ಇಲ್ಲವೆ ರಸೀದಿಪುಸ್ತಕದ ಒಡೆಯರುಗಳಾದ ಧರ್ಮರಕ್ಷಕರ ಕೈಗೆ ಹಸ್ತಾಂತರಗೊಳ್ಳುತ್ತದೆ.

ಬಣ್ಣ ಮತ್ತು ಬಾವುಟ

ಮನೆಹಬ್ಬಗಳು ಬೀದಿಗೆ ಬಂದು ಸ್ಥಾಪಿತವಾಗುತ್ತಿದ್ದಂತೆ ಮನೆಯೊಳಗೆ ಇದ್ದು ಹಬ್ಬವನ್ನು ಆಚರಿಸುತ್ತಿದ್ದ ಮಂದಿ ಬೀಡನ್ನು ಬಿಟ್ಟು ಬೀದಿಗಿಳಿಯುತ್ತಾರೆ. ಈ ಸ್ಥಾನಾಂತರದಿಂದಾಗಿ ಜನಪ್ರಿಯ ಧರ್ಮಕ್ಕೆ ಸಾಧ್ಯವಾಗದ, ಸಾಧುವೂ ಅಲ್ಲದ, ಸಂಖ್ಯೆಯ ಬಾಹುಳ್ಯವನ್ನು ಕಂಡುಕೊಳ್ಳುವ ಶಿಷ್ಟ/ಸಾಂಸ್ಥಿಕ ಧರ್ಮ ತನ್ನ ಶಕ್ತಿ ರಾಜಕಾರಣದ ಅಸ್ತ್ರವನ್ನಾಗಿ ಇದನ್ನು ಬಳಸಿಕೊಳ್ಳತೊಡಗುತ್ತದೆ. ಇಂತಹ ಸ್ಥಿತಿಯಲ್ಲಿ ಅಂಚಿನ ಸಮುದಾಯಗಳ ಜನವರ್ಗವೂ ಸೇರಿದಂತೆ ಬಹುಸಂಖ್ಯಾತ ತಳಸಮುದಾಯದ ಯುವ ಪೀಳಿಗೆಯು ತಮ್ಮದಲ್ಲದ ರಾಜಕೀಯ ಉದ್ದೇಶದ ಈಡೇರಿಕೆಗಾಗಿ ಹದಗೊಂಡ ಆಯುಧಗಳಾಗಿ ಮಾರ್ಪಾಡಾಗುತ್ತಾರೆ. ಶಿಷ್ಟ ಧರ್ಮದ ಪರಂಪರಾಗತ ಬುದ್ಧಿಜೀವಿಗಳ ಧರ್ಮ ಬೋಧನೆಯ ತನ್ಮೂಲಕವಾಗಿ ಧರ್ಮ ಎಂಬ ಹೃದಯಹೀನ ಜಗತ್ತಿನ ಹೃದಯದಿಂದ, ಚೇತನವಿಲ್ಲದ ಜಗತ್ತಿನ ಚೇತನದಿಂದ ಅಮಲುಗೊಂಡು, ತಮ್ಮ ಸಾಂಸ್ಕೃತಿಕ ಬಹುತ್ವದ ನೆಲೆಗಳನ್ನು ತಾವೇ ನಾಶಪಡಿಸಿಕೊಂಡವರಂತೆ ಆಳುವವರ್ಗದ ಊಳಿಗದ ಆಳುಗಳಾಗಿ ಅವರ ಹಿತಕಾಯುವ ಬಂಟರಾಗುತ್ತಾರೆ.

ಉತ್ಸವ ಸಮಿತಿ ಎಂಬ ಸಂಘಟನೆಯ ಮೂಲಕ ಧಾರ್ಮಿಕ ವಿಧಿಯ ನೆರವೇರಿಕೆಗೆ ಬೇಕಾದ ಮಾನವಬಲ ಮತ್ತು ಆರ್ಥಿಕಬಲವನ್ನು ಕ್ರೋಢೀಕರಿಸಿಕೊಳ್ಳುವ ಸಲುವಾಗಿ ಹಬ್ಬದ ನಿರ್ವಹಣೆಯ ಹೊಣೆಗಾರಿಕೆಗಳು ಮತ್ತೆ ಪುರುಷರಿಗೆ ಅದರಲ್ಲಿಯೂ ಹಿರಿಯರಿಂದ ಕಿರಿಯ ತಲೆ ಮಾರಿಗೆ (ಯುವಕರಿಗೆ) ಹಸ್ತಾಂತರಗೊಳ್ಳುತ್ತದೆ. ಸಮೂಹವನ್ನು ನಿಯಂತ್ರಿಸುವ, ಸಮುದಾಯವನ್ನು ಸಂಘಟಿಸುವ ಉತ್ಸವದ ಪರಿಕರ ಸಂಗ್ರಹಣೆಯ ಊಳಿಗದ ಹೊಣೆಗಾರಿಕೆಯನ್ನು ಸಂಘಟನೆಯೆನ್ನುವ ಪರಿಕಲ್ಪಿತ ಸಂಸ್ಥೆಯ ಪದಾಧಿಕಾರವಾಗಿ ಹಂಚುವ ಉತ್ಸವಾಚರಣೆಯ ಪ್ರಕ್ರಿಯೆ ಈ ಹುಡುಗರ ತಲೆಯಲ್ಲಿ 'ಯಜಮಾನ್ಯ'ದ ಹುಸಿ ಭ್ರಮೆಯನ್ನು ಹುಟ್ಟಿಸುತ್ತದೆ.

ಈ ಹೊಣೆಗಾರಿಕೆ ತಮ್ಮದೆಂಬ ನೆಲೆಯಲ್ಲಿ ಸಂಸ್ಕೃತಿ ರಕ್ಷಣೆಯ ಆರಕ್ಷಕರಾಗಿ ಪರಿವರ್ತನೆಗೊಳ್ಳುವ ಈ ಕಾಲಾಳು ಪಡೆ ಆಳುವವರ್ಗದ ಪಲ್ಲಕ್ಕಿ ಹೊರಲು ನಿಲ್ಲುವುದಷ್ಟೇ ಅಲ್ಲದೆ ತಮ್ಮ ಅನನ್ಯತೆಯ ಕುರುಹುಗಳನ್ನು ನಾಶ ಮಾಡಿಕೊಂಡು 'ಕಲ್ಪಿತಕುಲ' 'ಕಲ್ಪಿತಮಾತೃಭೂಮಿ' ಮತ್ತು ಸಂಸ್ಕೃತಿಗಾಗಿ ತಮ್ಮನ್ನು ಮುಡಿಪಾಗಿಟ್ಟುಕೊಳ್ಳು ತ್ತಾರೆ. ಈ ಕಲ್ಪಿತ ಸಂಗತಿಗಳ ಲಾಂಛನವಾದ ಬಣ್ಣ, ಬಾವುಟಗಳ ವಾರೀಸುದಾರರಾಗಿ ತಮ್ಮ ತಮ್ಮ ಪಾರಂಪರಿಕ ವೈವಿಧ್ಯದ ಹಿರಿತನ ಮತ್ತು ಮೌಲ್ಯಗಳನ್ನು ನಿರಾಕರಿಸಿಕೊಂಡು 'ಸಮಗ್ರಕುಲ'ವಾಗಿ ಮಾರ್ಪಡುವ ಈ ಯುವ ಪಡೆಗೆ ಎದುರಾಳಿಗಳನ್ನು ಕಲ್ಪಿಸಿಕೊಡುವ ಆಳುವವರ್ಗದ ರಾಜಕಾರಣ ಆ ಮೂಲಕವಾಗಿ ಇವರುಗಳು ರಕ್ಷಿಸಬೇಕಾದ 'ಸ್ವ' ಮತ್ತು ಆಕ್ರಮಣ (ದಾಳಿ) ಮಾಡಬೇಕಾದ 'ಅನ್ಯ'ಗಳನ್ನು ಗೊಂದಲಕ್ಕೆಡೆಯಿಲ್ಲದಂತೆ ವಿಭಜಿಸಿ ಒಪ್ಪಿಸುತ್ತದೆ. ಇಂತಹ ಸ್ಥಿತಿಯಲ್ಲಿ ಗಡಿಕಾಯುವ ಸೈನಿಕರಂತೆ ಬದಲಾಗುವ ಈ ಜನಸಂಸ್ಕೃತಿಯ ಭಾಗ ಆಚರಣೆಯ ಶ್ರದ್ಧೆಯ ಜಾಗದಲ್ಲಿ ದಿಢೀರ್ ಕಾರ್ಯಾಚರಣೆಯ ಕಟ್ಟಾಳುಗಳ ತಂಡವಾಗಿ ತನ್ನನ್ನು ನಿರುಪಿಸಿಕೊಂಡು ಸಂಸ್ಕೃತಿಯ ಪಾಠ ಹೇಳುವ ಬೋಧಕವೂ ಆಗಿ ಬಿಡುತ್ತದೆ.

ತಮ್ಮ ತಮ್ಮ ಮನೆಯೊಳಗಡೆ ಪರಂಪರಾಗತವಾದ ನೆಲೆಯಲ್ಲಿ ಹಿರಿಯರಿಂದ, ತಾಯಂದಿರಿಂದ ಸಂಸ್ಕೃತಿಯ ಪಾಠಕಲಿಯಬೇಕಾಗಿದ್ದ .

ಉತ್ಸವ ಸಂಸ್ಕೃತಿಯ ಮತ್ತೊಂದು ಮುಖ್ಯವಾದ ಗುರಿ ಮಹಿಳೆಯರು. ಹಬ್ಬ ಎಂದಾಗ ಜತೆಯಲ್ಲಿಯೇ ನೆನಪಾಗುವುದು ಅದನ್ನು ಮನೆಯೊಳಗಡೆ ತಮ್ಮ ಪ್ರಯೋಗಶಾಲೆಯಾದ ಅಡುಗೆಮನೆ ಮೂಲಕ ಆಗುಗೊಳಿಸುವ ಹಾಗೂ ಅದರ ಏರಿಳಿತದೊಂದಿಗೆ ಸಂಭ್ರಮಿಸುವ ಹೆಣ್ಮಕ್ಕಳು. ಮನೆಯನ್ನು ಅಪ್ಪಟವಾಗಿ ಪ್ರೀತಿಸುವ, ಮನೆಯೊಳಗಡೆ ಹೆಚ್ಚು ಕಾಲ ಕಳೆಯಬೇಕಾದ ಈ ಜನಭಾಗವೇ ಸಂಸ್ಕೃತಿಯ ವೈವಿಧ್ಯದೊಂದಿಗೆ ಬಹುತ್ವವನ್ನು ಜೀವಂತವಾಗಿಟ್ಟಿರುವುದು. ತಾವು ಸೇರಿರುವ ಸಮುದಾಯ, ಜಾತಿ, ಭಾಷೆಗಳ ಸ್ಮೃತಿಗಳನ್ನು ಹಬ್ಬ - ಹರಿದಿನಗಳ ಮೂಲಕ ಕಾಪಿಟ್ಟುಕೊಂಡು ಬರುವ ಮಹಿಳೆಯರನ್ನು ಮನೆಯಿಂದ ಹೊರ ಹೊರಟು ಬೀದಿಯಲ್ಲಿ ಸ್ಥಾಪಿತವಾಗುವ ಉತ್ಸವ ಬಹುಮಟ್ಟಿಗೆ ನಿರಾಕರಿಸಿ ಬಿಡುತ್ತದೆ.



ಇವರುಗಳು ಕಲಿಯಬೇಕಾದುದನ್ನು ಕಲಿಯದೇ, ಭಾವಾವೇಶಕ್ಕೆ ಒಳಗಾದ ಸ್ಥಿತಿಯಲ್ಲಿ ಕೇಳಿಸಿಕೊಂಡದ್ದನ್ನು ಅರ್ಥವಾಗದೆಯೂ ಅರಗಿಸಿಕೊಂಡ ವರಂತೆ ಗಿಳಿಪಾಠ ಒಪ್ಪಿಸುವ 'ಪ್ರಚಾರಕ'ರಾಗಿ ಬಿಡುತ್ತಾರೆ. ಇವರಿಗೆ ಸಂಸ್ಕೃತಿಯ ಪಾಠವನ್ನು ಪ್ರತ್ಯಕ್ಷವಾಗಿಯೇ ಕಲಿಸುವ ಅವಕಾಶ ಕಳೆದುಕೊಳ್ಳುವ ಮನೆಯ ಹಿರಿಯರು ನಿರ್ಲಕ್ಷಿಸಲ್ಪಟ್ಟು ಮೂಲೆಗೆ ತಳ್ಳಲ್ಪಡುವ ಜತೆಗೆ 'ಅಪರಿಚಿತ ಪಠ್ಯ'ವನ್ನು ತಾವೂ ಕಲಿಯಬೇಕಾದ ದುರಂತಕ್ಕೆ ಒಳಗಾಗುತ್ತಿದ್ದಾರೆ.

ಅಧಿಕಾರ ಕೇಂದ್ರದೊಳಗಡೆ ಪ್ರವೇಶ ಪಡೆಯದೆಯೂ ಅಧಿಕಾರದ ರುಚಿಯುಂಡವರಂತೆ ಸಂಭ್ರಮಿಸುವ ಕಾಲಾಳುಗಳ ಈ ಸಮರೋತ್ಸಾಹವು ಜಾತಿಪದ್ಧತಿಯ ಮೇಲ್ತುದಿಯಲ್ಲಿರುವ ವರ್ಗಕ್ಕೆ ಒಂದು ಉತ್ತಮ ಸಾಮಾಜಿಕ ಬಂಡವಾಳವಾಗಿ ಪರಿಣಮಿಸುತ್ತದೆ.

ಕೋಡುಬಳೆಯ ಬದಲಿಗೆ ಕೈ

ಉತ್ಸವ ಸಂಸ್ಕೃತಿಯ ಮತ್ತೊಂದು ಮುಖ್ಯವಾದ ಗುರಿ ಮಹಿಳೆಯರು. ಹಬ್ಬ ಎಂದಾಗ ಜತೆಯಲ್ಲಿಯೇ ನೆನಪಾಗುವುದು ಅದನ್ನು ಮನೆಯೊಳಗಡೆ ತಮ್ಮ ಪ್ರಯೋಗಶಾಲೆಯಾದ ಅಡುಗೆಮನೆ ಮೂಲಕ ಆಗುಗೊಳಿಸುವ ಹಾಗೂ ಅದರ ಏರಿಳಿತದೊಂದಿಗೆ ಸಂಭ್ರಮಿಸುವ ಹೆಣ್ಮಕ್ಕಳು. ಮನೆಯನ್ನು ಅಪ್ಪಟವಾಗಿ ಪ್ರೀತಿಸುವ, ಮನೆಯೊಳಗಡೆ ಹೆಚ್ಚು ಕಾಲ ಕಳೆಯಬೇಕಾದ ಈ ಜನಭಾಗವೇ ಸಂಸ್ಕೃತಿಯ ವೈವಿಧ್ಯದೊಂದಿಗೆ ಬಹುತ್ವವನ್ನು ಜೀವಂತವಾಗಿಟ್ಟಿರುವುದು. ತಾವು ಸೇರಿರುವ ಸಮುದಾಯ, ಜಾತಿ, ಭಾಷೆಗಳ ಸ್ಮೃತಿಗಳನ್ನು ಹಬ್ಬ – ಹರಿದಿನಗಳ ಮೂಲಕ ಕಾಪಿಟ್ಟುಕೊಂಡು ಬರುವ ಮಹಿಳೆಯರನ್ನು ಮನೆಯಿಂದ ಹೊರಹೊರಟು ಬೀದಿಯಲ್ಲಿ ಸ್ಥಾಪಿತವಾಗುವ ಉತ್ಸವ ಬಹುಮಟ್ಟಿಗೆ ನಿರಾಕರಿಸಿ ಬಿಡುತ್ತದೆ.

ಮನೆಯ ಹೊಸತನ, ಮನಸ್ಸಿನ ಉಲ್ಲಾಸಗಳೆರಡನ್ನು ಆಗುಗೊಳಿಸಿಕೊಂಡು ಹಿರೀಕರೊಂದಿಗೆ ಒಲೆಯ ಬೆಂಕಿ, ಕೊಟ್ಟಿಗೆಯ ಹಸುವನ್ನು ಪೂಜಿಸಿ ಆವಾಸದ ನೆಲೆಯನ್ನು ಪವಿತ್ರತ ವಲಯವಾಗಿರಿಸಿಕೊಂಡು ನಿರಾಳವಾಗುತ್ತಿದ್ದ ಖಾಸಗಿ ಅವಕಾಶಗಳನ್ನು ಉತ್ಸವರೂಪಗಳ ವಿಜೃಂಭಣೆ ಇಲ್ಲವಾಗಿಸುತ್ತಿದೆ. ಎಲ್ಲಾ ಬಹುತ್ವನಾಶದ, ಏಕಸಂಸ್ಕೃತಿಯ ವಕ್ತಾರಿಕೆಯ ಪ್ರಧಾನ ಅಂಶವೆಂದರೆ ಅದರ ಪಿತೃಪ್ರಧಾನಗುಣ ಮತ್ತು ಮಹಿಳೆಯರ ದೂರೀಕರಣ, ಹೆಂಗಳೆಯರ ಆಚರಣಾತ್ಮಕ ಸ್ವಾತಂತ್ರ್ಯ, ಆಚರಣಾಕೇಂದ್ರದಲ್ಲಿ ಅವರು ಅನುಭವಿಸುತ್ತಿದ್ದ ಮಾನ್ಯತೆಗಳನ್ನು ಇಲ್ಲವಾಗಿಸಿ ಅವರ ಕೈಯಲ್ಲಿನ ಸಂಸ್ಕೃತಿಯ ವಾಹಕ ಶಕ್ತಿಯನ್ನು ನಿರಸನಗೊಳಿಸಿಬಿಡಲಾಗುತ್ತದೆ. (ಮಾತೃಮೂಲೀಯ ಕುಟುಂಬ ಪದ್ಧತಿಯಲ್ಲಿ ಮನೆಯ ಹೆಣ್ಣುಮಗಳನ್ನು ಸಂತಾನ ಕೇಂದ್ರವಾಗಿ ಪರಿಭಾವಿಸುವ ಜತೆಗೆ ಆಚರಣಾ ವಿಧಿಯ ಬಹುಪಾಲು ಸಂದರ್ಭಗಳಲ್ಲಿ ಮೀಸಲು ಇಡುವ ಜವಾಬ್ದಾರಿಯನ್ನು ಆಕೆಯಿಂದಲೇ ನಿರೀಕ್ಷಿಸಲಾಗುತ್ತದೆ.)

ಹೀಗೆ ಆಚರಣೆಯ ಕೇಂದ್ರದಲ್ಲಿ ಮಾನ್ಯಳಾಗುತ್ತಿದ್ದ ಮಹಿಳೆಯ ದೂರೀಕರಣವನ್ನು ಸಾಧಿಸುವ ಬೀದಿಗೆಳೆಯಲ್ಪಡುವ ಆಚರಣಾ ವ್ಯತ್ಯಯದಿಂದಾಗಿ ಹಬ್ಬದ 'ಯಜಮಾನ' ಕೇಂದ್ರದ ವರ್ಗಾವಣೆ ಲಿಂಗಾಧಾರಿತವಾಗಿಯೂ ಹೆಣ್ಣಿನಿಂದ ಗಂಡಿಗೆ ಸಂಭವಿಸಿದಂತಾಗಿ, ಮಹಿಳೆಯನ್ನು ಸಾಂಸ್ಕೃತಿಕವಾಗಿಯೂ ನಿಷ್ಕ್ರಿಯಗೊಳಿಸುವಲ್ಲಿ ಯಶಸ್ವಿಯಾಗುತ್ತದೆ. ಹಬ್ಬವನ್ನು ಆಚರಿಸಬೇಕಾದ ಹೆಣ್ಣು ಉತ್ಸವವನ್ನು ನೋಡಬರುವ ನಿಷ್ಕ್ರಿಯ ಪ್ರೇಕ್ಷಕಳೂ, ತನ್ನ ಕುಲ

ಮನೆಹಬ್ಬಗಳು ಬೀದಿಗೆ ಬಂದು ಸ್ಥಾಪಿತವಾಗುತ್ತಿದ್ದಂತೆ ಮನೆಯೊಳಗೆ ಇದ್ದು ಹಬ್ಬವನ್ನು ಆಚರಿಸುತ್ತಿದ್ದ ಮಂದಿ ಬೀಡನ್ನು ಬಿಟ್ಟು ಬೀದಿಗಿಳಿಯುತ್ತಾರೆ. ಈ ಸ್ಥಾನಾಂತರದಿಂದಾಗಿ ಜನಪ್ರಿಯ ಧರ್ಮಕ್ಕೆ ಸಾಧ್ಯವಾಗದ, ಸಾಧುವೂ ಅಲ್ಲದ, ಸಂಖ್ಯೆಯ ಬಾಹುಳ್ಯವನ್ನು ಕಂಡುಕೊಳ್ಳುವ ಶಿಷ್ಟ/ಸಾಂಸ್ಥಿಕ ಧರ್ಮ ತನ್ನ ಶಕ್ತಿ ರಾಜಕಾರಣದ ಅಸ್ತ್ರವನ್ನಾಗಿ ಇದನ್ನು ಬಳಸಿಕೊಳ್ಳತೊಡಗುತ್ತದೆ. ಇಂತಹ ಸ್ಥಿತಿಯಲ್ಲಿ ಅಂಚಿನ ಸಮುದಾಯಗಳ ಜನವರ್ಗವೂ ಸೇರಿದಂತೆ ಬಹುಸಂಖ್ಯಾತ ತಳಸಮುದಾಯದ ಯುವ ಪೀಳಿಗೆಯು ತಮ್ಮದಲ್ಲದ ರಾಜಕೀಯ ಉದ್ದೇಶದ ಈಡೇರಿಕೆಗಾಗಿ ಹದಗೊಂಡ ಆಯುಧಗಳಾಗಿ ಮಾರ್ಪಾಡಾಗುತ್ತಾರೆ.

ಮೂಲೀಯವಲ್ಲದ ಆಚರಣಾ ಸಂಕೇತದ ಕಲ್ಪಿತ ಭಕ್ತಳಾಗಿಯೂ ಪರಿವರ್ತಿಸಲ್ಪಟ್ಟು, 'ಕಲ್ಪಿತ ಕುಲ' ಮಾದರಿಯಲ್ಲಿ ಮುಂದೊಡ್ಡಲ್ಪಡುವ 'ಸ್ತ್ರೀತ್ವ'ದ ಅಚ್ಚಿನೊಳಗೆ ಪ್ರವೇಶಿಸಿ, ಅಪಕಲ್ಪಿತ ಮುಸುಕಿನಿಂದ ಮುಚ್ಚಲ್ಪಡುತ್ತಾಳೆ. ಹೀಗೆ ಏಕತ್ರಗೊಂಡು ಮುಂದಿಡಲ್ಪಡುವ ಸಾಂಸ್ಕೃತಿಕ ಪರಿಭಾಷೆಯ ನಿರ್ದಿಷ್ಟಗೊಂಡ ಮಾದರಿಯಾಗಿ ವಿಶಾಲ ಭೌಗೋಳಿಕ ವ್ಯಾಪ್ತಿಯೊಂದಿಗೆ ಮಿಲನಗೊಳ್ಳುವಂತೆ ಭಾಸವಾಗುತ್ತಲೇ, ತನ್ನ ಸ್ಥಳೀಯತೆಯೊಂದಿಗೆ ಅಪರಿಚಿತಗೊಳ್ಳುವ ಮೂಲಕ ಒಂದರ್ಥದ ಅತಂತ್ರಾವಸ್ಥೆಯನ್ನು ಅನುಭವಿಸುವಂತಾಗುತ್ತದೆ.

ಈ ಮೂಲಕವಾಗಿ ತಾನು ಸ್ಥಳೀಯವಾಗಿ ಕಾಪಿಟ್ಟುಕೊಂಡು ಬಂದ ಹಬ್ಬದ ಭಾಷಿಕ ಆವರಣವನ್ನು ಕಳೆದುಕೊಳ್ಳುವ ಆಕೆ ತನಗೆ ವಿಶಿಷ್ಟವಾದ ಅಭಿವ್ಯಕ್ತಿಲೋಕವನ್ನು ಖಾಲಿಗೊಳಿಸಿಕೊಂಡು ಯಜಮಾನ ಸಂಸ್ಕೃತಿಯ ಹೆಜಮಿನಿಗೆ ಸಮ್ಮತಿಸುವ ಸನ್ನಿವೇಶ ನಿರ್ಮಾಣಗೊಳ್ಳುತ್ತದೆ. ಹಬ್ಬದ ಮುಖ್ಯವಾಹಿನಿಯಲ್ಲಿ ಅವಕಾಶ ಪಡೆಯುವ ಕೆಲವೇ ಮಹಿಳೆಯರು ಯಜಮಾನ ಸಂಸ್ಕೃತಿಯ ಭಾಗವಾಗಿಯೇ ಇರುವುದರಿಂದ ಜನಸಂಸ್ಕೃತಿಯ ಭಾಗವಾದ ಮಹಿಳೆಯರು ಕ್ರಿಯಾತ್ಮಕ ಭಾಗೀದಾರಿಕೆಯನ್ನು ಪೂರ್ಣಪ್ರಮಾಣದಲ್ಲಿ ಕಳೆದುಕೊಳ್ಳುತ್ತಾರೆ. (ಅವರ ಗಂಡು ಸಂತಾನಗಳೂ ಸಂಘಟನೆಯ ಪದಾಧಿಕಾರಿಗಳೆಂಬ ಚಿಕ್ಕ-ಪುಟ್ಟ ಪುಡಿಹೊಣೆಗಾರಿಕೆ ಪಡೆದು ತಮ್ಮ ಭಾಗದ ಅಧಿಕಾರದ ಪಾಲುಪಡೆದವರಂತೆ ತಾತ್ಕಾಲಿಕ ತೃಪ್ತಿಗೊಳಗಾಗುತ್ತಾರೆ. ಆದರೆ ಹೆಣ್ಣು ಮಕ್ಕಳಿಗೆ ಕನಿಷ್ಠ ಈ ಅವಕಾಶವೂ ಇಲ್ಲವಾಗುತ್ತದೆ.)

'ಕಲ್ಪಿತ ಕುಲ' ಕಲ್ಪನೆಯ ಮೂಲಕ ತನ್ನ ರಾಜಕೀಯ ಉದ್ದೇಶವನ್ನು ಈಡೇರಿಸಿಕೊಳ್ಳುವ ಕೋಮುವಾದಿ ಸಂಕಥನವೊಂದು ಸಂಸ್ಕೃತಿಯ ಜಾಗದಲ್ಲಿ ಸಂಸ್ಕೃತಿಗಳನ್ನು ಮತ್ತು ಸಂಸ್ಕೃತಿಯ ಚಲನಶೀಲತೆಯನ್ನು ನಿರಾಕರಿಸುತ್ತದೆ. ಏಕತ್ರಗೊಂಡ ಸಿದ್ಧಮಾದರಿಯ ಸಂಸ್ಕೃತಿ ಪ್ರತಿಪಾದನೆಗೆ ಅದು ನಿರೀಕ್ಷಿಸುವ ಬಹಳ ದೊಡ್ಡ ಆತಂಕ ಮಹಿಳೆಯರಿಂದ. ಯಾಕೆಂದರೆ ಭಿನ್ನ ಕುಲಮೂಲಗಳಿಗೆ ಸೇರಿದ ಮಹಿಳೆಯರೇ ಈ ಬಹುತ್ವದ ಬೆಳಕನ್ನು ಜೀವಂತವಿಡುವವರು ಮತ್ತು ಅವರ ಈ ಕ್ರಿಯಾಶೀಲತೆ ಬಹುಸಂದರ್ಭಗಳಲ್ಲಿ ಪುರುಷಾಧಿಕಾರಕ್ಕೆ ಎದುರಾದರೂ ಆಗಲಿರುವುದರಿಂದ ಅವರುಗಳಿಗೆ ಕಾಲ್ಪನಿಕವಾಗಿ 'ಮಾತೆ'ಯರ ಮಹತ್ವದ ಸ್ಥಾನ ನೀಡಿ ವಾಸ್ತವಿಕವಾಗಿ ಸಂಪೂರ್ಣ ಕಡೆಗಣಿಸಿ ಬಿಡುವ ಪ್ರಕ್ರಿಯೆಗೆ ಈ ಉತ್ಸವಾಚರಣೆ ಪೂರಕವಾಗುತ್ತದೆ. ಈ ತೆರನಾಗಿ ಚಲನಶೀಲ ಸಾಂಸ್ಕೃತಿಕ ಬಹುತ್ವವನ್ನು ಹಂತಹಂತವಾಗಿ ನಾಶಗೊಳಿಸುವ ಪ್ರತಿಗಾಮಿ ಶಕ್ತಿಗೆ ಗತ ಪರಂಪರೆಯೆಂಬ ಏಕೀಕೃತ ಆಕಾರವೊಂದನ್ನು ಮುಂದಿಡುವ ಸಲುವಾಗಿ ಮಹಿಳಾ ಅಭಿವ್ಯಕ್ತಿಯ ನೆಲೆಗಳನ್ನು ನಾಶ ಮಾಡುವ ಹುನ್ನಾರಗಳು ಅನಿವಾರ್ಯವಾಗುತ್ತವೆ.

ದಾಸ್ಯದ ಪಲ್ಲಕ್ಕಿ

ಹಬ್ಬಗಳನ್ನು ಉತ್ಸವವೆಂಬ ಸಾರ್ವಜನಿಕ ಅವಕಾಶ (Public sphere)ವಾಗಿ ಪರಿವರ್ತಿಸಿ ತನ್ನ ವರ್ಗಹಿತವನ್ನು ಕಾಯುವ ಸಲುವಾಗಿ ಈ ಸಾರ್ವಜನಿಕ ಅವಕಾಶದ ಕೇಂದ್ರವನ್ನು ವಶಪಡಿಸಿಕೊಳ್ಳಲು ಬೇಕಾದ ತಾತ್ವಿಕ ನೆಲೆಗಳನ್ನು ಪರಂಪರೆಯ ಮೂಲ ದ್ರವ್ಯದ ಮೂಲಕವೇ ಕಟ್ಟಿಕೊಳ್ಳಲಾಗುತ್ತದೆ. ಹೀಗೆ ಪರಂಪರೆಯ ಮೂಲ ದ್ರವ್ಯವನ್ನು ಬಳಸಿ ತನ್ನ ಮಾದರಿಯನ್ನು ಎಲ್ಲರ ಮಾದರಿ ಎಂಬ ಒಪ್ಪಿಗೆಯನ್ನು ಉತ್ಪಾದಿಸುವ ಮೂಲಕ ಸಂಸ್ಕೃತ ಪರಂಪರೆ ಯಜಮಾನನಾಗಿ ಎಲ್ಲರ ಪ್ರತಿನಿಧೀಕರಣವನ್ನು ಹೊಂದಲು ಯತ್ನಿಸುತ್ತದೆ. ಆದರೆ ವಾಸ್ತವವಾಗಿ ವರ್ಗ , ವರ್ಣ, ಜಾತಿಗಳಲ್ಲಿ ಹಂಚಿ ಹೋದ ನಮ್ಮ ಸಾಮಾಜಿಕ ವಲಯದಲ್ಲಿ ಯಾವೊಂದು ಆಚರಣೆಯೂ ಏಕಾಕೃತಿಯ ಮಾದರಿಯಾಗಿರಲು ಸಾಧ್ಯವಿಲ್ಲ. ಅದರಲ್ಲಿಯೂ ಆಚರಣಾತ್ಮಕ ಸಾಂಸ್ಕೃತಿಕ ಹಿನ್ನೆಲೆಗೆ ವಿರುದ್ಧವಾದ, ಅತೀತ ಸಂಬಂಧಗಳು ಸ್ಥಾಪಿತವಾಗಲು ಸಾಧ್ಯವಿಲ್ಲ.

ಚೌತಿ ನಮ್ಮವರ ಪಾಲಿಗೆ ಬೆಳೆಯನ್ನು ಎದುರುಗೊಳ್ಳುವ/ಕದಿರ ಬಸಿರಿಗೆ ಬಡಿಸುವ (ಸಣ್ಣ ಹೊಸ್ತಂಬ) ಸಣ್ಣ ಬಯಕೆ ಶಾಸ್ತ್ರವಿದ್ದಂತೆ. (ಚೊಚ್ಚಲ ಹೆರಿಗೆಯ ಪೂರ್ವದಲ್ಲಿ ಹೆಣ್ಣೊಬ್ಬಳಿಗೆ ಬಯಕೆ ಹಾಕುವ ಮೊದಲು ಸಣ್ಣ ಹೂ ಮುಡಿಸುವ ಆಚರಣೆ ನಮ್ಮ ಕಡೆ ಚಾಲ್ತಿಯಲ್ಲಿದೆ. ಭೂಮಿತಾಯಿಯ ಹೆರಿಗೆ(ಕೊಯ್ಲು)ಯ ಮೊದಲು ಆಕೆಗೆ ನಡೆಸುವ ಬಯಕೆಯ ಬಾಗಿನ(ಹೊಸ್ತು)ದ ಮುಂಚೆ ಸಣ್ಣ ಪ್ರಮಾಣದಲ್ಲಿ ಹೊಸ್ತಂಬ ಹೆಸರಿನಿಂದಲೇ ಈ ಆಚರಣೆ ನಡೆಯುತ್ತದೆ ಎಂಬುದನ್ನು ಗಮನಿಸಬೇಕು.)

ಬಸಿರಾದ ಭೂಮಿಯ ಹಸುರಿಗೆ ಸಂಬಂಧಿಸಿದಂತೆಯೇ ನಡೆಯುವ ಈ ಆಚರಣೆಯಲ್ಲಿ ಮೂರ್ತಿಯ ಆಕಾರವಾಗಲಿ, ಪಾರಂಪರಿಕವಾಗಿ ಕೃಷಿಕರ ಪಾಲಿಗೆ ಅಪಹರಿಸಲ್ಪಟ್ಟ/ಇಲ್ಲವಾಗಿಸಿದ ಅಕ್ಷರಸಂಸ್ಕೃತಿಯ ಅಧಿದೇವತೆಯಾದ ವಿದ್ಯಾಗಣಪತಿಯಾಗುವುದಾಗಲಿ ನಡೆಯುವುದಿಲ್ಲ. ಹಾಗೆಯೇ ಸರ್ವೇಸ್ರಮ್ಮನನ್ನು ದುರ್ಗಿಯ ಅವತರಣಿಕೆಯಾದ ಕೊಲ್ಲೂರು ಮೂಕಾಂಬಿಕೆ ಹಾಗೂ ಅವಳ ಆಳಾದ ನಾಥಪಂಥದ ಜೋಗಿಯೊಂದಿಗೆ ಬೆಸೆದು ನೋಡುತ್ತಾರಲ್ಲದೆ, 'ನಮ್ಮ ಅಮ್ಮ' ಸಾಮಾನ್ಯರ ಶಿಕ್ಷಣದ ಹಕ್ಕು ಕಸಿಯಲು ರೂಪಕವಾದ ದ್ವಿಜ ಸಂತತಿಯ ಶಾರದಾಂಬೆಯಾಗುವುದಿಲ್ಲ.

ನವರಾತ್ರಿಯಮ್ಮನನ್ನು ಶಾರದಾಂಬೆಯಾಗಿ, ಚೌತಿಯ ಸಣ್ಣ ಹೊಸ್ತನ್ನು ಗಣೇಶೋತ್ಸವವಾಗಿ ಆಚರಿಸಿ

[illegible] ವ್ಯಕ್ತಿ ಹೊತ್ತು, [illegible] ಮೇಲೆ ಭಯಂಕರ [illegible] ನಾವು [illegible] [illegible] [illegible] [illegible], ತನ್ನ ಪರಂಪರೆಯ ಕಡೆಗೆ ಮುಖ ಮಾಡಿದಾಗ ಮತ್ತು ಸಾಂಸ್ಕೃತಿಕ ರಾಜಕಾರಣವನ್ನು ಅರ್ಥ ಮಾಡಿಕೊಂಡಾಗ, ಈ ಸಾರ್ವಜನಿಕ ಅವಕಾಶದಲ್ಲಿ ತನ್ನ ದಾಸ್ಯವನ್ನು ತಾನೇ ಸಂಭ್ರಮಿಸಿಕೊಳ್ಳುತ್ತಾ, ಅದರ ನಿರ್ಮಾತೃಗಳಿಗೆ ಕೃತಜ್ಞತೆ ಸಲ್ಲಿಸಿದ್ದರ ಅರಿವು ಹೊಂದಿಯಾನು. ಯಾಕೆಂದರೆ ಮತೀಯ ಮೂಲಭೂತವಾದದ ನಿಜವಾದ ಗುರಿಗಳನ್ನು ಗುರುತಿಸದೆ, ಅದನ್ನು ಕಲ್ಪಿ 'ಅನ್ಯ'ವೊಂದರ ವಿರುದ್ಧದ ಹೋರಾಟದ ದಾರಿಯೆಂದು ನಂಬಿಕೊಂಡು, "ಅದರ ಊಳಿಗಕ್ಕೆ ನಿಲ್ಲುವ ಎಲ್ಲಾ ದಲಿತರು ಮತ್ತು ಕೆಳ ಜಾತಿಯ ಜನರಿಗೆ, ಅದು ಎಲ್ಲ ಜಾತಿ ಧರ್ಮಗಳಲ್ಲಿ ಉದಾರ ಮನಸ್ಸಿನ ಆರೋಗ್ಯಕರವಾಗಿ ಚಿಂತಿಸುವ ಜನರ ಶತ್ರು ಎಂಬುದು ಅರಿವಾಗಬೇಕಿದೆ. ಅದು ಅರಿವಾಗದೇ ಇರುವುದು ನಮ್ಮ ಕಾಲದ ದುರಂತವಾಗಿದೆ".[3]

ಸಂಪತ್ತಿನ ಮೆರವಣಿಗೆ

ಹಬ್ಬ ಉತ್ಸವವಾಗುವ ಪ್ರಕ್ರಿಯೆಯಲ್ಲಿಯೇ ಸಂಭವಿಸುವ ಮತ್ತೊಂದು ಮುಖ್ಯ ಬೆಳವಣಿಗೆಯೆಂದರೆ ಸಂಪತ್ತಿನ ಮೆರವಣಿಗೆ. ಹುಂಡಿ, ಹರಕೆ, ಸೇವೆ, ಪ್ರಾಯೋಜಕತ್ವಗಳ ಸಂಸ್ಕೃತಿ ವಿಜೃಂಭಿಸುತ್ತಲೇ ದಾನವೀರ, ಧರ್ಮವೀರರೆಂಬ ಹೊಸ ಪದವೀಧರರು ಸಾರ್ವಜನಿಕ ಅವಕಾಶಗಳಲ್ಲಿ ಮಿನುಗತೊಡಗುತ್ತಾರೆ. ಸಾಮಾನ್ಯವಾಗಿ ಈ ಬೀದಿ ಉತ್ಸವಗಳು ಧಾರ್ಮಿಕ ಆವರಣದಂತೆ ಬಿಂಬಿತವಾದರೂ, ಅವು ತಮ್ಮ ಚಟುವಟಿಕೆಯನ್ನು ಕಲೆ-ಸಂಸ್ಕೃತಿಯ ಅಭಿವ್ಯಕ್ತಿ, ಸ್ಪರ್ಧೆ, ಸನ್ಮಾನ ಎಂಬ ಅನೇಕ ಸಾಮಾಜಿಕ ಸಂದರ್ಭಗಳಾಗಿ ವಿಸ್ತರಿಸಿಕೊಳ್ಳುತ್ತವೆ.

ಸಹಜವಾಗಿಯೇ ಇಂತಹ ಚಟುವಟಿಕೆಗಳು ಸಮೂಹವನ್ನು ಪೆಂಡಾಲ್ ಕಡೆಗೆ ಆಕರ್ಷಿಸಲು ಸಹಕಾರಿಯಾಗುತ್ತವೆಯಾದರೂ ಅವುಗಳು ಖರ್ಚುಬೇಡುತ್ತವೆ. ಖರ್ಚು ಮಾಡಿ ಅದ್ದೂರಿತನವನ್ನು ಮೆರೆಯುವ ಉದ್ದೇಶದಿಂದಲೇ ಏರ್ಪಡುವ ಉತ್ಸವಗಳು ಹಬ್ಬಗಳಂತೆ ಹಾಸಿಗೆಯಿದ್ದಷ್ಟು ಕಾಲುಚಾಚುವಂತವುಗಳಾಗದೆ, ಸಿಕ್ಕ ಸಿಕ್ಕ ಹಾಸಿಗೆ, ಚಾಪೆಗಳ ಮೇಲೆಲ್ಲಾ ಅಡ್ಡಾದಿಡ್ಡಿ ಮಲಗಲು ಒತ್ತಾಯಿಸುತ್ತವೆ. ಇದರ ಪರಿಣಾಮವಾಗಿ ರಶೀದಿ ಪುಸ್ತಕದ ಆಹ್ವಾನ ಪತ್ರಿಕೆ ಹಿಡಿದು ಊರೆಲ್ಲಾ ಸುತ್ತುವ ವಂತಿಗೆ ವಸೂಲಿಕಾರರು ಹುಟ್ಟಿಕೊಳ್ಳುತ್ತಾರೆ. ಉತ್ಸವದ ಬಹುಭಾಗದ ಖರ್ಚುಭರಿಸುವ ಮಿಕಗಳ ಹುಡುಕಾಟವು ಪರ್ಯಾಯವಾಗಿ ಸಾಮಾಜಿಕ ಸಂದರ್ಭದ ಆರ್ಥಿಕ ನಾಯಕ/ರ ಸೃಷ್ಟಿಗೆ ಕಾರಣವಾಗುತ್ತದೆ.

ಧರ್ಮ ಮತ್ತು ಧನದ ಅಪವಿತ್ರಮೈತ್ರಿಯಲ್ಲಿ ಸಾಧ್ಯವಾಗುವ ಡಾಂಬಿಕ ಉತ್ಸವದ ಮೂಲಕ ದಿಢೀರ್ ಶ್ರೀಮಂತರಾಗಿರುವ, ಸಮಾಜದ್ರೋಹಿಗಳೂ ಆಗಿರಬಹುದಾದ 'ಧನಿಕ'ರಿಗೆ ಸಾರ್ವಜನಿಕ ಅವಕಾಶವೊಂದು ನಿರ್ಮಾಣಗೊಳ್ಳುತ್ತದೆ. ಈ ಧಾರ್ಮಿಕಾಚರಣೆಯ ಮೂಲಕ ಸಾಂಸ್ಥಿಕ ಮಾನ್ಯತೆಯನ್ನು ಪಡೆಯುವ ಇಂತಹ ಧನಿಕರ ಪ್ರಾಯೋಜಕತ್ವವನ್ನು ಉತ್ತೇಜಿಸುವುದರಿಂದ ಉತ್ಸವಗಳು ಸಮಾಜದ ನೈತಿಕ ಅಧಃಪತನಕ್ಕೂ ಕೊಡುಗೆ ನೀಡುತ್ತವೆ. ಹಣದ ಬಾಗೀದಾರಿಕೆ ಲಾಭದ ಗುರಿಯನ್ನೂ ಹೊಂದಿರುತ್ತದೆಯಾದುದರಿಂದ ಉತ್ಸವವು ವಾಣಿಜ್ಯಿಕವಾದ ಉದ್ದೇಶಗಳಿಗೆ ಮಾಧ್ಯಮವಾಗುತ್ತದೆ. ಪ್ರತಿಷ್ಠೆ ಮತ್ತು ಸಾಮುದಾಯಿಕ ಅಸಹನೆಗಳು ಇದರ ಉಪಉತ್ಪನ್ನವಾಗಿ ಪರಿಣಮಿಸಿ, ಹಬ್ಬದ ಸಹಜ ಸೌಂದರ್ಯ ನಾಪತ್ತೆಯಾಗುತ್ತದೆ.



ಸಾಕ್ಷರಲೋಕಕ್ಕೆ ರಾಕ್ಷಸಯಾತ್ರೆ

ನಾರಾಯಣ ಗುರುಗಳ ಚಳುವಳಿಯಲ್ಲಿ ದೇಗುಲ ಪ್ರವೇಶ, ಪರ್ಯಾಯ ದೇಗುಲ ಸೃಷ್ಟಿಯ ಜೊತೆಗೆ ಬಹಳ ಮುಖ್ಯವಾದ ಹೋರಾಟ ನಡೆದು ಸಾರ್ವಜನಿಕ ಶಿಕ್ಷಣಕೇಂದ್ರ (ಪ್ರಾಥಮಿಕ ಶಾಲೆ) ಗಳಿಗೆ ದಲಿತ ಮತ್ತು ಕೆಳಜಾತಿ ಮಕ್ಕಳ ಪ್ರವೇಶಕ್ಕೆ ಸಂಬಂಧಿಸಿದಂತೆ. ಅವರ ದೇಗುಲ ಪ್ರವೇಶಕ್ಕಾಗಿನ ಚಳುವಳಿಗಿಂತ ಹೆಚ್ಚು ಪ್ರತಿರೋಧವನ್ನು ಎದುರಿಸಬೇಕಾಗಿ ಬಂದುದು ಪ್ರಾಥಮಿಕಶಾಲಾ ಪ್ರವೇಶದ ಕುರಿತಾದ ಹೋರಾಟಕ್ಕೆ ಎಂಬುದನ್ನು ಮರೆಯಲಾಗದು. ಈ ತಿಳುವಳಿಕೆಯ ಬೆಳಕಿನಲ್ಲಿಯೇ ಇಂತಹ ಉತ್ಸವ ವೇದಿಕೆಗಳಾಗಿ (ತಾತ್ಕಾಲಿಕ ಅವಧಿಯವರೆಗೆ) ತೆರೆದುಕೊಳ್ಳುತ್ತಿರುವ ಪ್ರಾಥಮಿಕ ಶಾಲಾ ಅಂಗಳಗಳು ಹಾಗೂ ಅಲ್ಲಿನ ಶಿಕ್ಷಕರಲ್ಲಿ ಕಂಡುಬರುತ್ತಿರುವ ಭಾಗೀದಾರಿಕೆಯ ಉತ್ಸಾಹವನ್ನು ಸೂಕ್ಷ್ಮವಾಗಿ ಪರಿಶೀಲಿಸುವುದೂ ಳಿತು. ಖ್ಯಾತ ವೈಚಾರಿಕ ಚಿಂತಕ ಡಾ॥ ವಿ.ಆರ್. ನಾರ್ಲಾ ಅವರ ಅಭಿಪ್ರಾಯದಂತೆ, "ನಮ್ಮ ಉನ್ನತ ಶಿಕ್ಷಣವು ವಿಶಾಲದೃಷ್ಟಿಯನ್ನಾಗಲೀ, ಬದುಕಿನ ವಿಶಾಲತೆಯನ್ನಾಗಲೀ ನೀಡಲಾರದು. ಅದು ಮನುಷ್ಯನನ್ನು ಸುಸಂಸ್ಕೃತಗೊಳಿಸಲಾರದ ನಮ್ಮ ಜಾತಿ, ಸಂಸ್ಕೃತಿಯ ಮೂಷಕಗಳ ಹಿಂಡನ್ನು ತಯಾರುಮಾಡುತ್ತಿದೆ."[4] ಶಾಲೆಯನ್ನು ದೇಗುಲಕ್ಕೆ ಪರ್ಯಾಯವೆಂದು ಭಾವಿಸುವ ಮತ್ತು ತಾತ್ಕಾಲಿಕ ದೇಗುಲಗಳಾಗಿ ಬಳಸಿಕೊಳ್ಳುವ ಕ್ರಮಗಳು ಉನ್ನತ ಶಿಕ್ಷಣಕ್ಕಿಂತ ಪೂರ್ವದಲ್ಲಿ ಮೂಷಕಗಳ ಹಿಂಡಿನ ಉತ್ಪಾದನೆಗೆ ಬೇಕಾದ ತಳಹದಿಯನ್ನು ಹಾಕಿಕೊಳ್ಳುವ ಯತ್ನವಿರಬಹುದು.

ಸಾಮಾಜಿಕ ಆಶಯಗಳಿಗೆ ಪೂರಕವಾಗಿ ಗತ-ವರ್ತಮಾನಗಳ ಕುರಿತಾದ ಪ್ರಶ್ನೆಯ ಬೀಜ ಬಿತ್ತಿ ಸ್ಥಗಿತ ಸಮಾಜಕ್ಕೆ ಚಲನೆಯನ್ನು ಒದಗಿಸುವ ಶಿಕ್ಷಣಕೇಂದ್ರ ಪ್ರಜಾಪ್ರಭುತ್ವೀಯ ಮಾದರಿಯದು. ಇಂತಹ ಜಾಗದಲ್ಲಿ ಎಂದೂ ಡೆಮಾಕ್ರೆಟೈಸ್ ಆಗದ ಧರ್ಮ ಹಾಗೂ ಅದರ ಲಾಂಛನವಾದ ದೇವರುಗಳನ್ನು ತಂದುಕೊಳ್ಳುವ ಯತ್ನ ಅಪ್ರಜಾಸತ್ತಾತ್ಮಕವೂ, ತಳ ಸಮುದಾಯಗಳ ಸಾಮಾಜಿಕ ಮುಂಚಲನೆಗೆ ಒಡ್ಡುವ ಪರೋಕ್ಷ ತಡೆಯೂ ಆಗಿ ಸಂಭವಿಸಬಹುದು. ವಿ.ಪಿ.ಸಿಂಗ್ ಪ್ರಧಾನಿಯಾಗಿದ್ದ ವೇಳೆ ಜಾರಿಗೆತಂದ ಮಂಡಲ್ ಆಯೋಗದ ಶಿಫಾರಸ್ಸುಗಳಿಗೆ ಪ್ರತಿಕ್ರಿಯೆಯಾಗಿ, ಅದೇ ಸರ್ಕಾರದಲ್ಲಿ ಮಂತ್ರಿಯಾಗಿದ್ದುಕೊಂಡೆ ಅಟಲ್‌ಬಿಹಾರಿ ವಾಜಪೇಯಿ 'ನಿಮ್ಮಲ್ಲಿ ಮಂಡಲವಿದ್ದರೆ ನಮ್ಮಲ್ಲಿ ಕಮಂಡಲವಿದೆ' ಎಂದು ಕೊಟ್ಟ ಹೇಳಿಕೆಯನ್ನು ಇಲ್ಲಿ ಮತ್ತೊಮ್ಮೆ ನೆನಪಿಸಿಕೊಳ್ಳುವುದುಳಿಯಿತು. ಹಾಗಾಗಿ ಇಂತಹ ಸಂಸ್ಥೆಗಳು ಯಾರ ನಿಯಂತ್ರಣಕ್ಕೆ ಹೋಗುತ್ತವೆ ಎಂಬುವುದರ ಮೇಲಿಂದ ಅಲ್ಲಿ ರೂಪು ಪಡೆಯುವ ಅಧಿಕಾರ ರಾಜಕಾರಣದ ಜಾಡು ತಿಳಿಯಬಹುದು.

ಜ್ಞಾನ ಮತ್ತು ಅಕ್ಷರ ನಿರಾಕರಣೆಯ ಮೂಲಕ ಕಾಯ್ದಿಟ್ಟುಕೊಂಡು ಬಂದ ವರ್ಣ ವ್ಯತ್ಯಾಸಕ್ಕೆ ತೀವ್ರವಾದ ಹೊಡೆತ ಕೊಟ್ಟ ಜಾಗಗಳೆ, 'ಮೂಕನಿಗೆ ಬಾಯಿ ಮೂಡಿಸಿದ' ಈ ಸಾರ್ವಜನಿಕ ಅಕ್ಷರ ತಾಣಗಳು. ಜೈವಿಕ ಮತ್ತು ಜಾತ್ಯಾಧಾರಿತ ಶ್ರೇಣೀಕರಣವನ್ನು ಇಲ್ಲವಾಗಿಸುವ ಜೊತೆಗೆ ಅನೇಕ ಮತ ಪರಂಪರೆಗಳಿಗೆ ಸೇರಿದ ಸಮುದಾಯದ ಎಳೆಯ ಮನಸ್ಸುಗಳ ಮಿಲನ ಕೇಂದ್ರಗಳಾಗಿ ರೂಪು ಪಡೆದ ಈ ಶಾಲೆಗಳ ರಚನೆಯೇ ವೀಣಾವಾಣಿಯಾಗಿ ಖಾಸಗಿ ಅಟ್ಟದ ಮೇಲೆ ಕುಳಿತ ಸರಸ್ವತಿಯನ್ನು ನೆಲಕ್ಕೆ ತಂದು ಎಲ್ಲರಿಗೂ ಹಂಚಿದ ಪ್ರಜಾಸತ್ತಾತ್ಮಕ ಪ್ರಕ್ರಿಯೆ. ಇಂತಹ ವೈಚಾರಿಕ ತಾಣಗಳಾಗಬೇಕಾದ ಸಾರ್ವಜನಿಕ ಅವಕಾಶಗಳನ್ನು ಧಾರ್ಮಿಕ ಧ್ರುವೀಕರಣದ ನೆಲೆಗಳನ್ನಾಗಿ ಬದಲಾಯಿಸಿಕೊಳ್ಳುವ ಹುನ್ನಾರಗಳು ಇಲ್ಲಿ ಕೆಲಸ ಮಾಡುತ್ತವೆ.

ಸಂಸ್ಕೃತ ಪರಂಪರೆಯನ್ನೆ ಭಾರತೀಯ ಪರಂಪರೆ ಎಂಬಂತೆ ಕಟ್ಟಿಕೊಟ್ಟ ಓರಿಯಂಟಲಿಸ್ಟ್ ಆಲೋಚನಾಕ್ರಮವೂ ಈ ತೆರನಾದ ಯತ್ನಗಳಿಗೆ ಪೂರಕವಾಗಿಯೇ ಇದೆ. ಬಹಳ ಮುಖ್ಯವಾಗಿ ಅಪ್ರಾಪ್ತ ವಯಸ್ಸಿನ ಮಕ್ಕಳ

ಹಬ್ಬ ಉತ್ಸವವಾಗುವ ಪ್ರಕ್ರಿಯೆಯಲ್ಲಿಯೇ ಸಂಭವಿಸುವ ಮತ್ತೊಂದು ಮುಖ್ಯ ಬೆಳವಣಿಗೆಯೆಂದರೆ ಸಂಪತ್ತಿನ ಮೆರವಣಿಗೆ. ಹುಂಡಿ, ಹರಕೆ, ಸೇವೆ, ಪ್ರಾಯೋಜಕತ್ವಗಳ ಸಂಸ್ಕೃತಿ ವಿಜೃಂಭಿಸುತ್ತಲೇ ದಾನವೀರ, ಧರ್ಮವೀರರೆಂಬ ಹೊಸ ಪದವೀಧರರು ಸಾರ್ವಜನಿಕ ಅವಕಾಶಗಳಲ್ಲಿ ಮಿನುಗತೊಡಗುತ್ತಾರೆ. ಸಾಮಾನ್ಯವಾಗಿ ಈ ಬೀದಿ ಉತ್ಸವಗಳು ಧಾರ್ಮಿಕ ಆವರಣದಂತೆ ಬಿಂಬಿತವಾದರೂ, ಅವು ತಮ್ಮ ಚಟುವಟಿಕೆಯನ್ನು ಕಲೆ-ಸಂಸ್ಕೃತಿಯ ಅಭಿವ್ಯಕ್ತಿ, ಸ್ಪರ್ಧೆ, ಸನ್ಮಾನ ಎಂಬ ಅನೇಕ ಸಾಮಾಜಿಕ ಸಂದರ್ಭಗಳಾಗಿ ವಿಸ್ತರಿಸಿಕೊಳ್ಳುತ್ತವೆ. ಸಹಜವಾಗಿಯೇ ಇಂತಹ ಚಟುವಟಿಕೆಗಳು ಸಮೂಹವನ್ನು ಪೆಂಡಾಲ್ ಕಡೆಗೆ ಆಕರ್ಷಿಸಲು ಸಹಕಾರಿಯಾಗುತ್ತವೆಯಾದರೂ ಅವುಗಳು ಖರ್ಚುಬೇಡುತ್ತವೆ.

ಮನಸ್ಸಿನಲ್ಲಿಯೇ ಮತೀಯವಾದಿ ಮನಸ್ಥಿತಿಯೊಂದರ ನಿರ್ಮಾಣಕ್ಕೆ ಶಾಲೆಯಷ್ಟು ಸೊಗಸಾದ ತಾಣ ಬೇರೊಂದಿಲ್ಲ. ವಿಚಾರವಾದಿ ಮುಕ್ತ ಚಿಂತನೆಯ ಮೊದಲ ಬೀಜವನ್ನು ಬಿತ್ತಬೇಕಾದ ಜಾಗವನ್ನೇ ಸಮಕಾಲೀನ ರಾಜಕಾರಣದ ಅತ್ಯಂತ ಪರಿಣಾಮಕಾರಿ ಆಯುಧವಾದ ಮತೀಯ, ಕೋಮುವಾದಿ ಪಾರ್ಥೇನಿಯಂ ಬಿತ್ತಲು ಹದಮಾಡಿಕೊಂಡು ಬಿಟ್ಟರೆ ಭವಿಷ್ಯದ ಸಂಸ್ಕೃತಿ ರಕ್ಷಕರ ಸೇನೆಗೆ ಸೇರುವ ಕಟ್ಟಾಳುಗಳಿಗಾಗಿ ಕಾಯಬೇಕಾಗಿಲ್ಲ. ಇಂತಹ ಆಚರಣೆಗಳನ್ನು ಅತ್ತು-ಕರೆದು ಶಾಲೆಗಳಿಗೆ ಎಳೆದು ತರುವಲ್ಲಿ ಅಧ್ಯಾಪಕರ ದೊಡ್ಡ ಶ್ರಮವಿದೆ.

ಶ್ರಮದ ಹಿಂದಿನ ಕಾರಣಗಳು ಕೇವಲ ವೇದಿಕೆಯ ಬಯಕೆಯಷ್ಟೇ ಅಲ್ಲ, ಬದಲಾಗಿ ಅದರ ಉತ್ತರಗಳು ಅವರ ಸಾಮಾಜಿಕ ಹಿನ್ನೆಲೆಯಲ್ಲಿರುತ್ತವೆ. ಹೀಗೆ ಶಿಕ್ಷಣ ಕೇಂದ್ರಗಳು ಪರ್ಯಾಯ ಧಾರ್ಮಿಕ ಕೇಂದ್ರಗಳಾಗಿ ಏಕರೂಪಿ ಸಂಸ್ಕೃತಿಯ ಪಠ್ಯೀಕರಣಕ್ಕೆ ದುಡಿಯುವ ಕ್ರಿಯೆಯೂ ಈ ಮೂಲಕವಾಗಿ ಜರುಗುವಂತಾಗುತ್ತದೆ.

ವರ್ಗ/ಜಾತಿಸಮಾಜದ ಜಾಗದಲ್ಲಿ ಧರ್ಮ ಸಮಾಜ

ಈ ತೆರನಾದ ಏಕರೂಪಿ ಮಾದರಿಗಳ ಅವತರಣಿಕೆಗಳನ್ನು ಚಾಲ್ತಿಗೊಳಿಸುವ ಮೂಲಕ ಜಾತಿ/ವರ್ಗಗಳೆಂಬ ಸಾಮಾಜಿಕ ವಾಸ್ತವವನ್ನು ಹೊಂದಿರುವ ಶ್ರೇಣೀಕೃತ ಸಮಾಜದ ಜಾಗದಲ್ಲಿ ವ್ಯತ್ಯಾಸ ಮರೆಯಾದ, 'ಧರ್ಮ ಸಮಾಜ'ವೊಂದರ ಸೃಷ್ಟಿಯಾಗುತ್ತದೆ. ಉಡುವಲ್ಲಿ ಉಂಬಲ್ಲಿ ಶರಣರು, ಕೊಡುವಲ್ಲಿ ಕೊಂಬಲ್ಲಿ ನೆಂಟರಾಗಿಯೇ ಉಳಿಯುವ ಈ ತಾತ್ಕಾಲಿಕ ಬ್ರಾಂತ ರಚನೆಯಾದ ಧರ್ಮ ಸಮಾಜ, ಸಾಮಾಜಿಕ ಸತ್ಯವಾದ ಜಾತಿ ತಾರತಮ್ಯವನ್ನು ಮರೆಸಿ ಸಾಮರಸ್ಯದ ಚಹರೆಗಳನ್ನು ಕಂಡುಕೊಳ್ಳುವಂತೆ ಪ್ರೇರೇಪಿಸುತ್ತದೆ.

ಸಮಾಜದ ತಳಭಾಗದ ಜನಸಮುದಾಯಕ್ಕೆ ಆಕರ್ಷಣೀಯವಾದ ಒಂದಾಗುವ ಮತ್ತು ಮೇಲೇರುವ ಆಸೆಗೆ, "ನಾವೆಲ್ಲರೂ ಒಂದು....." ಎಂಬ ಘೋಷಣೆಗಳು ಹಾಳತವಾಗಿ ಒದಗಿಬರುತ್ತವೆ. ವರ್ತಮಾನದ ಸತ್ಯಕ್ಕೆ ಬೆನ್ನುಹಾಕುವಂತೆ ಗತಕಾಲದ ಸಮಾಜದಲ್ಲಿ ಇದ್ದಿತೆಂದು ಹೇಳಲಾಗುವ ಗುಣಕರ್ಮಾಧಾರಿತ ಅಸ್ತಿತ್ವದ ಬಿಂಬಿಸುವಿಕೆಯ ಮೂಲಕ ಸಹಜವಲ್ಲದ ಸಹೋದರತೆಯನ್ನು ಹುಟ್ಟುಹಾಕಲಾಗುತ್ತದೆ. ಜಾತಿ ಸಮಾಜದ ಜಾಗದಲ್ಲಿ ಸ್ಥಾಪಿತವಾಗುವ ರಚನೆಯಾದ ಧರ್ಮಸಮಾಜದ ಪರಿಣಾಮಗಳಲ್ಲಿ 'ಸ್ವ' ಮತ್ತು 'ಅನ್ಯ'ದ ದ್ವಿಮಾನ ವೈರುದ್ಯದ ಸೃಷ್ಟಿಗೆ ಆಗುವ ಅವಕಾಶವೊಂದಾದರೆ, ಪಟ್ಟಬದ್ಧರು ಸಾಧಿಸುವ ಪರೋಕ್ಷಕ್ರಾಂತಿ/ನಿಷ್ಕ್ರಿಯಕ್ರಾಂತಿ ಅದರ ಎರಡನೆಯ ಲಾಭವಾಗುತ್ತದೆ.

ಸಮಾಜದ ತಳಭಾಗದ ಜನಸಮುದಾಯಕ್ಕೆ ಆಕರ್ಷಣೀಯವಾದ ಒಂದಾಗುವ ಮತ್ತು ಮೇಲೇರುವ ಆಸೆಗೆ, "ನಾವೆಲ್ಲರೂ ಒಂದು........." ಎಂಬ ಘೋಷಣೆಗಳು ಹಾಳತವಾಗಿ ಒದಗಿ ಬರುತ್ತವೆ. ವರ್ತಮಾನದ ಸತ್ಯಕ್ಕೆ ಬೆನ್ನು ಹಾಕುವಂತೆ ಗತಕಾಲದ ಸಮಾಜದಲ್ಲಿ ಇದ್ದಿತೆಂದು ಹೇಳಲಾಗುವ ಗುಣಕರ್ಮಾಧಾರಿತ ಅಸ್ತಿತ್ವದ ಬಿಂಬಿಸುವಿಕೆಯ ಮೂಲಕ ಸಹಜವಲ್ಲದ ಸಹೋದರತೆಯನ್ನು ಹುಟ್ಟುಹಾಕಲಾಗುತ್ತದೆ. ಜಾತಿ ಸಮಾಜದ ಜಾಗದಲ್ಲಿ ಸ್ಥಾಪಿತವಾಗುವ ರಚನೆಯಾದ ಧರ್ಮಸಮಾಜದ ಪರಿಣಾಮಗಳಲ್ಲಿ 'ಸ್ವ' ಮತ್ತು 'ಅನ್ಯ'ದ ದ್ವಿಮಾನ ವೈರುದ್ಯದ ಸೃಷ್ಟಿಗೆ ಆಗುವ ಅವಕಾಶವೊಂದಾದರೆ, ಪಟ್ಟಬದ್ರರು ಸಾಧಿಸುವ ಪರೋಕ್ಷಕ್ರಾಂತಿ/ನಿಷ್ಕ್ರಿಯ ಕ್ರಾಂತಿ ಅದರ ಎರಡನೆಯ ಲಾಭವಾಗುತ್ತದೆ.

ಬಹುಧರ್ಮಿಯ ವಸ್ತುಸ್ಥಿತಿಯಲ್ಲಿ ಈ ಉತ್ಸವಗಳು ತೆರೆಯುವ ಉಪನ್ಯಾಸದ ಅವಕಾಶಗಳು ಹಾಗೂ ಶೋಭಾಯಾತ್ರೆಯ ಮೆರವಣಿಗೆಗಳು ಅನೇಕ ಸೂಕ್ಷ್ಮ ಸಮಸ್ಯೆಗಳನ್ನು ಹುಟ್ಟು ಹಾಕುತ್ತದೆ. ಧಾರ್ಮಿಕ ಪ್ರವಚನವೆಂದು ಕರೆಯಲಾಗುವ ಉಪನ್ಯಾಸಗಳಿಂದ ಚೋದಿಸಲ್ಪಟ್ಟ ಉತ್ಸಾಹಿ(?) ಉತ್ಸವಕರ್ತರ ಮೆರವಣಿಗೆಯ ಎರಡು ಲಕ್ಷಣಗಳೆಂದರೆ 1) ಅನ್ಯಕೋಮಿನವರ ಬೀದಿಗಳಲ್ಲಿ ಹಾದು ಹೋಗುವಿಕೆ 2) ಪ್ರಚೋದನಾತ್ಮಕ ಘೋಷಣೆಗಳ ಕೂಗುವಿಕೆ. ಇದಕ್ಕೆಂದೇ ಎಂಬಂತೆ ಇಂತಹ ಮೆರವಣಿಗೆಗಳನ್ನು ಎಲ್ಲಾ ಬೀದಿಗಳಲ್ಲಿಯೂ ಸುತ್ತುವರಿಯಬೇಕೆಂಬ ಹಠ ತೊಡುತ್ತಾರೆ. A.G.Nooraniಯವರು ಗುರುತಿಸುವಂತೆ, 'This was th technique used by fascists in London in the 1930's when they would march through Jewish areas'[5] ಸಹಜವಾಗಿಯೇ ಇಂತಹ ಸ್ಥಿತಿಯಲ್ಲಿ ಡಿ.ಆರ್.ನಾಗರಾಜ್ ತಮ್ಮ ಸಂಸ್ಕೃತಿ ಕಥನದಲ್ಲಿ ಗುರುತಿಸಿದಂತೆ "ಧರ್ಮಗಳು ಬರೀ ಪ್ರತೀಕಗಳಾಗಿ ನಿಲ್ಲುವುದಿಲ್ಲ..... ಸಮಕಾಲೀನ ರಾಜಕಾರಣದ ಒಂದು ಅತ್ಯಂತ ಪರಿಣಾಮಕಾರೀ ಆಯುಧವಾಗಿ ಬಿಡುತ್ತದೆ....... ಕಡುಬು ತಿನ್ನುತ ತಮಾಷೆಯಾಗಿ ಕಾಲ ಕಳೆವ ವಿನಾಯಕ ಕತ್ತಿ ಹಿಡಿದು ಬೀದಿಗಳಲ್ಲಿ ಮೆರೆಯುತ್ತಾನೆ...... ಅಧಿಕಾರ ಪಿಪಾಸುಗಳ ಕೈಯಲ್ಲಿ ವಿಜ್ಞಾನ ಎಷ್ಟು ಭಯಾನಕ ಆಯುಧವಾಗಬಲ್ಲುದೋ ಅಷ್ಟೇ ಭಯಾನಕ ಆಯುಧ ಧರ್ಮವೂ ಆಗುತ್ತದೆ."[6]

ಈ ಮಾದರಿಯ ಧರ್ಮ ಸಮಾಜದ ನಿರ್ಮಾಣದ ಮೂಲಕ ಸಾಮಾಜಿಕ ವಾಸ್ತವಕ್ಕೆ ಬೆನ್ನು ಹಾಕಿದ ಸ್ಥಿತಿಯಲ್ಲಿ ಕೋಮುವಾರು ಧ್ರುವೀಕರಣದೊಂದಿಗೆ 'ಸ್ವ' ಮತ್ತು 'ಅನ್ಯ' ಎಂಬ ಪ್ರಕಟ ವೈರುಧ್ಯಗಳ ಪರಿಕಲ್ಪನೆಗೂ ಕಾರಣವಾಗಿ ಭಾವನಾತ್ಮಕ ಸಂಘರ್ಷಗಳಿಗೆ ವೇದಿಕೆ ಸಿದ್ಧವಾಗಿ ಬಿಡುತ್ತದೆ. ಇಂತಹ ಸಮಾಜವೊಂದರ ನಿರ್ಮಾಣ ಮಹಿಳಾ ವಿರೋಧಿಯೂ, ಕಾರ್ಮಿಕ ವಿರೋಧಿಯೂ ಆಗಿರುತ್ತದೆ. ಈ ವಿರೋಧ ರೂಪದ ಸಮಾಜ ನಿರ್ಮಾಣ ಸಾಧ್ಯವಾಗುವುದು ಪಟ್ಟಭದ್ರರು ಸಾಧಿಸುವ ನಿಷ್ಕ್ರಿಯಕ್ರಾಂತಿಯಿಂದಲೇ ಎಂಬುದನ್ನು ಗಮನಿಸಬೇಕು. ಇಲ್ಲಿ ಬಳಕೆಯಾಗುವ ಐಕ್ಯಗಾನದ ಪರಿಭಾಷೆಗಳು ತೋರಿಕೆಗೆ ಸಮಾಜದ ಅಸಮಾನ ಸಂಬಂಧಗಳನ್ನು ಅಳಿಸಿಹಾಕಿದಂತೆ ಭಾಸವಾಗುವಂತಿದ್ದರೂ, ಪಾರಂಪರಿಕ ಇರುವಿಕೆಯನ್ನೇ ಮತ್ತಷ್ಟು ಗಟ್ಟಿಗೊಳಿಸುತ್ತಾ ಸಾಗುತ್ತದೆ. ಉತ್ಸವದ ಈ ಎರಡೂ ಪರಿಣಾಮಗಳಿಂದಾಗಿ ಆರ್ಥಿಕ ಮತ್ತು ಸಾಮಾಜಿಕ ಅವಕಾಶಗಳಿಂದ ವಂಚಿತವಾದ ಜೈವಿಕ ಮತ್ತು ಸಾಮಾಜಿಕ ವಲಯದ ತಳಭಾಗದ ಸಮುದಾಯಗಳು ತಮ್ಮ ನಿಜವಾದ ಸಮಸ್ಯೆಗಳಿಗೆ ಬೆನ್ನು ಹಾಕುವಂತಾಗಿ, 'ಭೂತ'ದಿಂದ ಹಿಡಿಯಲ್ಪಟ್ಟು ವರ್ತಮಾನವನ್ನು ಕಾಣದ ಭವಿಷ್ಯವನ್ನು ಕತ್ತಲಲ್ಲಿರಿಸಿಕೊಳ್ಳುತ್ತವೆ.

ನಗರಗಳು ಬೆಳೆದಂತೆ ವಸ್ತುರೂಪದ ವಿಸ್ತರಣೆಯೇ ಬದುಕಿನ ಪ್ರಗತಿ ಎಂಬ ಧೋರಣೆ ಬಲಗೊಳ್ಳುತ್ತಿದ್ದು, ಕೃಷಿ ಆವರಣದ ಸಾಂಸ್ಕೃತಿಕ ವಿನ್ಯಾಸವೂ ಪಲ್ಲಟ ಹೊಂದುತ್ತಿರುವ ಈ ಹೊತ್ತಿನಲ್ಲಿ ಮಧ್ಯಮವರ್ಗದ ಮನಸ್ಥಿತಿಗೆ ಹೆಚ್ಚು ಆಪ್ಯಾಯಕರವಾದ ಬಲಪಂಥೀಯ ವಿಚಾರಗಳು ಇಂತಹ ಆಚರಣೆಗಳ ಮೂಲಕ ನಗರ ಮತ್ತು ಗ್ರಾಮ ಕೇಂದ್ರಗಳಲ್ಲಿ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುತ್ತಿವೆ. ವಿಜ್ಞಾನ-ತಂತ್ರಜ್ಞಾನದ ಬೆಳವಣಿಗೆಗಳು ಅಜ್ಞಾನವನ್ನು ದೂರೀಕರಿಸಬೇಕಾದ ಹೊತ್ತಿನಲ್ಲಿಯೇ ಜಾಗತಿಕವಾಗಿ ಧಾರ್ಮಿಕ ಮೂಲಭೂತವಾದಗಳು ಗಟ್ಟಿಗೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಗೆ. ಬೆಳಕು, ಭಾಷೆ, ಬಣ್ಣ, ಬೆಡಗುಗಳಲ್ಲಿ ಪರಿಸರ ವಿರೋದಿಯೂ, ಸಮುದಾಯ ವಿರೋಧಿಯೂ ಆಗಿ ಆಚರಣೆಗಳು ರೂಪುಗೊಳ್ಳುತ್ತಿರುವ ಈ ಹೊತ್ತಿನಲ್ಲಿ ಜಿ. ರಾಮಕೃಷ್ಣ ಹೇಳುವಂತೆ "ದುಡಿಯುವ ವರ್ಗಕ್ಕೆ ಕೇಳುವ ಕಿವಿ ಮತ್ತು ಮಾಡುವ ಕೈ ಹಿಂದೆಂದಿಗಿಂತಲೂ ಇಂದು ಪ್ರಶಸ್ತವಾದ ಸಾಧನವಾಗಬೇಕಿದೆ." ಹಾಗಾಗದೇ ಹೋದಲ್ಲಿ ಪಾರಂಪರಿಕ ಆವರಣದ ನಿಷ್ಠೆಯ ಜತೆಗೆ ಕುಲಮೂಲೀಯ ಚಹರೆಗಳನ್ನು ಅಳಿಸಿಹಾಕಿ 'ಕಲ್ಪಿತಕುಲ' ನಿರ್ಮಾಣಕ್ಕೆ ಮುಂದಾಗುವ ಸಲುವಾಗಿ ವಿಕೃತಗೊಂಡು ಬೀದಿಗೆ ಬೀಳುವ ಹಬ್ಬಗಳು ಮಾನವ ಸಮುದಾಯದ ಜೀವದಾಯಕ ನೇತ್ರವಾಗುವ ಬದಲು, ಕಂದರ ಸೃಷ್ಟಿಯ ಸಾಧನಗಳಾಗುತ್ತವೆ.

ಟಿಪ್ಪಣಿಗಳು

1) ಸಿ. ಎನ್. ರಾಮಚಂದ್ರನ್: ಎಡ್ವರ್ಡ್‌ಸೈದ್ 2003

2) ಅಗ್ರಹಾರ ಕೃಷ್ಣಮೂರ್ತಿ(ಸಂ). ಸಂಸ್ಕೃತಿಕಥನ 2005

3) ರಹಮತ್ ತರೀಕೆರೆ: 'ಸಂಸ್ಕೃತ ವಿ.ವಿ......' ಹೊಸತು ಮಾಸಿಕ ಜುಲೈ 2009

4) ಡಾ॥ ಸಾವಿತ್ರಿ ಕೆ. 'ಸ್ವಾತಂತ್ರ್ಯೋತ್ತರ.....' ಹೊಸತು ಮಾಸಿಕ ಜುಲೈ 2009

5) ಎ.ಜಿ. ನುರಾನಿ : ಬಿಜೆಪಿ & ಆರ್.ಎಸ್.ಎಸ್. ಎ ಡಿವಿಸನ್ ಆಫ್ ಲೇಬರ್: 2008.

6) ಅಗ್ರಹಾರ ಕೃಷ್ಣಮೂರ್ತಿ(ಸಂ). ಸಂಸ್ಕೃತಿಕಥನ 2005.

ಕಾರಣ

ಒಡಲೊಳಗಿನ
ಹಸಿರೊಣಗಿ
ತೊಟ್ಟುಕಳಚಿ
ಉದುರಿದ ಎಲೆಗೆ
ಕಾಲ ಕೊಟ್ಟ ಕಾರಣ–
ಮುಪ್ಪು.

○ ದಯಾನಂದ

ರಾಯಚೂರು ಜಿಲ್ಲೆಯ ಅಭಿವೃದ್ಧಿ ಇದು ಕಥೆಯಲ್ಲ, ಬರೀ ವ್ಯಥೆ.



ಡಾ. ಟಿ.ಆರ್. ಚಂದ್ರಶೇಖರ್

> ವರಮಾನದಲ್ಲಿನ ವಾರ್ಷಿಕ ಶೇಕಡಾವಾರು ಏರಿಕೆ ಪ್ರಮಾಣವು ಅಭಿವೃದ್ಧಿಯ ರೂಢಿಗತವಾದ ಮಾಪನವಾಗಿದೆ. ಈ ಮಾನದಂಡದಲ್ಲಿ ರಾಯಚೂರು ಜಿಲ್ಲೆ ಯಾವ ನೆಲೆಯಲ್ಲಿ ನಿಲ್ಲುತ್ತದೆ? ಈ ಜಿಲ್ಲೆಯ ತಲಾ ವರಮಾನವು ಚಾಲ್ತಿ ಬೆಲೆಗಳಲ್ಲಿ ೧೯೯೩-೯೪ರಲ್ಲಿ ರೂ ೬೨೭೫ ರಷ್ಟಿತ್ತು. ಅಂದು ಅದರ ಒಟ್ಟು ಆಂತರಿಕ ಉತ್ಪನ್ನವು ರೂ ೧೫೨೧ಕೋಟಿಯಷ್ಟಿತ್ತು. ಅದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.೩.೭೦ ರಷ್ಟಿತ್ತು. ಆದರೆ ಈ ಜಿಲ್ಲೆಯು ರಾಜ್ಯದ ಜನ ಸಂಖ್ಯೆಯಲ್ಲಿ ಪಡೆದಿದ್ದ ಪಾಲು ಶೇ ೫.೧೩. ಇದರಿಂದ ತಿಳಿದು ಬರುವ ಸಂಗತಿಯೆಂದರೆ ಅದು ಜನ ಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದೆಯೋ ಅದಕ್ಕಿಂತ ಅತ್ಯಂತ ಕಡಿಮೆ ಪಾಲನ್ನು ವರಮಾನದಲ್ಲಿ ಪಡೆದಿದೆ.

ಪ್ರಸ್ತಾವನೆ

ರಾಯಚೂರು ಜಿಲ್ಲೆಯ ಅಭಿವೃದ್ಧಿಯನ್ನು ಕುರಿತಂತೆ ಬರೆಯುವುದೆಂದರೆ ಅದು ಬರೀ ದುಸ್ಥಿತಿಯ ಗಾಥೆಯಾಗುತ್ತದೆ ಮತ್ತು ಅದು ಗೋಳಿನ ಕಥೆಯಾಗುತ್ತದೆ. ಕರ್ನಾಟಕ ರಾಜ್ಯದಲ್ಲಿನ 27 ಜಿಲ್ಲೆಗಳ ಪೈಕಿ ಅತ್ಯಂತ ಹಿಂದುಳಿದ ಜಿಲ್ಲೆ ರಾಯಚೂರು ಎಂದು ಬಿಟ್ಟರೆ ಅದರ ಬಗ್ಗೆ ಏನನ್ನು ಹೇಳಿದಂತಾಗುವುದಿಲ್ಲ. ಅಭಿವೃದ್ಧಿ ಎನ್ನುವುದು ಇಲ್ಲಿ ಜನರ ಪಾಲಿಗೆ ಕನಸಿನ ಗಂಟಾಗಿಬಿಟ್ಟಿದೆ. ಅದು ಅವರಿಗೆ ಸಿಗವೊಲ್ಲದು. ಅದಕ್ಕಾಗಿ ಅವರು ಬೆವರು ಹರಿಸುತ್ತಿದ್ದಾರೆ, ಕಣ್ಣೀರು ಹಾಕುತ್ತಿದ್ದಾರೆ ಮತ್ತು ರಕ್ತ ಹರಿಸುತ್ತಿದ್ದಾರೆ. ಅಲ್ಲಿ ಜನರ ಬದುಕು ಹಸನಾಗುತ್ತಿಲ್ಲ. ಕಳೆದ ಕೆಲವು ವಾರಗಳಿಂದ ಬಿದ್ದ ಭಾರಿ ಮಳೆಯಿಂದಾಗಿ ಅಲ್ಲಿ ಜನರ ಬದುಕು ಅಸ್ತವ್ಯಸ್ತವಾಗಿದೆ. ಈ ಜಿಲ್ಲೆಯು ಸಾಮಾಜಿಕವಾಗಿ, ಆರ್ಥಿಕವಾಗಿ, ಜನಸಂಖ್ಯೆಯ ದೃಷ್ಟಿಯಿಂದ ಮತ್ತು ಲಿಂಗ ಸಂಬಂಧಿ ದೃಷ್ಟಿಯಿಂದ ಹಿಂದುಳಿದಿದೆ. ರಾಜಕೀಯವಾಗಿಯೂ ಜಿಲ್ಲೆಯು ತಬ್ಬಲಿಯಾಗಿದೆ. ಅಭಿವೃದ್ಧಿ ಕಾರ್ಯಕ್ರಮಗಳು ಇಲ್ಲಿ ಜನರಿಗೆ ವರವಾಗುತ್ತಿಲ್ಲ. ಈ ಜಿಲ್ಲೆಯ ಅಭಿವೃದ್ಧಿ ಕುರಿತಂತೆ ಇರುವ ಒಂದು ಅಣಕವೊಂದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ. ಅದರ ಅಭಿವೃದ್ಧಿ ಬಗ್ಗೆ ಅಲ್ಲಿನ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡುವಾಗ ಕೇಳಿಬರುವ ಮಾತೆಂದರೆ 'ಅದು ಬಿಡಿ ಸರ್, ಅಭಿವೃದ್ಧಿಯ ಯಾವ ಸೂಚಿಗಳನ್ನು ತೆಗೆದುಕೊಂಡರೂ ಅದರ ಸ್ಥಾನ ಇಪ್ಪತ್ತೇಳನೆಯದಾಗಿರುವುದರಿಂದ ಅದರ ಸ್ಥಾನವನ್ನು ಹುಡುಕುವ ಅಗತ್ಯವೇ ಬೀಳುವುದಿಲ್ಲ' ಎಂಬ ಆಂಬೋಣ ಕೇಳಿ ಬರುತ್ತದೆ. ಪ್ರಸ್ತುತ ಪ್ರಬಂಧದಲ್ಲಿ ರಾಯಚೂರು ಜಿಲ್ಲೆಯ ಅಭಿವೃದ್ಧಿಯ ಗತಿಸ್ಥಿತಿಯನ್ನು ಚರ್ಚಿಸಲಾಗಿದೆ.

ಈ ಜಿಲ್ಲೆಯ ಜನರ ಬದುಕಿನ ವ್ಯಥೆಯನ್ನು ತಿಳಿದುಕೊಳ್ಳಬೇಕೆಂದರೆ ಅಗತ್ಯವಾಗಿ ನಾವು ನಮ್ಮ ನಡುವಿನ ಖ್ಯಾತ ಕಥೆಗಾರ ಅಮರೇಶ ನುಗುಡೋಣಿ ಅವರ, ರಾಜಶೇಖರ ನಿರಮಾನ್ವಿ ಅವರ, ರಾಜಶೇಖರ ಹಳೆಮನೆ ಅವರ ಕಥೆಗಳನ್ನು ಅಭ್ಯಾಸ ಮಾಡಬೇಕು. ಇವರೆಲ್ಲ ಅದೇ ಜಿಲ್ಲೆಯವರು. ರಾಜಶೇಖರ ಹಳೆಮನೆ ಅವರ ಕಥೆಯೊಂದರ ಪಾತ್ರ ಹೀಗೆ ತನ್ನ ಅಳಲನ್ನು ಹೇಳಿಕೊಳ್ಳುತ್ತದೆ. 'ಯವ್ವೋ.. ತಾಯವ್ವ- ನಮ್ಮನ್ನು ಕೈ ಬಿಟ್ಟೆವ್ವೋ-ಒಂದಿಷ್ಟು ನೀರು ಕೊಟ್ಟರೆ ಸಾಕಿತ್ತವೋ. ಬದುಕ್ಕೆಂತಿದ್ದೀವಿ ನೀರು ಇಲ್ಲದ್ದಂಗ ಮಾಡಿದವ್ವಾ, ನನ್ನ ಮಕ್ಕಳು ನಾನು ಹ್ಯಾಂಗ ಬದುಕಬೇಕವ್ವೋ '(ಬೆಂದ ಒಡಲು: 2008). ಇದು ರಾಯಚೂರು ಜಿಲ್ಲೆಯ ಬದುಕಿನ ದಂದುಗ-ಭಂಗ.

ಅಭಿವೃದ್ಧಿಯ ಸ್ಥಿತಿಗತಿ.

ಈಗಾಗಲೆ ಹೇಳಿದಂತೆ ಇದು ಅನೇಕ ರೀತಿಯ ಹಿಂದುಳಿದಿರುವಿಕೆಗೆ ಒಳಗಾಗಿದೆ. ಸಾಂಪ್ರದಾಯಿಕವಾದ ವರಮಾನದ ದೃಷ್ಟಿಯಿಂದ ಅದು ಹಿಂದುಳಿದಿದೆ. ಕೃಷಿಯಾಗಲಿ, ಕೈಗಾರಿಕೆಯಾಗಲಿ, ಸಾರಿಗೆಯಾಗಲಿ, ಬ್ಯಾಂಕಿಂಗ್ ಅಗಲಿ- ಎಲ್ಲದರಲ್ಲೂ ಅಲ್ಲಿನ ಜನರ ಧಾರಣಾ ಸಾಮರ್ಥ್ಯವು ಪಾತಾಳದಷ್ಟು ಕೆಳಮಟ್ಟದಲ್ಲಿದೆ. ಅಮರ್ತ್ಯಸೆನ್ ರೂಪಿಸಿರುವ ಮಾನವ ಅಭಿವೃದ್ಧಿ ಮಾನದಂಡಗಳಾದ ಶಿಕ್ಷಣ, ಸಾಕ್ಷರತೆ, ಆರೋಗ್ಯ, ಮಕ್ಕಳ ಮತ್ತು ಮಹಿಳೆಯರ ಪೌಷ್ಟಿಕತೆ, ಲಿಂಗ ಸಮಾನತೆ, ಆಹಾರ ಭದ್ರತೆ ಮುಂತಾದವುಗಳ ಮೂಲಕ ಮಾಪನ ಮಾಡಿದರೆ ಅದರಲ್ಲಿಯೂ ಅದರ ದುಸ್ಥಿತಿಯು ತೀವ್ರತರದ್ದಾಗಿದೆ. ಕರ್ನಾಟಕದಲ್ಲಿ ಜನಸಂಖ್ಯೆಯ ಬೆಳವಣಿಗೆಯನ್ನು ಅತ್ಯಂತ ಯಶಸ್ವಿಯಾಗಿ ತಡೆಗಟ್ಟಲಾಗಿದೆ. ಮಾನ್ಯ ಯಡಿಯೂರಪ್ಪ ಹೇಳುವ ಜನಸಂಖ್ಯೆಯ ಸಮಸ್ಯೆಯೇನಾದರೂ ಕರ್ನಾಟಕದಲ್ಲಿ ಇದ್ದರೆ ಅದು ರಾಯಚೂರು ಜಿಲ್ಲೆಯಲ್ಲಿದೆ. ಮುಖ್ಯಮಂತ್ರಿಯವರು ಗೊತ್ತಿಲ್ಲದೆ ಅದನ್ನು ರಾಜ್ಯಮಟ್ಟದ ಸಮಸ್ಯೆಯೆನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಈ ಜಿಲ್ಲೆಯಲ್ಲಿ ನಮಗೆ ಜನಸಂಖ್ಯೆಯ ಬೆಳವಣಿಗೆಯ ಗತಿಯನ್ನು ನಿಯಂತ್ರಿಸುವುದು ಸಾಧ್ಯವಾಗಿಲ್ಲ. ಆದರೆ ಅದರ ಮೇಲೆ ಹಣವನ್ನು ಮಾತ್ರ ಖರ್ಚು ಮಾಡಲಾಗುತ್ತಿದೆ ಮತ್ತು ಸಂತಾನಹರಣ ಶಸ್ತ್ರ ಚಿಕಿತ್ಸೆ ಶಿಬಿರಗಳನ್ನು ನಡೆಸಲಾಗುತ್ತಿದೆ.

ವರಮಾನ ಸಂಬಂಧಿ ಬಡತನ

ವರಮಾನದಲ್ಲಿನ ವಾರ್ಷಿಕ ಶೇಕಡಾವಾರು ಏರಿಕೆ ಪ್ರಮಾಣವು ಅಭಿವೃದ್ಧಿಯ ರೂಢಿಗತವಾದ ಮಾಪನವಾಗಿದೆ. ಈ ಮಾನದಂಡದಲ್ಲಿ ರಾಯಚೂರು ಜಿಲ್ಲೆ ಯಾವ ನೆಲೆಯಲ್ಲಿ ನಿಲ್ಲುತ್ತದೆ? ಈ ಜಿಲ್ಲೆಯ ತಲಾ ವರಮಾನವು ಚಾಲ್ತಿ ಬೆಲೆಗಳಲ್ಲಿ 1993-94ರಲ್ಲಿ ರೂ 6275 ರಷ್ಟಿತ್ತು. ಅಂದು ಅದರ ಒಟ್ಟು ಆಂತರಿಕ ಉತ್ಪನ್ನವು ರೂ 1521ಕೋಟಿಯಷ್ಟಿತ್ತು. ಅದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ3.70ರಷ್ಟಿತ್ತು. ಆದರೆ ಈ ಜಿಲ್ಲೆಯು ರಾಜ್ಯದ ಜನಸಂಖ್ಯೆಯಲ್ಲಿ ಪಡೆದಿದ್ದ ಪಾಲು ಶೇ5.13. ಇದರಿಂದ ತಿಳಿದು ಬರುವ ಸಂಗತಿಯೆಂದರೆ ಅದು ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದೆಯೋ ಅದಕ್ಕಿಂತ ಅತ್ಯಂತ ಕಡಿಮೆ ಪಾಲನ್ನು ವರಮಾನದಲ್ಲಿ ಪಡೆದಿದೆ.

ಇದು 1999-2000ದಲ್ಲಿ ಬದಲಾಯಿತೇ?. ಇಲ್ಲ, ಬದಲಾಗುವುದಕ್ಕೆ ಪ್ರತಿಯಾಗಿ ಅದು ಮತ್ತಷ್ಟು ಉಲ್ಬಣಗೊಂಡಿತು. ಅದರ ಸ್ಥಿತಿಯು ಬದಲಾಗುವುದಕ್ಕೆ ಪ್ರತಿಯಾಗಿ ಅದರ ವರಮಾನ ಸಂಬಂಧಿ ಸ್ಥಾನಮಾನವು ಇಳಿಮುಖಿಯಾಗಿರುವುದು ಅತಂಕಕ್ಕೆ ಕಾರಣವಾಗುವ ಸಂಗತಿಯಾಗಿದೆ. ಈ ಜಿಲ್ಲೆಯ 1999-2000ದಲ್ಲಿನ ತಲಾ ವರಮಾನವು ರೂ.11344. ಅದರ ಒಟ್ಟು ಆಂತರಿಕ ಉತ್ಪನ್ನ ರೂ.1837.33 ಕೋಟಿ. ಇದು ರಾಜ್ಯದ ಒಟ್ಟು ಉತ್ಪನ್ನದಲ್ಲಿ ಜಿಲ್ಲೆಯ ಪಾಲು ಶೇ 1.91. ಅಂದರೆ 1993-94ರಲ್ಲಿ ಅದು ರಾಜ್ಯದ ವರಮಾನದಲ್ಲಿ ಎಷ್ಟು ಪಾಲು ಪಡೆದಿತ್ತೋ (ಶೇ3.70) ಅದಕ್ಕಿಂತ 1999-2000ದಲ್ಲಿ ಅದರ ಪಾಲು(ಶೇ 1.91) ಕಡಿಮೆಯಾಗಿದೆ. ಅಂದರೆ ಪ್ರಾದೇಶಿಕ ಅಸಮಾನತೆಯು ರಾಯಚೂರು ಜಿಲ್ಲೆಯ ದೃಷ್ಟಿಯಿಂದ ಉಲ್ಬಣಗೊಂಡಿದೆ. ಈ ಜಿಲ್ಲೆಯ ತಲಾ ವರಮಾನವು 1993-94ರಲ್ಲಿ ರಾಜ್ಯ ತಲಾ ವರಮಾನದ ಶೇ7 2.07ರಷ್ಟಿತ್ತು. ಇದು 1999-2000ದಲ್ಲಿ ಶೇ 61.11ರಷ್ಟಾಗಿದೆ. ಇದರ ಒಟ್ಟು ತಾತ್ಪರ್ಯವೆಂದರೆ ಜಿಲ್ಲೆಯ ಅಭಿವೃದ್ಧಿಯು ಸಾಪೇಕ್ಷವಾಗಿ ಕುಸಿಯುತ್ತಾ ನಡೆದಿದೆ. ಜನರ ಬದುಕು ಅಲ್ಲಿ ಸಮೃದ್ಧವಾ

ಗುವುದಕ್ಕೆ ಪ್ರತಿಯಾಗಿ ಕ್ಷೀಣಿಸುತ್ತಿದೆ. ಯಾವ ದಿಕ್ಕಿನಿಂದ ನೋಡಿದರೂ ಅಲ್ಲಿ ನಮಗೆ ಚೈತನ್ಯ ಕಂಡು ಬರುತ್ತಿಲ್ಲ.

ಇಂದಿನ ಪರಿಸ್ಥಿತಿ!

ತ್ರ್ಯಜಿಲ್ಲೆಯ ಇಂದಿನ ಪರಿಸ್ಥಿತಿಯು ಹೇಗಿದೆ ಎಂಬುದನ್ನು ನೋಡೋಣ.

ಈ ಜಿಲ್ಲೆಯ ತಲಾ ವರಮಾನವು 2006–07ರಲ್ಲಿ ರೂ 20731 ರಷ್ಟಾಗಿದೆ. ಇದು ರಾಜ್ಯ ಸರಾಸರಿಯ ಶೇ 58.44ರಷ್ಟಾಗಿದೆ. ಈ ಜಿಲ್ಲೆಯ ಒಟ್ಟು ಆಂತರಿಕ ಉತ್ಪನ್ನವು 2006–07ರಲ್ಲಿ ರೂ.3710 ಕೋಟಿಯಷ್ಟಿತ್ತು. ಇದು ರಾಜ್ಯದ ವರಮಾನದ ಶೇ 1.84ರಷ್ಟಾಗಿದೆ. ಒಟ್ಟಾರೆ ಸಮಗ್ರ ದೃಷ್ಟಿಯಿಂದ ನೋಡಿದಾಗ ಜಿಲ್ಲೆಯ ವರಮಾನದ ಸ್ಥಿತಿಗತಿಯು ದಶಕದಿಂದ ದಶಕಕ್ಕೆ ಕುಸಿಯುತ್ತಾ ನಡೆದಿದೆ. ರಾಜ್ಯದ ವರಮಾನದಲ್ಲಿ ಜಿಲ್ಲೆಯ ವರಮಾನದ ಪ್ರಮಾಣವು 1993–94ರಲ್ಲಿ ಶೇ 3.70ರಷ್ಟಿದ್ದುದು 1999–2000ದಲ್ಲಿ ಶೇ 1.91ಕ್ಕಿಳಿದಿದೆ. ಮತ್ತೆ ಅದು 2006–07ರಲ್ಲಿ ಶೇ 1.84ಕ್ಕಿಳಿದಿದೆ. ಅದೇ ರೀತಿಯಲ್ಲಿ ಅದರ ತಲಾ ವರಮಾನವು ರಾಜ್ಯರ ತಲಾ ವರಮಾನಕ್ಕೆ ಸಾಪೇಕ್ಷವಾಗಿ ಕ್ರಮವಾಗಿ 1993–94ರಲ್ಲಿ ಶೇ72.07ರಷ್ಟಿದ್ದುದು 1999–2000ದಲ್ಲಿ ಶೇ 61.11ಕ್ಕಿಳಿದಿದೆ. ಇದು 2006–07ರಲ್ಲಿ ಮತ್ತೆ ಶೇ 58.44ರಷ್ಟಾಗಿದೆ. ಅಂದರೆ ನಿರಂತರವಾಗಿ ಜಿಲ್ಲೆಯ ಸ್ಥಾನವು ಕೆಳಮಟ್ಟಕ್ಕಿಳಿಯುತ್ತಾ ನಡೆದಿದೆ. ಈ ಕಾರಣಕ್ಕೆ ನಾನು ಮೊದಲಲ್ಲೆ ಇದು ಅಭಿವೃದ್ಧಿಯ ಕಥೆಯಲ್ಲ. ಇದು ಕೇವಲ ವ್ಯಥೆಯೆಂದು ಹೇಳಿದ್ದೇನೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅದನ್ನು ನಾವು 'ಅವರೋಹಣವಾದಿ ಅಭಿವೃದ್ಧಿ'ಯೆಂದು ಹೇಳಬಹುದು.

ಸಾಕ್ಷರತೆ, ಶಿಕ್ಷಣ, ಆರೋಗ್ಯ, ಪೌಷ್ಟಿಕತೆ ಇತ್ಯಾದಿ...

ಯುಎನ್‌ಡಿಪಿಯು ಪ್ರಕಟಿಸಿದ ಮೊದಲ ಮಾನವ ಅಭಿವೃದ್ಧಿ ವರದಿಯಲ್ಲಿ(1990) ಬರೆಯುತ್ತ ಅದರ ಪ್ರಮುಖ ರೂವಾರಿ ಮೆಹಬೂಬ್ ಉಲ್ ಹಕ್ 'ವರಮಾನದ ಮೊತ್ತವೆ ಜನರ ಬದುಕಲ್ಲ'ವೆಂದು ಸ್ಪಷ್ಟವಾಗಿ ಹೇಳಿದ್ದಾನೆ.–ಇಂದು ಅಭಿವೃದ್ಧಿಯನ್ನು ಬಂಡವಾಳ ಅಥವಾ ವರಮಾನ ಅಥವಾ ತಂತ್ರಜ್ಞಾನ ಮುಂತಾದ ಸಂಗತಿಗಳನ್ನು ಆಧರಿಸಿ ಅಳೆಯುವುದಕ್ಕೆ ಪ್ರತಿಯಾಗಿ ಅದನ್ನು ಜನರ ಧಾರಣಾ ಸಾಮರ್ಥ್ಯವನ್ನು ನಿರ್ಧರಿಸುವ ಸಾಕ್ಷರತೆ, ಪ್ರಾಥಮಿಕ ಶಿಕ್ಷಣ, ಆರೋಗ್ಯ, ಮಹಿಳೆಯರ ಪೌಷ್ಟಿಕತೆ, ಲಿಂಗ ಸಮಾನತೆ ಮುಂತಾದ ಸಂಗತಿಗಳಿಂದ ಮಾಪನ ಮಾಡುವುದು ರೂಢಿಗೆ ಬಂದಿದೆ. ಈ ಮಾನದಂಡದಿಂದ ನೋಡಿದಾಗಲೂ ರಾಯಚೂರು ಜಿಲ್ಲೆಯು ಅತ್ಯಂತ ದುರ್ಬಲ ಸ್ಥಿತಿಯಲ್ಲಿರುವುದು ತಿಳಿಯುತ್ತದೆ.

ಕರ್ನಾಟಕದಲ್ಲಿ ಸಾಕ್ಷರತಾ ಪ್ರಮಾಣದಲ್ಲಿ–ಕಟ್ಟಕಡೆಯ ಜಿಲ್ಲೆಯೆಂದರೆ ರಾಯಚೂರು ಜಿಲ್ಲೆ. ಅದರ ಸ್ಥಾನವು 1991ರಲ್ಲಿ ಕೊನೆಯದು(ಶೇ 34.34) ಮತ್ತು 2001ರಲ್ಲಿಯೂ (ಶೇ 48.81)ಅದರ ಸ್ಥಾನ ಕಡೆಯದಾಗಿದೆ. ಈ ಜಿಲ್ಲೆಯ ಸಾಕ್ಷರತಾ ಪ್ರಮಾಣವು 1991ರಲ್ಲಿ ರಾಜ್ಯದಲ್ಲಿನ ಸಾಕ್ಷರತಾ ಪ್ರಮಾಣದ ಶೇ 61.28ರಷ್ಟಿದ್ದುದು 2001ರಲ್ಲಿ ಶೇ73.24ರಷ್ಟಾಗಿದೆ. ಇಲ್ಲಿ ರವಷ್ಟು ಸುಧಾರಣೆ ಕಂಡು ಬಂದಿದೆ. ಈ ಜಿಲ್ಲೆಯಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ 2001ರಲ್ಲಿ ಶೇ 35.93. ಗ್ರಾಮೀಣ ಮಹಿಳೆಯರ ಸಾಕ್ಷರತಾ ಪ್ರಮಾಣ 2001ರಲ್ಲಿ ಶೇ 28.86. ಈ ಜಿಲ್ಲೆಯಲ್ಲಿ ಗ್ರಾಮೀಣರ ಪ್ರಮಾಣವು ಶೇ75ರಷ್ಟಿರುವುದರಿಂದ ಗ್ರಾಮೀಣಕ್ಕೆ ಸಂಬಂಧಿಸಿದ ಮಾಹಿತಿಯು ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಮುಖ್ಯವಾಗುತ್ತದೆ. ರಾಜ್ಯಮಟ್ಟದಲ್ಲಿ ಗ್ರಾಮೀಣವಾಸಿಗಳ ಪ್ರಮಾಣ 2001ರಲ್ಲಿ ಶೇ 66.01 ಮಾತ್ರ.

ಯುಎನ್‌ಡಿಪಿಯು ಪ್ರಕಟಿಸಿದ ಮೊದಲ ಮಾನವ ಅಭಿವೃದ್ಧಿ ವರದಿಯಲ್ಲಿ(1990) ಬರೆಯುತ್ತ ಅದರ ಪ್ರಮುಖ ರೂವಾರಿ ಮೆಹಬೂಬ್ ಉಲ್ ಹಕ್ 'ವರಮಾನದ ಮೊತ್ತವೆ ಜನರ ಬದುಕಲ್ಲ'ವೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಇಂದು ಅಭಿವೃದ್ಧಿಯನ್ನು ಬಂಡವಾಳ ಅಥವಾ ವರಮಾನ ಅಥವಾ ತಂತ್ರಜ್ಞಾನ ಮುಂತಾದ ಸಂಗತಿಗಳನ್ನು ಆಧರಿಸಿ ಅಳೆಯುವುದಕ್ಕೆ ಪ್ರತಿಯಾಗಿ ಅದನ್ನು ಜನರ ಧಾರಣಾ ಸಾಮರ್ಥ್ಯವನ್ನು ನಿರ್ಧರಿಸುವ ಸಾಕ್ಷರತೆ, ಪ್ರಾಥಮಿಕ ಶಿಕ್ಷಣ, ಆರೋಗ್ಯ, ಮಹಿಳೆಯರ ಪೌಷ್ಟಿಕತೆ, ಲಿಂಗ ಸಮಾನತೆ ಮುಂತಾದ ಸಂಗತಿಗಳಿಂದ ಮಾಪನ ಮಾಡುವುದು ರೂಢಿಗೆ ಬಂದಿದೆ. ಈ ಮಾನದಂಡದಿಂದ ನೋಡಿದಾಗಲೂ ರಾಯಚೂರು ಜಿಲ್ಲೆಯು ಅತ್ಯಂತ ದುರ್ಬಲ ಸ್ಥಿತಿಯಲ್ಲಿರುವುದು ತಿಳಿಯುತ್ತದೆ.

ಈ ಜಿಲ್ಲೆಯಲ್ಲಿನ ಮಹಿಳೆಯರ ಮತ್ತು ಮಕ್ಕಳ ಅಪೌಷ್ಟಿಕತೆ ಬಗ್ಗೆ ಏನನ್ನು ಹೇಳದಿರುವುದೆ ಲೇಸು!. ಈ ಜಿಲ್ಲೆಯ ಶೇ.60–70ರಷ್ಟು ಕುಟುಂಬಗಳು ಇಂದಿಗೂ ಐಯೋಡಿನ್ ರಹಿತ ಉಪ್ಪನ್ನು ಸೇವಿಸುತ್ತಿವೆ ಎಂಬುದು ಇತ್ತೀಚಿಗಿನ ಅಧ್ಯಯನವೊಂದರಲ್ಲಿ ದೃಢಪಟ್ಟಿದೆ. ಏಕೆಂದರೆ ಅದು ಒಂದೆರಡು ರೂಪಾಯಿ ಸೋವಿಯಲ್ಲಿ ದೊರೆಯುತ್ತದೆ!. ಇಲ್ಲಿ ಶೇ.25–30 ರಷ್ಟು ಗರ್ಭಿಣಿಯರು ಆರೋಗ್ಯ ಕೇಂದ್ರದಲ್ಲಿ ನೋಂದಾವಣಿಯಾಗುತ್ತಿಲ್ಲ. ಪೋಲಿಯೋ ಹನಿಗಳಿಂದ ರೋಗ ಬರುತ್ತದೆಯೆಂದು ಜನರು ತಿಳಿದುಕೊಂಡಿದ್ದಾರೆ. ಇಂದಿಗೂ ಜನರು ಮಕ್ಕಳನ್ನು ಪೋಲಿಯೋ ಅಭಿಯಾನ–ಸಪ್ತಾಹದಂದು ಬಚ್ಚಿಡುತ್ತಾರೆ. ಇದಕೆಲ್ಲ ಅಕ್ಷರಸಂಸ್ಕೃತಿಯ ಕೊರತೆಯೇ ಕಾರಣವಾಗಿದೆ.

ಲಿಂಗ ಸಂಬಂಧಿ ಸಾಕ್ಷರತಾ ಅಂತರ

ಅಭಿವೃದ್ಧಿಯ ಗುಣಮಟ್ಟವನ್ನು ಅಳೆಯಲು ಇಂದು ವರಮಾನ, ಉತ್ಪನ್ನ, ತಂತ್ರಜ್ಞಾನ, ಉತ್ಪಾದನೆ ಮುಂತಾದ ಸಂಗತಿಗಳ ಜೊತೆಗೆ ಮಹಿಳೆಯರ ಸ್ಥಿತಿಗತಿಯನ್ನು ಪರಿಗಣಿಸಲಾಗುತ್ತಿದೆ. ಇದಕ್ಕೆ ಪ್ರಮುಖವಾದ ಮತ್ತು ಸರಳವಾದ ಕಾರಣವೆಂದರೆ ಅವರು ಜನಸಂಖ್ಯೆಯಲ್ಲಿ ಸರಿಸುಮಾರು ಶೇ50ರಷ್ಟಿದ್ದಾರೆ ಮತ್ತು ದುಡಿಮೆಗಾರರಲ್ಲಿ ಶೇ 35 ರಷ್ಟಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಮಹಿಳೆಯರು ಮತ್ತು ಪುರುಷರ ಸಾಕ್ಷರತಾ ಪ್ರಮಾಣಗಳ ನಡುವೆ ಅಂತರ 1991ರಲ್ಲಿ ಶೇ.25.05 ಅಂಶಗಳಷ್ಟಿದ್ದುದು 2001ರಲ್ಲಿ ಅದು ಶೇ25.59 ಅಂಶಗಳಷ್ಟಾಗಿದೆ. ಸಾಕ್ಷರತೆಯಲ್ಲಿ ಲಿಂಗ ಸಂಬಂಧಿ ಅಸಮಾನತೆಯು ರಾಜ್ಯಮಟ್ಟದಲ್ಲಿ ಇದೇ ಅವಧಿಯಲ್ಲಿ ಶೇ22.92 ಅಂಶಗಳಷ್ಟಿದ್ದುದು 2001ರಲ್ಲಿ ಶೇ 19.23 ಅಂಶಗಳಷ್ಟಕ್ಕೆ ಇಳಿದಿದೆ. ಈ ದೃಷ್ಟಿಯಿಂದ ಪರಿಶೀಲಿಸಿದಾಗ ರಾಯಚೂರಿನಲ್ಲಿ ಲಿಂಗ ಅಸಮಾನತೆಯು ತೀವ್ರ ಸ್ವರೂಪದಲ್ಲಿರುವುದು ತಿಳಿಯುತ್ತದೆ.

ಸಾಕ್ಷರತೆಯ ಸಾಮಾಜಿಕ ನೆಲೆ

ಮೇಲೆ ನಾವು ಸಾಕ್ಷರತೆಯನ್ನು ಕುರಿತಂತೆ ಇಡಿಯಾಗಿ ಪರಿಭಾವಿಸಿಕೊಂಡು ಚರ್ಚೆ ಮಾಡಿದ್ದೇವೆ. ಇದು ಸರಿಯಲ್ಲ. ಅದನ್ನು ಬಿಡಿಬಿಡಿಯಾಗಿ ಪರಿಶೀಲಿಸುವ ಅಗತ್ಯವಿದೆ. ಹಿಂದಿನ ಕಂಡಿಕೆಯಲ್ಲಿ ಅದನ್ನು ಲಿಂಗ ಸಂಬಂಧಗಳ ಆಯಾಮದಲ್ಲಿ ಪರಿಶೀಲಿಸಲಾಗಿದೆ. ಈಗ ಅದನ್ನು ಸಾಮಾಜಿಕವಾಗಿ ನಿಕೃಷ್ಟೀಕರಣಕ್ಕೆ ಒಳಗಾಗಿರುವ ಜನರ ನೆಲೆಯಲ್ಲಿ ನೋಡಬೇಕು. ರಾಯಚೂರು ಜಿಲ್ಲೆಯಲ್ಲಿ ಪ.ಜಾ.ಯಲ್ಲಿ 2001ರಲ್ಲಿ ಸಾಕ್ಷರತಾ ಪ್ರಮಾಣ ಶೇ.38.76. ಪ.ಜಾ.ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ.26.09. ಪ.ಪಂದ ಸಾಕ್ಷರತಾ ಪ್ರಮಾಣ ಶೇ.29.01. ಇಲ್ಲಿ ಪ.ಪಂ.ದ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ 16.91. ಈ ಸಮುದಾಯಗಳ ರಾಜ್ಯಮಟ್ಟದಲ್ಲಿರುವ ಸಾಕ್ಷರತಾ ಪ್ರಮಾಣಕ್ಕಿಂತ ರಾಯಚೂರು ಜಿಲ್ಲೆಯಲ್ಲಿ ಅತ್ಯಂತ ಕೆಳಮಟ್ಟದಲ್ಲಿವೆ. ಅಭಿವೃದ್ಧಿಯ ಸಾಮಾಜಿಕ ನೆಲೆಗಳನ್ನು ನಾವು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದು ಅವಶ್ಯಕ.

ಪ್ರಾಥಮಿಕ ಶಿಕ್ಷಣ

ಒಂದು ಪದದಲ್ಲಿ ಅಮೆರಿಕೆಯ ಆರ್ಥಿಕ ಯಶಸ್ಸನ್ನು ವರ್ಣಿಸಲು ಯಾರಾದರೂ ಕೇಳಿದರೆ ನಾನು ಅದನ್ನು 'ಶಿಕ್ಷಣ'ವೆಂದು ಹೇಳುತ್ತೇನೆಂದು ನೊಬೆಲ್ ಪ್ರಶಸ್ತಿ ವಿಜೇತ ಅರ್ಥತಜ್ಞ ಮತ್ತು ಅಂಕಣಗಾರ ಪಾಲ್ ಕ್ರುಗ್‌ಮನ್ ಬರೆದಿದ್ದಾನೆ(ದಿ ಹಿಂದು. 09–10–09). ಖ್ಯಾತ ಆಡಳಿತಗಾರ ಪಿ.ಎಸ್.ಅಪ್ಪು ಪ್ರಕಾರ ಜನರನ್ನು ಒಳಗೊಳ್ಳುವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಇರುವ ಏಕೈಕ ರಾಜಮಾರ್ಗವೆಂದರೆ ಪ್ರಾಥಮಿಕ ಶಿಕ್ಷಣ ಕ್ರಾಂತಿ. ಇವರೆಲ್ಲ ಶಿಕ್ಷಣ ಕ್ರಾಂತಿಯ ಬಗ್ಗೆ ಮಾತನಾಡುತ್ತಿದ್ದಾರೆ. ಬಹು ವಿಷಾದದ ಸಂಗತಿಯೆಂದರೆ ಈ ಬಗ್ಗೆ ನಮ್ಮಲ್ಲಿ ಯಾವ ರಾಜಕಾರಣಿಯೂ ಸೊಲ್ಲೆತ್ತುವುದಿಲ್ಲ. ರಾಯಚೂರು ಜಿಲ್ಲೆಯಲ್ಲಿ ಅದು ಅತ್ಯಂತ ದೈನ್ಯಾವಸ್ಥೆಯಲ್ಲಿದೆ. ಈ ಜಿಲ್ಲೆಯಲ್ಲಿ ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣ ಅಧಿಕ.

ಉದಾಹರಣೆಗೆ 2004–05ರಲ್ಲಿ ಜಿಲ್ಲೆಯಲ್ಲಿ ಏಳನೆಯ ತರಗತಿಯಲ್ಲಿ ಓದುತ್ತಿದ್ದ ಮಕ್ಕಳ ಸಂಖ್ಯೆ 26511. ಮರುವರ್ಷ 2005–06ರಲ್ಲಿ ಎಂಟನೆಯ ತರಗತಿಯಲ್ಲಿ ದಾಖಲಾದ ಮಕ್ಕಳ ಸಂಖ್ಯೆ 18567. ಅಂದರೆ ಇಲ್ಲಿ ಶಾಲಾವಾಹಿನಿಯಿಂದ ಹೊರಗೋದ ಮಕ್ಕಳ ಸಂಖ್ಯೆ 7944. ಇದರ ಪ್ರಮಾಣ ಶೇ 29.96 ರಷ್ಟಾಗುತ್ತದೆ. ರಾಜ್ಯಮಟ್ಟದಲ್ಲಿ ಇದರ ಪ್ರಮಾಣ ಕೇವಲ ಶೆ17.14. ರಾಜ್ಯಮಟ್ಟದಲ್ಲಿ ಪ್ರತಿ ಲಕ್ಷ ಜನಸಂಖ್ಯೆಗೆ ಹತ್ತನೆಯ ತರಗತಿ ಓದುತ್ತಿದ್ದ ಮಕ್ಕಳ ಸಂಖ್ಯೆ 2006 ರಲ್ಲಿ 1071. ಆದರೆ ರಾಯಚೂರು ಜಿಲ್ಲೆಯಲ್ಲಿ 2006ರಲ್ಲಿ ಪ್ರತಿ ಲಕ್ಷ ಜನಸಂಖ್ಯೆಗೆ ಹತ್ತನೆಯ ತರಗತಿ ಕಲಿಯುತ್ತಿದ್ದ ಮಕ್ಕಳ ಸಂಖ್ಯೆ ಕೇವಲ 655. ಈ ಜಿಲ್ಲೆಯು ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬೇಕಾದರೆ ಅಲ್ಲಿ ಮೊದಲು 'ಶಿಕ್ಷಣ ಕ್ರಾಂತಿ' ನಡೆಯಬೇಕು. ಈ ಕ್ರಾಂತಿಯು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿರಬೇಕು.

ದಾಖಲಾತಿಯಲ್ಲಿ ಲಿಂಗ ಪರಿಮಾಣ

ಈಗಾಗಲೆ ತಿಳಿಸಿರುವಂತೆ ರಾಯಚೂರು ಜಿಲ್ಲೆ

[illegible] ಲಿಂಗ ಅಸಮಾನತೆಯ ಪ್ರಮಾಣ ಅಧಿಕ. ಜಿಲ್ಲೆಯು ಅಭಿವೃದ್ಧಿಯಲ್ಲಿ ಹಿಂದುಳಿದಿರುವುದಕ್ಕೂ ಮತ್ತು ಅಲ್ಲಿನ ಲಿಂಗ ಸಂಬಂಧಗಳು ಅಸಮಾನತೆಯಿಂದ ಕೂಡಿರುವುದಕ್ಕೂ ಸಂಬಂಧವಿದೆ. ಉದಾಹರಣೆಗೆ ರಾಜ್ಯಮಟ್ಟದಲ್ಲಿ ಹತ್ತನೆಯ ತರಗತಿಯಲ್ಲಿ ಕಲಿಯುತ್ತಿರುವ ಮಕ್ಕಳಲ್ಲಿ ಬಾಲಕಿಯರ ಪ್ರಮಾಣ ಶೇ 47.78ರಷ್ಟಿದ್ದರೆ ರಾಯಚೂರು ಜಿಲ್ಲೆಯಲ್ಲಿ ಅದರ ಪ್ರಮಾಣ ಶೇ 41.37. ಈ ಬಗೆಯ ಲಿಂಗ ತಾರತಮ್ಯವನ್ನು ಜಿಲ್ಲೆಯ ಎಲ್ಲ ಕ್ಷೇತ್ರದಲ್ಲೂ ಕಾಣಬಹುದು. ಮುಂದೆ ದುಡಿಯುವ ವರ್ಗಕ್ಕೆ ಸಂಬಂಧಿಸಿದಂತೆ ಇದನ್ನು ವಿವರಿಸಲಾಗಿದೆ.

ಆರೋಗ್ಯಭಾಗ್ಯ

ಶಿಕ್ಷಣ, ಸಾಕ್ಷರತೆ ಮತ್ತು ಆರೋಗ್ಯಗಳನ್ನು ಅಭಿವೃದ್ಧಿಯ ಸಾಧನಗಳಾಗಿ ನೋಡಲಾಗುತ್ತದೆ. ವಾಸ್ತವವಾಗಿ ಇವುಗಳಿಗೆ ಎರಡು ಬಗೆಯ ಪಾತ್ರವಿರುತ್ತದೆ. ಆದರೆ ವರಮಾನಕ್ಕೆ ಸಾಧನವಾಗಿ ಮಾತ್ರ ಅಭಿವೃದ್ಧಿಯಲ್ಲಿ ಪಾತ್ರವಿರುತ್ತದೆ. ಆದರೆ ಶಿಕ್ಷಣಕ್ಕೆ, ಸಾಕ್ಷರತೆಗೆ, ಆರೋಗ್ಯಕ್ಕೆ ಅಭಿವೃದ್ಧಿಯಲ್ಲಿ ಅನೇಕ ಬಗೆಯ ಪಾತ್ರಗಳಿರುತ್ತವೆ. ಅವು ಅಭಿವೃದ್ಧಿಯ ಸಾಧನಗಳೂ ಹೌದು. ಅವು ಅಭಿವೃದ್ಧಿಯು ಒಳಗೊಳ್ಳುವ ಸಂಗತಿಗಳೂ ಹೌದು. ಅವು ಅಭಿವೃದ್ಧಿಯನ್ನು ಮೌಲ್ಯಮಾಪನ ಮಾಡುವ ಮಾನದಂಡಗಳೂ ಹೌದು. ಆರೋಗ್ಯಕ್ಕೆ ಸಂಬಂಧಿಸಿದಂತೆ ನಾವು ಮಹಿಳೆಯರ ಮತ್ತು ಮಕ್ಕಳ ಪೌಷ್ಟಿಕತೆ ಮತ್ತು ಸಂತಾನೋತ್ಪತ್ತಿ ಆರೋಗ್ಯ ಹಕ್ಕುಗಳ ಬಗ್ಗೆ ಗಮನ ನೀಡಬೇಕಾಗಿದೆ. ರಾಯಚೂರು ಜಿಲ್ಲೆಯಲ್ಲಿ ಆರೋಗ್ಯದ ದೃಷ್ಟಿಯಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ವರ್ಗವೆಂದರೆ ಮಹಿಳೆಯರು. ಸಂತಾನೋತ್ಪತ್ತಿ ಆರೋಗ್ಯ ಹಕ್ಕುಗಳಿಂದ ಅಲ್ಲಿನ ಮಹಿಳೆಯರು ವಂಚಿತರಾಗಿದ್ದಾರೆ. ಈ ಜಿಲ್ಲೆಯು ಅಭಿವೃದ್ಧಿಯಲ್ಲಿ ಹಿಂದುಳಿದಿರುವುದಕ್ಕೆ ಬಹು ಮುಖ್ಯ ಕಾರಣವಾಗಿರುವ ಸಂಗತಿಯೆಂದರೆ ಸಂತಾನೋತ್ಪತ್ತಿ ಆರೋಗ್ಯದ ನಿರ್ಲಕ್ಷ್ಯ.

ರಾಜ್ಯಮಟ್ಟದಲ್ಲಿ ಜನರ ಜೀವನಾಯುಷ್ಯ 2001–02ರಲ್ಲಿ 65.8 ವರ್ಷಗಳಾದರೆ ರಾಯಚೂರು ಜಿಲ್ಲೆಯಲ್ಲಿ ಅದು 63.9 ವರ್ಷಗಳು. ಮಹಿಳೆಯರ ಜೀವನಾಯುಷ್ಯ ರಾಜ್ಯಮಟ್ಟದಲ್ಲಿ 67 ವರ್ಷಗಳಾದರೆ ರಾಯಚೂರು ಜಿಲ್ಲೆಯಲ್ಲಿ ಅದು 64.9 ವರ್ಷಗಳು. ಸಾಂಸ್ಥಿಕ ಹೆರಿಗೆಗಳ ಪ್ರಮಾಣ 2003–04ರಲ್ಲಿ ರಾಯಚೂರು ಜಿಲ್ಲೆಯಲ್ಲಿ ಶೇ 33.31 ರಷ್ಟಿದೆ. ಈಗ ಇದು ಹೆಚ್ಚಾಗಿರುವ ಸಾಧ್ಯತೆಯಿದೆ. ಆದರೂ ಇಲ್ಲಿ ಆರೋಗ್ಯಕ್ಕೆ ಸಂಬಂಧಿಸಿಂತೆ ಸ್ಥಿತಿಗತಿಯು ಅನುಕೂಲಕರವಾಗಿಲ್ಲ. ಉದಾಹರಣೆಗೆ ಈ ಜಿಲ್ಲೆಯಲ್ಲಿ ಪ್ರತಿ 40000 ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದರೆ ರಾಜ್ಯದ ಅತ್ಯಂತ ಮುಂದುವರಿದ ಉಡುಪಿ ಜಿಲ್ಲೆಯಲ್ಲಿ ಪ್ರತಿ 18620 ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ (2006ರ ಜನಸಂಖ್ಯೆಯನ್ನು ಆಧರಿಸಿ).

ಅಂದರೆ ಸರ್ಕಾರವು ಇಲ್ಲಿ ಪ್ರಾದೇಶಿಕ ಅಸಮತೋಲನವನ್ನು ಗಮನಿಸಿ ಆರೋಗ್ಯ ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ಆರೋಗ್ಯದ ದೃಷ್ಟಿಯಿಂದ ಅತ್ಯಂತ ದುಸ್ಥಿತಿಯಲ್ಲಿರುವ ರಾಯಚೂರು ಜಿಲ್ಲೆಯಲ್ಲಿ ಆರೋಗ್ಯ ಮೂಲಭೂತ ಸೌಲಭ್ಯಗಳು ಅಧಿಕವಿರಬೇಕು. ಆದರೆ ಇದಕ್ಕೆ ಪ್ರತಿಯಾಗಿ ರಾಜ್ಯದ ಮುಂದುವರಿದ ಉಡುಪಿ ಜಿಲ್ಲೆಯಲ್ಲಿನ ಆರೋಗ್ಯ ಮೂಲಭೂತ ಸೌಲಭ್ಯದ ಸ್ಥಿತಿಯು ರಾಯಚೂರಿಗಿಂತ ಉತ್ತಮವಾಗಿದೆ. ಪ್ರಾದೇಶಿಕ ಅಸಮತೋಲನವನ್ನು ನಿವಾರಿಸು ದೃಷ್ಟಿಯಿಂದ ಇದು ಅನುಕೂಲಕರ ಸ್ಥಿತಿಯೇನಲ್ಲ.

ಜನಸಂಖ್ಯಾ ಆಸ್ಫೋಟ!

ಈಗಾಗಲೆ ನಮಗೆಲ್ಲ ತಿಳಿದಿರುವಂತೆ ನಮ್ಮ ಮುಖ್ಯಮಂತ್ರಿಯವರು ತಮ್ಮ ಚೀನಾ ಯಾತ್ರೆ ಮುಗಿಸಿ ಬಂದ ಮೇಲೆ ನಮ್ಮ ರಾಜ್ಯದ ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಲು 'ಎರಡು ಮಕ್ಕಳು' ನಿಯಮವನ್ನು ಅನುಸರಿಸಬೇಕೆಂದು ಅಪ್ಪಣೆ ಕೊಡಿಸಿದಾಗ ತೀವ್ರ ಟೀಕೆಯನ್ನು ಎದುರಿಸಿದರು. ಈ ಟೀಕೆಯು ಸಮರ್ಥನೀಯವಾಗಿತ್ತು. ಏಕೆಂದರೆ ನಮ್ಮ ರಾಜ್ಯದಲ್ಲಿ ನಾವೀಗಾಗಲೆ ಜನಸಂಖ್ಯೆಯ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವುದರಲ್ಲಿ ಯಶಸ್ವಿಯಾಗಿದ್ದೇವೆ. ನಮ್ಮ ರಾಜ್ಯದಲ್ಲಿನ 1991–2001ರ ದಶಕದಲ್ಲಿ ವಾರ್ಷಿಕ ಜನಸಂಖ್ಯಾ ಬೆಳವಣಿಗೆ ಪ್ರಮಾಣ ಶೇ. 1.75 ಮಾತ್ರ. ಈ ಪ್ರಮಾಣ ಇಂದು ಇನ್ನೂ ಕಡಿಮೆಯಾಗಿರುವ ಸಾಧ್ಯತೆಯಿದೆ. ರಾಜ್ಯದ 15 ಜಿಲ್ಲೆಗಳಲ್ಲಿ ಜನಸಂಖ್ಯೆ ಬೆಳವಣಿಗೆ ಪ್ರಮಾಣವು ಶೇ1ಕ್ಕಿಂತ ಕಡಿಮೆಯಾಗಿದೆ. ಆದರೆ ಈ ಸಮಸ್ಯೆಯ ಬಗ್ಗೆ ನಾವು ಸ್ವಲ್ಪ ಎಚ್ಚರಿಕೆಯಿಂದ ಯೋಚಿಸಬೇಕಾಗುತ್ತದೆ. ನಾವು ರಾಜ್ಯಮಟ್ಟದಲ್ಲಿ ಸಮಸ್ಯೆಯನ್ನು ನಾವು ನಿಯಂತ್ರಿಸುವುದರಲ್ಲಿ ಸಫಲರಾಗಿದ್ದೇವೆ, ನಿಜ. ಆದರೆ ನಮ್ಮ ಹಿಂದುಳಿದ ಜಿಲ್ಲೆಗಳಲ್ಲಿ ಅದು ನಿಜಕ್ಕೂ ಸಮಸ್ಯೆಯಾಗಿದೆ. ಇದಕ್ಕೆ ರಾಯಚೂರು ಜಿಲ್ಲೆಯೇ ನಿದರ್ಶನವಾಗಿದೆ. ಈ ಜಿಲ್ಲೆಯಲ್ಲಿ 1991–2001ರ ದಶಕದಲ್ಲಿನ ವಾರ್ಷಿಕ ಜನಸಂಖ್ಯಾ ಬೆಳವಣಿಗೆ ಪ್ರಮಾಣ ಶೇ 2.35. ಇದು ರಾಜ್ಯದಲ್ಲಿನ 27 ಜಿಲ್ಲೆಗಳ ಪೈಕಿ ಎರಡನೆಯ ಅತಿ ಹೆಚ್ಚಿನ ಪ್ರಮಾಣವಾಗಿದೆ.

ಮೊದಲನೆಯ ಸ್ಥಾನವನ್ನು ಕೊಪ್ಪಳ ಜಿಲ್ಲೆಯು ಪಡೆದುಕೊಂಡಿದೆ. ಅಲ್ಲಿ ಜನಸಂಖ್ಯಾ ಬೆಳವಣಿಗೆಯ ವಾರ್ಷಿಕ ಪ್ರಮಾಣ ಶೇ 2.48(ಬೆಂಗಳೂರು ನಗರ ಜಿಲ್ಲೆ ಇದಕ್ಕೆ ಅಪವಾದ). ಈ ಜಿಲ್ಲೆಯಲ್ಲಿನ ಜನಸಂಖ್ಯಾ ಸಮಸ್ಯೆಯ ಮತ್ತೊಂದು ಸೂಚಿಯೆಂದರೆ ಇಲ್ಲಿ ಜನಸಂಖ್ಯೆಯಲ್ಲಿನ 0–6 ವಯೋಮಾನದ ಮಕ್ಕಳ ಪ್ರಮಾಣ. ನಮ್ಮ ರಾಜ್ಯದಲ್ಲಿ 2001ರಲ್ಲಿ ಒಟ್ಟು ಜನಸಂಖ್ಯೆಯಲ್ಲಿ 0–6 ವಯೋಮಾನದ ಮಕ್ಕಳ ಪ್ರಮಾಣ ಶೇ 16.95. ಆದರೆ ರಾಜ್ಯಮಟ್ಟದಲ್ಲಿ ಅದರ ಪ್ರಮಾಣ ಕೇವಲ ಶೇ 13.58. ರಾಯಚೂರು ಜಿಲ್ಲೆಯ ಜನಸಂಖ್ಯೆಯು ಇನ್ನೂ ಹೆಚ್ಚು 'ಎಳೆತನ'ದಿಂದ ಕೂಡಿದ್ದರೆ ರಾಜ್ಯಮಟ್ಟದಲ್ಲಿ ಅದು ಎಳೆತನದಿಂದ ದೂರವಾಗುತ್ತಿದೆ. ರಾಜ್ಯದ ಅತ್ಯಂತ ಮುಂದುವರಿದ ಉಡುಪಿ ಜಿಲ್ಲೆಯಲ್ಲಿ 0–6 ವಯೋಮಾನದ ಮಕ್ಕಳ ಪ್ರಮಾಣ 2001ರಲ್ಲಿ ಕೇವಲ ಶೇ 10.30. ದ.ಕ.ಜಿಲ್ಲೆಯಲ್ಲಿ ಅದರ ಪ್ರಮಾಣ ಶೇ 12.01. ಹೀಗೆ ಜನಸಂಖ್ಯೆಯಲ್ಲಿನ 0–6 ವಯೋಮಾನದ ಮಕ್ಕಳ ಪ್ರಮಾಣವನ್ನು ಜನಸಂಖ್ಯೆಯ ಒತ್ತಡದ ಮಾಪನವಾಗಿ ಬಳಸಬಹುದಾಗಿದೆ.

ಶಿಕ್ಷಣ, ಸಾಕ್ಷರತೆ ಮತ್ತು ಆರೋಗ್ಯಗಳನ್ನು ಅಭಿವೃದ್ಧಿಯ ಸಾಧನಗಳಾಗಿ ನೋಡಲಾಗುತ್ತದೆ. ವಾಸ್ತವವಾಗಿ ಇವುಗಳಿಗೆ ಎರಡು ಬಗೆಯ ಪಾತ್ರವಿರುತ್ತದೆ. ಆದರೆ ವರಮಾನಕ್ಕೆ ಸಾಧನವಾಗಿ ಮಾತ್ರ ಅಭಿವೃದ್ಧಿಯಲ್ಲಿ ಪಾತ್ರವಿರುತ್ತದೆ. ಆದರೆ ಶಿಕ್ಷಣಕ್ಕೆ, ಸಾಕ್ಷರತೆಗೆ, ಆರೋಗ್ಯಕ್ಕೆ ಅಭಿವೃದ್ಧಿಯಲ್ಲಿ ಅನೇಕ ಬಗೆಯ ಪಾತ್ರಗಳಿರುತ್ತವೆ. ಅವು ಅಭಿವೃದ್ಧಿಯ ಸಾಧನಗಳೂ ಹೌದು. ಅವು ಅಭಿವೃದ್ಧಿಯು ಒಳಗೊಳ್ಳುವ ಸಂಗತಿಗಳೂ ಹೌದು. ಅವು ಅಭಿವೃದ್ಧಿಯನ್ನು ಮೌಲ್ಯಮಾಪನ ಮಾಡುವ ಮಾನದಂಡಗಳೂ ಹೌದು.

ರಾಯಚೂರು ಜಿಲ್ಲೆಯು ಜನಸಂಖ್ಯೆಯ ಬೆಳವಣಿಗೆಯನ್ನು ನಿಯಂತ್ರಿಸುವಲ್ಲಿ ವಿಫಲವಾಗಿದೆ. ಈ ವೈಫಲ್ಯಕ್ಕೂ ಮತ್ತು ಜಿಲ್ಲೆಯು ಅಭಿವೃದ್ಧಿಯಲ್ಲಿ ಹಿಂದುಳಿದಿರುವುದಕ್ಕೂ ಸಂಬಂಧವಿದೆ. ರಾಯಚೂರು ಜಿಲ್ಲೆಯಲ್ಲಿರುವ ಜನಸಂಖ್ಯಾ ಬೆಳವಣಿಗೆಯ ಅಧಿಕ ಪ್ರಮಾಣವು ವಾಸ್ತವವಾಗಿ ಜನಸಂಖ್ಯೆಯ ಸಮಸ್ಯೆಯನ್ನು ತೋರಿಸುವುದಕ್ಕೆ ಪ್ರತಿಯಾಗಿ ಅದು ಅಭಿವೃದ್ಧಿಯ ಸಮಸ್ಯೆಯನ್ನು ಸೂಚಿಸುತ್ತಿದೆ. ಇದನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಅದು ಬಿಟ್ಟು ಎರಡು ಮಕ್ಕಳ ನಿಯಮವನ್ನು ಜಾರಿಗೆ ತರಬೇಕೆಂದು ಅರಿಚಾಡುವುದು ಸರಿಯಾದ ಕ್ರಮವಾಗುವುದಿಲ್ಲ. ಇದು ಅಭಿವೃದ್ಧಿಯ ಪ್ರಶ್ನೆ. ಇಂದು ಕರ್ನಾಟಕವು ರಾಜ್ಯಮಟ್ಟದಲ್ಲಿ ಜನಸಂಖ್ಯಾ ಬೆಳವಣಿಗೆಯನ್ನು ತಡೆಗಟ್ಟಿದ್ದರೆ ಅದು ಅದನ್ನು ಉನ್ನತವಾದ ಮತ್ತು ಸಾಮಾಜಿಕವಾದ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದರ ಮೂಲಕ ತಡೆಗಟ್ಟಿದೆ. ಸರ್ಕಾರವು ರಾಯಚೂರಿನಲ್ಲಿನ ಜನಸಂಖ್ಯಾ ಸಮಸ್ಯೆಯನ್ನು ಅಭಿವೃದ್ಧಿಯ ನೆಲೆಯಿಂದ ಎದುರಿಸುವ ಕ್ರಮ ತೆಗೆದುಕೊಳ್ಳಬೇಕು.

ಸರ್ಕಾರವು ಅಖಂಡವಾದಿ ಅಭಿವೃದ್ಧಿ ನೀತಿಯನ್ನು ಕೈಬಿಟ್ಟು ಪ್ರದೇಶ ನಿರ್ದಿಷ್ಟವಾದ ಅಭಿವೃದ್ಧಿ ನೀತಿಯನ್ನು ಅಳವಡಿಸಿಕೊಳ್ಳಬೇಕು. ಆಗ ಮಾತ್ರ ರಾಜ್ಯದ ಹಿಂದುಳಿದಿರುವ ಜಿಲ್ಲೆಗಳಲ್ಲಿನ ಜನಸಂಖ್ಯಾ ಸಮಸ್ಯೆಯನ್ನು ಸರಿಯಾಗಿ ನಿಭಾಯಿಸಬಹುದು. ರಾಯಚೂರು ಜಿಲ್ಲೆಯಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ35.93 ರಷ್ಟಿರುವುದಕ್ಕೂ ಮತ್ತು ಅಲ್ಲಿ ಜನಸಂಖ್ಯೆಯ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ 2.35 ರಷ್ಟಿರುವುದಕ್ಕೂ ನಡುವೆ ಅವಲಂಬಿ ಬಿಂಬಕ ಸಂಬಂಧವಿದೆ.

ಈ ಜಿಲ್ಲೆಯಲ್ಲಿನ ಜನಸಂಖ್ಯಾ ಸಮಸ್ಯೆಗೆ ಇರುವ ಉತ್ತರವೆಂದರೆ ಜಿಲ್ಲೆಯಲ್ಲಿನ ಒಟ್ಟು ಸಾಕ್ಷರತೆಯನ್ನು, ಅದರಲ್ಲೂ ಮಹಿಳೆಯರ ಸಾಕ್ಷರತೆಯನ್ನು ಉತ್ತಮ ಪಡಿಸುವುದಕ್ಕೆ ತೀವ್ರ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ಜಿಲ್ಲೆಯಲ್ಲಿನ 2001ರಲ್ಲಿನ ಅನಕ್ಷರಸ್ಥರ ಸಂಖ್ಯೆ 7.09 ಲಕ್ಷ. ಇಲ್ಲಿನ ಅಕ್ಷರಸ್ಥರ ಸಂಖ್ಯೆ 6.76 ಲಕ್ಷ. ಅಂದರೆ ಈ ಜಿಲ್ಲೆಯಲ್ಲಿ ಅಕ್ಷರಸ್ಥರ ಸಂಖ್ಯೆಗಿಂತ ಅನಕ್ಷರಸ್ಥರ ಸಂಖ್ಯೆಯು ಅಧಿಕವಾಗಿದೆ. ಇದು ಅಭಿವೃದ್ಧಿಯ ದೃಷ್ಟಿಯಿಂದ ಸ್ವಾಗತಾರ್ಹ ಸಂಗತಿಯೇನಲ್ಲ. ಈ ಜಿಲ್ಲೆಯಲ್ಲಿನ ಒಟ್ಟು ಅಕ್ಷರಸ್ಥರಲ್ಲಿ ಮಹಿಳೆಯರ ಪ್ರಮಾಣ ಶೇ 36.56ರಷ್ಟಿದ್ದರೆ ಅನಕ್ಷರಸ್ಥರಲ್ಲಿ ಮಹಿಳೆಯರ ಪ್ರಮಾಣ ಶೇ 62.18. ಈಗ ಸಮಸ್ಯೆ ಎಲ್ಲಿದೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಅಕ್ಷರಸ್ಥರಿಗಿಂತ ಅನಕ್ಷರಸ್ಥರು ಅಧಿಕವಿರುವ ರಾಜ್ಯದಲ್ಲಿನ ಜಿಲ್ಲೆಯೆಂದರೆ ರಾಯಚೂರು. ಈ ಬಗೆಯ ಅನಿಷ್ಟದಿಂದ ಈ ಜಿಲ್ಲೆಯು ಹೊರಬರಬೇಕಾಗಿದೆ. ಈ ಜಿಲ್ಲೆಯ ಅಭಿವೃದ್ಧಿ–ದುಸ್ಥಿತಿಯ ವ್ಯಥೆಯನ್ನು ಮಾನವ ಅಭಿವೃದ್ಧಿ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವ ಅಗತ್ಯವಿದೆ.

ದುಡಿಮೆಗಾರ ವರ್ಗ

ಇಂದು ಒಂದು ಪ್ರದೇಶದ/ದೇಶದ ಅಭಿವೃದ್ಧಿ

ಯನ್ನು ಸಾಮಾಜಿಕವಾಗಿ ಅನಾವರಣಗೊಳಿಸುವ ಸಂಗತಿಯೆಂದರೆ ಅಲ್ಲಿನ ದುಡಿಮೆಗಾರ ವರ್ಗದ ಸ್ವರೂಪ. ರಾಯಚೂರು ಜಿಲ್ಲೆಯಲ್ಲಿನ ಒಟ್ಟು ದುಡಿಮೆಗಾರ ವರ್ಗದ ಗಾತ್ರ 7.32 ಲಕ್ಷ. ಇವರಲ್ಲಿ ಮಹಿಳಾ ದುಡಿಮೆಗಾರರ ಪ್ರಮಾಣ ಶೇ 39.23(2.87 ಲಕ್ಷ). ಆದರೆ ರಾಜ್ಯಮಟ್ಟದಲ್ಲಿ ಅವರ ಪ್ರಮಾಣ ಕೇವಲ ಶೇ 35.26. ಅಂದರೆ ರಾಯಚೂರು ಜಿಲ್ಲೆಯಲ್ಲಿ ದುಡಿಮೆಯ ಹೊರೆಯು ಹೆಚ್ಚು ಮಹಿಳೆಯರ ಮೇಲೆ ಬೀಳುತ್ತಿದೆ.

ನಮ್ಮ ರಾಜ್ಯದಲ್ಲಿನ ಅತ್ಯಂತ ಮುಂದುವರಿದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯೂ ಒಟ್ಟು ದುಡಿಮೆಗಾರರಲ್ಲಿ ಮಹಿಳೆಯರ ಪ್ರಮಾಣ ಕ್ರಮವಾಗಿ ಶೇ 41.01 ಮತ್ತು ಶೇ 42.26 ರಷ್ಟಿದೆ. ಈ ಕಾರಣದ ಮೇಲೆ ರಾಯಚೂರಿನ ಸ್ಥಿತಿಯನ್ನು ಉಡುಪಿ ಅಥವಾ ದಕ್ಷಿಣ ಕನ್ನಡ ಜಿಲ್ಲೆಗಳೊಂದಿಗೆ ಹೋಲಿಸಲು ಸಾಧ್ಯವಿಲ್ಲ. ಏಕೆಂದರೆ ರಾಯಚೂರಿನ ಮಹಿಳಾ ದುಡಿಮೆಗಾರರಲ್ಲಿ ಮಹಿಳಾ ದಿನಗೂಲಿಗಳ ಪ್ರಮಾಣ ಅಧಿಕ. ಆದರೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಹಿಳಾ ದುಡಿಮೆಗಾರರಲ್ಲಿ ಮಹಿಳಾ ದಿನಗೂಲಿಗಳ ಪ್ರಮಾಣ ಕಡಿಮೆ.

ರಾಯಚೂರಿನಲ್ಲಿನ ಒಟ್ಟು ಮಹಿಳಾ ದುಡಿಮೆಗಾರರಲ್ಲಿ(2.87 ಲಕ್ಷ) ಮಹಿಳಾ ದಿನಗೂಲಿಗಳ(2.03 ಲಕ್ಷ) ಪ್ರಮಾಣ ಶೇ 70.66. ಆದರೆ ಉಡುಪಿ ಜಿಲ್ಲೆಯಲ್ಲಿ ಅವರ ಪ್ರಮಾಣ ಶೇ.25.2 ರಷ್ಟಾದರೆ ದಕ್ಷಣ ಕನ್ನಡ ಜಿಲ್ಲೆಯಲ್ಲಿ ಅವರ ಪ್ರಮಾಣ ಕೇವಲ ಶೇ.3.63. ದುಡಿಮೆಯು ಮಹಿಳೆಯರಿಗೆ ಸಂಬಂಧಿಸಿದಂತೆ ಉಡುಪಿ ಮತ್ತು ದ.ಕ. ಜಿಲ್ಲೆಗಳಲ್ಲಿ ಸಂಘಟಿತ ಸ್ವರೂಪದಲ್ಲಿದ್ದರೆ ಹಿಂದುಳಿದ ರಾಯಚೂರು ಜಿಲ್ಲೆಯಲ್ಲಿ ಅದು ಅಸಂಘಟಿತ ಸ್ವರೂಪದಲ್ಲಿದೆ. ರಾಯಚೂರು ಜಿಲ್ಲೆಯಲ್ಲಿನ ಒಟ್ಟು ದುಡಿಮೆಗಾರರಲ್ಲಿ ಕೃಷಿ ಅವಲಂಬಿತರ ಪ್ರಮಾಣ ಶೇ 73.03. ಆದರೆ ಉಡುಪಿ ಜಿಲ್ಲೆಯಲ್ಲಿ ಅವರ ಪ್ರಮಾಣ ಶೇ 37.90ರಷ್ಟಾದರೆ ದ.ಕ.ಜಿಲ್ಲೆಯಲ್ಲಿ ಅದರ ಪ್ರಮಾಣ ಕೇವಲ ಶೇ.9.85.

ಈ ಬಗೆಯ ದುಡಿಮೆಗಾರರ ಸ್ವರೂಪದ ಆಧಾರದ ಮೇಲೆ ಜಿಲ್ಲೆಗಳ ಆರ್ಥಿಕ ಮತ್ತು ಸಾಮಾಜಿಕ ನೆಲೆಗಳನ್ನು ಅರಿತುಕೊಳ್ಳಬಹುದು. ಒಟ್ಟು ದುಡಿಮೆಗಾರರಲ್ಲಿನ ಕೃಷಿ ಅವಲಂಬನೆ ಮತ್ತು ಮಹಿಳಾ ದುಡಿಮೆಗಾರರ ದುಡಿಮೆ ಸ್ವರೂಪದ ಆಧಾರದ ಮೇಲೆ ರಾಯಚೂರು ಜಿಲ್ಲೆಯು ಅಭಿವೃದ್ಧಿಯ ದೃಷ್ಟಿಯಿಂದ ಹಿಂದುಳಿದಿರುವುದನ್ನು ಮತ್ತು ಉಡುಪಿ ಹಾಗೂ ದ.ಕ.ಜಿಲ್ಲೆಗಳು ಮುಂದುವರಿದಿರುವುದನ್ನೂ ಸಾಧಿಸಿ ತೋರಿಸಬಹುದು. ಒಂದು ಪ್ರದೇಶದ ಅಭಿವೃದ್ಧಿಯನ್ನು ಕೇವಲ ವರಮಾನದ ಆಧಾರದ ಮೇಲೆ ನಿರ್ಧರಿಸುವ ಅಗತ್ಯವಿಲ್ಲ. ಜನರನ್ನು, ಅವರ ಅಕ್ಷರ ಸಂಸ್ಕೃತಿಯನ್ನು, ಅವರ ದುಡಿಮೆಯ ನೆಲೆಗಳನ್ನು, ಲಿಂಗ ಸಂಬಂಧಿ ಸ್ವರೂಪವನ್ನು, ಆರೋಗ್ಯ ಸೂಚಿಗಳನ್ನು ಆಧಾರವಾಗಿಟ್ಟುಕೊಂಡು ಅಬಿವೃದ್ಧಿಯ ಮೌಲ್ಯಮಾಪನ ಮಾಡಬಹುದಾಗಿದೆ.

ಅಮರ್ತ್ಯಸೆನ್ ಹೇಳುವ 'ಧಾರಣಾ ಸಾಮರ್ಥ್ಯ'ದ ದೃಷ್ಟಿಯಿಂದ ರಾಯಚೂರು ಜಿಲ್ಲೆಯು ಅತ್ಯಂತ ಕೆಳಮಟ್ಟದಲ್ಲಿದ್ದರೆ ಉಡುಪಿ ಮತ್ತು ದ.ಕ.ಜಿಲ್ಲೆಗಳು ಉನ್ನತ ಮಟ್ಟದಲ್ಲಿವೆ. ಇಲ್ಲಿ ರಾಯಚೂರು ಜಿಲ್ಲೆಯ ಅಭಿವೃದ್ಧಿಯ ವ್ಯಥೆಯನ್ನು ಚರ್ಚಿಸುವುದರ ಮೂಲಕ ನಮ್ಮ ರಾಜ್ಯದಲ್ಲಿನ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮತೋಲನದ ಸ್ವರೂಪವನ್ನು ತೋರಿಸಲು ಪ್ರಯತ್ನಿಸಿದ್ದೇನೆ.

ಸರ್ಕಾರವು ಅಖಂಡವಾದಿ ಅಭಿವೃದ್ಧಿ ನೀತಿಯನ್ನು ಕೈಬಿಟ್ಟು ಪ್ರದೇಶ ನಿರ್ದಿಷ್ಟವಾದ ಅಭಿವೃದ್ಧಿ ನೀತಿಯನ್ನು ಅಳವಡಿಸಿಕೊಳ್ಳಬೇಕು. ಆಗ ಮಾತ್ರ ರಾಜ್ಯದ ಹಿಂದುಳಿದಿರುವ ಜಿಲ್ಲೆಗಳಲ್ಲಿನ ಜನಸಂಖ್ಯಾ ಸಮಸ್ಯೆಯನ್ನು ಸರಿಯಾಗಿ ನಿಭಾಯಿಸಬಹುದು. ರಾಯಚೂರು ಜಿಲ್ಲೆಯಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ35.93 ರಷ್ಟಿರುವುದಕ್ಕೂ ಮತ್ತು ಅಲ್ಲಿ ಜನಸಂಖ್ಯೆಯ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ. 2.35 ರಷ್ಟಿರುವುದಕ್ಕೂ ನಡುವೆ ಅವಲಂಬಿ ಬಿಂಬಕ ಸಂಬಂಧವಿದೆ.

ಡಾ. ಡಿ. ಎಂ. ನಂಜುಂಡಪ್ಪ ಸಮಿತಿ ವರದಿ

ನಮ್ಮ ರಾಜ್ಯದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ಸ್ವರೂಪವನ್ನು ಅಧ್ಯಯನ ಮಾಡಿ ಅದರ ನಿವಾರಣೆಗೆ ಪರಿಹಾರ ರೂಪಿಸಿ ಕೊಡಲು ಸರ್ಕಾರವು 2000ದಲ್ಲಿ ಡಾ.ಡಿ.ಎಂ. ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ ಒಂದು ಉನ್ನತಾಧಿಕಾರ ಸಮಿತಿಯನ್ನು ನೇಮಿಸಿತು. ಸಮಿತಿಯು 2002ರಲ್ಲಿ ತನ್ನ ಬೃಹತ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಅದರ ಪ್ರಕಾರ ರಾಯಚೂರು ಜಿಲ್ಲೆಯ ಐದು ತಾಲ್ಲೂಕುಗಳು ಹಿಂದುಳಿದ ಸ್ಥಿತಿಯಲ್ಲಿವೆಯೆಂದು ದೃಢಪಟ್ಟಿತು. ರಾಜ್ಯದ 175 ತಾಲ್ಲೂಕುಗಳ ಪೈಕಿ ಅತ್ಯಂತ ಹಿಂದುಳಿದ ಮತ್ತು ಕಟ್ಟಕಡೆಯ ತಾಲ್ಲೂಕೆಂದರೆ ದೇವದುರ್ಗವೆಂದು ಸಮಿತಿ ತನ್ನ ವರದಿಯಲ್ಲಿ ತಿಳಿಸಿತು. ಈ ಜಿಲ್ಲೆಯ ಐದು ತಾಲ್ಲೂಗಳ ಒಟ್ಟು ಸಂಚಯಿತ ದುಸ್ಥಿತಿ ಸೂಚ್ಯಂಕ 1.50. ಇಡೀ ರಾಜ್ಯದ ದುಸ್ಥಿತಿ ಸೂಚ್ಯಂಕದಲ್ಲಿ (20.26) ರಾಯಚೂರು ಜಿಲ್ಲೆಯ ಪಾಲು ಶೇ 7.40 [(1.50/20.26x100) = ಶೇ7.40)].

ದೇವದುರ್ಗ ತಾಲ್ಲೂಕಿನ ಸಂಯುಕ್ತ ಸಮಗ್ರಅಭಿವೃದ್ಧಿ ಸೂಚ್ಯಂಕ 0.53. ಅದರ ದುಸ್ಥಿತಿಸೂಚ್ಯಂಕ 0.47.

ಲಿಂಗಸೂಗೂರು ತಾಲ್ಲೂಕಿನ ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕ 0. 63. ಅದರ ದುಸ್ಥಿತಿ ಸೂಚ್ಯಂಕ 0.37

ಮಾನ್ವಿ ತಾಲ್ಲೂಕಿನ ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕ 0.69. ಅದರ ದುಸ್ಥಿತಿ ಸೂಚ್ಯಂಕ 0.31

ಸಿಂದನೂರು ತಾಲ್ಲೂಕಿನ ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕ 0.78. ಅದರ ದುಸ್ಥಿತಿ ಸೂಚ್ಯಂಕ 0.22

ರಾಯಚೂರು ತಾಲ್ಲೂಕಿನ ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕ 0.0.87. ಅದರ ದುಸ್ಥಿತಿ ಸೂಚ್ಯಂಕ 0.13.

ಸಮಿತಿಯು ರಾಯಚೂರು ಜಿಲ್ಲೆಯ ದುಸ್ಥಿತಿಯನ್ನು ಇನ್ನಿಲ್ಲದಂತೆ ತೋರಿಸಿಕೊಟ್ಟಿದೆ.

ಇದಕ್ಕೆ ಪರಿಹಾರವೇನು ?

ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯಲ್ಲಿ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಎಂಟು ವರ್ಷಗಳ ರೂ16000 ಕೋಟಿ ಮೊತ್ತದ ಒಂದು ವಿಶೇಷ ಅಭಿವೃದ್ಧಿ ಯೋಜನೆಯನ್ನು ಶಿಫಾರಸ್ಸು ಮಾಡಿತು. ಈ ಶಿಫಾರಸ್ಸನ್ನು ಸರ್ಕಾರವು 2007-08ರಲ್ಲಿ ಒಪ್ಪಿಕೊಂಡು ಅನುಷ್ಠಾನಗೊಳಿಸಿತು. ಅದು ಅನುಷ್ಠಾನಗೊಂಡು ಮೂರು ವರ್ಷವಾಯಿತು. ಈ ಅವಧಿಯಲ್ಲಿ ಸಮಿತಿಯ ಸೂತ್ರದ ಪ್ರಕಾರ ರಾಯಚೂರು ಜಿಲ್ಲೆಗೆ ಬರಬೇಕಾಗಿದ್ದ ಅನುದಾನ ಹೀಗಿದೆ.

2007-08ರಲ್ಲಿನ ಒಟ್ಟು ಮೊತ್ತ ರೂ.1571ಕೋಟಿ. ಅದರಲ್ಲಿ ರಾಯಚೂರು ಜಿಲ್ಲೆಯ ಪಾಲು ರೂ.116.25 ಕೋಟಿ.

2008-09ರಲ್ಲಿನ ಒಟ್ಟು ಮೊತ್ತ. ರೂ.2547 ಕೋಟಿ. ಅದರಲ್ಲಿ ಜಿಲ್ಲೆಯ ಪಾಲು ರೂ.188.47ಕೋಟಿ.

2009-10ರಲ್ಲಿನ ಒಟ್ಟು ಮೊತ್ತ ರೂ.2574ಕೋಟಿ. ಅದರಲ್ಲಿ ರಾಯಚೂರು ಜಿಲ್ಲೆಯ ಪಾಲು ರೂ 190.47 ಕೋಟಿ.

ಮೂರು ವರ್ಷಗಳಲ್ಲಿ ರಾಯಚೂರು ಜಿಲ್ಲೆಗೆ ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿ ಶಿಫಾರಸ್ಸಿನ ಪ್ರಕಾರ ಬರಬೇಕಾಗಿದ್ದ ಅನುದಾನ ರೂ 495.19 ಕೋಟಿ.

ವರದಿಯ ವ್ಯಥೆ

ಕಳೆದ ಮೂರು ವರ್ಷಗಳಲ್ಲಿ(2007-08 ರಿಂದ 2009-10) ರಾಯಚೂರು ಜಿಲ್ಲೆಗೆ ಡಾ.ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯ ವಿಶೇಷ ಅಭಿವೃದ್ಧಿ ಯೋಜನೆ ಪ್ರಕಾರ ಬರಬೇಕಾಗಿದ್ದ ರೂ 495.19 ಕೋಟಿ ಅನುದಾನ ಬಂದಿದೆಯೇ?. ಉತ್ತರ ಇಲ್ಲ. ಹೇಳೋದು ಮಾತ್ರ ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯ ಶಿಫಾರಸ್ಸು. ಆದರೆ ವಾಸ್ತವದಲ್ಲಿ ಅದನ್ನು ಶಿಸ್ತು ಬದ್ಧವಾಗಿ ಅನುಷ್ಠಾನಗೊಳಿಸುತ್ತಿಲ್ಲ. ಅದರಲ್ಲಿನ ಸೂತ್ರಗಳನ್ನು ಸರ್ಕಾರವು ಗಾಳಿಗೆ ತೂರಿಬಿಟ್ಟಿದೆ. ಸಮಿತಿಯ ಪ್ರಕಾರ ಅನುದಾನ ತಾಲ್ಲೂಕುಗಳಿಗೆ ಸಂದಾಯವಾಗಬೇಕು. ಆದರೆ ಈಗ ಸರ್ಕಾರವು ಅನುದಾನವನ್ನು ರಾಜ್ಯಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ವಿನಿಯೋಗಿಸುತ್ತಿದೆ. ಈ ವಿಶೇಷ ಅಭಿವೃದ್ಧಿ ಯೋಜನೆಯನ್ನು ಸರ್ಕಾರವು ತನಗೆ ಇಷ್ಟ ಬಂದ ರೀತಿಯಲ್ಲಿ ಅನುಷ್ಠಾನಗೊಳಿಸುತ್ತಿದೆ. ಈ ಪರಿಯಲ್ಲಿ ಸಮಿತಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸಿದರೆ ಎಂಟು ವರ್ಷಗಳ ಅವಧಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವುದು ಅಸಾಧ್ಯ. ರಾಯಚೂರು ಜಿಲ್ಲೆಯ ದುಸ್ಥಿತಿಯ ವ್ಯಥೆಯನ್ನು ಸಮೃದ್ಧಿಯ-ಸುಸ್ಥಿತಿಯ ಗಾಥೆಯಾಗಿ ಪರಿವರ್ತಿಸುವುದು ಕಷ್ಟಸಾಧ್ಯ. ಈ ಜಿಲ್ಲೆಯ ಅಭಿವೃದ್ಧಿಯು ಬರೀ ವ್ಯಥೆಯೆಂದು ಹೇಳಿದ್ದೇನೆ. ಈಗ ಇಲ್ಲಿನ ಡಾ.ಡಿ. ಎಂ.ನಂಜುಂಡಪ್ಪ ಸಮಿತಿ ವರದಿಯ ಕಥೆಯೂ ವ್ಯಥೆಯಾಗುತ್ತಿರುವುದು ಆತಂಕಕಾರಿಯಾಗಿದೆ.

ಅಭಿವೃದ್ಧಿಯನ್ನು ಜನರ ನೆಲೆಯಿಂದ ಪರಿಭಾವಿಸಿಕೊಳ್ಳುವ ಅಗತ್ಯವಿದೆ. ಜನರು ನಮ್ಮ ಸಮಾಜದ ಸಂಪತ್ತೆ ವಿನಾ ಪರಮಾಣು ಬಾಂಬುಗಳಲ್ಲ ಅಥವಾ ಥಳಥಳ ಹೊಳೆಯುವ ರಸ್ತೆಗಳಲ್ಲ. ಬಿಪಿಒಗಳಲ್ಲ ಅಥವಾ ಎಸ್ಈಜಡ್‌ಗಳಲ್ಲ. ಸಮಾಜದ ಶೇ50ರಷ್ಟು ಮಹಿಳೆಯರನ್ನು ಅಲಾಯದ ಮಾಡಿ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು ಅಸಾಧ್ಯ. ಅಭಿವೃದ್ಧಿಯು ಮಹಿಳೆಯರಿಗೆ, ಪರಿಶಿಷ್ಟರಿಗೆ, ದಿನಗೂಲಿಗಳಿಗೆ, ವಂಚಿತರಿಗೆ ಅರ್ಥ ಪೂರ್ಣವಾಗಿರಬೇಕು. ರಾಯಚೂರು ಜಿಲ್ಲೆಯಲ್ಲಿ ಅಭಿವೃದ್ಧಿಯು ಜನರಿಗೆ ಅರ್ಥಪೂರ್ಣವಾಗಿ ನಡೆಯುತ್ತಿಲ್ಲ. ಈ ಬಗ್ಗೆ ನಾವು ಸಯೋಜಿಸಬೇಕಾಗಿದೆ. □

ಕಪ್ಪು ಸುಂದರಿ ನೌಮಿ ಸಿಮ್ಸ್

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ಖ್ಯಾತ ರೂಪದರ್ಶಿ ನೌಮಿ ಸಿಮ್ಸ್ ಕಳೆದ ಆಗಸ್ಟ್ 1 ರಂದು ನಿಧನರಾದರು. ಮೊಟ್ಟಮೊದಲ ಕಪ್ಪು ವರ್ಣದ ಸೂಪರ್ ಮಾಡೆಲ್ ಎಂದು ಖ್ಯಾತಿ ಗಳಿಸಿದ್ದ ಸಿಮ್ಸ್, ಬ್ಲ್ಯಾಕ್‌ಬ್ಯೂಟಿ ಪದಕ್ಕೆ ಅನ್ವರ್ಥವಾಗಿದ್ದರು ಎಂದರೆ ತಪ್ಪಾಗಲಾರದು. 1974ರಲ್ಲಿ 'ನ್ಯೂಯಾರ್ಕ್‌ಟೈಮ್ಸ್' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಖ್ಯಾತ ಡಿಸೈನರ್ ಹಾಲ್ಸ್‌ಸನ್ "ನೊವಾಮಿ ನಿಜಕ್ಕೂ ಅದ್ವಿತೀಯ ಸುಂದರಿ" ಎಂದು ಉದ್ಗರಿಸಿದ್ದಾನೆ. "ಸಮಾಜದ ಎಲ್ಲ ಕಟ್ಟಳೆಗಳನ್ನು ಮೀರಿ ಕಪ್ಪು ಜನಾಂಗದ ಮಹಾನ್ ರಾಯಭಾರಿಯಾಗಿ ನೊವಾಮಿ ಬೆಳೆದರು" ಎಂದು 'ನ್ಯೂಯಾರ್ಕ್‌ಟೈಮ್ಸ್'ನ ಅಂಕಣಕಾರರೊಬ್ಬರು ಬರೆಯುತ್ತಾರೆ.

ಈ ಹಿಂದೆ ಕಪ್ಪು ವರ್ಣದವರ ಚಳವಳಿಯ ಬಗ್ಗೆ ಅಧ್ಯಯನ ನಡೆಸುವ ಸಂದರ್ಭದಲ್ಲಿ ನೌಮಿ ಸಿಮ್ಸ್ ಪರಿಚಯ ನನಗಿರಲಿಲ್ಲ. ಆದರೆ ಕಳೆದ ವಾರ ವಾಷಿಂಗ್ಟನ್ ಮೂಲದ ವೈದ್ಯರು ಹಾಗೂ ಸಾಮಾಜಿಕ ಪ್ರೇರಕರಾದ ಡಾ.ಬರ್ವಾ ಅವರು 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆಯಲ್ಲಿ ನೌಮಿ ಬಗ್ಗೆ ಬಂದ ಅಂಕಣವನ್ನು ನನಗೆ ಕಳುಹಿಸಿದ್ದರು. ನಂತರ ನಾನು ಅಮೆರಿಕಾದ ಪತ್ರಿಕೆಗಳೆಲ್ಲವನ್ನು ಕಲೆಹಾಕಿ ನೋಡಿದೆ. ಬಹುತೇಕ ಎಲ್ಲ ಪತ್ರಿಕೆಗಳು ನೌಮಿ ಬಗ್ಗೆ ಬರಹಗಳನ್ನು ಪ್ರಕಟಿಸಿದ್ದವು.

ವರ್ಣತಾರತಮ್ಯ ಉತ್ತುಂಗ ಸ್ಥಿತಿಯಲ್ಲಿದ್ದ ಕಾಲದಲ್ಲಿ ಹುಟ್ಟಿದ್ದ ಸಿಮ್ಸ್ 13ನೆಯ ವಯಸ್ಸಿಗೆ 5 ಅಡಿ 10 ಇಂಚುಗಳಷ್ಟು ಎತ್ತರ ಇದ್ದರು. ಆಗ ಶಾಲೆಯಲ್ಲಿ ಸಹಪಾಠಿಗಳು ಆಕೆಯ ಎತ್ತರದ ಬಗ್ಗೆ ತಮಾಷೆಯನ್ನು ಮಾಡುತ್ತಿದ್ದರು. ಇದನ್ನೇ ಸವಾಲಾಗಿ ಸ್ವೀಕರಿಸಿದ ನೌಮಿ ನ್ಯೂಯಾರ್ಕ್ ಮೂಲದ ಫ್ಯಾಷನ್ ತಂತ್ರಜ್ಞಾನ ಸಂಸ್ಥೆಯನ್ನು ಸೇರುತ್ತಾರೆ. ಫ್ಯಾಷನ್ ತಂತ್ರಜ್ಞಾನದಲ್ಲಿ ಪದವಿ ಪಡೆದು ಮಾಡೆಲಿಂಗ್ ವೃತ್ತಿಯನ್ನರಸಿ ಏಜೆನ್ಸಿಗಳ ಬಾಗಿಲು ತಟ್ಟಿದಾಗ ನೌಮಿಗೆ ಸಿಗುತ್ತಿದ್ದ ಉತ್ತರ "ನೀನು ತುಂಬಾ ಕಪ್ಪಾಗಿದ್ದೀಯಾ.' ಆ ಅವಧಿಯಲ್ಲಿ ರೂಪದರ್ಶಿಗಳು, ಲೇಖಕರು, ಮತ್ತು ಕ್ರೀಡಾಪಟುಗಳು ತಂತಮ್ಮ ಕ್ಷೇತ್ರಗಳನ್ನು ಪ್ರವೇಶಿಸಲು ಈ ಏಜೆನ್ಸಿಗಳನ್ನು ಅವಲಂಬಿಸಬೇಕಿತ್ತು.

ಶಾಲೆಗಳು, ಸಾರ್ವಜನಿಕ ಸಾರಿಗೆಯ ವಾಹನಗಳು, ಹೋಟೆಲ್‌ಗಳು ಮತ್ತು ಚಿತ್ರಮಂದಿರಗಳಲ್ಲಿ ಪ್ರತ್ಯೇಕತೆಯ ವಿರುದ್ಧ ಕಪ್ಪು ವರ್ಣದವರು ಹೋರಾಡುತ್ತಿದ್ದ ಆ ಸಂದರ್ಭದಲ್ಲಿ ಓರ್ವ ಕಪ್ಪು ಮಹಿಳೆ ಮಾಡೆಲಿಂಗ್ ವೃತ್ತಿಯಲ್ಲಿ ಯಶಸ್ಸು ಸಾಧಿಸುವುದು ಸುಲಭದ ಮಾತಾಗಿರಲಿಲ್ಲ. ಆದರೆ ಧೃಡವಿಶ್ವಾಸ ಮತ್ತು ಆತ್ಮಸ್ಥೈರ್ಯವನ್ನು ಹೊಂದಿದ್ದ ಸಿಮ್ಸ್, ಏಜೆನ್ಸಿಗಳ ಮೂಲಕ ವೃತ್ತಿ ಪ್ರವೇಶಿಸುವ ಗೋಜಿಗೆ ಹೋಗದೆ ನೇರವಾಗಿ ಓರ್ವ ಫೋಟೋಗ್ರಾಫರ್‌ನನ್ನು ಭೇಟಿ ಮಾಡುತ್ತಾರೆ. ಅವರ ಪ್ರಯತ್ನಕ್ಕೆ ತಕ್ಕ ಪ್ರತಿಫಲವಾಗಿ ಅಮೆರಿಕಾದ ಪ್ರತಿಷ್ಠಿತ ಮಹಿಳೆಯರ ಮ್ಯಾಗಜಿನ್ 'ಲೇಡೀಸ್ ಹೋಂ ಜರ್ನಲ್'ನ ಮುಖಪುಟದಲ್ಲಿ ನೌಮಿ ಕಾಣಿಸಿಕೊಳ್ಳುತ್ತಾರೆ, ದಿನ ಬೆಳಗಾಗುವುದರಲಿ ಸ್ಟಾರ್ ಪಟ್ಟ ಅಲಂಕರಿಸುತ್ತಾರೆ. ಅಮೆರಿಕಾದ ಮಧ್ಯಮ ವರ್ಗದವರಿಗೆ ರೋಮಾಂಚನ ಉಂಟುಮಾಡಿದ ಆಕೆಯ ಇಮೇಜ್ ನಂತರದ ದಿನಗಳಲ್ಲಿ ಬ್ಲ್ಯಾಕ್ ಬ್ಯೂಟಿಯ ಘೋಷವಾಕ್ಯಗಳು ಎಲ್ಲೆಡೆ ರಿಂಗಣಿಸುವಂತೆ ಮಾಡಿತು. ಮೊಟ್ಟಮೊದಲ ಬಾರಿಗೆ ಓರ್ವ ಕಪ್ಪು ಸುಂದರಿಯ ಛಾಯಾಚಿತ್ರವನ್ನು ಮ್ಯಾಗಜಿನ್‌ನ ಮುಖಪುಟದಲ್ಲಿ ನೋಡುವ ಅವಕಾಶ ಬಿಳಿಯರಿಗೂ ಸಿಕ್ಕಿತು.

ನಂತರದ ದಿನಗಳಲ್ಲಿ ಖ್ಯಾತಿಯ ಉತ್ತುಂಗಕ್ಕೇರಿದ ಸಿಮ್ಸ್ ಇತರರಿಗೆ ಪ್ರೇರಕಶಕ್ತಿಯಾಗಿ ಬೆಳೆಯುತ್ತಾರೆ. ತನ್ನ ಕಾಲದ ಸೂಪರ್ ಮಾಡೆಲ್ ಪಟ್ಟ ಅಲಂಕರಿಸಿದ್ದ ಸಿಮ್ಸ್ ಹಾಲಿವುಡ್ ನಿರ್ಮಾಪಕರನ್ನು ಕೂಡ ಆಕರ್ಷಿಸಿದ್ದರು. ಒಂದು ದೊಡ್ಡ ಬ್ಯಾನರ್‌ನ ಚಿತ್ರದ ಪ್ರಮುಖ ಪಾತ್ರ ನಿರ್ವಹಿಸಲು ಸಿಮ್ಸ್ ಅವರಿಗೆ ಅವಕಾಶ ಬಂದಿತ್ತು. ಆದರೆ ಚಿತ್ರಕಥೆಯನ್ನು ಓದಿದ ನಂತರ "ಕಪ್ಪು ಜನರ ಪಾತ್ರಗಳನ್ನು ನಿಕೃಷ್ಟವಾಗಿ ಚಿತ್ರಿಸಲಾಗಿದೆ" ಎಂದು ನೌಮಿ ಸಿಮ್ಸ್ ಪಾತ್ರವನ್ನು ನಿರಾಕರಿಸುತ್ತಾರೆ. ಹಾಲಿವುಡ್ ನಿರ್ಮಾಣದ ಚಿತ್ರಗಳಲ್ಲಿ ಪಾತ್ರ ನಿರ್ವಹಿಸಲು ಅವಕಾಶ ಸಿಕ್ಕಿದರೆ ಎಷ್ಟು ಮಂದಿ ನಟ ನಟಿಯರು ನಿರಾಕರಿಸಲು ಸಿದ್ಧರಿದ್ದಾರೆ?

ಕೇವಲ ಐದು ವರ್ಷಗಳಲ್ಲಿ ಜನಜನಿತರಾದ ನೌಮಿ ಸಿಮ್ಸ್ ಮಾಡೆಲಿಂಗ್ ವೃತ್ತಿ ತ್ಯಜಿಸಿ ತಮ್ಮದೇ ಆದ ಸೌಂದರ್ಯ ಸಂಸ್ಥೆಯೊಂದನ್ನು ಆರಂಭಿಸುತ್ತಾರೆ. ಸೌಂದರ್ಯ ಉದ್ಯಮದಲ್ಲಿಯೂ ಯಶಸ್ಸನ್ನು ಸಾಧಿಸುತ್ತಾರೆ. ಇವರ ಸಂಸ್ಥೆಯನ್ನು ಹಾರ್ವರ್ಡ್ ಬಿಸಿನೆಸ್ ಸ್ಕೂಲ್ ಕೂಡ ಗುರುತಿಸುತ್ತದೆ.

ಆದರೆ ಸೂಪರ್ ಮಾಡೆಲ್ ನೌಮಿ ಸಿಮ್ಸ್ ಅವರ ಹಿನ್ನೆಲೆ ನೋವಿನಿಂದ ಕೂಡಿರುವುದು ಕೂಡ ಸತ್ಯ. ಸಿಮ್ಸ್ ಹುಟ್ಟಿದಾಗ ಆಕೆಯ ತಂದೆ ತಾಯಿಯರು ಪ್ರತ್ಯೇಕಗೊಳ್ಳುತ್ತಾರೆ. ತನ್ನ ತಂದೆ ಯಾರೆಂದು ಆಕೆಗೆ ಗೊತ್ತಾಗುವುದೇ ಇಲ್ಲ. ಮಲ ತಂದೆ ತಾಯಿಯರ ಆರೈಕೆಯಲ್ಲಿ ಬೆಳೆದ ಸಿಮ್ಸ್ ಹೇಗೋ ಕಾಲೇಜು ಮೆಟ್ಟಿಲು ಹತ್ತುತ್ತಾರೆ. ಆಕೆ ಕೇವಲ ಸೂಪರ್ ಮಾಡೆಲ್ ಮಾತ್ರವಲ್ಲದೆ ಅಮೆರಿಕಾದ ಕಪ್ಪು ಜನರಿಗೆ ರೋಲ್ ಮಾಡೆಲ್ ಕೂಡ ಹೌದು.

ಮಾಡೆಲಿಂಗ್ ಮತ್ತು ಸೌಂದರ್ಯ ಸಂಸ್ಥೆಯ ಮೂಲಕ ನೌಮಿ ಸಿಮ್ಸ್ ಜನಪ್ರಿಯತೆ ಮತ್ತು ಹಣ ಎರಡನ್ನೂ ಗಳಿಸಿದ್ದರು. ಆದರೆ ಅವರ ಯಾತ್ರೆ ಅಲ್ಲಿಗೆ ಮುಗಿಯಲಿಲ್ಲ. ಸಮಾಜಕ್ಕೆ ಏನನ್ನಾದರೂ ಕೊಡುಗೆ ನೀಡುವ ಉದ್ದೇಶದಿಂದ ಲೇಖಕಿಯಾಗಿ ರೂಪುಗೊಂಡರು. "ಆಲ್ ಅಬೌಟ್ ಹೆಲ್ತ್ ಅಂಡ್ ಬ್ಯೂಟಿ ಫಾರ್ ಬ್ಲ್ಯಾಕ್ ವುಮನ್" ಮತ್ತು "ಆಲ್ ಅಬೌಟ್ ಸಕ್ಸಸ್ ಫಾರ್ ದ ಬ್ಲ್ಯಾಕ್ ವುಮನ್" ಎಂಬ ಎರಡು ಪುಸ್ತಕಗಳನ್ನು ಬರೆಯುತ್ತಾರೆ. ನಂತರದ ದಿನಗಳಲ್ಲಿ ಕಪ್ಪು ಜನರಿಗೆ ಪ್ರೇರಕ ಶಕ್ತಿಯಾಗಿ ಬೆಳೆಯುತ್ತಾರೆ.

ಇದರಿಂದ ದಲಿತರು ಕಲಿಯಬೇಕಾದ ಪಾಠವೇನು? ಪಾರಂಪರಿಕವಾಗಿ ದಲಿತರು ಅಮೆರಿಕಾದ ಕಪ್ಪು ಜನರ ಹೋರಾಟಗಳಿಂದ ಪ್ರೇರಣೆಯನ್ನು ಪಡೆದುಕೊಳ್ಳುತ್ತಾ ಬಂದಿದ್ದಾರೆ. ಡಾ. ಬಿ ಆರ್ ಅಂಬೇಡ್ಕರ್ ಕೂಡ ಕಪ್ಪು ಜನರ ಹೋರಾಟವನ್ನು ಅಧ್ಯಯನ ಮಾಡಿ ತಮ್ಮದೇ ಆದ ತೀರ್ಮಾನಗಳಿಗೆ ಬಂದಿದ್ದಾರೆ. ಅಂಬೇಡ್ಕರ್ ಆರಂಭಿಸಬೇಕೆಂದಿದ್ದ ರಾಜಕೀಯ ಪಕ್ಷಕ್ಕೆ "ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ" ಎಂಬ ಹೆಸರನ್ನಿಡಬೇಕೆಂದಿದ್ದರು. ದಲಿತ್ ಪ್ಯಾಂಥರ್ಸ್ ಚಳವಳಿ, ಅಮೆರಿಕೆಯ ಬ್ಲ್ಯಾಕ್ ಪ್ಯಾಂಥರ್ಸ್ ಚಳವಳಿ

ಶಾಲೆಗಳು, ಸಾರ್ವಜನಿಕ ಸಾರಿಗೆಯ ವಾಹನಗಳು, ಹೋಟೆಲ್‌ಗಳು ಮತ್ತು ಚಿತ್ರಮಂದಿರಗಳಲ್ಲಿ ಪ್ರತ್ಯೇಕತೆಯ ವಿರುದ್ಧ ಕಪ್ಪು ವರ್ಣದವರು ಹೋರಾಡುತ್ತಿದ್ದ ಆ ಸಂದರ್ಭದಲ್ಲಿ ಓರ್ವ ಕಪ್ಪು ಮಹಿಳೆ ಮಾಡೆಲಿಂಗ್ ವೃತ್ತಿಯಲ್ಲಿ ಯಶಸ್ಸು ಸಾಧಿಸುವುದು ಸುಲಭದ ಮಾತಾಗಿರಲಿಲ್ಲ. ಆದರೆ ಧೃಡ ವಿಶ್ವಾಸ ಮತ್ತು ಆತ್ಮಸ್ಥೈರ್ಯವನ್ನು ಹೊಂದಿದ್ದ ಸಿಮ್ಸ್, ಏಜೆನ್ಸಿಗಳ ಮೂಲಕ ವೃತ್ತಿ ಪ್ರವೇಶಿಸುವ ಗೋಜಿಗೆ ಹೋಗದೆ ನೇರವಾಗಿ ಓರ್ವ ಫೋಟೋಗ್ರಾಫರ್‌ನನ್ನು ಭೇಟಿ ಮಾಡುತ್ತಾರೆ. ಅವರ ಪ್ರಯತ್ನಕ್ಕೆ ತಕ್ಕ ಪ್ರತಿಫಲವಾಗಿ ಅಮೆರಿಕಾದ ಪ್ರತಿಷ್ಠಿತ ಮಹಿಳೆಯರ ಮ್ಯಾಗಜಿನ್ 'ಲೇಡೀಸ್ ಹೋಂ ಜರ್ನಲ್'ನ ಮುಖಪುಟದಲ್ಲಿ ನೌಮಿ ಕಾಣಿಸಿಕೊಳ್ಳುತ್ತಾರೆ, ದಿನ ಬೆಳಗಾಗುವುದರಲಿ ಸ್ಟಾರ್ ಪಟ್ಟ ಅಲಂಕರಿಸುತ್ತಾರೆ.

ಯಿಂದ ಪ್ರೇರಣೆ ಪಡೆದಿದೆ. ಕಪ್ಪು ಜನರ ಬಂಡವಾಳಶಾಹಿ ಆರ್ಥಿಕತೆಯಿಂದ ಪ್ರೇರಣೆ ಪಡೆದು ಭಾರತದ ಉದ್ಯಮಗಳಲ್ಲಿ ಹಾಗೂ ಮಾಧ್ಯಮ ಕ್ಷೇತ್ರಗಳಲ್ಲಿ ವೈವಿಧ್ಯತೆ ತರಬೇಕೆಂದು ನಾನು ಕಳೆದ ಕೆಲವು ತಿಂಗಳುಗಳಿಂದ ವಾದ ಮಾಡುತ್ತಿದ್ದೇನೆ.

ಸಿಮ್ಸ್ ಅವರ ಅನುಭವದಿಂದ ನಾವು ಕಲಿಯಬೇಕಾಗಿರುವ ಪಾಠವಾದರೂ ಏನು? ನಮಗೆ ಹೋರಾಟಗಾರರಿಗಿಂತ, ಪ್ರೇರಣೆ ನೀಡುವ ನಾಯಕರ ಅವಶ್ಯಕತೆ ಇದೆ. ಜೀತಪದ್ಧತಿ ಮತ್ತು ವರ್ಣತಾರತಮ್ಯದ ಬಗ್ಗೆ ಬರೆಯುವಷ್ಟು ಸಾಮರ್ಥ್ಯ ಸಿಮ್ಸ್ ಅವರಿಗಿದ್ದರೂ ಕೂಡ ಅವರು ಕಪ್ಪು ಮಹಿಳೆಯರಿಗೆ ಪ್ರೇರಣೆ ನೀಡುವ ದಾರಿಯನ್ನು ಆಯ್ದುಕೊಂಡು, ಅಂತಹ ವಿಚಾರಗಳ ಮೇಲೆ ಪುಸ್ತಕ ಬರೆದರು. ಅಮೆರಿಕಾದ ಕಪ್ಪು ಜನರು ಹೋರಾಟದ ದಿನಗಳಿಂದಾಚೆಗೆ ಚಿಂತಿಸಲಾರಂಭಿಸಿದ್ದಾರೆ. ಅಮೆರಿಕಾದ ಸಾರ್ವಜನಿಕ ಬದುಕಿನಲ್ಲಿ ಹೊಸ ಛಾಪನ್ನು ಮೂಡಿಸುವ ನಿಟ್ಟಿನಲ್ಲಿ ಅಮೆರಿಕಾದ ಕಪ್ಪು ಮಂದಿಗೆ ಪ್ರೇರಣೆ ಒದಗಿಸುವ ಆಯಾಮಕ್ಕೆ ಹೆಚ್ಚು ಒತ್ತು ಕೊಡಲಾಗುತ್ತಿದೆ.

ದಲಿತರು ಕೂಡ ಹೋರಾಟದ ಹಂತದಿಂದ ಮುಕ್ತರಾಗಿ, ಪ್ರೇರಕರನ್ನು ಸೃಷ್ಟಿಸುವ ಪ್ರಯತ್ನವನ್ನೇಕೆ ಮಾಡಬಾರದು?

ಹೋರಾಟಗಾರರು ಮತ್ತು ಪ್ರೇರಕರು

2007ರ ನವೆಂಬರ್ ತಿಂಗಳಲ್ಲಿ ನಾನು ಅತಿಥಿ ಭಾಷಣಕಾರನಾಗಿ ಇಂಡಿಯಾನಾ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ್ದೆ. ಕೆಲ್ವಿನ್ ಬ್ರೌನ್ ಎಂಬ ವಿಶ್ವವಿದ್ಯಾನಿಲಯದ ಕಾನೂನು ಪ್ರೊಫೆಸರ್ ಜೊತೆಗೆ ನಾನು ಉಳಿದುಕೊಂಡಿದ್ದೆ. "ಕಪ್ಪು ಜನರಲ್ಲಿ ನಾಯಕತ್ವ" ಎಂಬ ವಿಷಯದ ಬಗ್ಗೆ ನಡೆಯುತ್ತಿದ್ದ ಕಾರ್ಯಕ್ರಮಕ್ಕೆ ನನ್ನನ್ನು ಅವರು ಕರೆದೊಯ್ದರು.

ಸಮಾರಂಭದಲ್ಲಿ ಮಾತನಾಡಿದ ಬಹಳಷ್ಟು ಮಂದಿ ತಮ್ಮ ಯಶಸ್ಸನ್ನು ಹಂಚಿಕೊಂಡಿದ್ದಷ್ಟೇ ಅಲ್ಲದೆ, ಅಮೆರಿಕೆಯಲ್ಲಿ ಯಶಸ್ಸು ಸಾಧಿಸಲು ಅನುಸರಿಸಬೇಕಾದ ವಿಧಾನಗಳೇನು ಎಂಬುದರ ಬಗ್ಗೆ ಕೂಡ ಮಾತನಾಡಿದರು. ಆದರೆ ಇವರಲ್ಲಿ ಒಬ್ಬರೂ ಕೂಡ ಬಿಳಿಯ ಸಮಾಜದ ದಬ್ಬಾಳಿಕೆ ಮತ್ತು ಜೀತಪದ್ಧತಿಯ ಬಗ್ಗೆ ಮಾತನಾಡಲಿಲ್ಲ. ಭಾಷಣಕಾರರು ಮತ್ತು ಭಾಗವಹಿಸಿದ್ದವರು ಇಬ್ಬರೂ ಕೂಡ ಖುಷಿಯಲ್ಲಿದ್ದರು ಮತ್ತು ಸಮಾಜದಲ್ಲಿ ಯಶಸ್ಸಿನ ದಾರಿಗಳನ್ನು ಕಂಡುಕೊಳ್ಳುವುದರ ಬಗ್ಗೆ ಚಿಂತಿಸುತ್ತಿದ್ದರು.

ಅಮೆರಿಕಾದ ಕಪ್ಪು ಜನರಲ್ಲಿ "ಪ್ರೇರಣಾತ್ಮಕ ಭಾಷಣಕಾರರ" ಹೊಸ ವರ್ಗವೊಂದು ಹುಟ್ಟುಕೊಂಡಿದೆ. ಅಂತರ್ಜಾಲದಲ್ಲಿ "ಪ್ರೇರಣಾತ್ಮಕ ಭಾಷಣಕಾರರು" ಎಂಬ ಪದವನ್ನು ಜಾಲಾಡಿದರೆ, ಅಮೆರಿಕಾದ ಕಪ್ಪು ಯುವಕರಿಗೆ ಪ್ರೇರಣೆ ನೀಡುವ ಸಾವಿರಾರು ಮಂದಿಯ ಹೆಸರುಗಳು ಸಿಗುತ್ತವೆ. ಅಮೆರಿಕಾದ ಕಪ್ಪು ಮಂದಿಯ ಚಳವಳಿ ಈಗ ನವ ಮನ್ವಂತರಕ್ಕೆ ಕಾಲಿರಿಸಿದೆ. ಕಪ್ಪು ಮಂದಿಯ ಮುಕ್ತಿಗಾಗಿ ಹೋರಾಡುತ್ತಿರುವವರಿಗೆ, ಸಂಘಟಿತ ರಾಜಕೀಯ ಹೋರಾಟದ ಜೊತೆಗೆ ಸುಧಾರಕರು, ಹೋರಾಟಗಾರರು ಮತ್ತು ಪ್ರೇರಕರ ಹೊಸ ವರ್ಗಗಳ ಬೆಂಬಲ ದೊರಕುತ್ತಿವೆ.

ತಾರತಮ್ಯ ಉತ್ತುಂಗ ಸ್ಥಿತಿಯಲ್ಲಿದ್ದಾಗ ಪ್ರವೇಶಿಸುವವರು ಸುಧಾರಕರು. ಸುಧಾರಕರು ಶೋಷಕರ ಬಗ್ಗೆ ಹೆಚ್ಚು ಗಮನಹರಿಸದೆ, ಶೋಷಿತರು ತಮ್ಮ ಉದ್ಧಾರಕ್ಕಾಗಿ ಕೆಲವು ಆಚರಣೆಗಳನ್ನು ತ್ಯಜಿಸಬೇಕೆಂದು ಸಲಹೆ ನೀಡುತ್ತಾರೆ. ಶೋಷಿತರ ದಯನೀಯ ಪರಿಸ್ಥಿತಿಗೆ ಅವರೇ ಕಾರಣವೆಂಬಂತೆ ಇವರ ಮಾತುಗಳು ಅರ್ಥ ಪಡೆದುಕೊಳ್ಳುತ್ತವೆ. ಈ ಪ್ರಕ್ರಿಯೆಯಲ್ಲಿ ಸುಧಾರಕರು ಶೋಷಿತರ ಮನಸ್ಸಿನಲ್ಲಿ ಆತಂಕವನ್ನು ಸೃಷ್ಟಿ ಮಾಡುತ್ತಾರೆ.

ಅಮೆರಿಕಾದ ಕಪ್ಪು ಜನರಲ್ಲಿ "ಪ್ರೇರಣಾತ್ಮಕ ಭಾಷಣಕಾರರ" ಹೊಸ ವರ್ಗವೊಂದು ಹುಟ್ಟುಕೊಂಡಿದೆ. ಅಂತರ್ಜಾಲದಲ್ಲಿ "ಪ್ರೇರಣಾತ್ಮಕ ಭಾಷಣಕಾರರು" ಎಂಬ ಪದವನ್ನು ಜಾಲಾಡಿದರೆ, ಅಮೆರಿಕಾದ ಕಪ್ಪು ಯುವಕರಿಗೆ ಪ್ರೇರಣೆ ನೀಡುವ ಸಾವಿರಾರು ಮಂದಿಯ ಹೆಸರುಗಳು ಸಿಗುತ್ತವೆ. ಅಮೆರಿಕಾದ ಕಪ್ಪು ಮಂದಿಯ ಚಳವಳಿ ಈಗ ನವ ಮನ್ವಂತರಕ್ಕೆ ಕಾಲಿರಿಸಿದೆ. ಕಪ್ಪು ಮಂದಿಯ ಮುಕ್ತಿಗಾಗಿ ಹೋರಾಡುತ್ತಿರುವವರಿಗೆ, ಸಂಘಟಿತ ರಾಜಕೀಯ ಹೋರಾಟದ ಜೊತೆಗೆ ಸುಧಾರಕರು, ಹೋರಾಟಗಾರರು ಮತ್ತು ಪ್ರೇರಕರ ಹೊಸ ವರ್ಗಗಳ ಬೆಂಬಲ ದೊರಕುತ್ತಿವೆ. ತಾರತಮ್ಯ ಉತ್ತುಂಗ ಸ್ಥಿತಿಯಲ್ಲಿದ್ದಾಗ ಪ್ರವೇಶಿಸುವವರು ಸುಧಾರಕರು. ಸುಧಾರಕರು ಶೋಷಕರ ಬಗ್ಗೆ ಹೆಚ್ಚು ಗಮನಹರಿಸದೆ, ಶೋಷಿತರು ತಮ್ಮ ಉದ್ಧಾರಕ್ಕಾಗಿ ಕೆಲವು ಆಚರಣೆಗಳನ್ನು ತ್ಯಜಿಸಬೇಕೆಂದು ಸಲಹೆ ನೀಡುತ್ತಾರೆ.

ಇನ್ನು ಸಮಾಜದಲ್ಲಿ ಸ್ವಲ್ಪಮಟ್ಟಿಗಿನ ಮುಕ್ತ ವಾತಾವರಣ ಇರುವಂತಹ ಸಂದರ್ಭದಲ್ಲಿ ಚಳವಳಿಕಾರರು ಅಥವಾ ಹೋರಾಟಗಾರರು ಪ್ರವೇಶಿಸುತ್ತಾರೆ. ಶೋಷಕರ ವರ್ಗದ ಕೆಲ ಮಂದಿ ಶೋಷಿತರ ಪರವಾಗಿ ನಿಲ್ಲುವುದರಿಂದ, ಶೋಷಕವರ್ಗದಲ್ಲಿ ಬಿರುಕುಗಳು ಉಂಟಾಗುತ್ತವೆ. ಹೋರಾಟಗಾರರು ಇತಿಹಾಸದ ಭೂತವನ್ನು ಬಡಿದೆಬ್ಬಿಸಿ ಶೋಷಕರನ್ನು ರಾಕ್ಷಸಕರಂತೆ ಬಿಂಬಿಸುತ್ತಾರೆ. ಎಲ್ಲ ಸಮಾಜದಲ್ಲಿ ಈ ಪ್ರಕ್ರಿಯೆ ನಡೆಯುತ್ತವೆ. ಅಮೆರಿಕಾದಲ್ಲಿ 1960–70ರ ದಶಕದಲ್ಲಿ ಈ ಪ್ರಕ್ರಿಯೆ ನಡೆದಿದೆ.

ಆದರೆ ಹೋರಾಟದ ದಾರಿಯಲ್ಲಿ ದೀರ್ಘಕಾಲ ಸಾಗಿದರೆ ಯಾವ ಫಲಿತಾಂಶವೂ ಸಿಗದೆ ಹೋಗಬಹುದು. ಶೋಷಕರನ್ನು ರಾಕ್ಷಸರಾಗಿ ಬಿಂಬಿಸುವಲ್ಲಿಯೇ ಹೆಚ್ಚು ಕಾಲ ಕಳೆದರೆ ಅಪಾಯ ಎದುರಾಗುವುದು ನಿಶ್ಚಿತ. ಹೀಗಾದಾಗ ಶೋಷಿತರು ಒಟ್ಟಾರೆ ವ್ಯವಸ್ಥೆಯ ಮೇಲೆ ಭರವಸೆ ಕಳೆದುಕೊಳ್ಳುವ ಸಾಧ್ಯತೆಯೇ ಹೆಚ್ಚು. ಇಂತಹ ಸಾಮಾಜಿಕ– ಮಾನಸಿಕ ಹೋರಾಟದ ಕಾರಣದಿಂದ ಶೋಷಿತರು ವ್ಯವಸ್ಥೆಯ ಭಾಗವಾಗಿ ಕೆಲಸ ಮಾಡಲು ಹಿಂಜರಿಯಬಹುದು. ವ್ಯವಸ್ಥೆಯನ್ನು ದುಷ್ಟ ರೂಪಕವಾಗಿ ಬಿಂಬಿಸುತ್ತಾ ಹೋದಂತೆ, ಶೋಷಿತರು ವ್ಯವಸ್ಥೆಯ ಮೇಲಿನ ಆಶಾಭಾವನೆಯನ್ನು ಕಳೆದುಕೊಳ್ಳುತ್ತಾರೆ. ಶೋಷಿತರು ವ್ಯವಸ್ಥೆಯಿಂದ ಹೊರತಾದ ಪ್ರತ್ಯೇಕ ಪರಿಹಾರಗಳನ್ನು ಹುಡುಕುವುದರಲ್ಲಿಯೇ ಕಾಲ ಕಳೆದುಬಿಡುತ್ತಾರೆ.

ಆದರೆ ಒಬ್ಬ ಪ್ರೇರಕ ಯಾವಾಗಲೂ ಆಶಾವಾದದ ಜ್ವಾಲೆ ಹೊತ್ತಿಸುತ್ತಿರುತ್ತಾನೆ. ಆತ ಯಾರನ್ನೂ ರಾಕ್ಷಸರಂತೆ ಚಿತ್ರಿಸುವುದಿಲ್ಲ. ಮುಖ್ಯವಾಹಿನಿಯಲ್ಲಿ ಇರುವ ಅವಕಾಶಗಳನ್ನು ಗುರುತಿಸಿ, ಶೋಷಿತರು ಆ ಅವಕಾಶಗಳನ್ನು ಬಳಸಿಕೊಳ್ಳುವಂತೆ ಪ್ರೇರಣೆ ನೀಡುತ್ತಾನೆ. ಅವಕಾಶಗಳನ್ನು ಬಳಸಿಕೊಳ್ಳುವ ವಿಧಾನವನ್ನು ವಿವರಿಸುತ್ತಾನೆ. ಅಮೆರಿಕಾದ ಬಹಳಷ್ಟು ಕಪ್ಪು ಸಮುದಾಯದ ಪ್ರೇರಕರು ತಂತಮ್ಮ ಕ್ಷೇತ್ರಗಳಲ್ಲಿ ಮಹತ್ತರ ಸಾಧನೆಗಳನ್ನು ಮಾಡಿದವರಾಗಿದ್ದಾರೆ. ಯಶಸ್ಸಿನ ಪಯಣದಲ್ಲಿ ತಮಗಾದ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಇತರರಿಗೆ, ಮುಖ್ಯವಾಗಿ ಮುಂದಿನ ಪೀಳಿಗೆಯವರಿಗೆ ಮಾದರಿಯಾಗುತ್ತಾರೆ. ಬರಾಕ್ ಒಬಾಮಾ ಅವರ "ಯೆಸ್ ವಿ ಕ್ಯಾನ್" ಎಂಬ ಚುನಾವಣಾ ಪ್ರಚಾರ ಇದೇ ಮಾದರಿಯನ್ನು ಅನುಸರಿಸಿತ್ತು. ಆದರೆ, ಭಾರತದಲ್ಲಿ ದಲಿತರು ಈಗಲೂ ಕೂಡ ಹೋರಾಟದ ಹಂತದಲ್ಲಿಯೇ ಉಳಿದುಬಿಟ್ಟಿದ್ದಾರೆ.

ಸುಮಾರು 1 ಕೋಟಿ ರೂಪಾಯಿಗಳಿಗಿಂತ ಅಧಿಕ ವಾರ್ಷಿಕ ವಹಿವಾಟು ನಡೆಸುವ ದಲಿತ ಉದ್ದಿಮೆದಾರರ ಪಟ್ಟಿಯೊಂದನ್ನು ನಾನು ಸಿದ್ಧಪಡಿಸುತ್ತಿದ್ದೇನೆ. ವಿವಿಧ ಉದ್ದೇಶಗಳನ್ನು ಇರಿಸಿಕೊಂಡು ನಾನು ಈ ಕಾರ್ಯಕ್ಕೆ ಕೈ ಹಾಕಿದ್ದೇನೆ. ಉದ್ದಿಮೆದಾರರಾಗಿ ದಲಿತರು ಯಶಸ್ಸು ಸಾಧಿಸಿದ್ದಾರೆಯೇ? ಇಲ್ಲವಾದರೆ, ಅವರಿಗೆ ಎದುರಾಗಿರುವ ಸಮಸ್ಯೆಗಳೇನು? ಎಂಬುದರ ಬಗ್ಗೆ ಕೂಡ ಚಿಂತನೆ ನಡೆಸುತ್ತಿದ್ದೇನೆ. 1 ಕೋಟಿ ರೂ.ಗಿಂತ ಅಧಿಕ ವಾರ್ಷಿಕ ವಹಿವಾಟು ನಡೆಸುವ ದಲಿತರ ಪರಿಚಯ ಮಾಡಿಕೊಡುತ್ತಾ, ದಲಿತ ಯುವಕರಿಗೆ ಪ್ರೇರಣೆ ಒದಗಿಸಬೇಕೆಂದಿದ್ದೇನೆ. ಇಷ್ಟು ಮಂದಿ ದಲಿತರು ಉದ್ದಿಮೆದಾರರಾಗಿ ಯಶಸ್ವಿಯಾಗಲು ಸಾಧ್ಯವಾದರೆ, ಯುವಕರು ಕೂಡ ಯಶಸ್ಸು ಕಾಣಲು ಸಾಧ್ಯ ಎಂಬುದು ನನ್ನ ವಾದ.

ಒಟ್ಟಾರೆ ಇದರಿಂದಾಗಿ ನನಗೆ ಒಂದು ಅದ್ಭುತವಾದ ಅನುಭವವಾಗಿದೆ. "1 ಕೋಟಿ ರೂ.ಗಿಂತ ಅಧಿಕ ವಹಿವಾಟು ನಡೆಸುವ ದಲಿತ ಉದ್ದಿಮೆದಾರರನ್ನು ಪರಿಚಯಿಸಿದರೆ, ಸರ್ಕಾರ ಮೀಸಲಾತಿ ಸೌಲಭ್ಯಗಳನ್ನು ಹಿಂಪಡೆಯಬಹುದು" ಎಂದು ಓರ್ವ ದಲಿತ ನನ್ನನ್ನು ಪ್ರಶ್ನಿಸಿದರೆ, ಸರ್ಕಾರಕ್ಕೆ ಇಂತಹ ಪಟ್ಟಿಯ ಬಗ್ಗೆ ಮಾಹಿತಿ ಸಿಕ್ಕಿದರೆ ಆದಾಯ ತೆರಿಗೆ ಇಲಾಖೆಯ ಮೂಲಕ ದಾಳಿ ನಡೆಸಿ ಎಲ್ಲ ದಲಿತ ಉದ್ದಿಮೆದಾರರನ್ನು ಜೈಲಿಗೆ ಕಳುಹಿಸುತ್ತಾರೆ. "ದಲಿತರು ಉದ್ಯಮದಲ್ಲಿ ಯಶಸ್ಸು ಸಾಧಿಸುವುದನ್ನು ಯಾವ ಸರ್ಕಾರ ಸಹಿಸುತ್ತದೆ?" ಎಂದು ಇನ್ನೊರ್ವ ದಲಿತ ನಾಯಕರು ಪ್ರಶ್ನಿಸುತ್ತಾರೆ.

ದಲಿತ ಉದ್ದಿಮೆದಾರರನ್ನು ಹುಡುಕುತ್ತಾ ನಾನೀಗ ದೇಶದ ವಿವಿಧ ನಗರಗಳಿಗೆ ಭೇಟಿ ನೀಡುತ್ತಿದ್ದೇನೆ. ಆದಾಯ ತೆರಿಗೆ ಇಲಾಖೆ, ಮಾರಾಟ ತೆರಿಗೆ ಇಲಾಖೆ, ಜಿಲ್ಲಾ ಮಟ್ಟದ ಅಧಿಕಾರಿಗಳು, ಸ್ಥಳೀಯ ಲೋಕಸಭಾ, ವಿಧಾನಸಭಾ ಸದಸ್ಯರು, ಹೀಗೆ ಎಲ್ಲರಿಗೂ ತಾವು ದಲಿತರು ಎಂಬುದು ತಿಳಿದಿದೆ ಎಂದು ನಾನು ಇದುವರೆಗೆ ಭೇಟಿ ಮಾಡಿದ ಎಲ್ಲ ದಲಿತ ಉದ್ದಿಮೆದಾರರು ಹೇಳಿದ್ದಾರೆ. ದಲಿತ ಐಡೆಂಟಿಟಿಯನ್ನು ಗುಪ್ತವಾಗಿರಿಸಿಕೊಂಡಿ

...ುವ ದಲಿತ ಉದ್ದಿಮೆದಾರರನ್ನು, ನಾನು ಇದುವರೆವಿಗೂ ... ಮಾಡಿಲ್ಲ.

ದಲಿತ ಚಳವಳಿ ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ ಇದು. ಸಮಾಜದಲ್ಲಿ ಹಲವಾರು ಸಮಸ್ಯೆಗಳಿರುವುದರಿಂದ ನಮ್ಮಲ್ಲಿ ಯಾರೂ ಯಶಸ್ವಿಯಾಗಲು ಸಾಧ್ಯವಿಲ್ಲ ಎಂದು ದಲಿತ ಸಮುದಾಯಕ್ಕೆ ನಾವು ಹೇಳುತ್ತಾ ಬಂದರೆ, ಸಕಾರಾತ್ಮಕ ಧೋರಣೆ ಹೊಂದಿರುವ ದಲಿತ ಉದ್ದಿಮೆದಾರರ ಮನಸ್ಥಿತಿಯ ಮೇಲೆ ಕೂಡ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆಯಿದೆ. ಒಟ್ಟಾರೆ ಶಾಲಾ ಶಿಕ್ಷಣ ವ್ಯವಸ್ಥೆ ಬ್ರಾಹ್ಮಣೀಕೃತಗೊಂಡಿರುವುದರಿಂದ ನೀವು ಪ್ರೌಢಶಾಲೆಯಲ್ಲಿ ಉತ್ತೀರ್ಣರಾಗುವುದಿಲ್ಲ ಎಂದು ನಾವು ನಮ್ಮ ಮಕ್ಕಳಿಗೆ ಹೇಳುತ್ತೇವೆಯೇ? ಹೀಗಾಗಿ, ದಲಿತರು ಹೋರಾಟದ ಹಾದಿಯನ್ನು ತೊರೆದು, ಪ್ರೇರಣೆಯ ಹಾದಿಗೆ ತುರ್ತಾಗಿ ಬರಬೇಕಿದೆ.

ಪ್ರೇರಕರ ಪಾತ್ರ

www.blackexperts.com- ಕಪ್ಪು ಸಮುದಾಯದ ಪ್ರೇರಕರು ಮತ್ತು ಭಾಷಣಕಾರರ ಡೈರೆಕ್ಟರಿ.

www.blackspeakers.com- ವ್ಯವಹಾರ, ತಂತ್ರಜ್ಞಾನ, ಆರೋಗ್ಯ, ಹೀಗೆ ಯಾವುದೇ ವಿಚಾರಗಳ ಬಗ್ಗೆ ಮಾತನಾಡಲು ಲಭ್ಯವಿರುವ ಆಫ್ರಿಕಾ ಮೂಲದ ಅಮೆರಿಕನ್ ಪ್ರೇರಕರು ಮತ್ತು ವೃತ್ತಿಪರ ಮಾತುಗಾರರ ಆನ್‌ಲೈನ್ ಡೈರೆಕ್ಟರಿ.

www.drboycewatkins.com- 2007ರ ಜನವರಿ ತಿಂಗಳಲ್ಲಿ ಆರಂಭವಾದ ಕಪ್ಪು ಸಮುದಾಯದ ಪ್ರೇರಕರ ಅಧಿಕೃತ ವೆಬ್ ಪುಟ.

ಇಂತಹ ಅಸಂಖ್ಯ ವೆಬ್ ಲಿಂಕ್‌ಗಳು ನಮಗೆ ಲಭ್ಯವಿದೆ. ಇತ್ತೀಚಿನ ದಿನಗಳಲ್ಲಿ ಪ್ರೇರಣಾತ್ಮಕ ಭಾಷಣಕಲೆ ಅಮೆರಿಕಾದಲ್ಲಿ ಒಂದು ವೃತ್ತಿಯಾಗಿ ವಿಕಾಸ ಹೊಂದುತ್ತಾ ಬಂದಿದೆ. ಅತ್ಯುತ್ತಮ ಸಾಧನೆ ಮಾಡಿರುವ ಸಾವಿರಾರು ಕಪ್ಪು ಸಮುದಾಯದ ಜನ ಅಮೆರಿಕಾದಲ್ಲಿದ್ದು, ಸಮುದಾಯದ ಅಸಂಖ್ಯಾತ ಜನರಿಗೆ ಪ್ರೇರಕಶಕ್ತಿಯಾಗಿದ್ದಾರೆ.

ಕಪ್ಪು ಸಮುದಾಯದ ಬಹಳಷ್ಟು ಬುದ್ಧಿಜೀವಿಗಳ ಪ್ರಕಾರ ಅಮೆರಿಕಾ ಈಗಲೂ ಒಂದು ಆದರ್ಶಮಯವಾದ ಮುಕ್ತ ಸಮಾಜವಲ್ಲ. ವರ್ಣ ತಾರತಮ್ಯ ಇನ್ನೂ ಕೂಡ ಕಪ್ಪು ಜನರ ಇತಿಹಾಸದ ಪುಟ ಸೇರಿಲ್ಲ. ವರ್ಣಾಧಾರಿತ ತಾರತಮ್ಯ ಅಮೆರಿಕಾದಲ್ಲಿ ಈಗಲೂ ಕೂಡ ಜೀವಂತವಾಗಿದೆ. ತಾವು ಯಾರ ಜೀತದಾಳುಗಳಾಗಿದ್ದೆವು ಎಂದು ಕಪ್ಪು ಜನರಿಗೂ ಗೊತ್ತಿದೆ. ಬಹಳಷ್ಟು ಮಂದಿ ಬಿಳಿಯ ಸಮುದಾಯದವರ ಸಾಧನೆಯ ಹಿಂದೆ ಕೆಲಸ ಮಾಡಿರುವುದು ಕೇವಲ ಬುದ್ಧಿವಂತಿಕೆಯೊಂದೇ ಅಲ್ಲ ಎಂಬುದು ಕೂಡ ಕಪ್ಪು ಜನರಿಗೆ ಮನದಟ್ಟಾಗಿದೆ. ಕಪ್ಪು ಸಮುದಾಯದಲ್ಲಿ ಬಡತನದ ಸಮಸ್ಯೆ ಕೂಡ ಇವತ್ತಿನವರೆಗೂ ನೀಗಿಲ್ಲ. ಜೀತಪದ್ಧತಿ ಕೊನೆಯಾಗಿ ವರುಷಗಳು ಕಳೆದರೂ, ಅದರ ಪ್ರಭಾವ ಇನ್ನೂ ಇದೆ.

ಹಾಗಾದರೆ, ಅಮೆರಿಕಾದ ಕಪ್ಪು ಜನರ ಮುಂದಿರುವ ಅವಕಾಶಗಳಾದರೂ ಏನು? ಜಗತ್ತಿನಾದ್ಯಂತ ವಿವಿಧ ದೇಶಗಳ ಜನ ಅಮೆರಿಕಾ ಪ್ರವೇಶಿಸಲು ಹಾತೊರೆಯುತ್ತಿರುವಾಗ ಕಪ್ಪು ಜನರು ತಮ್ಮ ದೇಶವನ್ನು ತೊರೆದು ಹೋಗಬೇಕೆ? ಅಥವಾ ಅಮೆರಿಕಾದ ವ್ಯವಸ್ಥೆಯನ್ನು ತಲೆಕೆಳಗು ಮಾಡಿ ಬಿಳಿಯರನ್ನು ಜೀತದಾಳುಗಳಂತೆ ದುಡಿಸಿಕೊಳ್ಳಬೇಕೆ? ಅಥವಾ ವ್ಯವಸ್ಥೆಯೊಳಗೆ ನುಗ್ಗಿ ಸಂಪನ್ಮೂಲ ಮತ್ತು ಸಂತೃಪ್ತಿಯ ಇತರ ಮೂಲಗಳ ಮೇಲೆ ಬಿಳಿಯರು ಸಾಧಿಸಿರುವ ಪ್ರಾಬಲ್ಯವನ್ನು ಮುರಿಯಬೇಕೆ? ವರ್ಣತಾರತಮ್ಯದ ವಿರುದ್ಧದ ಹೋರಾಟವನ್ನು ಕಪ್ಪು ಜನರು ನಿಲ್ಲಿಸಿಲ್ಲ, ಬದಲಿಗೆ ಹೋರಾಟದ ಪರಿಕರಗಳನ್ನು ಮತ್ತಷ್ಟು ಹರಿತಗೊಳಿಸಿಕೊಂಡಿದ್ದಾರೆ. ಇದರ ಪ್ರಭಾವ ಎಷ್ಟರಮಟ್ಟಿಗೆ ಇದೆ ಎಂದರೆ ಹೋರಾಟದ ಈ ಹೊಸ ಮಾರ್ಗ ಬಿಳಿಯರ ಮನಗೆಲ್ಲುವಲ್ಲಿ ಕೂಡ ಯಶಸ್ವಿಯಾಗಿದೆ.

ಜೀತಪದ್ಧತಿ ಮುಂದುವರೆಯಲಿ ಎಂಬ ಆಸೆ ಬಿಳಿಯರಿಗಿತ್ತು. ಆದರೆ ಜೀತಪದ್ಧತಿ ಕೊನೆಯಾಯಿತು. ಕಪ್ಪು ಜನ ಶಾಲೆಯ ತರಗತಿಯ ಹೊರಗಿರಬೇಕೆಂದು ಬಿಳಿಯರ ಆಸೆಯಾಗಿತ್ತು. ಆದರೆ ಕಪ್ಪು ಜನ ತರಗತಿಯ ಒಳಗೇ ಬಂದರು. ಕಪ್ಪು ಜನ ಶಾಲೆಯನ್ನು ಪ್ರವೇಶಿಸುವುದನ್ನು ತಡೆಯುವ ಉದ್ದೇಶದಿಂದ, ಬಿಳಿಯರು ಅವರಿಗಾಗಿ ಪ್ರತ್ಯೇಕವಾದ ಶಾಲೆಗಳನ್ನು ತೆರೆದರು (ಭಾರತದಲ್ಲಿ ದಲಿತರಿಗೆ ಕೆಲವು ಪ್ರತ್ಯೇಕ ಶಾಲೆಗಳಿರುವ ಹಾಗೆ). ಆದರೆ ಕಪ್ಪು ಜನರು ಮುಖ್ಯವಾಹಿನಿಯನ್ನು ಪ್ರವೇಶಿಸಲಾರಂಭಿಸಿದರು. ಕಪ್ಪು ಜನರು ತಮ್ಮ ಕೈಕೆಳಗೆ ಶಾಶ್ವತವಾಗಿ ಕೆಲಸ ಮಾಡಬೇಕೆಂದು ಬಿಳಿಯರ ಆಸೆಯಾಗಿತ್ತು. ಆದರೆ ನೂರಾರು ಸಾವಿರಾರು ಮಂದಿ ಕಪ್ಪು ಜನರ ಕೈಕೆಳಗೆ ಬಿಳಿಯರು ಕೆಲಸ ಮಾಡುವಂತಾಯಿತು. ಸುಖದ ಮೂಲಗಳಿಂದ ಕಪ್ಪು ಜನರನ್ನು ಸದಾ ದೂರವಿಡಬೇಕೆಂಬ ಆಸೆ ಬಿಳಿಯರಗಿತ್ತು. ಆದರೆ ಕಪ್ಪು ಜನರು ಸುಖದ ಮಾರುಕಟ್ಟೆಯನ್ನು ಕೂಡ ಪ್ರವೇಶಿಸಿಬಿಟ್ಟರು. ಈ ಕದನ ಇನ್ನೂ ನಡೆಯುತ್ತಿದೆ. ಕಪ್ಪು ಜನಾಂಗದ ಹೊಸಪೀಳಿಗೆಯು ಮುಖ್ಯವಾಹಿನಿಯ ಜೊತೆಗೆ ಹೊಂದಿಕೊಂಡು ಗೌರವಯುತ ಬದುಕು ನಡೆಸಲು ಮತ್ತು ಯಶಸ್ಸು ಸಾಧಿಸಲು ಪ್ರೇರಣೆ ನೀಡುವಂತಹ ಹೋರಾಟದ ಹೊಸ ದಾರಿಯಲ್ಲಿ ಕಪ್ಪು ಜನರ ಚಳವಳಿ ಮುಂದುವರೆದಿದೆ.

> **ಕಪ್ಪು ಸಮುದಾಯದ ಬಹಳಷ್ಟು ಬುದ್ಧಿಜೀವಿಗಳ ಪ್ರಕಾರ ಅಮೆರಿಕಾ ಈಗಲೂ ಒಂದು ಆದರ್ಶಮಯವಾದ ಮುಕ್ತ ಸಮಾಜವಲ್ಲ. ವರ್ಣ ತಾರತಮ್ಯ ಇನ್ನೂ ಕೂಡ ಕಪ್ಪು ಜನರ ಇತಿಹಾಸದ ಪುಟ ಸೇರಿಲ್ಲ. ವರ್ಣಾಧಾರಿತ ತಾರತಮ್ಯ ಅಮೆರಿಕಾದಲ್ಲಿ ಈಗಲೂ ಕೂಡ ಜೀವಂತವಾಗಿದೆ. ತಾವು ಯಾರ ಜೀತದಾಳುಗಳಾಗಿದ್ದೆವು ಎಂದು ಕಪ್ಪು ಜನರಿಗೂ ಗೊತ್ತಿದೆ. ಬಹಳಷ್ಟು ಮಂದಿ ಬಿಳಿಯ ಸಮುದಾಯದವರ ಸಾಧನೆಯ ಹಿಂದೆ ಕೆಲಸ ಮಾಡಿರುವುದು ಕೇವಲ ಬುದ್ಧಿವಂತಿಕೆಯೊಂದೇ ಅಲ್ಲ ಎಂಬುದು ಕೂಡ ಕಪ್ಪು ಜನರಿಗೆ ಮನದಟ್ಟಾಗಿದೆ. ಕಪ್ಪು ಸಮುದಾಯದಲ್ಲಿ ಬಡತನದ ಸಮಸ್ಯೆ ಕೂಡ ಇವತ್ತಿನವರೆಗೂ ನೀಗಿಲ್ಲ. ಜೀತ ಪದ್ಧತಿ ಕೊನೆಯಾಗಿ ವರುಷಗಳು ಕಳೆದರೂ, ಅದರ ಪ್ರಭಾವ ಇನ್ನೂ ಇದೆ.**

ಹಾಗಾದರೆ, ಭಾರತದಲ್ಲಿ ದಲಿತರೇನು ಮಾಡಬೇಕಿದೆ? "ದಲಿತ ಪ್ರೇರಕರು/ ಭಾಷಣಕಾರ"ರ ಬಗ್ಗೆ ಇಂತ ಜರ್ನಲವನ್ನು ಜಾಲಾಡಿದರೆ ಒಂದೇ ಒಂದು ದಲಿತ ಪ್ರೇರಕರ ಹೆಸರು ಕೂಡ ಸಿಗುವುದಿಲ್ಲ. ನಿಜ ಹೇಳಬೇಕೆಂದರೆ, ದಲಿತ ಚಳವಳಿಯಲ್ಲಿ "ಪ್ರೇರಣೆ"ಯ ಮಾತೇ ಬರುವುದಿಲ್ಲ. ದಲಿತರು ಕೂಡ ಅಮೆರಿಕಾದ ಕಪ್ಪು ಜನರಂತಹ ಸಾಮಾಜಿಕ ಸ್ಥರವನ್ನು ಹೊಂದಿರುವವರೆ. ದಲಿತರ ವಿಷಯದಲ್ಲಿ ಇಲ್ಲಿನ ವ್ಯವಸ್ಥೆ ಯಾವಾಗಲೂ ಕೆಟ್ಟದಾಗಿಯೇ ವರ್ತಿಸುತ್ತಾ ಬಂದಿದೆ. ಅಮೆರಿಕಾದಲ್ಲಿರುವ ವಾಲ್‌ಸ್ಟ್ರೀಟ್‌ಗಿಂತ ಸಾವಿರಪಟ್ಟು ತಾರತಮ್ಯವನ್ನು ಭಾರತದ ದಲಾಲ್ ಸ್ಟ್ರೀಟ್ ಎಸಗುತ್ತಾ ಬಂದಿದೆ. ಹಾಗಾದರೆ ದಲಾಲ್‌ಸ್ಟ್ರೀಟ್ ಮಾರುಕಟ್ಟೆಯನ್ನು ಕೆಟ್ಟದಾಗಿ ಬಿಂಬಿಸಿ ದಲಿತ ಉದ್ಯಮಿಗಳು ಅತ್ತಕಡೆ ಸುಳಿದಾಡದಂತೆ ಮಾಡುವುದು ಸರಿಯೇ? ಅಥವಾ ದಲಿತ ಯುವ ಉದ್ದಿಮೆದಾರರು ಹೇಗಾದರೂ ಸರಿ, ದಲಾಲ್ ಸ್ಟ್ರೀಟ್ ಪ್ರವೇಶಿಸುವಂತೆ ಪ್ರೇರಣೆ ಒದಗಿಸುವುದು ಸರಿಯೇ?

ಅದೇ ರೀತಿ ದಲಿತ ಯುವಕ/ ಯುವತಿಯರು ಮೇಲ್ಜಾತಿಗಳ ಹಿಡಿತದಲ್ಲಿರುವ ಇಂಗ್ಲಿಷ್ ಶಿಕ್ಷಣ ಪಡೆಯಲು, ವಿಜ್ಞಾನದ ಪ್ರಯೋಗಾಲಯಗಳನ್ನು ಪ್ರವೇಶಿಸಲು, ಮಾರುಕಟ್ಟೆಗೆ ಲಗ್ಗೆಯಿಡಲು, ಉದ್ಯಮ-ವ್ಯಾಪಾರಗಳಲ್ಲಿ ತೊಡಗಲು, ಸುದ್ದಿಮನೆಗಳು, ಟಿವಿ ಸ್ಟುಡಿಯೋಗಳನ್ನು ಪ್ರವೇಶಿಸಲು ಪ್ರೇರಣೆ ಯಾಕೆ ನೀಡಬಾರದು?

ದಲಿತರು ನಿಜವಾಗಲೂ ಈ ಕಾರ್ಯಗಳನ್ನು ಮಾಡಬೇಕೇ? ಇದಕ್ಕೆ ಪ್ರೇರಕರ ಉತ್ತರ ಹೌದು. ಹಾಗಾದರೆ ಈ ಕ್ಷೇತ್ರಗಳಿಗೆ ಪ್ರವೇಶಿಸಲು ದಲಿತರಿಗೆ ಸಾಧ್ಯವಿದೆಯೇ? ಇದಕ್ಕೂ ಪ್ರೇರಕರ ಉತ್ತರ ಹೌದು ಎಂದೇ ಇರುತ್ತದೆ. ಈ ಕಾರ್ಯವನ್ನು ಸಾಧಿಸುವ ಮಾರ್ಗವನ್ನು ಕೂಡ ಪ್ರೇರಕರು ವಿವರಿಸುತ್ತಾರೆ. ಅಮೆರಿಕಾದ ಕಪ್ಪು ಜನರ ಚಳವಳಿಯಲ್ಲಿ ಪ್ರಸ್ತುತ ಇಂತಹ ಪ್ರಯತ್ನಗಳು ನಡೆಯುತ್ತಿವೆ. ಹಾಗೆಂದು ಹೋರಾಟಗಳು ನಡೆಯುತ್ತಲೇ ಇಲ್ಲ ಎಂದೇನೂ ಇಲ್ಲ. ಆದರೆ, ಕಪ್ಪು ಮಂದಿ ಅಮೆರಿಕಾ ಸಮಾಜದ ಎಲ್ಲ ಕ್ಷೇತ್ರಗಳನ್ನು ಪ್ರವೇಶಿಸಬೇಕೆನ್ನುವುದೇ ಚಳವಳಿಯ ಮುಖ್ಯ ಗುರಿ. ಇಂತಹ ಪ್ರಯತ್ನಗಳ ಹಿಂದೆ ಪ್ರೇರಕರ ಕೊಡುಗೆ ಸಾಕಷ್ಟಿದೆ.

ಆದರೆ ಭಾರತದಲ್ಲಿ ದಲಿತ ಚಳವಳಿ ಇನ್ನೂ ಕೂಡ ಹೋರಾಟದ ಗುಂಗಿನಲ್ಲಿಯೇ ಉಳಿದುಬಿಟ್ಟಿದೆ. ದಲಿತ ಹೋರಾಟಗಾರರ ಉದ್ದೇಶ ಒಳ್ಳೆಯದೇ ಆಗಿದ್ದರೂ, ಸಮಸ್ಯೆಗಳ ನಿವಾರಣೆಗೆ ಅವರು ಒದಗಿಸುತ್ತಿರುವ ಪರಿಹಾರದ ಸೂತ್ರಗಳು ಸಮರ್ಪಕವಾಗಿಲ್ಲ. ದಲಿತಪರವಾಗಿ ಕೆಲಸ ಮಾಡುತ್ತಿರುವ ಎಲ್ಲ ದಲಿತ ಹೋರಾಟಗಾರರ ಬಗ್ಗೆ ನನಗೆ ಗೌರವವಿದೆ. ಆದರೆ ಕೆಲವು ದಲಿತ ಹೋರಾಟಗಾರರು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಹಳೆಯ ಮಾರ್ಗಗಳಿಗೆ ಜೋತು ಬಿದ್ದು, ತಮಗೆ ಅರಿವಿಲ್ಲದಂತೆ ಶೋಷಿತರನ್ನು, ಮತ್ತೊಮ್ಮೆ ಶೋಷಣೆ ಮಾಡುತ್ತಿದ್ದಾರೆ.

ದಲಿತ ನಾಯಕರು ವಾಸ್ತವ ಸ್ಥಿತಿಯನ್ನು ಅವಲೋಕನ ಮಾಡಲು ಇದು ಸೂಕ್ತ ಸಮಯ. ದಲಿತ ಚಳವಳಿಗೆ ಹೊಸ ದಿಶೆ ತೋರಿಸುವ ಗುರುತರ ಜವಾಬ್ದಾರಿ ಈ ನಾಯಕರಿಗಿದೆ. ದಲಿತ ನಾಯಕರು, ದಲಿತ ಪ್ರೇರಕ

ಪ್ರೇರಣೆಯ ನಿಧಾನಗಳು

> ಭಾರತದಲ್ಲಿ ದಲಿತ ಚಳವಳಿ ಇನ್ನೂ ಕೂಡ ಹೋರಾಟದ ಗುಂಗಿನಲ್ಲಿಯೇ ಉಳಿದುಬಿಟ್ಟಿದೆ. ದಲಿತ ಹೋರಾಟಗಾರರ ಉದ್ದೇಶ ಒಳ್ಳೆಯದೇ ಆಗಿದ್ದರೂ, ಸಮಸ್ಯೆಗಳ ನಿವಾರಣೆಗೆ ಅವರು ಒದಗಿಸುತ್ತಿರುವ ಪರಿಹಾರದ ಸೂತ್ರಗಳು ಸಮರ್ಪಕವಾಗಿಲ್ಲ. ದಲಿತ ಪರವಾಗಿ ಕೆಲಸ ಮಾಡುತ್ತಿರುವ ಎಲ್ಲ ದಲಿತ ಹೋರಾಟಗಾರರ ಬಗ್ಗೆ ನನಗೆ ಗೌರವ ಇದೆ. ಆದರೆ ಕೆಲವು ದಲಿತ ಹೋರಾಟಗಾರರು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಹಳೆಯ ಮಾರ್ಗಗಳಿಗೆ ಜೋತು ಬಿದ್ದು, ತಮಗೆ ಅರಿವಿಲ್ಲದಂತೆ ಶೋಷಿತರನ್ನು, ಮತ್ತೊಮ್ಮೆ ಶೋಷಣೆ ಮಾಡುತ್ತಿದ್ದಾರೆ. ದಲಿತ ನಾಯಕರು ವಾಸ್ತವ ಸ್ಥಿತಿಯನ್ನು ಅವಲೋಕನ ಮಾಡಲು ಇದು ಸೂಕ್ತ ಸಮಯ. ದಲಿತ ಚಳವಳಿಗೆ ಹೊಸ ದಿಶೆ ತೋರಿಸುವ ಗುರುತರ ಜವಾಬ್ದಾರಿ ಈ ನಾಯಕರಿಗಿದೆ. ದಲಿತ ನಾಯಕರು, ದಲಿತ ಪ್ರೇರಕರಾಗಿ ಬದಲಾಗಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ದಲಿತರಿಗೆ ಪ್ರೇರಣೆ ಒದಗಿಸುವ ನಾಯಕರು ನಮ್ಮಲ್ಲಿ ಯಾರಿದ್ದಾರೆ?

ರಾಗಿ ಬದಲಾಗಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ದಲಿತರಿಗೆ ಪ್ರೇರಣೆ ಒದಗಿಸುವ ನಾಯಕರು ನಮ್ಮಲ್ಲಿ ಯಾರಿದ್ದಾರೆ?

* * * * *

ಜಗತ್ತಿನ ಬೃಹತ್ ಉದ್ಯಮಗಳಲ್ಲಿ ಜಾಹೀರಾತು ಕ್ಷೇತ್ರ ಕೂಡ ಒಂದು. ಭಾರತದಲ್ಲಿ ಕೂಡ ಜಾಹೀರಾತು ಬೃಹತ್ ಉದ್ಯಮವಾಗಿ ಬೆಳೆದಿದೆ. ಉನ್ನತವರ್ಗದವರು ಬಳಸುವ ಉತ್ಪನ್ನಗಳನ್ನು ತಯಾರಿಸುವ ಸಂಸ್ಥೆಗಳು ಕೂಡ ತಮ್ಮ ಜಾಹೀರಾತುಗಳಲ್ಲಿ ಜನಪ್ರಿಯ ರೂಪದರ್ಶಿಗಳು, ನಟ ನಟಿಯರು, ಕ್ರೀಡಾಪಟುಗಳನ್ನು ಬಳಸುವುದು ಸಾಮಾನ್ಯ. ಒಂದು ಸಣ್ಣ ಬಿಸ್ಕೆಟ್ ಪ್ಯಾಕೆಟ್ ಪ್ರಚಾರಕ್ಕೆ ಜನಪ್ರಿಯ ತಾರೆಗಳಿಗೆ ಲಕ್ಷಾಂತರ ರೂ. ಬೆಲೆ ತೆರುವ ಪರಿಪಾಠವಿದೆ. ಒಂದು ಕೆಳಮಟ್ಟದ ಕೇಶತೈಲದ ಜಾಹೀರಾತಿನಲ್ಲಿ ದೊಡ್ಡ ನಟರೊಬ್ಬರು ಕಾಣಿಸಿಕೊಳ್ಳುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಸೋಪ್, ಶ್ಯಾಂಪೂಗಳ ಪ್ರಚಾರಕ್ಕೂ ಸಿನಿಮಾ ತಾರೆಯರೇ ಬೇಕು. ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವ ಫೋರ್ಡ್ ಮೋಟರ್ಸ್, ಟೊಯೋಟಾ, ಮತ್ತು ಹೋಂಡಾಗಳಂತಹ ಬ್ರ್ಯಾಂಡ್‌ಗಳು ಕೂಡ ಜನಪ್ರಿಯ ತಾರೆಯರಿಲ್ಲದೆ ಮಾರುಕಟ್ಟೆ ಪ್ರವೇಶಿಸುವುದಿಲ್ಲ.

ಬೃಹತ್ ಉದ್ಯಮ ಸಂಸ್ಥೆಗಳು ಸಾಮಾಜಿಕ ಆಯಾಮಗಳ ಬಗ್ಗೆ ಗಮನಹರಿಸಿ ಜಾಹೀರಾತುಗಳನ್ನು ನಿರ್ಮಿಸುತ್ತಾರೆ ಎಂದು ನಮಗೆಲ್ಲರಿಗೂ ಗೊತ್ತು. ಯಶಸ್ವಿ ವ್ಯಕ್ತಿಗಳನ್ನು ಅನುಕರಿಸುವುದು ಮನುಷ್ಯನ ಸಹಜವಾದ ಮಾನಸಿಕ ನಡವಳಿಕೆ. ಸಾಮಾಜಿಕವಾಗಿ ಮೇಲುಸ್ತರಕ್ಕೇರಲು ಎಲ್ಲ ಮನುಷ್ಯರೂ ಸದಾ ಪ್ರಯತ್ನಿಸುತ್ತಿರುತ್ತಾರೆ. ಉತ್ಪನ್ನಗಳ ಅಸಲಿ ಗುಣಮಟ್ಟವನ್ನು ಅರಿತುಕೊಳ್ಳದೆ ರೂಪದರ್ಶಿಗಳು ಕೆಲವೊಮ್ಮೆ ಉತ್ಪನ್ನಗಳ ಪ್ರಚಾರ ಮಾಡುವುದುಂಟು. ಜನಪ್ರಿಯ ತಾರೆಯರು ಇಂತಹ ಉತ್ಪನ್ನಗಳಿಗೆ ಪ್ರಚಾರ ನೀಡುವುದರಿಂದ ಜನರು ಅದನ್ನು ಸ್ವೀಕರಿಸುವ ಸಾಧ್ಯತೆ ಹೆಚ್ಚು. ಜಾಹೀರಾತು ಉದ್ಯಮ ನಡೆಯುವುದೇ ಈ ಭ್ರಮೆಯ ಆಧಾರದ ಮೇಲೆ.

ಜಾಹೀರಾತು ಉದ್ಯಮಕ್ಕೆ ಅನ್ವಯವಾಗುವ ತರ್ಕವನ್ನು ಐತಿಹಾಸಿಕವಾಗಿ ಶೋಷಿತರಾಗಿರುವ ಸಮುದಾಯಗಳಿಗೂ ಅನ್ವಯಿಸಬಹುದು. ಅಮೆರಿಕಾದ ಮಹಾನ್ ಪ್ರೇರಕರಲ್ಲಿ ಬಿಲ್ ಕಾಸ್ಬಿ ಒಬ್ಬರು. ಕಪ್ಪು ಸಮುದಾಯಕ್ಕೆ ಸೇರಿದ ಕಾಸ್ಬಿ ಹಾಸ್ಯ ಕಲಾವಿದರಾಗಿ ಅಮೆರಿಕಾದಲ್ಲಿ ಮನೆ ಮಾತಾಗಿದ್ದಾರೆ. ಬಾಲ್ಯದಲ್ಲಿ ಬಡತವನ್ನು ಅನುಭವಿಸಿದ್ದ ಕಾಸ್ಬಿ ಈಗ ಶ್ರೀಮಂತರಷ್ಟೇ ಅಲ್ಲ, ಜನಪ್ರಿಯರೂ ಹೌದು. ಕಾಸ್ಬಿಯ ತಾಯಿ ಓರ್ವ ಕೆಲಸದಾಕೆ, ತಂದೆ ಅಮೆರಿಕಾದ ನೌಕಾದಳದಲ್ಲಿ ಅಡುಗೆಯವ. ಕಾಸ್ಬಿ ತನ್ನ ತಂದೆಯನ್ನು ಸರಿಯಾಗಿ ನೋಡಿದ್ದೇ ಅಪರೂಪ.

ಹತ್ತನೆಯ ತರಗತಿಯಲ್ಲಿ ಫೇಲಾದ ಕಾಸ್ಬಿ ಶೂ ರಿಪೇರಿ ಕೆಲಸಕ್ಕೆ ಸೇರಿಕೊಂಡ. ನಂತರ ಬಾರ್ಟೆಂಡರ್ ಕೆಲಸಕ್ಕೆ ಸೇರಿ ಗ್ರಾಹಕರನ್ನು ರಂಜಿಸುತ್ತಿದ್ದ. ಬಾರ್‌ನಲ್ಲಿ ತನ್ನ ವಿಶಿಷ್ಟ ಸೇವೆಯಿಂದ ಎಲ್ಲರ ಗಮನ ಸೆಳೆಯುತ್ತಿದ್ದ ಕಾಸ್ಬಿ, ಹಾಸ್ಯ ವೃತ್ತಿಯನ್ನು ಗಂಭೀರವಾಗಿ ತೆಗೆದುಕೊಂಡ. ನಂತರದ ದಿನಗಳಲ್ಲಿ ಟೆಲಿವಿಷನ್ ಮತ್ತು ಚಲನಚಿತ್ರಗಳನ್ನು ಪ್ರವೇಶಿಸಿದ ಕಾಸ್ಬಿ ಇಂದು ಸೂಪರ್‌ಸ್ಟಾರ್ ಕಾಮಿಡಿಯನ್. ಲೇಖಕನಾಗಿ ಕೂಡ ಹೆಸರು ಮಾಡಿದ ಕಾಸ್ಬಿ, ಈಗ ಅಮೆರಿಕಾದ ಜನಪ್ರಿಯ ತಾರೆ.

ಕಾಸ್ಬಿ ಈಗ ಪ್ರೇರಣಾತ್ಮಕ ಭಾಷಣಕಾರನೂ ಹೌದು. ಕಪ್ಪು ಸಮುದಾಯದವರಿಗೆ ತನ್ನ ಯಶೋಗಾಥೆಯನ್ನು ಹೇಳಿ ಕಾಸ್ಬಿ ಅವರಿಗೆ ಪ್ರೇರಣೆ ನೀಡುತ್ತಿದ್ದಾನೆ. ಕಾಸ್ಬಿ ಎಷ್ಟು ಜನಪ್ರಿಯನೆಂದರೆ, ಈ ರೀತಿ ಪ್ರೇರಣಾತ್ಮಕ ಭಾಷಣ ಮಾಡಲು ಸಂಭಾವನೆ ಕೂಡ ತೆಗೆದುಕೊಳ್ಳುತ್ತಾನೆ.

www.blackspeakers.com ವೆಬ್‌ಸೈಟ್‌ಗೆ ಭೇಟಿ ನೀಡಿದರೆ ಕಪ್ಪು ಸಮುದಾಯದ ಜನರಿಗೆ ಪ್ರೇರಣೆ ನೀಡುತ್ತಿರುವ ಭಾಷಣಕಾರರು ಅರ್ಹತೆ ಎಂಥಹುದು ಎಂದು ಮನದಟ್ಟಾಗುತ್ತದೆ. ಕಪ್ಪು ವೈದ್ಯರ ರಾಷ್ಟ್ರೀಯ ಸಮಾಜದ ಅಧ್ಯಕ್ಷರಾದ ಡಾ. ಪೀಟರ್ ಜೆ ಡೆಲ್‌ಫ್ಲೆಯಟ್, ವಿದ್ವಾಂಸ ಡಾ. ಅರಿಸ್ಟಾಟಲ್ ವಿಂಗರ್‌ರಂತಹ ಉನ್ನತ ವ್ಯಕ್ತಿಗಳು ಇಲ್ಲಿದ್ದಾರೆ. 26ನೆಯ ವಯಸ್ಸಿಗೆ ಕಾರ್ನಗಿ ಮೆಲ್ಲನ್ ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರದ ಪಿಎಚ್‌ಡಿ ಪದವಿ ಪಡೆದ ವಿಂಗರ್, ಕಪ್ಪು ಸಮುದಾಯದಲ್ಲಿ ಗಣಿತ ಶಾಸ್ತ್ರಜ್ಞರಾಗಬೇಕೆಂಬ ಗುರಿ ಹೊಂದಿರುವವರಿಗೆಲ್ಲ ಆದರ್ಶಪ್ರಾಯರಾಗಿದ್ದಾರೆ. ವಿಶ್ವದ ಅತ್ಯುತ್ತಮ ನೂರು ಇಂಟೀರಿಯರ್ ವಿನ್ಯಾಸಕಾರರಲ್ಲಿ ಒಬ್ಬರಾದ ಸೆಸಿಲ್ ಹೇಸ್ ಅವರು ಪ್ರೇರಣಾತ್ಮಕ ಭಾಷಣಕಾರರಾಗಿದ್ದಾರೆ. ಇಂತಹ ಪ್ರೇರಕರ ದೊಡ್ಡ ಪಟ್ಟಿಯೇ ಇಲ್ಲಿದೆ.

ಕಪ್ಪು ಸಮುದಾಯದ ಪ್ರೇರಕರೆಲ್ಲರೂ ತಂತಮ್ಮ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಮಾಡಿರುವವರಾಗಿದ್ದಾರೆ. ಹಲವಾರು ತೊಡಕುಗಳ ನಡುವೆಯೂ ಕಪ್ಪು ಜನ, ಬಿಳಿಯರಿಗೆ ಸರಿಸಮಾನರಾಗಿ, ಕೆಲವೊಮ್ಮೆ ಅವರನ್ನು ಮೀರಿಸುವಂತಹ ಸಾಧನೆಗಳನ್ನು ಮಾಡಿದ್ದಾರೆ. ಇಂತಹ ಸಾಧಕರು ಅಮೆರಿಕಾದ ಕಪ್ಪು ಸಮುದಾಯದ ಯುವಕರಿಗೆ ಪ್ರೇರಕ ಶಕ್ತಿಯಾಗಿದ್ದಾರೆ. ಇನ್ನು ಈ ಪ್ರೇರಣಾತ್ಮಕ ಭಾಷಣಕಾರರು ತಮ್ಮ ಭಾಷಣಗಳಿಗೆ ಸಂಭಾವನೆಯನ್ನು ಕೂಡ ಪಡೆದುಕೊಳ್ಳುತ್ತಿರುವುದು ಸಾಮಾನ್ಯ.

ಆದರೆ ದಲಿತ ಚಳವಳಿಯಲ್ಲಿ ನಡೆಯುತ್ತಿರುವುದೇನು? "ಪ್ರೇರಣಾತ್ಮಕ ದಲಿತ ಭಾಷಣಕಾರರು" ಎಂಬ ಪರಿಕಲ್ಪನೆಯೇ ಇಲ್ಲಿಲ್ಲ. ಬಹಳಷ್ಟು ದಲಿತ ಹೋರಾಟಗಾರರು ತಮಗರಿವಿಲ್ಲದಂತೆ ತಮ್ಮ ಸಮುದಾಯದ ಶೋಷಿತರನ್ನು ಶೋಷಣೆ ಮಾಡುತ್ತಿರುತ್ತಾರೆ. ಬಹಳಷ್ಟು ಸಂದರ್ಭಗಳಲ್ಲಿ ದಲಿತ ಚಳವಳಿಗೆ ಧುಮುಕಿರುವ ಕಾರ್ಯಕರ್ತರು ತಂತಮ್ಮ ಕ್ಷೇತ್ರಗಳಲ್ಲಿ ಸ್ಪರ್ಧಿಸಲಾಗದೆ ಸೋತು ಬಂದವರಾಗಿರುತ್ತಾರೆ. ಇಂತಹವರು ದಲಿತ ಯುವಕರಿಗೆ ಪ್ರೇರಣೆ ಒದಗಿಸಲು ಸಾಧ್ಯವಿದೆಯೇ?

ಓರ್ವ ಪ್ರೇರಕ ಜಾತಿ ಗೋಡೆಗಳನ್ನು ಹೊಡೆದುರುಳಿಸಬಲ್ಲ, ಶೋಷಿತರನ್ನು ಯಶಸ್ಸಿನ ದಾರಿಯೆಡೆಗೆ ಕೊಂಡೊಯ್ಯಬಲ್ಲ. ಆದರೆ ಹೋರಾಟಗಾರು ಯಾವಾಗಲೂ ಜಾತಿ ಸಮಾಜ ಸೃಷ್ಟಿಸಿರುವ ವಿರೋಧಿಗಳ ನಡುವೆಯೇ ಕೆಲಸ ಮಾಡಬೇಕಾಗುತ್ತದೆ. ತಮಗರಿವಿಲ್ಲದಂತೆಯೇ ಒಟ್ಟಾರೆ ಸಮುದಾಯದಲ್ಲಿ ಹತಾಷೆ ಹುಟ್ಟಲು ಇವರು ಕಾರಣರಾಗುತ್ತಾರೆ. ಹೀಗಾಗಿ ಸಾಧನೆಯ ಕನಸು ಕಾಣುತ್ತಿರುವ ದಲಿತ ಯುವಕರು ಆತ್ಮಸ್ಥೈರ್ಯವನ್ನು ಕಳೆದುಕೊಳ್ಳುತ್ತಾ ಬರುತ್ತಾರೆ.

ದಲಿತ ಚಳವಳಿ ಆತ್ಮವಿಮರ್ಶೆ ಮಾಡಿಕೊಳ್ಳುವ ಸಮಯ ಬಂದಿದೆ. ತಾರತಮ್ಯದ ಗೋಡೆಗಳನ್ನು ಮೆಟ್ಟಿ ನಿಲ್ಲುವ ದಾರಿ ಹುಡುಕುವ ಪ್ರಯತ್ನಗಳಿಗೆ ಮಹತ್ವ ಸಿಗಬೇಕಿದೆ. ಸಮಸ್ಯೆಗಳ ಬಗ್ಗೆ ನಮಗೆ ಅರಿವಿದೆ. ಜಾತಿವ್ಯವಸ್ಥೆಯ ನೀಚತನದ ಬಗ್ಗೆ ಕೂಡ ನಮಗೆ ತಿಳಿದಿದೆ. ಆದರೆ ಇವೆಲ್ಲದರ ನಡುವೆ ತಂತಮ್ಮ ವೃತ್ತಿಯಲ್ಲಿ ಯಶಸ್ಸು ಸಾಧಿಸಿರುವ ಸಾವಿರಾರು ದಲಿತರಿದ್ದಾರೆ. ದಲಿತ ಸಮುದಾಯದ ಬಹಳಷ್ಟು ಮಂದಿ ವಿಫಲರಾಗಿದ್ದಾರೆ ಎಂದು ಹಲುಬುವುದಕ್ಕಿಂತ, ದಲಿತ ಸಾಧಕರ ಯಶಸ್ಸಿನ ಗುಟ್ಟನ್ನು ತಿಳಿದುಕೊಳ್ಳುವುದು ಅತ್ಯವಶ್ಯಕ. □

ಬುದ್ಧಾಯಣ

೫೦

ಹುಲ್ಲುಕಡ್ಡಿಯ ತೋರಿ ಹುಂಡಿ ಹೊಡೆದನಾ ಸಂನ್ಯಾಸಿ !

ಸಿ. ಎಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವತ್ಥಿಯ ಜೇತವನದಲ್ಲಿ ತಂಗಿದ್ದರು. ಬ್ರಹ್ಮದತ್ತ ರಾಜನು ವಾರಾಣಸಿಯನ್ನು ಆಳುತ್ತಿದ್ದ. ಅಂಥಹ ಸಂದರ್ಭದಲ್ಲಿ ಒಬ್ಬ ಬ್ರಾಹ್ಮಣ ಸಂನ್ಯಾಸಿ ಇದ್ದ. ಅವನು ನೋಡಲು ಸುಂದರವಾಗಿದ್ದ. ಆತನ ಮಾತು ಬಲು ಮಧುರವಾಗಿತ್ತು. ಅವರವರ ಭಾವವನ್ನು ಸಂದರ್ಭವನ್ನು ಮತ್ತು ಅವರ ದೌರ್ಬಲ್ಯವನ್ನು ಕ್ಷಣಾರ್ಧದಲ್ಲಿ ಅರಿತು ಅವರಿಗೆ ಪ್ರಿಯವಾಗುವಂತೆ ಮಾತನಾಡುವ ಕುಟಿಲ ತಂತ್ರವನ್ನು ಅಳವಡಿಸಿಕೊಂಡಿದ್ದ ಈ ಸೂಕ್ಷ್ಮತೆಯಿಂದಾಗಿ ಆತ ಹೋದಲೆಲ್ಲ ಅಲ್ಪ ಸಮಯದಲ್ಲಿಯೇ ಜನಪ್ರಿಯವಾಗಿ ಬಿಡುತ್ತಿದ್ದ.

ಮೂರು ವೇದಗಳನ್ನು ಕಂಠಪಾಠ ಮಾಡಿದ್ದ ಆತ ಧರ್ಮದ ಆಂತರಿಕ ಸತ್ವವನ್ನು ಅರಿತವನಾಗಿರಲಿಲ್ಲ. ಬದಲಿಗೆ ಸತ್ವವನ್ನು ಮರೆಮಾಚಿ ಸಮಯ ಸಾಧಕತನವನ್ನು ಮೈಗೂಡಿಸಿಕೊಂಡಿದ್ದ. ತನ್ನೆದುರು ಪಾಪಿಯೆ ಇದ್ದರೂ ಆತನನ್ನು ಎದರೆದುರೆ ಹೊಗಳಿ ಅಟ್ಟಕ್ಕೇರಿಸುವುದು ಢೋಂಗಿ ಮತ್ತು ಡಾಂಭಿಕತೆಯನ್ನು ಪ್ರದರ್ಶಿಸುವ ಒಬ್ಬ ಪಾಷಂಡಿಯಾಗಿದ್ದ.

ಆ ಸಂನ್ಯಾಸಿಯು ಊರೂರು ಅಲೆಯುತ್ತಾ ಒಂದು ಗ್ರಾಮವನ್ನು ತಲುಪಿದ ಗ್ರಾಮಸ್ಥರಿಂದ ಈ ಊರಿನಲ್ಲಿ ಶ್ರೀಮಂತ ಯಾರು ಎಂಬ ವಿಷಯವನ್ನು ತಿಳಿದ ನೇರವಾಗಿ ಆ ಶ್ರೀಮಂತ ಗೃಹಸ್ಥನ ಮನೆ ತಲುಪಿದ. ಆ ಗೃಹಸ್ಥನ ವ್ಯಾಪಾರ ವೃತ್ತಿಯನ್ನು ಮಾಡಿ ಸಂಪತ್ತನ್ನು ಗಳಿಸಿದ್ದ. ಆತನ ಮುಗ್ಧ ಸ್ವಭಾವದವನು ಮತ್ತು ಉದಾರಿಯು ಆಗಿದ್ದ. ಆತನಿಗೆ ಬ್ರಾಹ್ಮಣ ಸಂನ್ಯಾಸಿಗಳು, ಋಷಿ ಮುನಿಗಳು ಹಾಗೂ ಸಂನ್ಯಾಸಿಗಳನ್ನು ಕಂಡರೆ ಸಾಕ್ಷಾತ್ ದೇವರನ್ನು ಕಂಡಂತೆ ಗೌರವಿಸುತ್ತಿದ್ದನು ಅಂತಹ ಗೃಹಸ್ಥನ ಮನೆಯ ಎದುರು ನಿಂತು ಈ ಸಂನ್ಯಾಸಿಯು ಭಿಕ್ಷೆ ಬೇಡಿದ.

ಆ ಸಂನ್ಯಾಸಿಯ ದಿವ್ಯಸ್ವರೂಪಕ್ಕೆ ಮರುಳಾದ ಆ ಗೃಹಸ್ಥನು ಆತನ ಪಾದವನ್ನು ತೊಳೆದು ಪೂಜೆ ಮಾಡಿದ. ಒಳಗೆ ಕರೆದು ಎತ್ತರವಾದ ಪೀಠದ ಮೇಲೆ ಊರಿಸಿ ಭಕ್ಷ್ಯ ಭೋಜನಗಳನ್ನು ಬಡಿಸಿ ಉಪಚರಿಸಿದ, ಬಳಿಕ ಉಭಯ ಕುಶಲೋಪರಿ ನಡೆಯಿತು. ನಂತರ ತಾನು ಕಂಠಪಾಠ ಮಾಡಿದ ಹಲವು ಶ್ಲೋಕಗಳನ್ನು ನಿರರ್ಗಳವಾಗಿ ಉದ್ಧರಿಸಿ ಧರ್ಮೋಪದೇಶ ನೀಡಿದ. ಆತ ಹೊರಡುವ ಮುನ್ನ ಕೈತುಂಬ ಕಾಣಿಕೆಯನ್ನು ನೀಡಲು ಮುಂದಾದಾಗ ಆ ಸಂನ್ಯಾಸಿಯು ಕಾಣಿಕೆಯನ್ನು ನಿರಾಕರಿಸುತ್ತಾ:

"ಗೃಹಸ್ಥ, ನಾನು ಹೇಳಿಕೇಳಿ ಸಂನ್ಯಾಸಿ. ಸಕಲ ಭೋಗಭಾಗ್ಯವನ್ನು ತ್ಯಜಿಸಿ ಸಂನ್ಯಾಸ ಮಾರ್ಗವನ್ನು ಅನುಸರಿಸಿ ನಡೆಯುತ್ತಿರುವವನು. ಹಾಗಾಗಿ ನಾನು ಅನ್ನ ಪಾನಾದಿ ತೊಡಲು ಕಾವಿ ಬಟ್ಟೆ ಮತ್ತು ಔಷಧಿಯನ್ನು ಹೊರೆತುಪಡಿಸಿ ಹಣ, ನಗನಾಣ್ಯ, ಚಿನ್ನ ಮುಂತಾದ ಯಾವುದೇ ವಸ್ತುವನ್ನು ಕಾಣಿಕೆಯಾಗಿ ಸ್ವೀಕರಿಸಲಾರೆ. ಅಷ್ಟೇ ಏಕೆ ಅಂಥಹ ಯಾವುದೇ ಸಂಪತ್ತನ್ನು ನಾನು ಕೈಯಲ್ಲಿ ಕೂಡ ಮುಟ್ಟುವುದಿಲ್ಲ. ಒಂದು ಪಕ್ಷ ನಾನು ಹಾಗೆ ಮುಟ್ಟಿದೇ ಆದರೆ ಮುಕ್ತಿಯನ್ನು ಪಡೆಯಲಾರೆ!" ಎನ್ನಲು ಆ ಮುಗ್ಧ ಗೃಹಸ್ಥ :

"ಸ್ವಾಮಿ, ತಮ್ಮಂತಹ ಸಕಲ ಸಂಗಪರಿತ್ಯಾಗಿಯನ್ನು ನನ್ನ ಜೀವಮಾನದಲ್ಲಿ ಕಂಡೆ ಇಲ್ಲ. ತಾವು ನನ್ನ ಮನೆಗೆ ಬಂದ್ದು ಭಗವಂತನೇ ತಮ್ಮ ರೂಪದಲ್ಲಿ ಪ್ರತ್ಯಕ್ಷವಾಗಿ ಬಂದಂತಾಗಿದೆ. ತಮ್ಮ ಪಾದ ಸ್ಪರ್ಶದಿಂದ ನನ್ನ ಮನೆ ಮತ್ತು ಮನವು ಪಾವನವಾಯಿತು. ತಮ್ಮದು ವಯಸ್ಸಾದ ಹಿರಿಯ ಜೀವ ಭಿಕ್ಷಾಟನೆಗಾಗಿ ಊರೂರು ಅಲೆಯುವ ಬದಲಿಗೆ ನನ್ನಲ್ಲಿಯೆ ತಂಗಿರಿ. ಊರ ಹೊರಗಿನ ನನ್ನ ತೋಟದಲ್ಲಿ ತಮಗೊಂದು ಆಶ್ರಮವನ್ನು ಕಟ್ಟಿಕೊಡುತ್ತೇನೆ. ದಿನವೂ ಮೂರು ಹೊತ್ತು ಊಟಕ್ಕೆ ನಮ್ಮ ಮನೆಗೆ ಬಂದು ಬಿಡಿ!" ಎಂದು ಬೇಡಿಕೊಂಡ.

ಯಾವುದೋ ಸರಿಯಾದ ಕುರಿ ನಾನು ಒಡ್ಡಿದ ಬಲೆಗೆ ಬಿದ್ದಿತೆಂದು ಅರಿತ ಆ ಕುಟಿಲ ಸಂನ್ಯಾಸಿ:

"ಅಯ್ಯಾ, ಗೃಹಸ್ಥ ನಿನ್ನ ಇಚ್ಛೆಯಂತೆಯೆ ಆಗಲಿ!" ಎಂದ.

ಮರುದಿನವೇ ಆ ಗರಹಸ್ಥನು ತನ್ನ ತೋಟದಲ್ಲಿ ಸಕಲ ಸೌಕರ್ಯಗಳಿಂದ ಕೂಡಿದ ಒಂದು ಸುಂದರ ಆಶ್ರ ಮವನ್ನು ಕಟ್ಟಿಸಿಕೊಟ್ಟ. ಅಂದಿನಿಂದ ಆ ಸಂನ್ಯಾಸಿಯ ಪಾಲಿಗೆ ಸುಖ ಜೀವನವು ಆರಂಭವಾಯಿತು. ನಿತ್ಯವೂ ಸ್ನಾನ, ಸಂಧ್ಯಾವಂದನೆ ಮತ್ತು ಪೂಜೆಯ ಬಳಿಕ ಆ ಗೃಹಸ್ಥನ ಮನೆಗೆ ಊಟಕ್ಕೆ ಬರುತ್ತಿದ್ದ. ಊಟವಾದ ಬಳಿಕ ಆತನನ್ನು ತನ್ನ ಕಪಿಮುಷ್ಟಿಯಲ್ಲಿ ಮತ್ತೂ ಬಂಧಿಸಿಟ್ಟುಕೊ ಳ್ಳುವಂತಹ ಕುಟೀಲ ಧರ್ಮೋಪದೇಶವನ್ನು ನೀಡಿ ತನ್ನ ಅಶ್ರಮಕ್ಕೆ ಹಿಂದಿರುಗಿ ನಿದ್ರೆ ಹೋಗುತ್ತಿದ್ದ. ಇದರಿಂದ ಅತಿಯಾಗಿ ಪ್ರಭಾವಿತನಾದ ಗೃಹಸ್ಥನು ಈ ಸಂನ್ಯಾಸಿಯು ಸದಾಚಾರಿ ಎಂದು ನಂಬಿ ಬಿಟ್ಟನು.

ಆತನ ಬಳಿ ನೂರು ಚಿನ್ನದ ನಾಣ್ಯಗಳಿದ್ದವು. ಅದನ್ನು ಮನೆಯ



ಲ್ಲಿಯೇ ಇಟ್ಟುಕೊಂಡಿದ್ದ. ಯಾವಾಗ ಕಳ್ಳರು ಬಂದು ಕದಿಯುತ್ತಾರೋ ಎಂಬ ಭಯದಿಂದ ರಾತ್ರಿಯೆಲ್ಲ ನಿದ್ದೆ ಮಾಡದೆ ಆ ಸಂಪತ್ತನ್ನು ಕಾಯುವುದೆ ಅವನ ನಿತ್ಯ ಕಸುಬಾಗಿತ್ತು. ಒಂದು ದಿನ ಇದ್ದಕ್ಕೆ ಇದ್ದಂತೆ ಒಂದು ಯೋಚನೆ ಹೊಳೆಯಿತು. ಈ ಚಿನ್ನದ ನಾಣ್ಯಗಳನ್ನು ಏತಕ್ಕೆ ಆ ಸಂನ್ಯಾಸಿಯ ಆಶ್ರಮದಲ್ಲಿ ಇಡಬಾರದು? ಎಂಬುದೆ ಆಗಿತ್ತು. ಆತ ಹೀಗೆ ಚಿಂತಿಸಿದ. ಆ ಸಂನ್ಯಾಸಿ ಗುಣವಂತನಿದ್ದಾನೆ. ಯಾವುದಕ್ಕೂ ಆಸೆ ಪಡದ ಧಾರ್ಮಿಕನಿದ್ದಾನೆ. ಹಾಗಿರುವಲ್ಲಿ ಏಕೆ ನನ್ನ ಸಂಪತ್ತನ್ನು ಆತನ ಬಳಿ ಇಡಬಾರದು. ಅದರಿಂದ ನನ್ನ ಸಂಪತ್ತು ಸುರಕ್ಷಿತವಾಗಿರುತ್ತದೆ. ನಾನು ಕಳ್ಳರ ಭಯದಿಂದ ನಿತ್ಯವೂ ನಿದ್ದೆಗೆಡುವುದು ತಪ್ಪುತ್ತದೆ. ಕಳ್ಳರು ಸಂನ್ಯಾಸಿಯ ಬಳಿ ಏನಿದೆ ಎಂದು ಭಾವಿಸಿ ಆತನ ಆಶ್ರಮದತ್ತ ಸುಳಿಯಲಾರರು ಎಂದು ಲೆಕ್ಕಚಾರ ಹಾಕಿದ.

ಮರುದಿನ ಮುಂಜಾನೆ ಆ ಗೃಹಸ್ಥನು ಸಂನ್ಯಾಸಿಯನ್ನು ಸಂಧಿಸಿ ಅತನ ಪಾದಗಳಿಗೆ ಎರಗಿ ಆರ್ಶೀವಾದ ಪಡೆದ ನಂತರ ಒಂದು ಕಡೆ ಕುಳಿತುಕೊಂಡ. ಬಳಿಕ ಸಾವಧಾನವಾಗಿ ತನ್ನ ಮನದ ಇಚ್ಛೆಯನ್ನು ನಿವೇದಿಸಿಕೊಂಡ ಇದರಿಂದ ಸಂನ್ಯಾಸಿಗೆ ಅಪಾರ ಸಂತೋಷವಾಯಿತು. ಅದನ್ನು ತೋರಗೊಡದೆ :

"ಮಿತ್ರ, ಸಂನ್ಯಾಸಿಗಳಿಗೆ ಈ ಸಂಪತ್ತನ್ನು ನೋಡಿಕೊಳ್ಳುತ್ತೀರಾ ಎಂದು ಕೇಳುವುದು ಅನುಚಿತವಾದ ವರ್ತನೆ. ಏಕೆಂದರೆ ನಮಗೆ ಬೇರೆಯವರ ವಸ್ತುವಿನಲ್ಲಿ ಲೋಭದ ಮಾತೇ ಇಲ್ಲ!"

"ಸ್ವಾಮಿ, ಬಹಳ ಒಳ್ಳೆಯದು. ನನ್ನ ಜೀವನ ಧನ್ಯವಾಯಿತು!" ಎಂದ ಬಳಿಕ ಆ ಸಂನ್ಯಾಸಿಯು ಪೂಜೆಗೆ ಕೂರುವ ಪೀಠದ ಕೆಳಗೆ ಗುಂಡಿ ತೋಡಿ, ಆ ನೂರು ಚಿನ್ನದ ನಾಣ್ಯ ತುಂಬಿದ ಹುಂಡಿಯನ್ನು ಹೂತುಹಾಕಿ ಮತ್ತೆ ಮಣ್ಣು ಮುಚ್ಚಿ ನೆಲವನ್ನು ಸಾರಿಸಿದ. ಎಂದಿನಂತೆಯೆ ಆ ಸಂನ್ಯಾಸಿಯ ಪೀಠವನ್ನು ಅಲ್ಲಿಯೇ ಸ್ಥಾಪಿಸಿದ. ಬಳಿಕ ಚಿಂತಾಹೀನನಾಗಿ ಸಂನ್ಯಾಸಿಗೆ ವಂದಿಸಿ ಮನೆಗೆ ತೆರಳಿದ. ಅಂದಿನಿಂದ ಆ ಗೃಹಸ್ಥನು ನೆಮ್ಮದಿಯಾಗಿ ರಾತ್ರಿ ವೇಳೆ ನಿದ್ರಿಸತೊಡಗಿದ.

ಆದರೆ ಇತ್ತ ಕಡೆ ಕುಟೀಲ ಸಂನ್ಯಾಸಿಯ ನಿದ್ರೆಯ ಭಂಗ ಬಂದಿತು. ಮಣ್ಣಿನಲ್ಲಿ ಹೂಣಿಟ್ಟ ಹುಂಡಿಯ ಬಗ್ಗೆ ದುರಾಸೆ ಮೊಳೆಯಿತು. ಆ ಹುಂಡಿಯನ್ನು ಹೇಗಾದರೂ ಮಾಡಿ ಹೊಡೆದುಕೊಂಡು ಸುಕ್ಷಿತವಾಗಿ ಪಾರಾಗಬೇಕೆಂದು ಉಪಾಯ ಯೋಚಿಸಿದ. ಗೃಹಸ್ಥನಿಗೆ ಯಾವುದೆ ಅನುಮಾನ ಬರದಂತೆ ಆ ಹುಂಡಿಯೊಂದಿಗೆ ನಾನು ಮನೆಯನ್ನು ಸೇರಿದ್ದೆ ಆದರೆ ನನ್ನ ಮುಂದಿನ ಜೀವನ ಸುಖಮಯವಾಗಿರುವುದು ಎಂದು ನಾನಾ ಬಗೆಯ ಕನಸು ಕಂಡ ತಕ್ಷಣವೆ ಈ ಕೃತ್ಯಗೆ ಕೈಹಾಕಿದರೆ ಅನುಮಾನ ಸಹಜವಾಗಿ ಬರುವುದೆಂದು ತೀರ್ಮಾನಿಸಿ ಹಲವು ತಿಂಗಳು ತಾಳ್ಮೆಯಿಂದ ಕಾಲ ಕಳೆದ.

ಒಂದು ನಡುರಾತ್ರಿ ಮೇಲೆದ್ದು ತನ್ನ ಪೀಠದ ಕೆಳಗಿದ್ದ ನೆಲವನ್ನು ಹಗೆದು ನೂರು ಚಿನ್ನದ ನಾಣ್ಯದಿಂದ ಕೂಡಿದ್ದ ಹುಂಡಿಯನ್ನು ಹೊರ ತೆಗೆದ. ಊರ ಹೊರಗಿನ ಹೆಬ್ಬಾಗಿಲನ್ನು ದಾಟಿ ಮುಂದೆ ನಡೆದ. ಮೊದಲೆ ಖಚಿತ ಪಡಿಸಿಕೊಂಡಿದ್ದ ಮಾರ್ಗದ ಪಕ್ಕದ ಒಂದು ಮರದ ಕೆಳಗೆ ಗುಂಡಿ ತೋಡಿ ಆ ಹುಂಡಿಯನ್ನು ಹೂತು ಹಾಕಿದ. ಗುರುತಿಗಾಗಿ ಒಂದು ಮುಳ್ಳಿನ ಗಿಡವನ್ನು ನೆಟ್ಟು ಆಶ್ರಮಕ್ಕೆ ಹಿಂದಿರುಗಿದ ಬಳಿಕ ಪೀಠದ ಕೆಳಗಿನ ಗುಂಡಿಯನ್ನು ಅನುಮಾನ ಬರದಂತೆ ಹಿಂದಿನಂತೆಯೇ ಮುಚ್ಚಿ ಸಾರಿಸಿದ.

ಕೆಲವು ದಿನಗಳು ಕಳೆದ ಮೇಲೆ ಗೃಹಸ್ಥನನ್ನು ಹೀಗೆ ಪುಸಲಾಯಿಸ ತೊಡಗಿದ:

"ಮಿತ್ರ, ಸಂನ್ಯಾಸಿ ಧರ್ಮಕ್ಕೆ ವಿರುದ್ಧವಾಗಿ ನಾನು ಬಹುಕಾಲದಿಂದ ನಿನ್ನ ಆಶ್ರಯದಲ್ಲಿದ್ದೇನೆ. ಹೀಗೆ ಚಿರಕಾಲ ಒಂದೇ ಸ್ಥಳದಲ್ಲಿ ಇದ್ದು ಬಿಟ್ಟರೆ ಜನರೊಂದಿಗೆ ಮೋಹವು ಬೆಳೆದು ಬಿಡುತ್ತದೆ. ಸಂನ್ಯಾಸಿಗಳಿಗೆ ಮೋಹವು ಮನದ ಮೈಲಿಗೆಯೆನಿಸುತ್ತದೆ. ಆದುದರಿಂದ ಮತ್ತೆ ನಾನು ಅಲೆಮಾರಿಯಂತೆ ಅಲೆದು ಭಿಕ್ಷಾಟನೆ ಮಾಡಲು ಅಪ್ಪಣೆ ಕೊಡು!" ಎಂದು ವಿನಯ ಪೂರ್ವಕವಾಗಿ ಬೇಡಿಕೊಂಡ.

ಗೃಹಸ್ಥನು ಸಂನ್ಯಾಸಿಯ ಮೇಲಿನ ಪ್ರೀತಿಯಿಂದಾಗಿ ಆತನ ಬೇಡಿಕೆಯನ್ನು ನಿರಾಕರಿಸಿದ. ಆದರೆ ಸಂನ್ಯಾಸಿಯು ಪದೇ ಪದೇ ನಾನಾ ಕಟುಕತೆಗಳನ್ನು ಹೇಳಿ ಕೊನೆಗೊಂದು ದಿನ ಗೃಹಸ್ಥನಿಂದ ಆಶ್ರಮ ತೊರೆಯಲು ಅಪ್ಪಣೆಯನ್ನು ಪಡೆದ. ಗೊತ್ತಾದ ದಿನ ಗೃಹಸ್ಥನ ಮನೆಯಲ್ಲಿ ಮಧ್ಯಾಹ್ನದ ಊಟ ಮುಗಿಸಿದ ಬಳಿಕ ತನ್ನ ಪ್ರಯಾಣಕ್ಕೆ ಸಿದ್ಧನಾದ. ಆ ಗೃಹಸ್ಥ ಅಳುತ್ತಾ ಕರೆಯುತ್ತಾ ಸಂನ್ಯಾಸಿಯಿಂದ ಕುಟುಂಬ ಸಮೇತ ಆರ್ಶೀವಾದ ಪಡೆದ. ಬಳಿಕ ಊರಿನ ಹೆಬ್ಬಾಗಿಲಿನ ತನಕ ಅವನೊಂದಿಗೆ ಬಂದು ಅಶ್ರುತರ್ಪಣದಿಂದ ಬೀಳ್ಕೊಟ್ಟು ಮನೆಗೆ ಹಿಂದಿರುಗಿದ.

ಈ ಕುಟೀಲ ಪಾಖಂಡಿಯು ಸಂನ್ಯಾಸಿ ಸ್ವಲ್ಪ ದೂರ ಮುಂದೆ ಸಾಗುತ್ತಾ ಹೀಗೆ ಚಿಂತಿಸಿದ. ನಾನು ಅಪ್ಪಟ ಚಿನ್ನದಂತಹ ಸ್ವಭಾವದ ಪ್ರಾಮಾಣಿಕ ಎಂಬುದು ಗೃಹಸ್ಥನ ಮನದಲ್ಲಿ ಬೇರೂರಿಸಬೇಕೆಂದು ನಿರ್ಧರಿಸಿದ. ತಕ್ಷಣವೆ ಹಾದಿಯ ಬದಿಯಲ್ಲಿ ಒಣಗಿದ ಹುಲ್ಲಿನ ಕಡಿಯೊಂದನ್ನು ಮುರಿದುಕೊಂಡು ತನ್ನ ದಟ್ಟವಾಗಿ ಬೆಳೆದು ನಿಂತ ತಲೆಕೂದಲಿನ ಒಳಗೆ ತೂರಿಕೊಂಡ ಬಳಿಕ ಬಿರುಸಾಗಿ ನಡೆದು ಬಂದು ಆ ಗೃಹಸ್ಥನ ಮುಂದೆ ನಿಂತ. ತಮ್ಮ ಮಹಾಗುರುವು ನನ್ನ ಮೇಲೆ ಕೃಪೆ ತೋರಿ ಹಿಂದಿರುಗಿ ಬಂದಿರ ಬಹುದೆಂದು ಅಪಾರ ಸಂತೋಷದಿಂದ ಆತನನ್ನು ಒಳಗೆ ಸ್ವಾಗತಿಸಿದ. ಆತ ತನ್ನ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತೆ ನಟಿಸುತ್ತಾ:

"ಅಯ್ಯಾ ಸನ್ಮಿತ್ರ, ನನ್ನಿಂದ ಒಂದು ಮಹಾನ್ ಅಪರಾಧ ನಡೆದು ಹೋಯಿತು. ನನ್ನನ್ನು ಕ್ಷಮಿಸಿ ಬಿಡು!"

"ಸ್ವಾಮಿ, ತಾವು ಮಾಡಿದ ಅಪರಾಧವೇನು?"

ಮಿತ್ರ, ನಾನು ನಿನ್ನ ಮನೆಯಿಂದ ಹೊರ ಹೋಗುವಾಗ ನಿನ್ನ ಛಾವಣಿಯಿಂದ ಒಂದು ಹುಲ್ಲುಕಡ್ಡಿಯು ಜಾರಿ ನನ್ನ ದಟ್ಟವಾದ ತಲೆಯ ಕೂದಲಿನಲ್ಲಿ ಸೇರಿಕೊಂಡು ಬಿಟ್ಟಿತ್ತು. ನಾನು ಆಕಸ್ಮಿಕವಾಗಿ ತಲೆಯನ್ನು ನೇವರಿಸುವಾಗ ಈ ಹುಲ್ಲು ಕಡ್ಡಿಯು ನನ್ನ ಕೈಗೆ ಸ್ಪರ್ಶಿಸಿತು. ಕೊಡಲ್ಪಡದ ವಸ್ತುವನ್ನು ತೆಗೆದುಕೊಂಡು ಹೋಗುವುದು ನನಗೆ ಶ್ರೇಯಸ್ಕರವಲ್ಲ. ಆದುದರಿಂದ ಓಡೋಡಿ ಹಿಂದಿರುಗಿ ಬಂದೆ. ಇಗೋ, ನಿನಗೆ ಸಲ್ಲಬೇಕಾದ ಈ ತೃಣವನ್ನು ತೆಗೆದುಕೋ!" ಎನ್ನಲು ಆ ಮುಗ್ಧನಾದ ಗೃಹಸ್ಥನು:

"ಆಹಾ ಸ್ವಾಮಿ, ನಿಮ್ಮ ಪ್ರಾಮಾಣಿಕತೆಗೆ ಸರಿ ಸಾಟಿಯುಂಟೆ? ಇದು ಕೇವಲ ಹುಲ್ಲುಕಡ್ಡಿಯಷ್ಟೇ ಅಲ್ಲ ತಾವು ಕರುಣಿಸಿದ ಮಹಾಪ್ರಸಾದ. ಇದನ್ನು ಚಿರಕಾಲ ಜತನದಿಂದ ರಕ್ಷಿಸಿ ಪೂಜೆ ಮಾಡುವೆ!" ಎಂದು ಆನಂದ ಭಾಷ್ಪ ಸುರಿಸುತ್ತಾ ಮೊತ್ತೊಮ್ಮೆ ಸಾಷ್ಟಾಂಗ ಅಡ್ಡ ಬಿದ್ದ. ಆತನಿಗೆ ಹರಸಿದ ಆ ಸಂನ್ಯಾಸಿಯು ಮತ್ತೆ ಬಂದಷ್ಟೇ ಬರದಿಂದ ಮುನ್ನೆಡೆದ. ತಾನು ಹೂತು ಹಾಕಿದ ಹುಂಡಿಯನ್ನು ಬಗೆದು ಹೊರ ತೆಗೆದುಕೊಂಡ. ಅತ್ತಿತ್ತ ಕಣ್ಣಾಡಿಸಿದ ಆ ಕಾಡಿನಲ್ಲಿ ಯಾರ ಸುಳಿವೂ ಕಾಣಲಿಲ್ಲ. ತಕ್ಷಣವೆ ಆ ಚಿನ್ನದ ನಾಣ್ಯಗಳಿಂದ ತುಂಬಿದ ಹುಂಡಿಯನ್ನು ಬಗಲಿನ ಚೀಲದಲ್ಲಿ ಇಟ್ಟುಕೊಂಡು ಬಿರುಸಾಗಿ ತನ್ನ ಊರತ್ತ ನಡೆದ.

ಅದೇ ಸಮಯದಲ್ಲಿ ಬೋಧಿಸತ್ವರು ಊರೂರು ಅಲೆಯುತ್ತಾ ಆ ಗ್ರಾಮವನ್ನು ತಲುಪಿದರು. ಭಿಕ್ಷಾಟನೆ ಮಾಡುತ್ತಾ ಈ ಮುಗ್ಧ ಗೃಹಸ್ಥನ ಮನೆಯ ಮುಂದೆ ನಿಂತರು. ಬೋಧಿಸತ್ವರನ್ನು ಕಂಡ ಗೃಹಸ್ಥನಿಗೆ ಮತ್ತೆ ತಮ್ಮ ಹಿಂದಿನ ಗುರುವೆ ಬೇರೆಯ ರೂಪದಲ್ಲಿ ಬಂಧಷ್ಟು ಸಂತೋಷವಾಯಿತು. ಆದರದಿಂದ ಅವರನ್ನು ಒಳಕ್ಕೆ ಸ್ವಾಗತಿಸಿ ಉನ್ನತವಾದ ಪೀಠದ ಮೇಲೆ ಕೂರಿಸಿ ಭಕ್ಷ್ಯನ್ನ ಭೋಜನವನ್ನು ಬಡಿಸಿದ. ನಂತರ ಹಿಂದೆ ತಂಗಿದ್ದ ಸ್ವಾಮಿಜಿಯ ಬಗ್ಗೆ ಪರಿಪರಿಯಾಗಿ ವರ್ಣಿಸಿದ. ಕೊನೆಗೆ ಹುಲ್ಲುಕಡ್ಡಿಯನ್ನು ಹಿಂದಿರುಗಿ ತಂದು ಕೊಟ್ಟ ಪ್ರಸಂಗವನ್ನು ಹೇಳಿ ಆ ಹುಲ್ಲುಕಡ್ಡಿಯನ್ನು ಬೋಧಿಸತ್ವರಿಗೆ ತೋರಿಸಲು ಅವರು :

"ಮಿತ್ರ, ನೀನು ಏನಾದರೂ ಸಂಪತ್ತನ್ನು ಆ ಸಂನ್ಯಾಸಿಯ ಬಳಿ ಇಟ್ಟಿದೆಯಾ?" ಎನ್ನಲು ಆತ:

"ಭಂತೆ, ನನ್ನ ಜೀವಮಾನವೆಲ್ಲ ಸಂಪಾದಿಸಿ ಸಂಗ್ರಹಿಸಿದ್ದ ನೂರು ಚಿನ್ನದ ನಾಣ್ಯಗಳಿಂದ ತುಂಬಿದ್ದ ಹುಂಡಿಯನ್ನು ಹೊಡೆದು ಕೊಂಡು ಹೋಗಿದ್ದಾನೆ. ತಕ್ಷಣ ಹೋಗಿ ನೋಡಿಕೊ!" ಎನ್ನಲು ಆ ಗೃಹಸ್ಥ ಅಘಾತಕ್ಕೆ ಒಳಗಾದ. ತಕ್ಷಣವೇ ಎಚ್ಚೆತ್ತು ತನ್ನ ಕುದುರೆಯನ್ನು ಏರಿ ಆಶ್ರಮಕ್ಕೆ ಹೋದ. ಅಲ್ಲಿ ತಾನು ಹುಂಡಿಯನ್ನು ಹೂತು ಹಾಕಿದ್ದ ಜಾಗವನ್ನು ಹಗೆದು ನೋಡಲು ಅದು ಬರಿದಾಗಿತ್ತು. ತಾನು ಮೋಸ ಹೋದದ್ದು ಖಚಿತವಾದೊಡನೆಯೇ ಮತ್ತೆ ತನ್ನ ಕುದುರೆಯನ್ನು ಏರಿ ಶರವೇಗದಲ್ಲಿ ಆ ಸಂನ್ಯಾಸಿ ಹೋದ ದಾರಿಯನ್ನು ಹಿಂಬಾಲಿಸಿದ. ಆತ ಆಗಲೇ ಹತ್ತಾರು ಮೈಲಿಯ ಹಾದಿಯನ್ನು ಕ್ರಮಿಸಿ ವೇಗವಾಗಿ ಮುನ್ನೆಡೆದು ಹೋಗುತ್ತಿದ್ದ. ಆತನನ್ನು ಅಡ್ಡಗಟ್ಟಿ ಕುದುರೆಯಿಂದ ಇಳಿದು:

"ಎಲ್ಲೇ ಕಪಟ ಸಂನ್ಯಾಸಿಯೇ ಹುಲ್ಲುಕಡ್ಡಿಯನ್ನು ತೆಗೆದುಕೊಂಡು ಹೋಗುವಾಗ ನಿನಗೆ ಧರ್ಮವು ಕಾಡಿತು. ಆದರೆ ನಿನ್ನನ್ನು ನಂಬಿ ನಿನ್ನ ಬಳಿ ನೂರು ಚಿನ್ನದ ನಾಣ್ಯಗಳನ್ನು ಇಟ್ಟಿದನ್ನು ಕದ್ದು ಹ್ಯೊಯುತ್ತಿರುವಾಗ ನಿನಗೆ ಧರ್ಮವು ಕಾಡಲಿಲ್ಲವೆ? ಹಾಗಾದರೆ ನಿನ್ನ ಧರ್ಮವು ಎಂಥದದ್ದು?!" ಎನ್ನಲು ಆತ ಆ ಗೃಹಸ್ಥನನ್ನು ಬಲವಾಗಿ ದೂಡಿ ಆತನಿಂದ ತಪ್ಪಿಸಿಕೊಂಡು ಕಾಡಿನಲ್ಲಿ ಓಡತೊಡಗಿದ.

ಆತನನ್ನು ಹಿಂಬಾಲಿಸಿಕೊಂಡು ಹೋಗಿ ಆತನನ್ನು ಹಿಡಿದು ಚನ್ನಾಗಿ ಚಚ್ಚಿ ಆತನಿಂದ ತನ್ನ ಹುಂಡಿಯನ್ನು ವಶ ಪಡಿಸಿಕೊಂಡ. ಆ ಸಂನ್ಯಾಸಿಯು ಪ್ರಾಣ ಉಳಿದರೆ ಸಾಕೆಂದು ಎದ್ದು ಬಿದ್ದು ಓಡುತ್ತಾ ಕಾಡಿನಲ್ಲಿ ಕಣ್ಮರೆಯಾದ. ಬಳಿಕ ತನ್ನ ಕುದುರೆ ಏರಿ ಮನೆಗೆ ಬಂದು ಬೋಧಿಸತ್ವರಿಗೆ ವಂದಿಸುತ್ತಾ:

"ಭಂತೆ, ತಾವು ಸಕಾಲಕ್ಕೆ ಬಂದು ನನ್ನ ಕಣ್ ತೆರೆಸಿದಿರಿ!"

"ಮಿತ್ರ ಮಧುರವಾದ ಮಾತು ಮತ್ತು ಡಾಂಭಿಕತೆಯಲ್ಲಿ ಧರ್ಮವಿಲ್ಲ. ನುಡಿದಂತೆ ನಡೆವ ಶೀಲಸಚ್ಚಾರಿತ್ರದಲ್ಲಿ ಧರ್ಮವಿದೆ!" ಎನ್ನುತ್ತಾ ಬೋಧಿಸತ್ವರು ಮುಂದಿನ ಗ್ರಾಮಕ್ಕೆ ತೆರಳಿದರು. □

'SAMVADA' Kannada Monthly, November 2009 RNI-KAR KAN/2002/9246 CPMG/KA/BGW-706/2009-11
Office of Posting: RAJAJINAGAR HO, Date of Posting: 27-28 of Every Month

ಕನ್ನಡಕ್ಕೆ

"ಶಾಸ್ತ್ರೀಯ ಭಾಷೆ" ಸ್ಥಾನಮಾನ

ಇದಕ್ಕಾಗಿ ಹೋರಾಡಿದ ಸಮಸ್ತ ಕನ್ನಡಿಗರಿಗೆ ವಂದನೆ, ಅಭಿನಂದನೆ

ಕರ್ನಾಟಕ-ಸುಂದರ ನದಿವನಗಳ ನಾಡು. ಕಲೆ ಸಂಸ್ಕೃತಿಗಳ ಬೀಡು. ಕವಿಗಳು, ವಚನಕಾರರು, ದಾಸಶ್ರೇಷ್ಠರುಗಳ ನೆಲೆಬೀಡು. ವೀರ ವನಿತೆಯರ ಪುಣ್ಯ ಭೂಮಿ. ಮಾದರಿ ಆಡಳಿತದ ಮಾರ್ಗದರ್ಶಿ ರಾಜ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ತವರೂರು. ಕರ್ನಾಟಕದ ರಾಜಧಾನಿ ಬೆಂಗಳೂರು ವಿಶ್ವವಿಖ್ಯಾತಿಯ ನಗರ. ಇಂತಹ ಭವ್ಯ ಪರಂಪರೆ, ಹಿನ್ನೆಲೆಯ ಭದ್ರ ಬುನಾದಿಯಾ ಮೇಲೆ

ಸಮೃದ್ಧ ಕರ್ನಾಟಕವನ್ನು ಕಟ್ಟುವ ಸಂಕಲ್ಪ ನಮ್ಮದು

ನಾಡು ನುಡಿಗೆ ವಿಶೇಷ ಕಾರ್ಯಕ್ರಮಗಳು

* ಬೆಂಗಳೂರಿನಲ್ಲಿ ವರನಟ ಡಾ: ರಾಜ್‌ಕುಮಾರ್ ಸ್ಮಾರಕ ನಿರ್ಮಾಣಕ್ಕೆ 8 ಕೋಟಿ ರೂ.
* ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನಕ್ಕಾಗಿ 25 ಕೋಟಿ ರೂ.
* ರಾಜ್ಯದ ಗಡಿರಾಜ್ಯಗಳಲ್ಲಿ 4 ಸುವರ್ಣ ಕರ್ನಾಟಕ ಭವನಗಳ ನಿರ್ಮಾಣಕ್ಕೆ 5 ಕೋಟಿ ರೂ.
* ರಾಜ್ಯ ಮಟ್ಟದಲ್ಲಿ ಪ್ರಪ್ರಥಮ ಬಾರಿಗೆ ಸಂತಕವಿ ಕನಕದಾಸರ ಜಯಂತಿ ಆಚರಣೆ. ಕನಕ ಜಯಂತಿ ಸಾರ್ವತ್ರಿಕ ರಜೆ. ಕನಕದಾಸರ ಜನ್ಮಸ್ಥಳ "ಬಾಡ" ಅಭಿವೃದ್ಧಿಗೆ 1 ಕೋಟಿ ರೂ.
* ಕನ್ನಡದ ಮೇರು ಕೃತಿಗಳು ಮತ್ತು ಡಾ: ಬಿ.ಆರ್. ಅಂಬೇಡ್ಕರ್ ಕೃತಿಗಳ ಪುನರ್ ಮುದ್ರಣ
* ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಸಂಶೋಧನಾ ಕೇಂದ್ರ ಶಿವಯೋಗಿ ಶಿಶುನಾಳ ಷರೀಫರ ಸಮಾಧಿ ಮತ್ತು ಸಂಗೊಳ್ಳಿ ರಾಯಣ್ಣ ಜನ್ಮಸ್ಥಳ ಅಭಿವೃದ್ಧಿಗೆ ತಲಾ 1 ಕೋಟಿ ರೂ.
* ಅಲ್ಲಮಪ್ರಭು ಸಾಹಿತ್ಯ ಸಂಶೋಧನಾ ಕೇಂದ್ರ ಸ್ಥಾಪನೆ
* ಮೈಸೂರಿನಲ್ಲಿ ಸ್ವಾಮಿ ವಿವೇಕಾನಂದರ ಭೇಟಿ ನೆನಪಿಗೆ ಸಾಂಸ್ಕೃತಿಕ ಯುವ ಕೇಂದ್ರ ಸ್ಥಾಪನೆಗೆ 5 ಕೋಟಿ ರೂ.
* ಹಂಪಿ ಉತ್ಸವ, ಕಿತ್ತೂರು ಉತ್ಸವ ಕದಂಬ ಉತ್ಸವ, ಕರಾವಳಿ ಉತ್ಸವ ಇತ್ಯಾದಿ ಸಾಂಸ್ಕೃತಿಕ ಉತ್ಸವಗಳ ಮೂಲಕ ನಾಡಿನಾದ್ಯಂತ ಕಲೆ ಸಂಸ್ಕೃತಿಗಳ ಪುನರುಜ್ಜೀವನಕ್ಕೆ ಪ್ರೋತ್ಸಾಹ
* ರಾಜ್ಯೋತ್ಸವ ಪ್ರಶಸ್ತಿ ವಿಜೇತರಿಗೆ ಪ್ರಪ್ರಥಮ ಬಾರಿಗೆ 1 ಲಕ್ಷ ರೂ. ನಗದು ಬಹುಮಾನ
* ಅನಿವಾಸಿ ಕನ್ನಡಿಗರಿಗಾಗಿ "ಅನಿವಾಸಿ ಕನ್ನಡಿಗರ ಕೋಶ" ಸ್ಥಾಪನೆ

"ಅಭಿವೃದ್ಧಿಯೇ ಆಡಳಿತ ಮಂತ್ರ"

ಕಟ್ಟುವೆವು ನಾವು ಹೊಸ ನಾಡೊಂದನು

ಕರ್ನಾಟಕ ವಾರ್ತೆ
Karnataka Information